ಶನಿವಾರ, ಜುಲೈ 3, 2021 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಬಿಸಿಲ ತಾಪ

ಅಮೃತಸರದಲ್ಲಿ ಶುಕ್ರವಾರ ದ್ವಿಚಕ್ರ ವಾಹನದಲ್ಲಿ ಸಾಗುತ್ತಿದ್ದ ಮಹಿಳೆಯೊಬ್ಬರು ಬಿಸಿಲಿನ ತಾಪ ತಾಳಲಾರದೆ ಮುಖವನ್ನು ಸ್ಕಾರ್ಫ್‌ನಿಂದ ಮುಚ್ಚಿಕೊಂಡಿದ್ದರು

ಒರಿಯಾ ಕವಿ ಪಂಡಾಗೆ 'ಕುವೆಂಪು ರಾಷ್ಟ್ರೀಯ ಪುರಸ್ಕಾರ'



ಶಿವಮೊಗ್ಗ: ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳಿಯ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ ನೀಡುವ 2020ನೇ ಸಾಲಿನ 'ಕುವೆಂಪು ರಾಷ್ಟ್ರೀಯ ಪುರಸ್ಕಾರ'ಕ್ಕೆ ಒರಿಯಾ ಕವಿ, ನಿವೃತ್ತ ಐಎಎಸ್ ಅಧಿಕಾರಿ ಡಾ.ರಾಜೇಂದ್ರ ಕಿಶೋರ್ ಪಂಡಾ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ₹ 5 ಲಕ್ಷ ನಗದು, ಬೆಳ್ಳಿ ಪದಕ ಒಳಗೊಂಡಿದೆ. ಕೋವಿಡ್ ಪರಿಸ್ಥಿತಿ ನೋಡಿಕೊಂಡು ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗುವುದು ಎಂದು ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಅಧ್ಯಕ್ಷ ಪ್ರೊ.ಹಂ.ಪ.ನಾಗರಾಜಯ್ಯ ಮಾಹಿತಿ ನೀಡಿದ್ದಾರೆ.

1956–57ರಲ್ಲಿ ಹಿರಾಕುಡ್ ಜಲಾಶಯಕ್ಕಾಗಿ ನೆಲೆ ಕಳೆದುಕೊಂಡಿದ್ದ 285 ಹಳ್ಳಿಗಳ 22 ಸಾವಿರ ಕುಟುಂಬಗಳಲ್ಲಿ ಪಂಡಾ ಅವರ ಕುಟುಂಬವೂ ಒಂದು. ಪಂಡಾ ಅವರು ಸಾಹಿತ್ಯ ಕ್ಷೇತ್ರದಲ್ಲೂ ಸಾಕಷ್ಟು ಕೃಷಿ ಮಾಡಿದ್ದಾರೆ. 16 ಕವನ ಸಂಕಲನ, ಒಂದು ಕಾದಂಬರಿ ಪ್ರಕಟಿಸಿದ್ದಾರೆ. 2010ರಲ್ಲಿ ಅವರು ಗಂಗಾಧರ್ ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರಾಗಿದ್ದಾರೆ.


ಕೋವಿಡ್: ಮಹಾರಾಷ್ಟ್ರ, ಕೇರಳದಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಸ್ಥಿರ

ಏಳು ರಾಜ್ಯಗಳಿಗೆ ಕೇಂದ್ರದ ತಂಡ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಮಹಾರಾಷ್ಟ್ರ, ಕೇರಳದಲ್ಲಿ ಇಳಿಕೆಯಾಗದ ಹೊಸ ಪ್ರಕರಣಗಳ ಸಂಖ್ಯೆ
- ಐದು ರಾಜ್ಯಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆಯಲ್ಲಿ ಏರಿಕೆ
- ಕೇರಳದಲ್ಲಿ ಕೋವಿಡ್ ದೃಢಪಡುವಿಕೆ ಪ್ರಮಾಣ ಶೇ 10ಕ್ಕೂ ಹೆಚ್ಚು



ನವದೆಹಲಿ: ದೇಶದ ಹಲವು ರಾಜ್ಯಗಳಲ್ಲಿ ಪ್ರತಿದಿನ ಪತ್ತೆಯಾಗುವ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆಯಲ್ಲಿ ಇಳಿಕೆಯಾಗಿದ್ದರೂ, ಮಹಾರಾಷ್ಟ್ರ ಮತ್ತು ಕೇರಳದಲ್ಲಿ ಪೂರ್ಣ ಪ್ರಮಾಣದ ಇಳಿಕೆ ಸಾಧ್ಯವಾಗಿಲ್ಲ. ಎರಡೂ ರಾಜ್ಯಗಳಲ್ಲಿ ಕೆಲವು ದಿನಗಳಿಂದ ಪ್ರತಿದಿನ ಪತ್ತೆಯಾಗುತ್ತಿರುವ ಹೊಸ ಪ್ರಕರಣಗಳ ಸಂಖ್ಯೆ ಸ್ಥಿರವಾಗಿದೆ. ಅಲ್ಲದೆ ಇನ್ನೂ ಐದು ರಾಜ್ಯಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆಯಲ್ಲಿ ಏರಿಕೆಯಾಗುತ್ತಿದೆ. ಈ ಏಳೂ ರಾಜ್ಯಗಳಿಗೆ ಕೇಂದ್ರ ಆರೋಗ್ಯ ಸಚಿವಾಲಯವು ಶುಕ್ರವಾರ ತಜ್ಞರ ತಂಡವನ್ನು ಕಳುಹಿಸಿದೆ.

ಮಹಾರಾಷ್ಟ್ರದಲ್ಲಿ ಜೂನ್ ಕೊನೆಯ ಎರಡು ವಾರ ಮತ್ತು ಜುಲೈನ ಮೊದಲ ಎರಡು ದಿನ ಪ್ರತಿದಿನ ಪತ್ತೆಯಾಗುತ್ತಿರುವ ಹೊಸ ಪ್ರಕರಣಗಳ ಸಂಖ್ಯೆ 8,000ದಿಂದ 10,000ರದ ನಡುವೆ ಇದೆ. 'ಈ 17 ದಿನಗಳಲ್ಲಿ ಪ್ರತಿದಿನ ಪತ್ತೆಯಾದ ಹೊಸ ಪ್ರಕರಣಗಳ ಸಂಖ್ಯೆ 8,000ಕ್ಕಿಂತ ಕಡಿಮೆಯಾಗಿಲ್ಲ. ಇದು ಕಳವಳಕಾರಿ ಅಂಶ' ಎಂದು ಮಹಾರಾಷ್ಟ್ರ ಆರೋಗ್ಯ ಸಚಿವ ರಾಜೇಶ್ ಟೋಪೆ ಹೇಳಿದ್ದಾರೆ.

ಮಹಾರಾಷ್ಟ್ರದ ಹಲವೆಡೆ ಪ್ರತಿದಿನ ಪತ್ತೆಯಾಗುತ್ತಿರುವ ಹೊಸ ಪ್ರಕರಣಗಳ ಸಂಖ್ಯೆ ಗಣನೀಯವಾಗಿ ಇಳಿಕೆಯಾಗಿದೆ. ಆದರೆ, ರತ್ನಗಿರಿ, ಸಿಂಧುದುರ್ಗ, ಪುಣೆ, ಸಾಂಗ್ಲಿ, ಸತಾರಾ, ಕೊಲ್ಹಾಪುರ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಏರಿಕೆಯಾಗುತ್ತಿದೆ.

ಕೇರಳದಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಇಳಿಕೆಯಾದ ನಂತರ ಲಾಕ್‌ಡೌನ್ ನಿಯಮಗಳನ್ನು ಸಡಿಲಿಸಲಾಗಿತ್ತು. ಆನಂತರ ಹೊಸ ಪ್ರಕರಣಗಳ ಸಂಖ್ಯೆಯಲ್ಲಿ ಇಳಿಕೆಯಾಗಲೇ ಇಲ್ಲ. ಜೂನ್ 30 ಮತ್ತು ಜುಲೈ 1ರಂದು 13,000ಕ್ಕೂ ಹೆಚ್ಚು ಪ್ರಕರಣಗಳು ಪತ್ತೆಯಾಗಿವೆ. ಜುಲೈ 2ರಂದು 12,868 ಪ್ರಕರಣಗಳು ಪತ್ತೆಯಾಗಿವೆ. ಪ್ರತಿದಿನ ನಡೆಸುತ್ತಿರುವ ಕೋವಿಡ್ ಪರೀಕ್ಷೆಗಳಲ್ಲಿ ಕೋವಿಡ್ ದೃಢಪಡುವ ಪ್ರಮಾಣ ಶೇ 10ಕ್ಕಿಂತಲೂ ಹೆಚ್ಚು ಇದೆ.

ಅರುಣಾಚಲ ಪ್ರದೇಶ, ತ್ರಿಪುರಾ, ಒಡಿಶಾ, ಛತ್ತೀಸಗಡ ಮತ್ತು ಮಣಿಪುರದಲ್ಲಿ ಹೊಸ ಪ್ರಕರಣಗಳ ಸಂಖ್ಯೆಯಲ್ಲಿ ಗಣನೀಯ ಏರಿಕೆ ಕಂಡು ಬಂದಿದೆ. ಹೀಗಾಗಿ ಈ ರಾಜ್ಯಗಳಿಗೆ ತಜ್ಞರ ತಂಡವನ್ನು ಕಳುಹಿಸಲಾಗಿದೆ.

ರಾಜ್ಯದಲ್ಲಿ ಹೊಸದಾಗಿ 207 ಡೆಲ್ಟಾ ಪ್ರಕರಣ ಪತ್ತೆ

ಬೆಂಗಳೂರು: ರಾಜ್ಯದಲ್ಲಿ ಹೊಸದಾಗಿ 207 ಮಂದಿಯಲ್ಲಿ ಡೆಲ್ಟಾ ವೈರಾಣು ಪತ್ತೆಯಾಗಿದೆ. ಈವರೆಗೆ ಈ ತಳಿಯ ವೈರಾಣು ಕಾಣಿಸಿಕೊಂಡ ಪ್ರಕರಣಗಳ ಸಂಖ್ಯೆ 725ಕ್ಕೆ ಏರಿಕೆಯಾಗಿದೆ.

ಕೊರೊನಾ ಸೋಂಕಿತರಲ್ಲಿ 88 ಮಂದಿ ಮೃತಪಟ್ಟಿರುವುದು ಶುಕ್ರವಾರ ದೃಢಪಟ್ಟಿದೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 35,222ಕ್ಕೆ ತಲುಪಿದೆ. ಮರಣ ಪ್ರಮಾಣ ದರವು ಶೇ 2.94 ರಷ್ಟು ವರದಿಯಾಗಿದೆ. ರಾಜ್ಯದ 25 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ದೃಢಪಟ್ಟಿವೆ. ದಕ್ಷಿಣ ಕನ್ನಡದಲ್ಲಿ 13 ಮಂದಿ, ಬೆಂಗಳೂರಿನಲ್ಲಿ 11 ಮಂದಿ, ಬಳ್ಳಾರಿಯಲ್ಲಿ 10 ಮಂದಿ ಮೃತಪಟ್ಟಿದ್ದಾರೆ. ಉಳಿದ ಜಿಲ್ಲೆಗಳಲ್ಲಿ 10ಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ಮರಣ ಪ್ರಕರಣಗಳು ವರದಿಯಾಗಿವೆ.

ರಾಜ್ಯದಲ್ಲಿ ಹೊಸದಾಗಿ 2,984 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಒಂದು ದಿನದ ಅವಧಿಯಲ್ಲಿ 1.55 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣವು ಶೇ 1.92 ರಷ್ಟು ವರದಿಯಾಗಿದೆ. ಬೆಂಗಳೂರಿನಲ್ಲಿ 593 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 500 ರ ಗಡಿಯೊಳಗಡೆ ಇವೆ. ಈ ಸಂಖ್ಯೆ 14 ಜಿಲ್ಲೆಗಳಲ್ಲಿ ಎರಡಂಕಿಯಲ್ಲಿದೆ. ಈವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 28.49 ಲಕ್ಷ ದಾಟಿದೆ.

ರಾಜ್ಯದಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತಷ್ಟು ಇಳಿಕೆ ಕಂಡಿದ್ದು, ಸದ್ಯ 53,871 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಸೋಂಕಿತರಲ್ಲಿ 14,337 ಮಂದಿಗೆ ಕಾಯಿಲೆ ವಾಸಿಯಾಗಿದೆ. ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 27.60 ಲಕ್ಷ ದಾಟಿದೆ.

ಸುದ್ದಿ 2 ನಿಮಿಷ

ಕೋವಿಡ್‌ನಿಂದ 3.30 ಲಕ್ಷ ಸಾವು: ಡಿ.ಕೆ. ಶಿವಕುಮಾರ್ ಆರೋಪ

ಬೆಂಗಳೂರು: ಕೋವಿಡ್‌ನಿಂದ ರಾಜ್ಯದಲ್ಲಿ 3.30 ಲಕ್ಷ ಮಂದಿ ಮೃತಪಟ್ಟಿದ್ದಾರೆ. ಆದರೆ, ರಾಜ್ಯ ಸರ್ಕಾರ ಸಾವಿನ ಸಂಖ್ಯೆಯನ್ನು ಮುಚ್ಚಿಡುತ್ತಿದೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆರೋಪಿಸಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, 'ಚಾಮರಾಜನಗರದಲ್ಲಿ ಒಂದೇ ದಿನ 65 ಮಂದಿ ಮೃತಪಟ್ಟಿದ್ದರು. ಆಸ್ಪತ್ರೆಯಲ್ಲಿ 36 ಜನರು ಸಾವಿಗೀಡಾಗಿದ್ದಾರೆ ಎಂಬ ವರದಿ ಬಂತು. ಕೇವಲ 3 ಮಂದಿ ಮೃತಪಟ್ಟಿದ್ದಾರೆ ಎಂದು ಸರ್ಕಾರ ಹೇಳಿತು. ಇದು ಸಾವಿನ ಸಂಖ್ಯೆಯನ್ನು ಮುಚ್ಚಿಡುತ್ತಿರುವುದಕ್ಕೆ ಸಾಕ್ಷಿ' ಎಂದು ದೂರಿದರು.

ಚಾಮರಾಜನಗರದಲ್ಲಿ ಆಮ್ಲಜನಕದ ಕೊರತೆಯಿಂದ ಮೃತಪಟ್ಟಿರುವವರ ಪೈಕಿ 36 ಮಂದಿಯ ಮನೆಗಳಿಗೆ ಭೇಟಿನೀಡಿ, ಸಾಂತ್ವನ ಹೇಳಲಾಗಿದೆ. ಅವರಲ್ಲಿ ಯಾವ ಕುಟುಂಬಕ್ಕೂ 'ಕೋವಿಡ್‌ನಿಂದ ಮೃತಪಟ್ಟಿದ್ದಾರೆ' ಎಂಬ ಮರಣ ಪ್ರಮಾಣಪತ್ರ ವಿತರಿಸಿಲ್ಲ. ಬೀದರ್ ಜಿಲ್ಲೆಯಲ್ಲೂ ಸಾವಿನ ಸಂಖ್ಯೆಯನ್ನು ಮುಚ್ಚಿಡುತ್ತಿರುವುದನ್ನು ಕೆಪಿಸಿಸಿ ಕಾರ್ಯಾಧ್ಯಕ್ಷರು ಬಯಲಿಗೆ ತಂದಿದ್ದಾರೆ ಎಂದರು.

ಕೋವಿಡ್‌ನಿಂದ ಆಗಿರುವ ಸಾವುಗಳ ಕುರಿತು ತಕ್ಷಣವೇ 'ಡೆತ್ ಆಡಿಟ್' ನಡೆಸಬೇಕು. ಕೋವಿಡ್‌ನಿಂದ ಮೃತಪಟ್ಟಿರುವವರ ಕುಟುಂಬಗಳಿಗೆ ಸೂಕ್ತ ಪರಿಹಾರ ನೀಡಬೇಕು ಎಂದರು.

ಓಂಪ್ರಕಾಶ್ ಚೌಟಾಲಾ ಬಿಡುಗಡೆ



ನವದೆಹಲಿ (ಪಿಟಿಐ): ಶಿಕ್ಷಕರ ನೇಮಕಾತಿ ಹಗರಣದಲ್ಲಿ 10 ವರ್ಷಗಳ ಜೈಲು ಶಿಕ್ಷೆ ಪೂರ್ಣಗೊಳಿಸಿದ ಹರಿಯಾಣದ ಮಾಜಿ ಮುಖ್ಯಮಂತ್ರಿ ಓಂಪ್ರಕಾಶ್ ಚೌಟಾಲಾ ಅವರು ಶುಕ್ರವಾರ ತಿಹಾರ್ ಜೈಲಿನಿಂದ ಬಿಡುಗಡೆಯಾದರು.

ಭಾರತೀಯ ರಾಷ್ಟ್ರೀಯ ಲೋಕ ದಳದ (ಐಎನ್‌ಎಲ್‌ಡಿ) ಮುಖ್ಯಸ್ಥರಾದ, 86 ವರ್ಷದ ಚೌಟಾಲಾ ಅವರನ್ನು ಬಂದಿಖಾನೆಯ ಔಪಚಾರಿಕ ನಿಯಮಗಳನ್ನು ಪೂರೈಸಿದ ನಂತರ ಅಧಿಕಾರಿಗಳು ಜೈಲಿನಿಂದ ಬಿಡುಗಡೆ ಮಾಡಿದರು.

ಚೌಟಾಲಾ ಅವರು ಶಿಕ್ಷಕರ ನೇಮಕಾತಿ ಹಗರಣದಲ್ಲಿ ಅಪರಾಧಿಯಾಗಿ 2013ರಲ್ಲಿ ಜೈಲು ಸೇರಿದ್ದರು. ಈಗಾಗಲೇ 9 ವರ್ಷ 9 ತಿಂಗಳು ಜೈಲುವಾಸ ಪೂರ್ಣಗೊಳಿಸಿದ್ದಾರೆ. 2020ರ ಮಾರ್ಚ್‌ನಿಂದ ತುರ್ತು ಪೆರೋಲ್ ಮೇಲೆ ಚೌಟಾಲಾ ಹೊರಗಿದ್ದರು. ಇದೇ ವರ್ಷದ ಫೆಬ್ರುವರಿ 21ರಂದು ಅವರು ಶರಣಾಗಬೇಕಿತ್ತು. ಅವರ ಪೆರೋಲ್ ಅವಧಿಯನ್ನು ಹೈಕೋರ್ಟ್ ವಿಸ್ತರಿಸಿತ್ತು ಎಂದು ಜೈಲಿನ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

'ಕೋವಿಡ್ ಸಾಂಕ್ರಾಮಿಕದ ಹಿನ್ನೆಲೆಯಲ್ಲಿ ಒಂಬತ್ತೂವರೆ ವರ್ಷ ಜೈಲುವಾಸ ಪೂರೈಸಿದ ಕೈದಿಗಳಿಗೆ ಆರು ತಿಂಗಳ ಶಿಕ್ಷೆ ಅವಧಿಯ ವಿನಾಯಿತಿ ನೀಡುವಂತೆ ಕಳೆದ ವರ್ಷ ದೆಹಲಿ ಸರ್ಕಾರ ಆದೇಶ ಹೊರಡಿಸಿತ್ತು, ಅದರಂತೆ ಬಿಡುಗಡೆ ಮಾಡಿದ್ದೇವೆ' ಎಂದು ಬಂದಿಖಾನೆ ಐಜಿಪಿ ಸಂದೀಪ್ ಗೋಯಲ್ ತಿಳಿಸಿದರು.

ಉತ್ತರಾಖಂಡ: ಮತ್ತೆ ಗರಿಗೆದರಿದ ನಾಯಕತ್ವ ಬದಲಾವಣೆ ಪ್ರಕ್ರಿಯೆ



ತೀರಥ್ ಸಿಂಗ್ ರಾವತ್

ನವದೆಹಲಿ, ಡೆಹ್ರಾಡೂನ್ (ಪಿಟಿಐ): ಉತ್ತರಾಖಂಡದಲ್ಲಿ ನಾಯಕತ್ವ ಬದಲಾವಣೆ ಕುರಿತ ಚಟುವಟಿಕೆಗಳು ಮತ್ತೆ ಆರಂಭವಾಗಿವೆ.

ಮುಖ್ಯಮಂತ್ರಿ ತೀರಥ್ ಸಿಂಗ್ ರಾವತ್ ಅವರು ಶುಕ್ರವಾರ ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಅವರನ್ನು ಭೇಟಿಯಾಗಿರುವುದು ಕುತೂಹಲ ಮೂಡಿಸಿದೆ.

ಪ್ರಸ್ತುತ ಲೋಕಸಭಾ ಸದಸ್ಯರಾಗಿರುವ ರಾವತ್, ಮುಖ್ಯಮಂತ್ರಿ ಹುದ್ದೆಯಲ್ಲಿ ಮುಂದುವರಿಯಬೇಕಾದರೆ ಸೆಪ್ಟೆಂಬರ್ 10ರ ಒಳಗೆ ಶಾಸಕರಾಗಿ ಆಯ್ಕೆಯಾಗಬೇಕಾಗಿದೆ.

ಆದರೆ, ಚುನಾವಣಾ ಆಯೋಗ ರಾಜ್ಯದಲ್ಲಿ ತೆರವಾಗಿರುವ ಎರಡು ಸ್ಥಾನಗಳಿಗೆ ಕೋವಿಡ್–19 ಕಾರಣಕ್ಕೆ ಉಪಚುನಾವಣೆ ನಡೆಸುವ ಸಾಧ್ಯತೆಗಳು ಕಡಿಮೆಯಾಗಿರುವುದರಿಂದ ನಾಯಕತ್ವ ಬದಲಾವಣೆ ಅನಿವಾರ್ಯ ಎನ್ನುವ ಪರಿಸ್ಥಿತಿ ಸೃಷ್ಟಿಯಾಗಿದೆ. ಉತ್ತರಾಖಂಡದ ಗಂಗೋತ್ರಿ ಮತ್ತು ಹಲ್ದ್ವಾನಿ ಕ್ಷೇತ್ರಗಳಿಗೆ ಉಪಚುನಾವಣೆ ನಡೆಯಬೇಕಾಗಿದೆ.

ಪ್ರಸ್ತುತ ವಿಧಾನಸಭೆಯ ಅವಧಿ ಮುಂದಿನ ಮಾರ್ಚ್‌ನಲ್ಲಿ ಮುಕ್ತಾಯವಾಗುವುದರಿಂದ ಚುನಾವಣೆ ಆಯೋಗ ಉಪಚುನಾವಣೆ ನಡೆಸುವ ಸಾಧ್ಯತೆಗಳು ಕ್ಷೀಣಿಸಿವೆ. ಕೇವಲ 9 ತಿಂಗಳಿರುವಾಗ ಚುನಾವಣೆ ನಡೆಸುವುದಿಲ್ಲ ಎಂದು ರಾಜಕೀಯ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

ಜತೆಗೆ, ಸಾಂಕ್ರಾಮಿಕ ಕಾಯಿಲೆ ಸಂದರ್ಭದಲ್ಲಿ ಈ ಹಿಂದೆ ಚುನಾವಣೆ ನಡೆಸಿದ ಕಾರಣಕ್ಕೆ ಆಯೋಗವನ್ನು ನ್ಯಾಯಾಲಯಗಳು ತರಾಟೆಗೆ ತೆಗೆದುಕೊಂಡಿವೆ. ಆದ್ದರಿಂದ, ಆಯೋಗವು ಚುನಾವಣೆ ನಡೆಸಲು ಅವಸರ ಮಾಡುವುದಿಲ್ಲ ಎನ್ನುವ ಅಭಿಪ್ರಾಯ ವ್ಯಕ್ತವಾಗಿದೆ.

ಜನಪ್ರತಿನಿಧಿಗಳ ಕಾಯ್ದೆಯ ಸೆಕ್ಷನ್ 151 'ಎ' ಅನ್ವಯ ಸಂಸತ್ ಅಥವಾ ರಾಜ್ಯ ವಿಧಾನಸಭೆಗಳ ಖಾಲಿ ಉಳಿದಿರುವ ಸ್ಥಾನಗಳನ್ನು ಆರು ತಿಂಗಳ ಒಳಗೆ ಉಪಚುನಾವಣೆ ಮೂಲಕ ಭರ್ತಿ ಮಾಡಬೇಕು. ಆದರೆ, ಆಯ್ಕೆಯಾಗುವ ಹೊಸ ಸದಸ್ಯರ ಅವಧಿಯು ಒಂದು ವರ್ಷ ಅಥವಾ ಅದಕ್ಕೂ ಹೆಚ್ಚು ಇರಬೇಕು ಎಂದು ತಿಳಿಸಿದೆ.

ಕೇಂದ್ರ ಸರ್ಕಾರವು ಸಹ ಉಪಚುನಾವಣೆಗೆ ಒತ್ತಡ ಹೇರುವ ಸಾಧ್ಯತೆ ಕಡಿಮೆ ಎಂದು ರಾಜಕೀಯ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

ಉಪಚುನಾವಣೆ ನಡೆಯದಿದ್ದರೆ ನಾಯಕತ್ವ ಬದಲಾವಣೆ ಮಾಡುವುದು ಬಿಜೆಪಿಗೆ ಅನಿವಾರ್ಯವಾಗಲಿದೆ. ಈಗಿರುವ ಶಾಸಕರಲ್ಲಿ ಒಬ್ಬರನ್ನು ಮುಖ್ಯಮಂತ್ರಿಯನ್ನಾಗಿ ಮಾಡಬೇಕಾಗುತ್ತದೆ ಎಂದು ಹೇಳಿದ್ದಾರೆ.

ಮಾಲಿನ್ಯ ಪ್ರದೇಶಗಳಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚು

ಪಿಎಂ 2.5 ಮಟ್ಟ ಇರುವಲ್ಲಿ ಸೋಂಕು ಗರಿಷ್ಠ: ಅಧ್ಯಯನ

ನವದೆಹಲಿ: ಮಾಲಿನ್ಯಕಾರಕ ಕಣಗಳು(ಪಿ.ಎಂ) 2.5ರಷ್ಟು ಇರುವ ಪ್ರದೇಶಗಳಲ್ಲಿ ವಾಸಿಸುವ ಜನತೆ ಕೋವಿಡ್–19 ಸೋಂಕಿಗೆ ಒಳಗಾಗುವ ಸಾಧ್ಯತೆಗಳು ಹೆಚ್ಚು ಎನ್ನುವುದು ಅಧ್ಯಯನ ವರದಿಯೊಂದು ತಿಳಿಸಿದೆ.

ಬೆಂಗಳೂರು, ದೆಹಲಿ, ಮುಂಬೈ, ಚೆನ್ನೈ, ಕೋಲ್ಕತ್ತ, ಪುಣೆ, ಅಹಮದಾಬಾದ್, ವಾರಾಣಸಿ, ಲಖನೌ ಮತ್ತು ಸೂರತ್ ಸೇರಿದಂತೆ 16 ಪ್ರಮುಖ ನಗರಗಳಲ್ಲಿ ಅತಿ ಹೆಚ್ಚು ಕೋವಿಡ್–19 ಪ್ರಕರಣಗಳು ಪತ್ತೆಯಾಗಿವೆ. ಈ ನಗರಗಳಲ್ಲೇ ಪಿಎಂ 2.5 ಹೊರಸೂಸುವಿಕೆಯೂ ಹೆಚ್ಚಾಗಿದೆ ಎಂದು ತಿಳಿಸಿದೆ.

ದೇಶದ 721 ಜಿಲ್ಲೆಗಳಲ್ಲಿ ಈ ಬಗ್ಗೆ ಅಧ್ಯಯನ ಕೈಗೊಳ್ಳಲಾಗಿದೆ. ಪಿಎಂ2.5 ಹೊರಸೂಸುವಿಕೆ ಮತ್ತು ಕೋವಿಡ್–19 ಸೋಂಕಿಗೆ ನಡುವೆ ಸಂಬಂಧ ಇರುವುದು ಅಧ್ಯಯನ ಸಂದರ್ಭದಲ್ಲಿ ತಿಳಿದು ಬಂದಿದೆ. ಇದೇ ಕಾರಣಕ್ಕೆ ಹಲವು ಸಾವುಗಳು ಸಹ ಸಂಭವಿಸಿವೆ ಎಂದು ಅಧ್ಯಯನ ನಡೆಸಿರುವ ಗುಫ್ರಾನ್ ಬೇಗ್ ವಿವರಿಸಿದ್ದಾರೆ. ಬೇಗ್ ಅವರು ವಾಯು ಗುಣಮಟ್ಟ ಮತ್ತು ಹವಾಮಾನ ಮುನ್ಸೂಚನೆ ಹಾಗೂ ಸಂಶೋಧನೆಯ (ಎಸ್‌ಎಎಫ್‌ಎಆರ್) ನಿರ್ದೇಶಕರಾಗಿದ್ದಾರೆ.

ಭುವನೇಶ್ವರದ ಉತ್ಕಲ್ ವಿಶ್ವವಿದ್ಯಾಲಯ, ಪುಣೆಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟ್ರಾಪಿಕಲ್ ಮಿಟಿಯೊರಾಲಜಿ (ಐಐಟಿಎಂ), ರೂರ್ಕೆಲಾದ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಮತ್ತು ಭುವನೇಶ್ವರದ ಐಐಟಿ ತಜ್ಞರು, ವಾಯು ಗುಣಮಟ್ಟ ಮತ್ತು ಕೋವಿಡ್–19 ಪ್ರಕರಣಗಳು ಮತ್ತು ಸಾವುಗಳು ಕುರಿತು ಕಳೆದ ವರ್ಷ ನವೆಂಬರ್ 5ರವರೆಗೆ ಅಧ್ಯಯನ ಕೈಗೊಂಡು ವರದಿ ಸಿದ್ಧಪಡಿಸಿದ್ದಾರೆ.

ಅತಿ ಹೆಚ್ಚು ಕೋವಿಡ್–19 ಪ್ರಕರಣಗಳು ದೆಹಲಿ, ಮಹಾರಾಷ್ಟ್ರ, ರಾಜಸ್ಥಾನ, ತಮಿಳುನಾಡು, ಉತ್ತರಪ್ರದೇಶ, ಆಂಧ್ರಪ್ರದೇಶ, ತೆಲಂಗಾಣ, ಗುಜರಾತ್, ಬಿಹಾರ, ಕರ್ನಾಟಕ, ಒಡಿಶಾ ಮತ್ತು ಮಧ್ಯಪ್ರದೇಶದಲ್ಲಿ ಪತ್ತೆಯಾಗಿವೆ. ಈ ಪ್ರದೇಶಗಳಲ್ಲಿ ಪಿಎಂ2.5 ಅತಿ ಹೆಚ್ಚು ಇರುವುದು ದೃಢಪಟ್ಟಿದೆ ಎಂದು ಅಧ್ಯಯನ ವರದಿ ತಿಳಿಸಿದೆ.

ಬೆಂಗಳೂರಿನಲ್ಲಿ ವರ್ಷದ 39 ದಿನಗಳಲ್ಲಿ ಅತಿ ಹೆಚ್ಚು ಮಾಲಿನ್ಯ ದಾಖಲಾಗುತ್ತದೆ. ಈ ನಗರದಲ್ಲಿ 3.65 ಲಕ್ಷ ಕೋವಿಡ್–19 ಪ್ರಕರಣಗಳು 4,086 ಸಾವುಗಳು ಸಂಭವಿಸಿವೆ ಎಂದು ವಿವರಿಸಿದೆ.

ವೆಂಕಟಾಚಲ ಶಾಸ್ತ್ರಿ, ಸೈಯದ್ ಇಸಾಕ್‌ಗೆ ಪುಸ್ತಕ ಪ್ರಾಧಿಕಾರ ಪ್ರಶಸ್ತಿ

ಪ್ರಜಾವಾಣಿ ವಾರ್ತೆ



ವೆಂಕಟಾಚಲ ಶಾಸ್ತ್ರಿ



ಸೈಯದ್ ಇಸಾಕ್



ಡಾ. ಸುಧೀಂದ್ರ ಹಾಲ್ದೊಡ್ಡೇರಿ

ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರವು 2020ನೇ ಸಾಲಿನ ವಿವಿಧ ವಾರ್ಷಿಕ ಪ್ರಶಸ್ತಿಗಳನ್ನು ಶುಕ್ರವಾರ ಪ್ರಕಟಿಸಿದೆ. ₹ 75 ಸಾವಿರ ಬಹುಮಾನ ಹೊಂದಿರುವ 'ಡಾ.ಎಂ.ಎಂ. ಕಲಬುರ್ಗಿ ಮಾನವಿಕ ಅಧ್ಯಯನ ಪ್ರಶಸ್ತಿ'ಗೆ ಹಿರಿಯ ವಿದ್ವಾಂಸ ಡಾ.ಟಿ.ವಿ. ವೆಂಕಟಾಚಲ ಶಾಸ್ತ್ರಿ ಆಯ್ಕೆಯಾಗಿದ್ದಾರೆ.

ಪ್ರಾಧಿಕಾರದ ಅಧ್ಯಕ್ಷ ಡಾ.ಎಂ.ಎನ್. ನಂದೀಶ್ ಹಂಚೆ ನೇತೃತ್ವದಲ್ಲಿ ಈ ಆಯ್ಕೆಗಳು ನಡೆದಿವೆ. 'ಅತ್ಯುತ್ತಮ ಪ್ರಕಾಶನ ಪ್ರಶಸ್ತಿ'ಗೆ ಹುಬ್ಬಳ್ಳಿಯ ಸಾಹಿತ್ಯ ಪ್ರಕಾಶನ ಭಾಜನವಾಗಿದೆ. ಈ ಪ್ರಶಸ್ತಿಯು ₹ 1 ಲಕ್ಷ ನಗದು ಹಾಗೂ ಪ್ರಶಸ್ತಿ ಫಲಕ ಒಳಗೊಂಡಿದೆ.

'ಡಾ.ಜಿ.ಪಿ. ರಾಜರತ್ನಂ ಸಾಹಿತ್ಯ ಪರಿಚಾರಕ ಪ್ರಶಸ್ತಿ'ಗೆ ಮೈಸೂರಿನ ಸೈಯದ್ ಇಸಾಕ್ ಅವರನ್ನುಆಯ್ಕೆ ಮಾಡಲಾಗಿದೆ. 'ಡಾ. ಅನುಪಮಾ ನಿರಂಜನ ವೈದ್ಯಕೀಯ ಹಾಗೂ ವಿಜ್ಞಾನ ಸಾಹಿತ್ಯ ಪ್ರಶಸ್ತಿ'ಗೆ ಡಾ. ಸುಧೀಂದ್ರ ಹಾಲ್ದೊಡ್ಡೇರಿ ಅವರು ಭಾಜನರಾಗಿದ್ದಾರೆ. ಈ ಪ್ರಶಸ್ತಿಗಳು ಕ್ರಮವಾಗಿ ₹ 50 ಸಾವಿರ ಹಾಗೂ ₹ 25 ಸಾವಿರ ನಗದು, ಪ್ರಶಸ್ತಿ ಫಲಕ ಒಳಗೊಂಡಿದೆ.

'ಪುಸ್ತಕ ಬಹುಮಾನಗಳ ಆಯ್ಕೆ ಪ್ರಕ್ರಿಯೆ ನಡೆದಿದ್ದು, ಕೆಲವೇ ದಿನಗಳಲ್ಲಿ ಪ್ರಕಟ ಮಾಡಲಾಗುವುದು' ಎಂದು ಪ್ರಕಟಣೆಯಲ್ಲಿ ನಂದೀಶ್ ಹಂಚೆ ತಿಳಿಸಿದ್ದಾರೆ.

ಕೆಪಿಎಸ್‌ಸಿ: ರಾಷ್ಟ್ರಪತಿಗೆ ಪತ್ರ ಬರೆದ ಪತ್ರದಲ್ಲಿ ಕೆಲವು ಶಾಸಕರ ಮನವಿ

'2011ರ ನೇಮಕಾತಿ ರದ್ದತಿ ಬೇಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 2011ರ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿ ಅಧಿಸೂಚನೆಯನ್ನೇ ರದ್ದುಗೊಳಿಸಿ 2014ರ ಆಗಸ್ಟ್ 14ರಂದು ಹೊರಡಿಸಿದ್ದ ಆದೇಶವನ್ನು ಹಿಂಪಡೆದು, ಆಯ್ಕೆಯಾದ ಎಲ್ಲ ಅಭ್ಯರ್ಥಿಗಳಿಗೂ ನೇಮಕಾತಿ ಆದೇಶ ವಿತರಿಸುವಂತೆ ವಿಧಾನ ಸಭೆ ಮತ್ತು ವಿಧಾನ ಪರಿಷತ್‌ನ ಹಲವು ಸದಸ್ಯರು ರಾಷ್ಟ್ರಪತಿ ರಮಾನಾಥ ಕೋವಿಂದ್ ಅವರಿಗೆ ಪತ್ರ ಬರೆದಿದ್ದಾರೆ.

ವಿಧಾನ ಪರಿಷತ್ ಸದಸ್ಯರಾದ ಪಿ.ಆರ್. ರಮೇಶ್, ಆಯನೂರು ಮಂಜುನಾಥ, ವಿಧಾನ ಮಂಡಲದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಮಿತಿ ಅಧ್ಯಕ್ಷ ಎಂ.ಪಿ. ಕುಮಾರಸ್ವಾಮಿ, ಶಾಸಕರಾದ ಈಶ್ವರ ಖಂಡ್ರೆ, ಎ.ಟಿ. ರಾಮಸ್ವಾಮಿ, ಆರಗ ಜ್ಞಾನೇಂದ್ರ, ರಾಜಾ ವೆಂಕಟಪ್ಪ ನಾಯಕ, ಅಖಂಡ ಶ್ರೀನಿವಾಸ ಮೂರ್ತಿ, ಕೆ.ಬಿ. ಅಶೋಕ ನಾಯ್ಕ, ಎನ್. ಮಹೇಶ್, ವಿಧಾನ ಪರಿಷತ್ ಸದಸ್ಯರಾದ ಆರ್. ಧರ್ಮಸೇನ, ಯು.ಬಿ. ವೆಂಕಟೇಶ್, ಮೋಹನ್ ಕುಮಾರ್ ಕೊಂಡಜ್ಜಿ, ವಿವೇಕರಾವ್ ವ. ಪಾಟೀಲ, ಕೆ.ಟಿ. ಶ್ರೀಕಂಠೇಗೌಡ, ಮರಿತಿಬ್ಬೇಗೌಡ, ಎನ್. ಅಪ್ಪಾಜಿ ಗೌಡ ಮತ್ತು ನಜೀರ್ ಅಹ್ಮದ್ ಈ ಮನವಿಗೆ ಸಹಿ ಮಾಡಿದ್ದಾರೆ.

'2011ರ ಗೆಜೆಟೆಡ್ ಪ್ರೊಬೇಷನರಿ ನೇಮಕಾತಿ ಪ್ರಕ್ರಿಯೆಯ ವಿಚಾರದಲ್ಲಿ ಸಂವಿಧಾನದ ಉಲ್ಲಂಘನೆ ಆಗಿದೆ. ಸಂವಿಧಾನಕ್ಕೆ ವಿರುದ್ಧವಾಗಿ ಇಡೀ ಪ್ರಕ್ರಿಯೆಯನ್ನೇ ರದ್ದು ಮಾಡಲಾಗಿದೆ. ಇದರಿಂದ ಅರ್ಹ ಅಭ್ಯರ್ಥಿಗಳಿಗೆ ನ್ಯಾಯ ದೊರಕಿಲ್ಲ. ನ್ಯಾಯ ಮತ್ತು ಸಂವಿಧಾನಾತ್ಮಕ ಮೌಲ್ಯಗಳನ್ನು ಎತ್ತಿ ಹಿಡಿಯುವುದಕ್ಕಾಗಿ ಆಯ್ಕೆಯಾದ ಎಲ್ಲ ಅಭ್ಯರ್ಥಿಗಳಿಗೂ 2017ರ ಮಾರ್ಚ್ 17ರ ಆದೇಶದಂತೆ ನೇಮಕಾತಿ ಆದೇಶ ನೀಡಬೇಕು' ಎಂದು ಆಗ್ರಹಿಸಿದ್ದಾರೆ.

ನೇಮಕಾತಿ ಪ್ರಕ್ರಿಯೆಯ ಅಧಿಸೂಚನೆಯನ್ನು ಹಿಂಪಡೆಯುವ ಸಂದರ್ಭದಲ್ಲಿ ನಿರಂತರವಾಗಿ ಸಂವಿಧಾನಕ್ಕೆ ವಿರುದ್ಧವಾಗಿ ನಡೆದುಕೊಳ್ಳಲಾಗಿದೆ. ಸಂವಿಧಾನದ ವಿಧಿ 323(2)ರ ಪ್ರಕಾರ, ಲೋಕಸೇವಾ ಆಯೋಗದ ಕಾರ್ಯನಿರ್ವಹಣಾ ವರದಿಯನ್ನು ವಿಧಾನ ಮಂಡಲದ ಮುಂದೆ ಮಂಡಿಸಬೇಕಿತ್ತು. ಆದರೆ, 2011ರ ಗೆಜೆಟೆಡ್ ಪ್ರೊಬೇಷನರಿ ನೇಮಕಾತಿ ಪ್ರಕ್ರಿಯೆಗೆ ಸಂಬಂಧಿಸಿದ ವರದಿಯನ್ನು ಪೂರ್ಣ ಪ್ರಮಾಣದಲ್ಲಿ ವಿಧಾನಮಂಡಲದ ಮುಂದೆ ಮಂಡಿಸಿರಲಿಲ್ಲ. ಆದರೂ, 'ವರದಿಯನ್ನು ವಿಧಾನಮಂಡಲದಲ್ಲಿ ಮಂಡಿಸಲಾಗಿತ್ತು' ಎಂದು 2020ರ ಬಜೆಟ್ ಅಧಿವೇಶನದ ವೇಳೆ ಮುಖ್ಯಮಂತ್ರಿಯವರು ವಿಧಾನಮಂಡಲದಲ್ಲೇ ಸುಳ್ಳು ಹೇಳಿದ್ದಾರೆ ಎಂದು ಪತ್ರದಲ್ಲಿ ದೂರಲಾಗಿದೆ.

'ಈ ಪ್ರಕರಣದಲ್ಲಿ ಸಂವಿಧಾನಾತ್ಮಕ ಕರ್ತವ್ಯಗಳನ್ನು ನಿರ್ವಹಿಸಲಾಗಿದೆ' ಎಂದು ಕರ್ನಾಟಕ ಆಡಳಿತ ನ್ಯಾಯ ಮಂಡಳಿ ಹಾಗೂ ಹೈಕೋರ್ಟ್‌ಗಳಿಗೆ ತಪ್ಪು ಮಾಹಿತಿ ನೀಡಲಾಗಿತ್ತು. ಕೆಪಿಎಸ್‌ಸಿ ಸದಸ್ಯರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಲು ಕೋರಿದ್ದ ಕಡತವನ್ನು ವಾಪಸು ಕಳುಹಿಸಿದ ರಾಜ್ಯಪಾಲರು, ಉಲ್ಲೇಖಿಸಿದ್ದ ಅಭಿಪ್ರಾಯವನ್ನೂ ನ್ಯಾಯಾಲಯಕ್ಕೆ ತಿಳಿಸದೇ ಮುಚ್ಚಿಡಲಾಗಿತ್ತು ಎಂದು ಆರೋಪಿಸಲಾಗಿದೆ.

ಸಿಐಡಿ ಸಲ್ಲಿಸಿದ ಮಧ್ಯಂತರ ವರದಿಯನ್ನಷ್ಟೇ ಆಧರಿಸಿ ನೇಮಕಾತಿ ಪ್ರಕ್ರಿಯೆಯನ್ನೇ ರದ್ದುಗೊಳಿಸಲಾಗಿದೆ. ಪ್ರತಿ ಅಭ್ಯರ್ಥಿಯ ಅಪರಾಧಿಕ ಹಿನ್ನೆಲೆ, ಅರ್ಹತೆ ಪರಿಶೀಲಿಸುವ ಎಲ್ಲ ಅಧಿಕಾರವೂ ಆಯೋಗದ ಬಳಿಯೇ ಇತ್ತು. ಅದನ್ನು ಬಳಸಿಲ್ಲ. ನ್ಯಾಯಾಲಯ, ವಿಧಾನಮಂಡಲ ಎಲ್ಲವನ್ನೂ ಲಘುವಾಗಿ ಪರಿಗಣಿಸಿ ನೇಮಕಾತಿ ಪ್ರಕ್ರಿಯೆಯನ್ನು ರದ್ದುಗೊಳಿಸುವ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಶಾಸಕರು ಆರೋಪಿಸಿದ್ದಾರೆ.



ತಂಪೆರೆದ ಮಳೆ

ನವದೆಹಲಿಯಲ್ಲಿ ಬಿಲಿಸಿನ ಝಳ ವಿಪರೀತವಾಗಿತ್ತು. ಆದರೆ, ಶುಕ್ರವಾರ ಮಳೆ ಸುರಿದು ತಂಪೆರೆಯಿತು

–ಎಎಫ್‌ಪಿ ಚಿತ್ರ

'ಸಿದ್ಧತೆ ಇಲ್ಲದೆ ಫಲಿತಾಂಶ ನಿರ್ಣಯಿಸಿದ ಸಿಬಿಎಸ್‌ಇ'

ಪ್ರಜಾವಾಣಿ ವಾರ್ತೆ

ಅಂಕಿ–ಅಂಶ

ಫಲಿತಾಂಶಕ್ಕೆ ತೃಪ್ತಿ ತೋರಿದ ಶಿಕ್ಷಕರು	41%
ಫಲಿತಾಂಶಕ್ಕೆ ಅತೃಪ್ತಿ ತೋರಿದ ಶಿಕ್ಷಕರು	43%
ಪರೀಕ್ಷೆಗೆ ಸಿದ್ಧವಿರುವ ವಿದ್ಯಾರ್ಥಿಗಳು	58%
ಪರೀಕ್ಷೆ ವಿರೋಧಿಸಿದ ವಿದ್ಯಾರ್ಥಿಗಳು	31%

ಬೆಂಗಳೂರು: ಕೇಂದ್ರೀಯ ಪ್ರೌಢಶಿಕ್ಷಣ ಮಂಡಳಿಯು (ಸಿಬಿಎಸ್‌ಇ) ಈ ಬಾರಿ ಹತ್ತನೇ ತರಗತಿ ಫಲಿತಾಂಶ ನೀಡಲು ಅನುಸರಿಸಿದ ಮಾನದಂಡಗಳು ಮತ್ತು ಪ್ರಕ್ರಿಯೆಯ ಬಗ್ಗೆ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಅಕಾಡೆಮಿ ಫಾರ್ ಕ್ರಿಯೇಟಿವ್ ಟೀಚಿಂಗ್ (ಎಸಿಟಿ) ಸಂಸ್ಥೆಯು ನಡೆಸಿದ ಸಮೀಕ್ಷೆಯಲ್ಲಿ 242 ಪ್ರಾಂಶುಪಾಲರು, ಶಿಕ್ಷಕರು ಮತ್ತು ಸಿಬಿಎಸ್‌ಇ ಪಠ್ಯಕ್ರಮದ 833 ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಶಿಕ್ಷಣ ತಜ್ಞ ಡಾ. ಗುರುರಾಜ ಕರಜಗಿ ಮಾರ್ಗದರ್ಶನದಲ್ಲಿ ಈ ಸಮೀಕ್ಷೆ ನಡೆಸಲಾಗಿದೆ.

ಇಂತಹ ನಿರ್ಧಾರ ಕೈಗೊಳ್ಳುವುದಕ್ಕೂ ಮುನ್ನ, ಮಂಡಳಿಯು ಪೂರ್ವ ಸಿದ್ಧತೆ ಮಾಡಿಕೊಳ್ಳಬೇಕಿತ್ತು ಎಂಬುದು ಸಮೀಕ್ಷೆಯಲ್ಲಿ ಪಾಲ್ಗೊಂಡ ಶೇ 81ರಷ್ಟು ಜನರ ಅಭಿಪ್ರಾಯವಾಗಿದೆ. ಶೈಕ್ಷಣಿಕ ಸಾಮರ್ಥ್ಯ ಮತ್ತು ಪ್ರಗತಿಯ ಮೇಲೆ ಕೋವಿಡ್ ಸಾಂಕ್ರಾಮಿಕವು ದುಷ್ಪರಿಣಾಮ ಬೀರಿದೆ ಎಂದು ಶೇ 73ರಷ್ಟು ವಿದ್ಯಾರ್ಥಿಗಳು ಅಭಿಪ್ರಾಯಪಟ್ಟಿದ್ದಾರೆ.

ಪರೀಕ್ಷೆಯನ್ನು ರದ್ದುಪಡಿಸಿ, ಗ್ರೇಡ್ ಆಧಾರದ ಮೇಲೆ ವಿದ್ಯಾರ್ಥಿಗಳನ್ನು ಉತ್ತೀರ್ಣಗೊಳಿಸಿದ್ದು ಸರಿಯಾದ ಕ್ರಮವಲ್ಲ ಎಂದು ಬಹುತೇಕರು ಹೇಳಿದ್ದಾರೆ. ಆದರೆ, ಶೇ 48ರಷ್ಟು ಶಿಕ್ಷಕರು ಮತ್ತು ಪ್ರಾಂಶುಪಾಲರು, ಸಿಬಿಎಸ್‌ಇ ಕ್ರಮವನ್ನು ಸ್ವಾಗತಿಸಿದ್ದಾರೆ. ಕೋವಿಡ್ ಬಿಕ್ಕಟ್ಟಿನ ಸಂದರ್ಭದಲ್ಲಿ ಇದು ಉತ್ತಮ ನಿರ್ಧಾರ ಎಂದು ಹೇಳಿದ್ದಾರೆ. ಶೇ 57ರಷ್ಟು ವಿದ್ಯಾರ್ಥಿಗಳು ಕೂಡ ಮಂಡಳಿಯು ಉತ್ತಮ ನಿರ್ಧಾರ ಕೈಗೊಂಡಿದೆ ಎಂದು ಸಂತಸ ವ್ಯಕ್ತಪಡಿಸಿದ್ದಾರೆ.

ಆಂತರಿಕ ಮೌಲ್ಯಮಾಪನದ ಆಧಾರದ ಮೇಲೆ ಉತ್ತೀರ್ಣಗೊಳಿಸುವುದಕ್ಕೆ ಶೇ 39 ವಿದ್ಯಾರ್ಥಿಗಳು ಸಂತಸ ವ್ಯಕ್ತಪಡಿಸಿದ್ದರೆ, ಶೇ 32 ವಿದ್ಯಾರ್ಥಿಗಳು ಆಂತರಿಕ ಮೌಲ್ಯಮಾಪನದ ಆಧಾರದ ಮೇಲೆ ಫಲಿತಾಂಶ ನೀಡುವುದಕ್ಕೆ ವಿರೋಧ ವ್ಯಕ್ತಪಡಿಸಿದ್ದಾರೆ. ಉಳಿದವರು ಈ ಬಗ್ಗೆ ಯಾವುದೇ ಅಭಿಪ್ರಾಯ ವ್ಯಕ್ತಪಡಿಸಿಲ್ಲ.

ಆಂತರಿಕ ಮೌಲ್ಯಮಾಪನ ಆಧರಿಸಿ, ಗ್ರೇಡ್ ನೀಡುವ ಇಡೀ ಪ್ರಕ್ರಿಯೆಯೇ ವ್ಯರ್ಥ ಪ್ರಯತ್ನ ಎಂದು ಶೇ 43ರಷ್ಟು ಶಿಕ್ಷಕರು ಹೇಳಿರುವುದಲ್ಲದೆ, ಈ ಪ್ರಕ್ರಿಯೆಯು ಬಹುಪಾಲು ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ಅತೃಪ್ತಿ ನೀಡಿದೆ ಎಂದೂ ಹೇಳಿದ್ದಾರೆ ಎಂಬುದಾಗಿ ವರದಿ ಹೇಳಿದೆ.

ಶನಿವಾರ, ಜುಲೈ 3, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 184 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಕೊರೊನಾ ಬಂದ ಮೇಲೆ ಹೆಣ್ಣುಮಕ್ಕಳಲ್ಲಿ ಗೀಳಿನ ಸಮಸ್ಯೆ ಹೆಚ್ಚಿದೆ. ಆದರೆ ಈ ಮಾನಸಿಕ ಕಾಯಿಲೆ ನಿವಾರಣೆಗೆ ಸರಳ ಪರಿಹಾರ ಮಾರ್ಗಗಳಿವೆ.



ಚರ್ಚೆ: ಸದ್ಯದ ಸ್ಥಿತಿಯಲ್ಲಿ ಭಾರತದಲ್ಲಿ ಎರಡು ಮಕ್ಕಳ ನೀತಿ ಜಾರಿಯ ಅಗತ್ಯ ಇದೆಯೇ? 7
ಅಜಿತ್ ಪವಾರ್‌ಗೆ ಸೇರಿದ ಕಾರ್ಖಾನೆ ಮುಟ್ಟುಗೋಲು 9
‘ಜಿಎಸ್‌ಟಿ ಪರಿಹಾರ ಪಾವತಿಗೆ ಕ್ರಮ’ 8

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
52,484 ▲	15,722 ▲	₹48,800 (ಬೆಂಗಳೂರು)	₹71,200 (ಬೆಂಗಳೂರು)	74.74 ▼

₹ 26 ಸಾವಿರ ಕೋಟಿ ಅನುದಾನ ಬಳಕೆಗೆ ಒಪ್ಪಿಗೆ

ಬೆಂಗಳೂರು: ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಎಸ್‌ಪಿ) ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆ (ಟಿಎಸ್‌ಪಿ) ಅಡಿಯಲ್ಲಿ ಪ್ರಸಕ್ತ ವರ್ಷ ₹26,005 ಕೋಟಿ ವೆಚ್ಚ ಮಾಡುವ ಪ್ರಸ್ತಾವಗಳುಳ್ಳ ಕ್ರಿಯಾಯೋಜನೆಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನೇತೃತ್ವದ ರಾಜ್ಯ ಅಭಿವೃದ್ಧಿ ಪರಿಷತ್ ಶುಕ್ರವಾರ ಅನುಮೋದನೆ ನೀಡಿದೆ.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ನಡೆದ ಅಭಿವೃದ್ಧಿ ಪರಿಷತ್ ಸಭೆಯ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಯಡಿಯೂರಪ್ಪ, ‘ಪ್ರಸಕ್ತ ವರ್ಷ ಎಸ್‌ಸಿಎಸ್‌ಪಿ ಅಡಿಯಲ್ಲಿ ₹ 18,331.54 ಕೋಟಿ ಮತ್ತು ಟಿಎಸ್‌ಪಿ ಅಡಿಯಲ್ಲಿ ₹ 7,673.47 ಕೋಟಿ ವೆಚ್ಚ ಮಾಡುವ ಪ್ರಸ್ತಾವಗಳುಳ್ಳ ಕ್ರಿಯಾಯೋಜನೆಗೆ ಅನುಮೋದನೆ ನೀಡಲಾಗಿದೆ’ ಎಂದರು.

8ನೇ ಪುಟ ನೋಡಿ

ಪುಲ್ವಾಮಾ: ಉಕ್ಕಲಿ ಯೋಧ ಕಾಶಿರಾಯ ಹುತಾತ್ಮ



ವಿಜಯಪುರ: ಬಸವನ ಬಾಗೇವಾಡಿ ತಾಲ್ಲೂಕಿನ ಉಕ್ಕಲಿ ಗ್ರಾಮದ ಯೋಧ ಕಾಶಿರಾಯ ಶಂಕರಪ್ಪ ಬೊಮ್ಮನಹಳ್ಳಿ(44) ಶುಕ್ರವಾರ ಕಾಶ್ಮೀರದ ಪುಲ್ವಾಮಾದಲ್ಲಿ ಭಯೋತ್ಪಾದಕರ ವಿರುದ್ಧದ ಕಾರ್ಯಾಚರಣೆಯಲ್ಲಿ ಹುತಾತ್ಮರಾಗಿದ್ದಾರೆ.

ಯೋಧ ಕಾಶಿರಾಯ ಅವರು 2005ರಲ್ಲಿ ಭಾರತೀಯ ಸೇನೆಗೆ ಸೇರಿದ್ದರು. ಕಾಶ್ಮೀರ, ಪಂಜಾಬ್ ಸೇರಿದಂತೆ ವಿವಿಧೆಡೆ ಸೇವೆ ಸಲ್ಲಿಸಿದ್ದಾರೆ. ಇವರಿಗೆ ಪತ್ನಿ, ಪುತ್ರ, ಪುತ್ರಿ, ತಂದೆ, ತಾಯಿ, ಇಬ್ಬರು ಸಹೋದರರು ಇದ್ದಾರೆ.

ಪಾರ್ಥಿವ ಶರೀರವು ಜು.3 ರಂದು ಬೆಳಿಗ್ಗೆ ಬೆಳಗಾವಿಗೆ ವಾಯುಪಡೆ ವಿಮಾನದ ಮೂಲಕ ಬರಲಿದೆ. ನಂತರ ಉಕ್ಕಲಿ ಗ್ರಾಮಕ್ಕೆ ಬರುತ್ತದೆ ಎಂದು ತಹಶೀಲ್ದಾರ್ ಎಂ.ಎನ್.ಬಳಿಗಾರ ಮಾಹಿತಿ ನೀಡಿದರು.

‘ಸಕಲ ಸರ್ಕಾರಿ ಗೌರವಗಳೊಂದಿಗೆ ಅವರ ಅಂತ್ಯಸಂಸ್ಕಾರ ನಡೆಸಲಾಗುವುದು’ ಎಂದು ಜಿಲ್ಲಾಧಿಕಾರಿ ಪಿ.ಸುನೀಲ್ ಕುಮಾರ್ ತಿಳಿಸಿದ್ದಾರೆ

‘ನಮ್ಮ ಬೊಮ್ಮನಹಳ್ಳಿ ಮನೆತನದಲ್ಲಿ ಇವನೊಬ್ಬ ಸೇನೆಗೆ ಸೇರಿದ್ದು ನಮಗೆಲ್ಲ ಹೆಮ್ಮೆಯಾಗಿತ್ತು. ಜು.7 ರಂದು ರಜೆ ಮೇಲೆ ಬರುವವನಿದ್ದನು’ ಎಂದು ಹುತಾತ್ಮ ಯೋಧನ ಚಿಕ್ಕಪ್ಪ ನಿಂಗಪ್ಪ ಬೊಮ್ಮನಹಳ್ಳಿ ಹೇಳಿದರು.

ರಾಜ್ಯ ಕೋವಿಡ್ ಅಂಕಿ–ಅಂಶ

28,49,997 ▲	ಒಟ್ಟು ಸೋಂಕಿತರು (28,47,013 ನಿನ್ನೆಯ ವಿವರ)
53,871 ▼	ಸಕ್ರಿಯ ಪ್ರಕರಣಗಳು
27,60,881 ▲	ಗುಣಮುಖರಾದವರು
35,222 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	2,984	▼
ಗುಣಮುಖ	14,337	▲
ಸಾವು	88	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಚಿನಕುರಳಿ

ಪ್ರಕಾಶ್ ಶೆಟ್ಟಿ



ದಾಳಿ ನಡೆಸಲು, ಶಸ್ತ್ರಾಸ್ತ್ರ, ಬಾಂಬ್ ರವಾನೆಗೆ ಡ್ರೋನ್ ಬಳಕೆ: ಜಮ್ಮು–ಕಾಶ್ಮೀರ ಪೊಲೀಸ್

ಗಡಿಯಲ್ಲಿ ಉಗ್ರರ ಡ್ರೋನ್ ಕಾಟ

ಜಮ್ಮು (ಪಿಟಿಐ): ಪಾಕಿಸ್ತಾನ ಕೇಂದ್ರಿತ ಉಗ್ರಗಾಮಿ ಸಂಘಟನೆಗಳು ಭಾರತ ವಿರುದ್ಧದ ಹೋರಾಟದಲ್ಲಿ ಡ್ರೋನ್‌ಗಳನ್ನು ಬಳಸುತ್ತಿವೆ ಎಂಬುದಕ್ಕೆ ಮತ್ತೆ ಮತ್ತೆ ಪುಷ್ಟಿ ದೊರೆಯುತ್ತಿದೆ. ಲಷ್ಕರ್ ಎ ತಯಬಾ (ಎಲ್‌ಇಟಿ) ಮತ್ತು ಜೈಷ್ ಎ ಮೊಹಮ್ಮದ್ ಸಂಘಟನೆಗಳು ಡ್ರೋನ್‌ಗಳ ಮೂಲಕ ಶಸ್ತ್ರಾಸ್ತ್ರ, ಕಚ್ಚಾಬಾಂಬ್ ಮತ್ತು ಮಾದಕ ಪದಾರ್ಥಗಳನ್ನು ಜಮ್ಮು–ಕಾಶ್ಮೀರಕ್ಕೆ ರವಾನಿಸುತ್ತಿವೆ ಎಂದು ಅಲ್ಲಿನ ಪೊಲೀಸ್ ಮಹಾನಿರ್ದೇಶಕ ದಿಲ್‌ಬಾಗ್ ಸಿಂಗ್ ಶುಕ್ರವಾರ ಹೇಳಿದ್ದಾರೆ.

ಡ್ರೋನ್‌ಗಳು ಒಡ್ಡಿರುವ ಸವಾಲು ಎದುರಿಸಲು ಭದ್ರತೆಯನ್ನು ಇನ್ನಷ್ಟು ಬಿಗಿಗೊಳಿಸಲಾಗಿದೆ. ಜಮ್ಮು ವಿಮಾನ ನಿಲ್ದಾಣದಲ್ಲಿರುವ ಭಾರತೀಯ ವಾಯುಪಡೆ ನೆಲೆಯ ಮೇಲೆ ಜೂನ್ 27ರಂದು ಡ್ರೋನ್ ಮೂಲಕ ದಾಳಿ ನಡೆದ ಬಳಿಕ ಇನ್ನೂ ಹೆಚ್ಚಿನ ಎಚ್ಚರ ವಹಿಸಲಾಗಿದೆ ಎಂದು ದಿಲ್‌ಬಾಗ್ ಸಿಂಗ್ ತಿಳಿಸಿದ್ದಾರೆ.

ವಾಯುನೆಲೆಯ ಮೇಲೆ ನಡೆದ ಎರಡು ಡ್ರೋನ್ ದಾಳಿಗಳ ಹಿಂದೆ ಎಲ್‌ಇಟಿ ಕೈವಾಡ ಇದೆ ಎಂಬ ಶಂಕೆ ಇದೆ. ಆ ದಿಸೆಯಲ್ಲಿ ತನಿಖೆ ನಡೆಯುತ್ತಿದೆ ಎಂದು ಅವರು ಮಾಧ್ಯಮ ಪ್ರತಿನಿಧಿಗಳಿಗೆ ತಿಳಿಸಿದ್ದಾರೆ.

ಈ ದಾಳಿಗೂ ಮುನ್ನ ಜಮ್ಮುವಿನಲ್ಲಿ ಡ್ರೋನ್ ಮೂಲಕ ಶಸ್ತ್ರಾಸ್ತ್ರ ಇಳಿಸಿದ 10–12 ಪ್ರಕರಣಗಳು ಪತ್ತೆಯಾಗಿದ್ದವು. ಹೀಗೆ ಪತ್ತೆಯಾದ ಕಚ್ಚಾಬಾಂಬ್‌ಗಳಲ್ಲಿ ಆರ್‌ಡಿಎಕ್ಸ್ ಇತ್ತು. ಡ್ರೋನ್ ಮೂಲಕ ಸಾಗಿಸಲು ಸಾಧ್ಯವಾಗುವ ರೀತಿಯಲ್ಲಿಯೇ ಈ ಬಾಂಬ್‌ಗಳನ್ನು ತಯಾರಿಸಲಾಗಿತ್ತು. ದೇಶವಿರೋಧಿ ಶಕ್ತಿಗಳು ಡ್ರೋನ್ ಬಳಸುತ್ತಿರುವುದು ದೇಶದ ಭದ್ರತೆಗೆ ಬಹುದೊಡ್ಡ ಬೆದರಿಕೆಯಾಗಿ ಮಾರ್ಪಟ್ಟಿದೆ ಎಂದು ದಿಲ್‌ಬಾಗ್ ತಿಳಿಸಿದ್ದಾರೆ.

ಹೈಕಮಿಷನ್ ಕಚೇರಿ ಮೇಲೆ ಹಾರಾಟ

ನವದೆಹಲಿ (ಪಿಟಿಐ): ‘ಪಾಕಿಸ್ತಾನದ ಇಸ್ಲಾಮಾಬಾದ್‌ನಲ್ಲಿರುವ ಭಾರತೀಯ ಹೈಕಮಿಷನ್ ಕಚೇರಿಯ ಆವರಣದಲ್ಲಿ ಕಳೆದ ವಾರ ಡ್ರೋನ್ ಹಾರಾಟ ನಡೆದಿದೆ. ಈ ಸಂಬಂಧ ಭಾರತೀಯ ಹೈಕಮಿಷನ್ ತನ್ನ ಪ್ರತಿಭಟನೆಯನ್ನು ದಾಖಲಿಸಿದೆ’ ಎಂದು ಮೂಲಗಳು ಮಾಹಿತಿ ನೀಡಿವೆ.

ಜಮ್ಮುವಿನಲ್ಲಿ ಜೂನ್ 27ರಂದು ವಾಯುಪಡೆ ಠಾಣೆಯ ಮೇಲೆ ಡ್ರೋನ್ ದಾಳಿ ನಡೆದ ನಂತರ, ಈ ಘಟನೆ ವರದಿಯಾಗಿದೆ. ‘ನಮ್ಮ ಹೈಕಮಿಷನ್ ಕಚೇರಿ ಸಂಕೀರ್ಣದ ಮೇಲೆ ಮತ್ತು ಆವರಣದಲ್ಲಿ ಅನಧಿಕೃತವಾಗಿ ಡ್ರೋನ್ ಹಾರಾಟ ನಡೆಸಿರುವುದು ಭದ್ರತಾ ಲೋಪ ಎಂದು ಪರಿಗಣಿಸಿದ್ದೇವೆ. ಇದನ್ನು ಗಂಭೀರವಾಗಿ ಪರಿಗಣಿಸಲಾಗಿದೆ ಎಂದು ಪಾಕಿಸ್ತಾನದ ಸಂಬಂಧಿತ ಪ್ರಾಧಿಕಾರಕ್ಕೆ ಭಾರತೀಯ ಹೈಕಮಿಷನ್ ಪತ್ರ ಬರೆದಿದೆ. ಆ ಮೂಲಕ ಪ್ರತಿಭಟನೆ ದಾಖಲಿಸಿದೆ ಎಂದು ಮೂಲಗಳು ಹೇಳಿವೆ.

ಗಡಿ ದಾಟಲು ಯತ್ನಿಸಿದ ಡ್ರೋನ್

ಗೂಢಚರ್ಯೆ ಉದ್ದೇಶದ ಡ್ರೋನ್ ಒಂದು ಪಾಕಿಸ್ತಾನದ ಕಡೆಯಿಂದ ಭಾರತದ ಗಡಿ ಪ್ರವೇಶಿಸಲು ಶುಕ್ರವಾರ ಬೆಳಗ್ಗಿನ ಜಾವ ಯತ್ನಿಸಿದೆ. ಡ್ರೋನ್ ಅನ್ನು ಹೊಡೆದುರುಳಿಸಲು ಗಡಿ ಭದ್ರತಾ ಪಡೆ (ಬಿಎಸ್‌ಎಫ್) ಸಿಬ್ಬಂದಿ ಯತ್ನಿಸಿದಾಗ ಅದು ಹಿಂತಿರುಗಿದೆ ಎಂದು ಬಿಎಸ್‌ಎಫ್ ಮಾಹಿತಿ ನೀಡಿದೆ.

‘ಜಮ್ಮುವಿನ ಹೊರಭಾಗದಲ್ಲಿ ಭಾರತ ಮತ್ತು ಪಾಕಿಸ್ತಾನದ ನಡುವಣ ಅಂತರರಾಷ್ಟ್ರೀಯ ಗಡಿಯ ಅರ್ನಿಯಾ ವಲಯದಲ್ಲಿ ಶುಕ್ರವಾರ ಬೆಳಿಗ್ಗೆ 4.25ಕ್ಕೆ ಡ್ರೋನ್ ಕಾಣಿಸಿಕೊಂಡಿದೆ. ಪಾಕಿಸ್ತಾನದ ಕಡೆಯಿಂದ ಗಡಿಯನ್ನು ದಾಟಿ ಡ್ರೋನ್ ಭಾರತದ ಗಡಿಯನ್ನು ಪ್ರವೇಶಿಸಿತ್ತು. ಬಿಎಸ್‌ಎಫ್ ಸಿಬ್ಬಂದಿ ಅದನ್ನು ಹೊಡೆದುರುಳಿಸಲು ಆರು ಸುತ್ತು ಗುಂಡು ಹಾರಿಸಿದರು. ಅಷ್ಟರಲ್ಲೇ ಅದು ಪಾಕಿಸ್ತಾನದ ಕಡೆಗೆ ವಾಪಸಾಯಿತು’ ಎಂದು ಬಿಎಸ್‌ಎಫ್ ಹೇಳಿದೆ. ಜೂನ್ 27ರ ಭಾನುವಾರ ಡ್ರೋನ್ ಮೂಲಕ ಬಾಂಬ್ ದಾಳಿ ನಡೆದ ನಂತರ ಕಟ್ಟೆಚ್ಚರ ವಹಿಸಲಾಗಿದೆ. ಇದರ ಮಧ್ಯೆಯೇ ಸೋಮವಾರ, ಮಂಗಳವಾರ ಮತ್ತು ಬುಧವಾರ ಜಮ್ಮುವಿನ ಹಲವೆಡೆ ಶಂಕಾಸ್ಪದ ಡ್ರೋನ್‌ಗಳ ಹಾರಾಟವನ್ನು ಪತ್ತೆ ಮಾಡಲಾಗಿದೆ ಎಂದು ಭದ್ರತಾ ಪಡೆಗಳು ಹೇಳಿವೆ.

ಈಗ ಜಮ್ಮುವಿನಲ್ಲಿ ಸಾರ್ವಜನಿಕರು ಯಾವುದೇ ರೀತಿಯ ಡ್ರೋನ್ ಹಾರಾಟ ನಡೆಸದಂತೆ ಸೂಚನೆ ನೀಡಲಾಗಿದೆ.

ಮುಖ್ಯಾಂಶಗಳು

- ಸೋಮವಾರ, ಮಂಗಳವಾರ ಮತ್ತು ಬುಧವಾರವೂ ಡ್ರೋನ್‌ಗಳ ಹಾರಾಟ
- ಡ್ರೋನ್ ಹಾರಿಸದಂತೆ ಸಾರ್ವಜನಿಕರಿಗೆ ಎಚ್ಚರಿಕೆ

ಕೇರಳದಲ್ಲಿ ಡ್ರೋನ್ ಲ್ಯಾಬ್

‘ಡ್ರೋನ್‌ಗಳು ತಂದೊಡ್ಡಿರುವ ಅಪಾಯ ಮತ್ತು ಸವಾಲುಗಳನ್ನು ಎದುರಿಸುವ ಸಲುವಾಗಿ ಕೇರಳದಲ್ಲಿ ಡ್ರೋನ್ ಸಂಶೋಧನಾ ಪ್ರಯೋಗಾಲಯವನ್ನು ಆರಂಭಿಸಲಾಗುತ್ತದೆ. ಕೇರಳ ಪೊಲೀಸ್ ಇಲಾಖೆ ಮತ್ತು ಕೇಂದ್ರ ಸರ್ಕಾರದ ಸಹಯೋಗದಲ್ಲಿ ಇದು ಆರಂಭವಾಗಲಿದೆ’ ಎಂದು ಕೇರಳ ಪೊಲೀಸ್ ಮಹಾನಿರ್ದೇಶಕ ಅನಿಲ್ ಕಾಂತ್ ಹೇಳಿದ್ದಾರೆ.

ಪ್ರಜಾವಾಣಿ DH ಡಿಎಚ್–ಪಿವಿ ಕೋವಿಡ್–19 ಪರಿಹಾರ ಟ್ರಸ್ಟ್

ದೇಣಿಗೆ ನೀಡಿದ ಓದುಗರಿಗೆ ಧನ್ಯವಾದ

ಕೋವಿಡ್ ಪಿಡುಗಿನಿಂದ ಸಂಕಷ್ಟಕ್ಕೆ ಒಳಗಾದವರಿಗೆ ಪರಿಹಾರ ಮತ್ತು ಪುನರ್ವಸತಿ ಕಲ್ಪಿಸುವ ಕೆಲಸದಲ್ಲಿ ತೊಡಗಿರುವ ಸರ್ಕಾರೇತರ ಸಂಘಟನೆಗಳಿಗೆ (ಎನ್‌ಜಿಒ) ನೆರವಾಗುವ ಉದ್ದೇಶದಿಂದ ಕೆಲವು ವಾರಗಳ ಹಿಂದೆ **“ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಕೋವಿಡ್–19 ಪರಿಹಾರ ನಿಧಿ’** ಸ್ಥಾಪಿಸಲಾಗಿತ್ತು. ಈ ನಿಧಿಗೆ ಉದಾರವಾಗಿ ದೇಣಿಗೆ ನೀಡಿದ ನಮ್ಮ ಓದುಗರಿಗೆ ಹೃತ್ಪೂರ್ವಕ ಧನ್ಯವಾದಗಳು.

ಕೋವಿಡ್‌ನ ಎರಡನೇ ಅಲೆಯ ತೀವ್ರತೆ ಇಳಿಮುಖವಾಗುತ್ತಿರುವ ಕಾರಣ ಶುಕ್ರವಾರದಿಂದ (2021ರ ಜುಲೈ 9) ದೇಣಿಗೆ ಸ್ವೀಕರಿಸುವುದನ್ನು ಸ್ಥಗಿತಗೊಳಿಸಲು **‘ಡಿಎಚ್- ಪಿವಿ ಕೋವಿಡ್-19 ಪರಿಹಾರ ಟ್ರಸ್ಟ್’** ನಿರ್ಧರಿಸಿದೆ. ನಾವು ಈಗಾಗಲೇ ಎರಡು ಹಂತಗಳಲ್ಲಿ ಒಟ್ಟು 18 ಎನ್‌ಜಿಒಗಳಿಗೆ ತಲಾ ₹ 5 ಲಕ್ಷದಂತೆ ನೆರವು ನೀಡಿದ್ದೇವೆ. ಮುಂಬರುವ ದಿನಗಳಲ್ಲಿ ಇಂತಹ ಇನ್ನಷ್ಟು ಸಂಘಟನೆಗಳನ್ನು ಗುರುತಿಸಿ, ನಿಧಿಯಲ್ಲಿ ಉಳಿದಿರುವ ಮೊತ್ತವನ್ನು ಹಂಚಲಿದ್ದೇವೆ.

ಪರಿಶಿಷ್ಟ ಜಾತಿ/ ಪಂಗಡಗಳ ಕುಟುಂಬಗಳಿಗೆ ಜಮೀನು: ಜಂಟಿ ಖಾತೆಗೆ ತೀರ್ಮಾನ

ಬೆಂಗಳೂರು: ವಿವಿಧ ಯೋಜನೆಗಳ ಅಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕುಟುಂಬಗಳಿಗೆ ಜಮೀನು ವಿತರಿಸುವಾಗ ಜಂಟಿ ಖಾತೆಗಳನ್ನೇ ಮಾಡಬೇಕೆಂಬ ತೀರ್ಮಾನವನ್ನು ರಾಜ್ಯ ಅಭಿವೃದ್ಧಿ ಪರಿಷತ್ ಸಭೆಯಲ್ಲಿ ಕೈಗೊಳ್ಳಲಾಗಿದೆ.

‘ಶೌಚಾಲಯ ಅಥವಾ ಸ್ನಾನಗೃಹ ನಿರ್ಮಾಣಕ್ಕೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕುಟುಂಬಗಳಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಒಟ್ಟಾಗಿ ನೀಡುವ ಸಹಾಯಧನದ ಮೊತ್ತವನ್ನು ₹ 15,000ದಿಂದ ₹ 20,000ಕ್ಕೆ ಹೆಚ್ಚಿಸುವ ನಿರ್ಧಾರವನ್ನೂ ಮಾಡಲಾಗಿದೆ’ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದ್ದಾರೆ.

2.06 ಲಕ್ಷ ಜನರಿಗೆ ನೆರವು ಕೊಡಲು ₹103 ಕೋಟಿ

ಅನುದಾನರಹಿತ ಶಾಲಾ ಶಿಕ್ಷಕರಿಗೆ ₹5 ಸಾವಿರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಮತ್ತು ಲಾಕ್‌ಡೌನ್‌ನಿಂದಾಗಿ ವೇತನ ಇಲ್ಲದೇ ಸಂಕಷ್ಟದಲ್ಲಿರುವ ಅನುದಾನರಹಿತ ಶಾಲಾ ಶಿಕ್ಷಕರು ಮತ್ತು ಬೋಧಕೇತರ ಸಿಬ್ಬಂದಿಗೆ ವಿಶೇಷ ಪ್ಯಾಕೇಜ್ ಅಡಿ ತಲಾ ₹5,000 ನೀಡಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಕಷ್ಟದಲ್ಲಿರುವ ಶಿಕ್ಷಕರು ಮತ್ತು ಬೋಧಕೇತರರ ನೆರವಿಗೆ ಸರ್ಕಾರ ನಿಲ್ಲಬೇಕು ಎಂದು ವರ್ಷದಿಂದಲೂ ಬೇಡಿಕೆ ಇತ್ತು. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್.ಸುರೇಶ್‌ಕುಮಾರ್ ಅವರು ನಡೆಸಿದ ಹಲವು ಸಭೆಗಳಲ್ಲಿ ಈ ಬೇಡಿಕೆ ಮಂಡನೆಯಾಗಿತ್ತು. ಖಾಸಗಿ ಶಿಕ್ಷಣ ಸಂಸ್ಥೆಗಳು, ಶಿಕ್ಷಕ ಪ್ರತಿನಿಧಿಗಳ ಮನವಿಯನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಗಮನಕ್ಕೆ ತರಲಾಗಿತ್ತು. ಈ ಕುರಿತು ಪ್ರಸ್ತಾವನೆ ಸಿದ್ಧಪಡಿಸಿದ್ದ ಇಲಾಖೆ ಅದನ್ನು ಆರ್ಥಿಕ ಇಲಾಖೆಗೆ ಕಳಿಸಿತ್ತು. ಅದಕ್ಕೆ ಈಗ ಒಪ್ಪಿಗೆ ಸಿಕ್ಕಿದೆ.

ರಾಜ್ಯದ ಅನುದಾನರಹಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 1,72,945 ಶಿಕ್ಷಕರು ಮತ್ತು 34,000 ಬೋಧಕೇತರ ಸಿಬ್ಬಂದಿ ಒಳಗೊಂಡಂತೆ ಒಟ್ಟು 2,06,945 ಸಿಬ್ಬಂದಿಗೆ ಪರಿಹಾರ ಸಿಗಲಿದೆ. ಈ ಉದ್ದೇಶಕ್ಕೆ ₹103.47 ಕೋಟಿ ಅನುದಾನವನ್ನು ಬಿಡುಗಡೆಗೊಳಿಸಲು ಶುಕ್ರವಾರ ಹೊರಡಿಸಿದ ಆದೇಶದಲ್ಲಿ ಸೂಚಿಸಲಾಗಿದೆ.

ಆರ್‌ಟಿಇ ಅಡಿ ಖಾಸಗಿ ಶಾಲೆಗಳ ಶುಲ್ಕ ಮರುಪಾವತಿ ಕಾರ್ಯಕ್ರಮದಡಿ ಒದಗಿಸಲಾದ ಅನುದಾನದಿಂದ ಈ ಮೊತ್ತವನ್ನು ಭರಿಸಲಾಗುವುದು. ಪರಿಹಾರದ ಮೊತ್ತವನ್ನು ಅರ್ಹ ಫಲಾನುಭವಿಗಳ ಖಾತೆಗೇ ಜಮೆ ಮಾಡಲಾಗುವುದು. ಅದಕ್ಕೂ ಮೊದಲು ಅವರು ಬ್ಯಾಂಕ್ ಖಾತೆಯನ್ನು ಆಧಾರ್‌ಗೆ ಜೋಡಣೆ ಮಾಡಿರಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ವೇತನ ಇಲ್ಲದೆ ಸಂಕಷ್ಟ

ಖಾಸಗಿ ಅನುದಾನರಹಿತ ಬಹುತೇಕ ಶಾಲೆಗಳಲ್ಲಿ ವೇತನ ನೀಡುತ್ತಿಲ್ಲ, ಕೆಲವು ಕಡೆಗಳಲ್ಲಿ ಅರ್ಧದಷ್ಟು ವೇತನ ನೀಡುತ್ತಿದ್ದಾರೆ. ಇವರಲ್ಲಿ ಬಹುತೇಕರು ಜೀವನೋಪಾಯಕ್ಕಾಗಿ ಹಣ್ಣು–ತರಕಾರಿ ಮಾರುವುದೂ ಸೇರಿದಂತೆ ವಿವಿಧ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾರೆ.

ಈ ಮಧ್ಯೆ, ಸಚಿವ ಎಸ್.ಸುರೇಶ್‌ಕುಮಾರ್ ಅವರು ಸರ್ಕಾರಿ ಶಿಕ್ಷಕರು ತಮ್ಮ ವೇತನದಲ್ಲಿ ಒಂದು ಅಥವಾ ಎರಡು ದಿನಗಳ ವೇತನವನ್ನು ಪರಿಹಾರಕ್ಕಾಗಿ ನೀಡಲು ಸಾಧ್ಯವೇ ಎಂದು ಮನವಿ ಮಾಡಿದ್ದರು. ಅದನ್ನು ಶಿಕ್ಷಕರ ಸಂಘ ಒಪ್ಪಿಕೊಂಡಿರಲಿಲ್ಲ.

ಮಾಲ್, ದೇವಸ್ಥಾನಗಳಿಗೆ ಅನುಮತಿ?

ಲಾಕ್‌ಡೌನ್ ನಿರ್ಬಂಧ ಇನ್ನಷ್ಟು ಸಡಿಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಲಾಕ್‌ಡೌನ್ ನಿಯಮಗಳು ಇನ್ನಷ್ಟು ಸಡಿಲಿಕೆ ಆಗಲಿದ್ದು, ಈ ಸಂಬಂಧ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅಧ್ಯಕ್ಷತೆಯಲ್ಲಿ ಶನಿವಾರ (ಜು.3) ಸಂಜೆ ನಡೆಯಲಿರುವ ಸಭೆಯಲ್ಲಿ ಕೆಲವು ತೀರ್ಮಾನಗಳನ್ನು ತೆಗೆದುಕೊಳ್ಳುವ ಸಾಧ್ಯತೆ ಇದೆ.

ಮಾಲ್, ದೇವಸ್ಥಾನಗಳನ್ನು ತೆರೆಯುವುದಕ್ಕೆ ಅವಕಾಶ ನೀಡುವ ಸಂಭವ ಇದ್ದು, ಸಿನಿಮಾ ಮಂದಿರ ತೆರೆಯಲು ಅವಕಾಶ ನೀಡುವ ಸಾಧ್ಯತೆ ಇಲ್ಲ ಎಂದು ಮೂಲಗಳು ಹೇಳಿವೆ.

ಶಾಲಾ–ಕಾಲೇಜು ತರಗತಿಗಳನ್ನು ಆರಂಭಿಸುವುದಕ್ಕೆ ಸಂಬಂಧಿಸಿದಂತೆಯೂ ಸಭೆಯಲ್ಲಿ ಚರ್ಚೆ ನಡೆಯಲಿದೆ. ಈ ಸಂಬಂಧ ಸಚಿವರ ಮಧ್ಯೆ ಒಮ್ಮತ ಇಲ್ಲದಿರುವ ಕಾರಣ ಮುಖ್ಯಮಂತ್ರಿಯವರೇ ಸೂಕ್ತ ನಿರ್ದೇಶನಗಳನ್ನು ನೀಡಬಹುದು ಎಂದು ಹೇಳಲಾಗಿದೆ.

ಬೆಂಗಳೂರು ಸೇರಿದಂತೆ ರಾಜ್ಯ ಹಲವು ಜಿಲ್ಲೆಗಳಲ್ಲಿ ಕೋವಿಡ್ ಸೋಂಕಿನ ದೃಢ ಪ್ರಮಾಣ ಮತ್ತು ಸಾವಿನ ಸಂಖ್ಯೆ ಇಳಿಮುಖವಾಗಿರುವುದರಿಂದ ನಿರ್ಬಂಧಗಳನ್ನು ಸಡಿಲಗೊಳಿಸಲು ತಜ್ಞರು ಸಲಹೆ ನೀಡಬಹುದು ಎಂದು ಮೂಲಗಳು ತಿಳಿಸಿವೆ.

8ನೇ ಪುಟ ನೋಡಿ

‘ಎರಡನೇ ಅಲೆ ಮುಗಿದಿಲ್ಲ: ನಿರ್ಬಂಧಗಳ ಸಡಿಲಿಕೆ ಇಲ್ಲ’

ನವದೆಹಲಿ(ಪಿಟಿಐ): ಎರಡನೇ ಅಲೆ ಇನ್ನೂ ಮುಗಿದಿಲ್ಲ. ಹೀಗಾಗಿ, ನಿರ್ಬಂಧಗಳನ್ನು ಸಂಪೂರ್ಣವಾಗಿ ಸಡಿಲಗೊಳಿಸಲು ಸಾಧ್ಯವಿಲ್ಲ ಎಂದು ಕೇಂದ್ರ ಸರ್ಕಾರ ಸ್ಪಷ್ಟವಾಗಿ ಹೇಳಿದೆ.

ಲಸಿಕೆ ಹಾಕಿಸಿಕೊಳ್ಳಲು ಆದ್ಯತೆ ನೀಡಬೇಕು. ಜತೆಗೆ, ನಾಗರಿಕರು ಸಹ ಎಚ್ಚರವಹಿಸಬೇಕು ಮತ್ತು ಕೋವಿಡ್–19 ನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಸಲಹೆ ನೀಡಿದೆ. ಜೂನ್ 23ರಿಂದ 29ರವರೆಗಿನ ಅವಧಿಯಲ್ಲಿ ದೇಶದ 71 ಜಿಲ್ಲೆಗಳಲ್ಲಿ ಕೋವಿಡ್ ಪಾಸಿಟಿವಿಟಿ ದರ ಶೇಕಡ 10ಕ್ಕಿಂತ ಹೆಚ್ಚು ದೃಢಪಟ್ಟಿದೆ. ಹೀಗಾಗಿ, ಸೋಂಕಿನ ಪ್ರಮಾಣ ಹೆಚ್ಚಾಗದಂತೆ ಸಾರ್ವಜನಿಕರು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ತಿಳಿಸಿದೆ.

ಜೂನ್ 21ರಿಂದ ಪ್ರತಿ ದಿನ ಸರಾಸರಿ 50 ಲಕ್ಷ ಮಂದಿಗೆ ಲಸಿಕೆ ಹಾಕಲಾಗುತ್ತಿದೆ. ಅಂದರೆ, ಇಡೀ ನಾರ್ವೆ ದೇಶದ ಜನಸಂಖ್ಯೆಯಷ್ಟು ಮಂದಿಗೆ ಲಸಿಕೆ ಹಾಕಲಾಗುತ್ತಿದೆ. ಇದುವರೆಗೆ ಒಟ್ಟು 34 ಕೋಟಿ ಮಂದಿಗೆ ಲಸಿಕೆ ಹಾಕಲಾಗಿದೆ ಎಂದು ವಿವರ ನೀಡಿದೆ.

₹ 2 ಕೋಟಿ ವಸೂಲಿ ಆರೋಪದ ಸುತ್ತ ಸಂಶಯದ ಹುತ್ತ

ಸಚಿವ ಶ್ರೀರಾಮುಲು ಆಪ್ತನ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮಾಜ ಕಲ್ಯಾಣ ಸಚಿವ ಬಿ. ಶ್ರೀರಾಮುಲು ಆಪ್ತ ಸಹಾಯಕ ಎನ್ನಲಾದ ರಾಜು ಅಲಿಯಾಸ್ ಬಳ್ಳಾರಿ ರಾಜಣ್ಣ (35) ಅವರನ್ನು ಹಣ ವಸೂಲಿ ಆರೋಪದಡಿ ವಶಕ್ಕೆ ಪಡೆದಿದ್ದ ನಗರದ ಸಿಸಿಬಿ ಪೊಲೀಸರು, ಧ್ವನಿ ಮಾದರಿ ಸಂಗ್ರಹಿಸಿ ಬಿಡುಗಡೆ ಮಾಡಿದ್ದಾರೆ.

ಮುಖ್ಯಮಂತ್ರಿ ಯಡಿಯೂರಪ್ಪ ಅವರ ಮಗ ಬಿ.ವೈ.ವಿಜಯೇಂದ್ರ ಹಾಗೂ ಇತರೆ ಮುಖಂಡರ ಹೆಸರಿನಲ್ಲಿ ಹಣ ವಸೂಲಿ ಮಾಡುತ್ತಿದ್ದ ಆರೋಪದ ಮೇಲೆ ರಾಜಣ್ಣ ಅವರನ್ನು ಗುರುವಾರ ಸಂಜೆಯಷ್ಟೇ ಶ್ರೀರಾಮುಲು ಅವರ ಮನೆ ಆವರಣದಲ್ಲೇ ವಶಕ್ಕೆ ಪಡೆಯಲಾಗಿತ್ತು.

‘ಶ್ರೀರಾಮುಲು ಆಪ್ತ ಸಹಾಯಕರಾಗಿದ್ದ ರಾಜಣ್ಣ ವಿರುದ್ಧ ವಿಜಯೇಂದ್ರ ದೂರು ನೀಡಿದ್ದರು. ಗುರುವಾರ ಸಂಜೆ ರಾಜಣ್ಣ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಯಿತು. ಅಗತ್ಯ ಪುರಾವೆಗಳು ದೊರೆಯದಿದ್ದರಿಂದ ಅವರನ್ನು ಬಂಧಿಸದೇ ಶುಕ್ರವಾರ ಬಿಟ್ಟು ಕಳುಹಿಸಲಾಗಿದೆ. ವಿಚಾರಣೆ ಅಗತ್ಯವಿದ್ದರೆ ತನಿಖಾಧಿಕಾರಿ ಎದುರು ಮತ್ತೆ ಹಾಜರಾಗುವಂತೆ ಸೂಚಿಸಲಾಗಿದೆ’ ಎಂದು ಸಿಸಿಬಿ ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

‘ಹಣ ವಸೂಲಿ ಸಂಬಂಧ ಇಬ್ಬರು ಮಾತನಾಡಿರುವ ಮೊಬೈಲ್ ಸಂಭಾಷಣೆ ಆಡಿಯೊವನ್ನು ದೂರುದಾರರು ಕೊಟ್ಟಿದ್ದಾರೆ. ಅದರಲ್ಲಿರುವ ಧ್ವನಿ ರಾಜಣ್ಣ ಅವರದ್ದೆಂಬ ಬಗ್ಗೆ ಅನುಮಾನವಿದೆ. ಹೀಗಾಗಿ, ರಾಜಣ್ಣ ಅವರ ಧ್ವನಿ ಮಾದರಿ ಸಂಗ್ರಹಿಸಲಾಗಿದೆ. ಅದರ ಸಮೇತವೇ ಆಡಿಯೊವನ್ನು ಪರೀಕ್ಷೆಗಾಗಿ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ’ ಎಂದು ತಿಳಿಸಿದರು.

8ನೇ ಪುಟ ನೋಡಿ

ಆಪ್ತನ ಬಂಧನಕ್ಕೆ ಬೇಸರ: ಶ್ರೀರಾಮುಲು

ಬೆಂಗಳೂರು: ‘ರಾಜಣ್ಣ ನನಗೆ ಗೊತ್ತಿರುವ ಹುಡುಗ. ನನಗೆ ಹೇಳದೇ ಆತನನ್ನು ಬಂಧಿಸಿದ್ದಕ್ಕೆ ಬೇಸರವಾಗಿದೆ. ಆದರೆ, ಆ ಬಗ್ಗೆ ಅಸಮಾಧಾನ ಇಲ್ಲ’ ಎಂದು ಸಚಿವ ಬಿ.ಶ್ರೀರಾಮುಲು ಹೇಳಿದ್ದಾರೆ.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, ‘ಯಾರೂ ಕೂಡ ಬೇರೆ ಯಾರದ್ದೇ ಹೆಸರು ದುರ್ಬಳಕೆ ಮಾಡಿಕೊಳ್ಳಬಾರದು. ಅದು ತಪ್ಪು. ವಿಜಯೇಂದ್ರ ಮತ್ತು ಮುಖ್ಯಮಂತ್ರಿಯವರ ಜತೆಗೆ ಮಾತನಾಡುತ್ತೇನೆ. ವಿಜಯೇಂದ್ರ ಅವರು ನನ್ನ ಬಳಿ ಹೇಳಿದ್ದರೆ, ಕೂರಿಸಿ ವಿಚಾರಿಸುತ್ತಿದ್ದೆ’ ಎಂದರು.

‘ರಾಜಣ್ಣ ನನ್ನ ಬಳಿ ಅಧಿಕೃತವಾಗಿ ಯಾವುದೇ ಕೆಲಸ ಮಾಡುತ್ತಿರಲಿಲ್ಲ. ನಾನು ತಪ್ಪಿತಸ್ಥರನ್ನು ಕಾಪಾಡುವ ವ್ಯಕ್ತಿಯಲ್ಲ. ಈ ಬೆಳವಣಿಗೆಯಿಂದ ನೋವಾಗಿದೆ’ ಎಂದು ರಾಮುಲು ಹೇಳಿದರು.

ಆಪ್ತ ಸಹಾಯಕನ ಬಂಧನದಿಂದ ಸಿಟ್ಟಾಗಿದ್ದ ಶ್ರೀರಾಮುಲು, ಮುಖ್ಯಮಂತ್ರಿ ಯಡಿಯೂರಪ್ಪ ಅವರನ್ನು ಶುಕ್ರವಾರ ಬೆಳಿಗ್ಗೆ ಭೇಟಿಯಾಗಿ ತಮ್ಮ ಅಸಮಾಧಾನ ಹೊರಹಾಕಿದ್ದಾರೆ ಎಂದು ಗೊತ್ತಾಗಿದೆ.

‘ಮಾತುಕತೆ ಮೂಲಕ ಬಗೆಹರಿಯಬೇಕಾದ ಸಮಸ್ಯೆಯನ್ನು ಠಾಣೆಯವರೆಗೂ ತೆಗೆದುಕೊಂಡು ಹೋಗಿದ್ದು ಏಕೆ? ಎಂದು ಪ್ರಶ್ನಿಸಿದ್ದಲ್ಲದೇ, ಅಭಿವೃದ್ಧಿ ಪರಿಷತ್ತಿನ ಸಭೆಗೂ ಬರುವುದಿಲ್ಲವೆಂದು ಪಟ್ಟು ಹಿಡಿದಿದ್ದರು. ಅವರನ್ನು ಸಮಾಧಾನಪಡಿಸಿದ ಯಡಿಯೂರಪ್ಪ, ಪ್ರಕರಣದ ಬಗ್ಗೆ ಹಿರಿಯ ಅಧಿಕಾರಿಗಳ ಜೊತೆ ಮಾತನಾಡಿದರು’ ಎಂದೂ ಮೂಲಗಳು ತಿಳಿಸಿವೆ.



ಪ್ರತಿಭಟನೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ನವದೆಹಲಿಯ ಸಫ್ದರ್‌ಜಂಗ್ ಆಸ್ಪತ್ರೆಯ ನರ್ಸಿಂಗ್ ಸಿಬ್ಬಂದಿ ಶುಕ್ರವಾರ ಕೇಂದ್ರ ಆರೋಗ್ಯ ಸಚಿವ ಹರ್ಷವರ್ಧನ್ ಅವರ ನಿವಾಸದ ಮುಂದೆ ಪ್ರತಿಭಟನೆ ನಡೆಸಿದಾಗ ಪೊಲೀಸರು ವಶಕ್ಕೆ ಪಡೆದರು –ಪಿಟಿಐ ಚಿತ್ರ

ಮತ್ತೆ ನಿಯಮ ಮೀರುತ್ತಿರುವ ಕೆಎಸ್‌ಒಯು: ಆರೋಪ

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವು 2012–13ನೇ ಸಾಲಿನ ಹೊರರಾಜ್ಯದ ಶೈಕ್ಷಣಿಕ ಸಹಯೋಗ ಕೇಂದ್ರಗಳ (ಅಕಾಡೆಮಿಕ್ ಕೊಲಾಬರೇಟಿವ್ ಇನ್‌ಸ್ಟಿಟ್ಯೂಟ್) ಮೂಲಕ ನೋಂದಾಯಿತರಾದ ವಿವಿಧ ಕೋರ್ಸ್‌ಗಳ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲು ನಿರ್ಧರಿಸಿರುವುದು ವಿವಾದಕ್ಕೆಡೆ ಮಾಡಿದೆ.

‘ಮಾನ್ಯತೆ ಕಳೆದುಕೊಳ್ಳಲು ಕಾರಣವಾದ ಶೈಕ್ಷಣಿಕ ಸಹಯೋಗ ಕೇಂದ್ರಗಳ ಮೂಲಕವೇ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬೇಕು ಎಂದು ವಿಶ್ವವಿದ್ಯಾಲಯದ ಪರೀಕ್ಷಾಂಗ ಕುಲಸಚಿವರು ಏಪ್ರಿಲ್ 8ರಂದು ಸುತ್ತೋಲೆ ಹೊರಡಿಸಿದ್ದಾರೆ. ಆದರೆ, ಯುಜಿಸಿ ಮರುಮಾನ್ಯತೆ ನೀಡುವಾಗ ಹೊರರಾಜ್ಯದ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ನೀಡಬಾರದು ಎಂದು ಹೇಳಿದೆ. ಇದು ಯುಜಿಸಿ ನಿಯಮಗಳ ಸ್ಪಷ್ಟ ಉಲ್ಲಂಘನೆ’ ಎಂದು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆಯ ಅಧ್ಯಕ್ಷ ಹಾಗೂ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿಯ ಮಾಜಿ ಸದಸ್ಯ ಕೆ.ಎಸ್. ಶಿವರಾಮು ಇಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

‘ವಿಪರ್ಯಾಸ ಎಂದರೆ, ಇದೇ ಶೈಕ್ಷಣಿಕ ಸಹಯೋಗ ಕೇಂದ್ರಗಳ ವಿರುದ್ಧ ನಿಯಮ ಮೀರಿ ಚಟುವಟಿಕೆ ನಡೆಸುತ್ತಿರುವ ಕುರಿತು ವಿಶ್ವವಿದ್ಯಾಲಯವು 2019ರಲ್ಲಿ ಇಲ್ಲಿನ ಜಯಲಕ್ಷ್ಮಿಪುರಂ ಠಾಣೆಯಲ್ಲಿ ಪ್ರಕರಣವನ್ನೂ ದಾಖಲಿಸಿದೆ. ಈ ಕುರಿತು ನ್ಯಾಯಾಲಯಗಳಲ್ಲೂ ಪ್ರಕರಣಗಳಿವೆ. ಒಂದು ವೇಳೆ ಪದವಿ ಪ್ರಮಾಣಪತ್ರ ನೀಡಿದರೆ ಯುಜಿಸಿಯಿಂದ ಕೆಎಸ್‌ಒಯು ಮತ್ತೆ ಮಾನ್ಯತೆ ಕಳೆದುಕೊಳ್ಳುವ ಅಪಾಯ ಇದೆ’ ಎಂದು ಆತಂಕ ವ್ಯಕ್ತಪಡಿಸಿದರು.

‘ವಿಶ್ವವಿದ್ಯಾಲಯ ತನ್ನ ನಿರ್ಧಾರದಿಂದ ಹಿಂದೆ ಸರಿಯದಿದ್ದರೆ ನವದೆಹಲಿಯ ಯುಜಿಸಿ ಕಚೇರಿಯ ಮುಂದೆ ಪ್ರತಿಭಟನೆ ನಡೆಸಲಾಗುವುದು’ ಎಂದರು.

‘ಅನುಮತಿ ದೊರಕಿದೆ’

ಈ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಮುಕ್ತ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎಸ್. ವಿದ್ಯಾಶಂಕರ್, ‘ಆರೋಪ ಸತ್ಯಕ್ಕೆ ದೂರ’ ಎಂದರು. ‘2012 ಹಾಗೂ ಅದಕ್ಕೂ ಹಿಂದೆ ದಾಖಲಾಗಿರುವ ತಾಂತ್ರಿಕೇತರ ಕೋರ್ಸ್‌ಗಳ ವಿದ್ಯಾರ್ಥಿಗಳಿಗೆ ಮಾತ್ರ ಪ್ರಮಾಣಪತ್ರ ನೀಡಲಾಗುವುದು. ಅವರಿಗೆ ಪದವಿ ಪ್ರಮಾಣ ಪತ್ರ ನೀಡ ಬೇಕು ಎಂದು ಯುಜಿಸಿಯೇ ಅನುಮತಿ ನೀಡಿ, ಪತ್ರವನ್ನೂ ಬರೆದಿದೆ. ಯಾವುದೇ ನಿಯಮ ಉಲ್ಲಂಘನೆಯಾಗಿಲ್ಲ’ ಎಂದು ಸ್ಪಷ್ಟಪಡಿಸಿದ್ದಾರೆ.

ಜನಬೆಂಬಲ ಇದ್ದವರೇ ಮುಖ್ಯಮಂತ್ರಿ – ಜಮೀರ್ ಅಹಮ್ಮದ್

‘ಸಿದ್ದರಾಮಯ್ಯ ನೇತೃತ್ವದಲ್ಲೇ ಪಕ್ಷ ಅಧಿಕಾರಕ್ಕೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು/ ಮೈಸೂರು: ಮುಂದಿನ ಮುಖ್ಯಮಂತ್ರಿ ಯಾರು ಎನ್ನುವುದರ ಕುರಿತು ಬಹಿರಂಗ ಚರ್ಚೆ ಮಾಡದಂತೆ ಕಾಂಗ್ರೆಸ್ ಹೈಕಮಾಂಡ್ ತಾಕೀತು ಮಾಡಿದ್ದರೂ, ಈ ಬಗ್ಗೆ ಹೇಳಿಕೆ ನೀಡುವುದನ್ನು ಆ ಪಕ್ಷದ ಶಾಸಕರು, ಸ್ಥಳೀಯ ನಾಯಕರು ಮುಂದುವರಿಸಿದ್ದಾರೆ.




ಯತೀಂದ್ರ

‘ಸಿದ್ದರಾಮಯ್ಯ ನೇತೃತ್ವದ ಸರ್ಕಾರವೇ ಬರಲಿದೆ’ ಎಂದು ಶಾಸಕ ಡಾ. ಯತೀಂದ್ರ ಹೇಳಿದ್ದರೆ, ‘ಜನಬೆಂಬಲ ಇರುವವರು ಮುಖ್ಯಮಂತ್ರಿ ಆಗುತ್ತಾರೆ’ ಎಂದು ಶಾಸಕ ಜಮೀರ್ ಅಹಮ್ಮದ್ ಖಾನ್ ಹೇಳಿಕೆ ನೀಡಿದ್ದಾರೆ.

ಮುಂದಿನ ಮುಖ್ಯಮಂತ್ರಿ ಯಾರು ಎಂಬ ಚರ್ಚೆಯ ಕುರಿತು ಶುಕ್ರವಾರ ಮೈಸೂರಿನಲ್ಲಿ ಪ್ರತಿಕ್ರಿಯಿಸಿದ ವರುಣಾ ಕ್ಷೇತ್ರದ ಶಾಸಕರೂ ಆಗಿರುವ ಸಿದ್ದರಾಮಯ್ಯ ಅವರ ಮಗ ಡಾ. ಯತೀಂದ್ರ,‘ಈಗ ಮತ್ತೆ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಲು ಒಗ್ಗಟ್ಟಿನಿಂದ ಶ್ರಮಿಸುತ್ತಿದ್ದೇವೆ. ಸಿದ್ದರಾಮಯ್ಯ ನೇತೃತ್ವದಲ್ಲೇ ಮತ್ತೆ ಕಾಂಗ್ರೆಸ್ ಅಧಿಕಾರಕ್ಕೇರಲಿದೆ’ ಎಂದರು.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿದ ಯತೀಂದ್ರ, ‘ಸಿದ್ದರಾಮಯ್ಯ ಯಾವತ್ತೂ ಜೆಡಿಎಸ್‌ಗೆ ಮೋಸ ಮಾಡಿಲ್ಲ. ಯಾವುದೇ ಪಾಪವನ್ನೂ ಮಾಡಿಲ್ಲ. ಜೆಡಿಎಸ್‌ನಲ್ಲಿ ನಾಯಕರಾಗಿ ಬೆಳೆಯುತ್ತಿದ್ದ ಅವರನ್ನು ಆ ಪಕ್ಷದಿಂದ ಉಚ್ಚಾಟಿಸಿದರು. ಸಿದ್ದರಾಮಯ್ಯ ಮತ್ತು ಅವರ ಸ್ನೇಹಿತರು ಕಾಂಗ್ರೆಸ್ ಸೇರಿದರು. ಎಲ್ಲರಿಗೂ ಒಳ್ಳೆಯದೇ ಆಯಿತು. ರಾಜ್ಯದಲ್ಲಿ ಜೆಡಿಎಸ್ ನೆಲೆ ಕಳೆದುಕೊಳ್ಳಲಿದೆ’ ಎಂದು ಹೇಳಿದರು.

ಜನಬೆಂಬಲ ಇದ್ದವರೇ ಸಿಎಂ: ಬೆಂಗಳೂರಿನಲ್ಲಿ ಸಿದ್ದರಾಮಯ್ಯ ಅವರ ನಿವಾಸದ ಬಳಿ ಸುದ್ದಿಗಾರರ ಜತೆ ಮಾತನಾಡಿದ ಶಾಸಕ ಜಮೀರ್ ಅಹಮ್ಮದ್ ಖಾನ್, ‘ಜನಬೆಂಬಲ ಇರುವವರು ರಾಜ್ಯದ ಮುಂದಿನ ಮುಖ್ಯಮಂತ್ರಿ ಆಗುತ್ತಾರೆ’ ಎಂದರು.



ಜಮೀರ್ ಅಹಮದ್

‘ಲಿಂಗಾಯತರಲ್ಲಿ ಎಂ.ಬಿ. ಪಾಟೀಲ್, ಅಲ್ಪಸಂಖ್ಯಾತರಲ್ಲಿ ಸಿ.ಎಂ. ಇಬ್ರಾಹಿಂ, ತನ್ವೀರ್ ಸೇಠ್ ಸೇರಿದಂತೆ ಹಲವರು ಮುಖ್ಯಮಂತ್ರಿ ಹುದ್ದೆಯ ಆಕಾಂಕ್ಷಿಗಳಿದ್ದಾರೆ. ಅಂತಿಮವಾಗಿ ಯಾರು ಮುಖ್ಯಮಂತ್ರಿ ಎಂಬುದನ್ನು ನಿರ್ಧರಿಸುವುದು ಕಾಂಗ್ರೆಸ್ ಹೈಕಮಾಂಡ್’ ಎಂದು ಹೇಳಿದರು.

‘ಮುಂದಿನ ಮುಖ್ಯಮಂತ್ರಿ ಕುರಿತು ಮಾತನಾಡದಂತೆ ನಮ್ಮ ನಾಯಕರು ಸೂಚಿಸಿದ್ದಾರೆ. ಆ ಬಗ್ಗೆ ನಾನು ಇನ್ನು ಯಾವುದೇ ಹೇಳಿಕೆ ನೀಡುವುದಿಲ್ಲ. ರಾಜ್ಯದ ಮುಂದಿನ ಮುಖ್ಯಮಂತ್ರಿ ಯಾರು ಎನ್ನುವುದನ್ನು ಜನತೆ ಮತ್ತು ಪಕ್ಷದ ಹೈಕಮಾಂಡ್ ನಿರ್ಧರಿಸುತ್ತದೆ’ ಎಂದರು.

‘ನಾನು ಮುಖ್ಯಮಂತ್ರಿ ಹುದ್ದೆಯ ಆಕಾಂಕ್ಷಿ ಅಲ್ಲ. ನಾನಿನ್ನೂ ಆ ಮಟ್ಟಕ್ಕೆ ಹೋಗಿಲ್ಲ. ನನ್ನದು ಎಲ್‌ಕೆಜಿ ಎಂದು ಸಿ.ಎಂ. ಇಬ್ರಾಹಿಂ ಹೇಳಿದ್ದಾರೆ. ಎಲ್‌ಕೆಜಿಯವನಿಗೆ ಮುಖ್ಯಮಂತ್ರಿ ಹುದ್ದೆ ಸಿಗುತ್ತಾ’ ಎಂದು ವ್ಯಂಗ್ಯವಾಗಿ ಪ್ರಶ್ನಿಸಿದರು.

ಹೈಕಮಾಂಡ್ ನಿರ್ಧಾರ: ಸಿದ್ದರಾಮಯ್ಯ



ದಾವಣಗೆರೆ: ‘ಯಾರೋ ಒಬ್ಬರು, ಇಬ್ಬರ ತೀರ್ಮಾನ ಇಡೀ ಪಕ್ಷದ ತೀರ್ಮಾನವಲ್ಲ. ಚುನಾವಣೆ ಬಳಿಕ ಹೊಸದಾಗಿ ಆಯ್ಕೆಯಾದವರು ಶಾಸಕಾಂಗ ಪಕ್ಷದ ನಾಯಕನನ್ನು ಆಯ್ಕೆ ಮಾಡುತ್ತಾರೆ. ಮುಖ್ಯಮಂತ್ರಿ ಯಾರಾಗುತ್ತಾರೆ ಎಂಬುದನ್ನು ನಂತರ ಹೈಕಮಾಂಡ್ ನಿರ್ಧರಿಸುತ್ತದೆ’ ಎಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಯಾರು ಏನೇ ಅಭಿಪ್ರಾಯ ಹೇಳಲಿ, ಪಕ್ಷದಲ್ಲಿ ಒಂದು ವ್ಯವಸ್ಥೆ ಇದೆ. ಪಕ್ಷದಲ್ಲಿ ಒಳಜಗಳ, ಗುಂಪುಗಾರಿಕೆ ಇಲ್ಲ. ಎಲ್ಲರೂ ಒಗ್ಗಟ್ಟಾಗಿ ಇದ್ದೇವೆ. ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವೇ ಹೆಚ್ಚಿನ ಸ್ಥಾನ ಗಳಿಸುತ್ತದೆ’ ಎಂದರು. ಕಾಂಗ್ರೆಸ್ ಒಳಜಗಳದ ಬಗ್ಗೆ ಎಚ್.ಡಿ.ಕುಮಾರಸ್ವಾಮಿ ಮಾಡಿರುವ ಟೀಕೆಗೆ ಉತ್ತರಿಸಿದ ಸಿದ್ದರಾಮಯ್ಯ, ‘ಕುಮಾರಸ್ವಾಮಿ ಹೇಳಿದ್ದೆಲ್ಲವೂ ವೇದವಾಕ್ಯನಾ? ಅವರೇನು ನಮ್ಮ ಪಕ್ಷದವರಾ? ಬೇಕು ಅಂತಲೇ ಸುಳ್ಳು ಹೇಳುತ್ತಿದ್ದಾರೆ’ ಎಂದು ಹೇಳಿದರು.

ಪಶ್ಚಿಮ ಬಂಗಾಳ: ರಾಜ್ಯಪಾಲರ ಭಾಷಣಕ್ಕೆ ಬಿಜೆಪಿ ಶಾಸಕರಿಂದ ಅಡ್ಡಿ

ಕೋಲ್ಕತ್ತ (ಪಿಟಿಐ): ಹೊಸದಾಗಿ ರಚನೆಯಾದ ಪಶ್ಚಿಮ ಬಂಗಾಳದ ವಿಧಾನಸಭೆಯ ಮೊದಲ ಅಧಿವೇಶನದಲ್ಲಿ ರಾಜ್ಯಪಾಲ ಜಗದೀಪ್ ಧನಕರ್ ಅವರ ಭಾಷಣಕ್ಕೆ ವಿರೋಧ ಪಕ್ಷವಾದ ಬಿಜೆಪಿಯ ಶಾಸಕರು ಅಡ್ಡಿಪಡಿಸಿದರು.

ವಿಧಾನಸಭಾ ಚುನಾವಣೆಯ ಬಳಿಕ ರಾಜ್ಯದಲ್ಲಿ ನಡೆದ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ರಾಜ್ಯಪಾಲರ ಭಾಷಣದಲ್ಲಿ ಉಲ್ಲೇಖ ಇಲ್ಲ ಎಂದು ಆರೋಪಿಸಿ ಬಿಜೆಪಿ ಸದಸ್ಯರು ಸಭಾಧ್ಯಕ್ಷರ ಪೀಠದ ಮುಂದೆ ಪ್ರತಿಭಟನೆ ನಡೆಸಿದರು. ಹಿಂಸಾಚಾರದಲ್ಲಿ ಬಲಿಯಾದವರ ಪೋಸ್ಟರ್, ಚಿತ್ರಗಳನ್ನು ಪ್ರದರ್ಶಿಸಿ ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿ ಸದಸ್ಯರ ಗದ್ದಲ ಹೆಚ್ಚಾಗುತ್ತಿದ್ದಂತೆ ರಾಜ್ಯಪಾಲರು ಭಾಷಣವನ್ನು ಮೊಟಕುಗೊಳಿಸಿದರು. ರಾಜ್ಯಪಾಲರ ಭಾಷಣ ಕೇವಲ ನಾಲ್ಕು ನಿಮಿಷಕ್ಕೆ ಸೀಮಿತವಾಯಿತು. ಸದನದಲ್ಲಿ ಟಿಎಂಸಿ ಶಾಸಕರು ಹೆಚ್ಚಿನ ಸಂಖ್ಯೆಯಲ್ಲಿದ್ದರೂ ಸಂಯಮ ತೋರಿಸಿದರು.

ನವೋದ್ಯಮಗಳ ಪ್ರಮುಖರೊಂದಿಗೆ ಸಂವಾದ: ನಿರ್ಮಲಾ ಭರವಸೆ

ಕೇಂದ್ರದಿಂದ ರಾಜ್ಯಕ್ಕೆ ಹೆಚ್ಚಿನ ನೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕವು ಜೈವಿಕ ವಿಜ್ಞಾನ ಹಾಗೂ ಜೈವಿಕ ತಂತ್ರಜ್ಞಾನ ಕ್ಷೇತ್ರದಲ್ಲಿ ಇನ್ನಷ್ಟು ಸಾಧನೆ ಮಾಡಬೇಕು. ಇದಕ್ಕೆ ಅಗತ್ಯವಿರುವ ಎಲ್ಲ ಸಹಕಾರ ನೀಡಲು ಸಿದ್ಧ' ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದರು.

ಐಟಿ, ಬಿಟಿ ಹಾಗೂ ವಿಜ್ಞಾನ ತಂತ್ರಜ್ಞಾನ ಇಲಾಖೆಯು ಜೈವಿಕ ತಂತ್ರಜ್ಞಾನ ಉದ್ಯಮಿಗಳು ಹಾಗೂ ನವೋದ್ಯಮಗಳ ಪ್ರಮುಖರೊಂದಿಗೆ ಶುಕ್ರವಾರ ಹಮ್ಮಿಕೊಂಡಿದ್ದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದರು.

'ವಿಜ್ಞಾನ, ವ್ಯಾಪಾರ, ಉದ್ಯಮಶೀಲತೆ ಹಾಗೂ ಶೈಕ್ಷಣಿಕ ವಲಯಗಳ ನಡುವಣ ಸಮನ್ವಯತೆಯಿಂದ ಜನರ ಬದುಕಿನ ಮಟ್ಟ ಸುಧಾರಿಸಲು ಮೋದಿ ನೇತೃತ್ವದ ಸರ್ಕಾರ ಒತ್ತು ನೀಡಿದೆ' ಎಂದರು.



ಉಪಮುಖ್ಯಮಂತ್ರಿ ಸಿ.ಎನ್‌.ಅಶ್ವತ್ಥನಾರಾಯಣ ಹಾಗೂ ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಸಮಾಲೋಚನೆ ನಡೆಸಿದರು

'ಕರ್ನಾಟಕ ಸರ್ಕಾರವು ಜೀವ ವಿಜ್ಞಾನ ಹಾಗೂ ಜೈವಿಕ ತಂತ್ರಜ್ಞಾನದ ಬೆಳವಣಿಗೆಗೆ ದೇಶದಲ್ಲೇ ಮಾದರಿಯಾಗುವ ವಾತಾವರಣ ಸೃಷ್ಟಿಸಿದೆ. ವೈಜ್ಞಾನಿಕ ಹಾಗೂ ತಾಂತ್ರಿಕ ಸಂಶೋಧನೆಗಳನ್ನು ಪ್ರೋತ್ಸಾಹಿಸುವುದಕ್ಕೆ ಸರ್ಕಾರ ಹೆಚ್ಚಿನ ಒತ್ತು ನೀಡಲಿದೆ' ಎಂದು ತಿಳಿಸಿದರು.

ಉಪ ಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ, 'ಕಿಣ್ವಗಳು, ಬಯೋಫಾರ್ಮಾ, ಬಯೋಫಾರ್ಮಸ್ಯೂಟಿಕಲ್, ಸಸ್ಯ ಅನುವಂಶೀಯತೆ, ವಂಶವಾಹಿನಿಗಳ ಅನುಕ್ರಮಣಿಕೆ, ಜೈವಿಕ ಸಂಸ್ಕರಣೆಗೆ ಸಂಬಂಧಿಸಿದ ಆವಿಷ್ಕಾರಗಳಿಗೆ ಬೆಂಗಳೂರು ಪ್ರಮುಖ ನೆಲೆಯಾಗಿದೆ. ಈ ಕ್ಷೇತ್ರವು ಹೆಚ್ಚಿನ ಉದ್ಯೋಗ ಸೃಷ್ಟಿಸುವ ಜೊತೆಗೆ ಉತ್ಪಾದಕತೆ ಹಾಗೂ ಸಮೃದ್ಧಿಯನ್ನು ಹೆಚ್ಚಿಸುತ್ತದೆ' ಎಂದರು.

'ಆಹಾರ ಭದ್ರತೆ, ಆರೋಗ್ಯಸೇವೆ, ಶುದ್ಧ ಇಂಧನ, ಸ್ವಚ್ಛ ಪರಿಸರ ಇತ್ಯಾದಿ ಕ್ಷೇತ್ರಗಳಲ್ಲಿ ಹೊಸ ಅವಕಾಶಗಳು ತೆರೆದುಕೊಳ್ಳಲಿವೆ. ರಾಜ್ಯವು ಸ್ಪರ್ಧಾತ್ಮಕ ಸಂಸ್ಥೆಯ (ಐಎಫ್‌ಸಿ) ಸಹಭಾಗಿತ್ವದಲ್ಲಿ 'ಕರ್ನಾಟಕ ಆವಿಷ್ಕಾರ ಒಳನೋಟ-2030' ಹೊರತರಲು ತಯಾರಿ ನಡೆಸುತ್ತಿದೆ' ಎಂದು ವಿವರಿಸಿದರು.

ರಾಜ್ಯ ಜೈವಿಕ ತಂತ್ರಜ್ಞಾನ ಕಾರ್ಯಪಡೆ ಅಧ್ಯಕ್ಷೆ ಕಿರಣ್ ಮಜುಂದಾರ್ ಷಾ, ಕೇಂದ್ರ ಕಂದಾಯ ಇಲಾಖೆ ಕಾರ್ಯದರ್ಶಿ ತರುಣ್ ಬಜಾಜ್, ಬಯೋ ಇನೋವೇಷನ್ ಸೆಂಟರ್ ವ್ಯವಸ್ಥಾಪಕ ನಿರ್ದೇಶಕ ಜಿತೇಂದ್ರ ಕುಮಾರ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಇ.ವಿ.ರಮಣ ರೆಡ್ಡಿ, ಐ.ಟಿ ನಿರ್ದೇಶಕಿ ಮೀನಾ ನಾಗರಾಜ ಇದ್ದರು.

ಸುದ್ದಿ 2 ನಿಮಿಷ

ಒಸಿಐ ಕಾರ್ಡ್ ವಿದ್ಯಾರ್ಥಿಗಳಿಗೆ ಹೈಕೋರ್ಟ್ ರಕ್ಷಣೆ

ಬೆಂಗಳೂರು: ಸಾಗರೋತ್ತರ ಭಾರತೀಯ ನಾಗರಿಕ(ಒಸಿಐ) ಕಾರ್ಡ್‌ಗಳನ್ನು ಹೊಂದಿರುವ 45 ವಿದ್ಯಾರ್ಥಿಗಳು 2021ರ ಸಿಇಟಿ ಪರೀಕ್ಷೆ ತೆಗೆದುಕೊಳ್ಳಲು ಅನುಮತಿ ನೀಡುವಂತೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ(ಕೆಇಎ) ಹೈಕೋರ್ಟ್ ನಿರ್ದೇಶನ ನೀಡಿದೆ.

ಕೇಂದ್ರ ಸರ್ಕಾರ ಮತ್ತು ಕೆಇಎ ಹೊರಡಿಸಿದ ಅಧಿಸೂಚನೆಗಳನ್ನು ರದ್ದುಪಡಿಸುವಂತೆ ನಿರ್ದೇಶನಗಳನ್ನು ನೀಡಲು ಕೋರಿ ಸಲ್ಲಿಕೆಯಾಗಿದ್ದ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಮ್ ಅವರಿದ್ದ ಪೀಠ, ಈ ಆದೇಶ ನೀಡಿತು.



2021ರ ಮಾರ್ಚ್ 4ರಂದು ಕೇಂದ್ರ ಹೊರಡಿಸಿರುವ ಅಧಿಸೂಚನೆಯು ಒಸಿಐ ಕಾರ್ಡ್ ಹೊಂದಿದವರನ್ನು ನಾಗರಿಕರೆಂದು ಪರಿಗಣಿಸುವ ಹಕ್ಕು ನಿರಾಕರಿಸಿದೆ. ಎನ್‌ಆರ್‌ಐ ಸೀಟುಗಳಿಗೆ ಮಾತ್ರ ಅವರು ಅರ್ಹರು. ಭಾರತೀಯ ನಾಗರಿಕರಿಗೆ ಮೀಸಲಾಗಿರುವ ಸೀಟುಗಳಿಗೆ ಒಸಿಐ ಕಾರ್ಡುದಾರರು ಅರ್ಹರಲ್ಲ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿತ್ತು.

'ಸಿಇಟಿ –2021ಕ್ಕೆ ನೊಂದಾಯಿಸುವ ಹಕ್ಕು ನಿರಾಕರಿಸಿದರೆ, ಕೌನ್ಸೆಲಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಅವಕಾಶ ನಿರಾಕರಣೆ ಆಗಲಿದೆ' ಎಂಬುದು ಅರ್ಜಿದಾರರ ವಾದ.

ಮಲ್ಲೇಶ್ವರದಲ್ಲಿ 'ಭೀಮ' ಮಳಿಗೆ ಆರಂಭ

ಬೆಂಗಳೂರು: ಚಿನ್ನಾಭರಣಗಳ ಮಾರಾಟ ಕಂಪನಿಯಾದ 'ಭೀಮ ಜ್ಯುವೆಲರ್ಸ್' ನಗರದ ಮಲ್ಲೇಶ್ವರದಲ್ಲಿ ಹೊಸ ಮಳಿಗೆಯನ್ನು ಆರಂಭಿಸಿದೆ. ಈ ಮಳಿಗೆಯನ್ನು ಕಂಪನಿಯ ನಿರ್ದೇಶಕರಾದ ವಿಷ್ಣುಶರಣ್ ಕೆ. ಭಟ್ ಅವರು ಉದ್ಘಾಟಿಸಿದರು.

ನವೀಕರಣ ಮಾಡಲಾಗಿರುವ ಜಯನಗರದ ಮಳಿಗೆಯನ್ನು ಸಾವಿತ್ರಿ ಕೃಷ್ಣನ್ ಅವರು ಉದ್ಘಾಟಿಸಿದರು. 'ಮಳಿಗೆಗಳು ವಿಶಾಲವಾಗಿಯೂ ಸುಸಜ್ಜಿತವಾಗಿಯೂ ಇವೆ. ಜಯನಗರ ಹಾಗೂ ಮಲ್ಲೇಶ್ವರದ ಮಳಿಗೆಗಳು ಬೆಳ್ಳಿ ವಸ್ತುಗಳು ಮತ್ತು ಆಭರಣಗಳ ಅಪೂರ್ವ ಸಂಗ್ರಹವನ್ನು ಹೊಂದಿವೆ' ಎಂದು ಪ್ರಕಟಣೆ ತಿಳಿಸಿದೆ.

ಭೀಮ ಜ್ಯುವೆಲರ್ಸ್‌ನಲ್ಲಿ ಜುಲೈ 7ರವರೆಗೆ ವಿಶೇಷ ಕೊಡುಗೆಗಳು ಇವೆ. 'ಪ್ರತಿ ಗ್ರಾಂ ಚಿನ್ನವನ್ನು ಅತಿ ಕನಿಷ್ಠ ದರಕ್ಕೆ ಖರೀದಿಸಬಹುದು. ಪ್ರತಿ ಕ್ಯಾರಟ್ ವಜ್ರದ ಖರೀದಿ ಮೇಲೆ ₹ 7,500 ರಿಯಾಯಿತಿ ಇದೆ. ಬೆಳ್ಳಿಯ ವಸ್ತು-ಆಭರಣಗಳ ತಯಾರಿಕಾ ವೆಚ್ಚದ ಮೇಲೆ ಶೇಕಡ 60ರಷ್ಟು ರಿಯಾಯಿತಿ, ಪ್ಲಾಟಿನಂ ಆಭರಣದ ಒಟ್ಟು ಮೌಲ್ಯದ ಮೇಲೆ ಶೇ 5ರಷ್ಟು ರಿಯಾಯಿತಿ ಇದೆ' ಎಂದು ಪ್ರಕಟಣೆ ಹೇಳಿದೆ.

ಅಕ್ರಮ ಧಾರ್ಮಿಕ ಕಟ್ಟಡ: ಪ್ರಮಾಣಪತ್ರ ಸಲ್ಲಿಸಲು ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕ ಜಾಗದಲ್ಲಿರುವ ಧಾರ್ಮಿಕ ಕಟ್ಟಡಗಳನ್ನು ತೆರವುಗೊಳಿಸುವ ಸಂಬಂಧ ಸುಪ್ರೀಂ ಕೋರ್ಟ್ ನೀಡಿರುವ ಆದೇಶ ಪಾಲನೆ ಮಾಡಿರುವ ಬಗ್ಗೆ ಪ್ರಮಾಣಪತ್ರ ಸಲ್ಲಿಸುವಂತೆ ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಹೈಕೋರ್ಟ್ ನಿರ್ದೇಶನ ನೀಡಿದೆ.

277 ಕಟ್ಟಡಗಳಲ್ಲಿ ಮೂರು ಕಟ್ಟಡಗಳನ್ನು ಮಾತ್ರ ತೆರವುಗೊಳಿಸಲಾಗಿದೆ ಎಂದು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ಅಸಮಾಧಾನ ವ್ಯಕ್ತಪಡಿಸಿತು.

'ಹಲವು ಬಾರಿ ನಿರ್ದೇಶನಗಳನ್ನು ನೀಡಿದ್ದರೂ, ಸುಪ್ರೀಂ ಕೋರ್ಟ್ ಆದೇಶಗಳಿಗೆ ಅನುಸಾರವಾಗಿ ಬಿಬಿಎಂಪಿ ಕ್ರಮಗಳನ್ನು ಅನುಸರಿಸಿಲ್ಲ' ಎಂದು ಹೇಳಿದ ಪೀಠ, ಖುದ್ದು ಪರಿಶೀಲನೆ ನಡೆಸಿ ಆಗಸ್ಟ್ 10ರೊಳಗೆ ಪ್ರಮಾಣಪತ್ರ ಸಲ್ಲಿಸುವಂತೆ ಪಾಲಿಕೆಯ ಮುಖ್ಯ ಆಯುಕ್ತರಿಗೆ ಆದೇಶಿಸಿತು.

ಈ ಸಂಬಂಧ ಸ್ವಯಂ ಪ್ರೇರಿತ ಅರ್ಜಿ ವಿಚಾರಣೆ ನಡೆಸುತ್ತಿರುವ ಪೀಠ, ರಾಜ್ಯದಾದ್ಯಂತ ಇರುವ ಅಕ್ರಮ ಧಾರ್ಮಿಕ ಕಟ್ಟಡಗಳ ತೆರವು ಸಂಬಂಧ ಪ್ರಮಾಣಪತ್ರ ಸಲ್ಲಿಸುವಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿಗೂ ನಿರ್ದೇಶನ ನೀಡಿತು. ವಿಚಾರಣೆಯನ್ನು ಆ.12ಕ್ಕೆ ಮುಂದೂಡಿತು.

ಸರ್ಕಾರಿ ಜಾಗದಲ್ಲಿರುವ ಧಾರ್ಮಿಕ ಕೇಂದ್ರಗಳನ್ನು ತೆರವುಗೊಳಿಸಬೇಕು ಎಂದು ಸುಪ್ರೀಂ ಕೋರ್ಟ್ ಎಲ್ಲ ರಾಜ್ಯ ಸರ್ಕಾರಗಳಿಗೆ 2009ರಲ್ಲಿ ಆದೇಶ ನೀಡಿತ್ತು. ಈ ಆದೇಶ ಪಾಲನೆ ಸಂಬಂಧ ಸ್ವಯಂಪ್ರೇರಿತವಾಗಿ ಮೇಲುಸ್ತುವಾರಿ ವಹಿಸುವಂತೆ ಹೈಕೋರ್ಟ್‌ಗಳಿಗೆ 2018ರಲ್ಲಿ ನಿರ್ದೇಶನ ನೀಡಿತ್ತು.

ಪುಸ್ತಕ ಪ್ರಶಸ್ತಿಗೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಎಂಶ್ರೀ ಪ್ರತಿಷ್ಠಾನದ ವತಿಯಿಂದ ನೀಡಲಾಗುವ 'ಶಾ. ಬಾಲೂರಾವ್ ಯುವ ಬರಹಗಾರ ಪ್ರಶಸ್ತಿ' ಹಾಗೂ 'ಶಾ.ಬಾಲೂರಾವ್ ಅನುವಾದ ಪ್ರಶಸ್ತಿ'ಗೆ ಲೇಖಕರಿಂದ ಪುಸ್ತಕಗಳನ್ನು ಆಹ್ವಾನಿಸಲಾಗಿದೆ.

ಪ್ರಶಸ್ತಿಗಳು ತಲಾ ₹25 ಸಾವಿರ ನಗದು ಹಾಗೂ ಸ್ಮರಣಿಕೆ ಒಳಗೊಂಡಿವೆ.

ಯುವ ಬರಹಗಾರ ಪ್ರಶಸ್ತಿಗೆ 35 ವರ್ಷದೊಳಗಿನವರು ರಚಿಸಿರುವ ಸಾಹಿತ್ಯದ ಯಾವುದೇ ಪ್ರಕಾರದ ಪುಸ್ತಕಗಳು ಹಾಗೂ ಅನುವಾದ ಪ್ರಶಸ್ತಿಗೆ ಬೇರೆ ಭಾಷೆಗಳಿಂದ ಕನ್ನಡಕ್ಕೆ ಅನುವಾದಗೊಂಡಿರುವ ಪುಸ್ತಕಗಳನ್ನು ಸಲ್ಲಿಸಬಹುದು.

ಆಸಕ್ತರು ಪುಸ್ತಕದ ಮೂರು ಪ್ರತಿಗಳು ಹಾಗೂ ಸ್ವವಿವರಗಳನ್ನು ಜುಲೈ 26ರೊಳಗೆ ಪ್ರತಿಷ್ಠಾನದ ವಿಳಾಸಕ್ಕೆ ತಲುಪಿಸುವಂತೆ ಪ್ರಕಟಣೆ ತಿಳಿಸಿದೆ.

ವಿಳಾಸ:ಗೌರವ ಕಾರ್ಯದರ್ಶಿ, ಬಿಎಂಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಬೆಂಗಳೂರು

ಸಂಪರ್ಕ:080–26615877

ಮೀಸಲಾತಿ ತಡೆಗೆ ಸುಪ್ರೀಂ ನಕಾರ

ನವದೆಹಲಿ: ಬೆಂಗಳೂರಿನ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯುನಿವರ್ಸಿಟಿಯು (ಎನ್‌ಎಲ್‌ಎಸ್‌ಐಯು) ಕರ್ನಾಟಕದ ವಿದ್ಯಾರ್ಥಿಗಳಿಗೆ ಶೇಕಡ 25ರಷ್ಟು ಸೀಟುಗಳನ್ನು ಮೀಸಲು ಇರಿಸಿರುವ ನಿರ್ಧಾರಕ್ಕೆ ತಡೆಯಾಜ್ಞೆ ನೀಡಲು ಸುಪ್ರೀಂ ಕೋರ್ಟ್ ಶುಕ್ರವಾರ ನಿರಾಕರಿಸಿದೆ.

ಅಭ್ಯರ್ಥಿಗಳ ಪರ ಹಾಜರಾದ ಹಿರಿಯ ವಕೀಲ ಗೋಪಾಲ್ ಶಂಕರ ನಾರಾಯಣ್ ಅವರು, ಮೀಸಲಾತಿಗೆ ಸಂಬಂಧಿಸಿದಂತೆ ಎನ್‌ಎಲ್‌ಎಸ್‌ಐಯು ಅಧಿಸೂಚನೆಗೆ ತಡೆ ನೀಡಬೇಕು ಎಂದು ಕೋರಿದರು.

ಹಿರಿಯ ವಕೀಲ ಸಜನ್ ಪೂವಯ್ಯ ಎನ್‌ಎಲ್‌ಎಸ್‌ಐಯು ಪ್ರತಿನಿಧಿಸಿದ್ದರು. ವಾದ ವಿವಾದ ಆಲಿಸಿದ ನ್ಯಾಯಾಲಯ, ಅಧಿಸೂಚನೆಗೆ ತಡೆ ನೀಡಲು ನಿರಾಕರಿಸಿತು.

ನ್ಯಾಯಮೂರ್ತಿಗಳಾದ ಎಲ್. ನಾಗೇಶ್ವರ ರಾವ್ ಮತ್ತು ರವೀಂದ್ರ ಭಟ್ ಅವರಿದ್ದ ನ್ಯಾಯಪೀಠವು ಈ ಪ್ರಕರಣದ ವಿಚಾರಣೆಯನ್ನು ಆಗಸ್ಟ್ 2ಕ್ಕೆ ಮುಂದೂಡಿದೆ.

ಬೆಂಗಳೂರು - ಕಾರವಾರ ರೈಲು ಇನ್ಮುಂದೆ 'ಪಂಚಗಂಗಾ ಎಕ್ಸ್‌ಪ್ರೆಸ್'

ಕುಂದಾಪುರ: ರಾಜ್ಯದ ಕರಾವಳಿ ಹಾಗೂ ಬೆಂಗಳೂರು ಸಂಪರ್ಕಿಸುವ ಕಾರವಾರ- ಬೆಂಗಳೂರು ಎಕ್ಸ್‌ಪ್ರೆಸ್ ರೈಲಿಗೆ 'ಪಂಚಗಂಗಾ ಎಕ್ಸ್‌ಪ್ರೆಸ್' ಎಂಬ ಹೆಸರು ಇಡಲಾಗುವುದು ಎಂದು ಕೇಂದ್ರ ರೈಲ್ವೆ ಮಂಡಳಿಯ ಉಪ ನಿರ್ದೇಶಕ ರಾಜೇಶ್ ಕುಮಾರ್ ತಿಳಿಸಿದ್ದಾರೆ.

ಕರಾವಳಿ ಭಾಗದ ಜೀವನಾಡಿಯಾಗಿರುವ ಪಂಚಗಂಗಾವಳಿ ನೆನಪು ಶಾಶ್ವತವಾಗಿಸುವ ನಿಟ್ಟಿನಲ್ಲಿ ಕೈಗೊಂಡಿರುವ ಈ ಕ್ರಮಕ್ಕೆ ಮೊಗವೀರ ಹಾಗೂ ಖಾರ್ವಿ ಸಮಾಜದವರು ಹರ್ಷ ವ್ಯಕ್ತಪಡಿಸಿದ್ದಾರೆ.

ಕೋವಿಡ್ ಕಾಲದಲ್ಲಿ ಜನರ 'ಕೈ'ಹಿಡಿದ ಕುಸುಮಾ



ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಜೊತೆ ಕುಸುಮಾ



ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರನ್ನು ಅಭಿನಂದಿಸಿದ ಸಂದರ್ಭ



ಅಜ್ಜಿಯೊಬ್ಬರು ಕುಸುಮಾ ಅವರ ಕಾರ್ಯ ಮೆಚ್ಚಿ ಆಶೀರ್ವದಿಸುತ್ತಿರುವುದು

ಕೋವಿಡ್‌ನಿಂದಾಗಿ ಕೆಲಸ ಕಳೆದುಕೊಂಡ ಬಡವರು ಒಪ್ಪತ್ತಿನ ಊಟಕ್ಕೂ ಪರದಾಡುವ ಸ್ಥಿತಿ ನಿರ್ಮಾಣವಾಗಿತ್ತು. ಲಾಕ್‌ಡೌನ್ ಘೋಷಿಸಿದ ಬಳಿಕ ಅವರ ಬದುಕು ಮತ್ತಷ್ಟು ದುಸ್ತರವಾಗಿತ್ತು. ದುಡಿಮೆಯೇ ನಿಂತು ಹೋಗಿದ್ದರಿಂದ ಅನೇಕರು ದಿಕ್ಕು ತೋಚದಾಗಿದ್ದರು. ಶಾಲೆಗಳಿಂದ ದೂರ ಉಳಿದಿರುವ ಮಕ್ಕಳು ಆನ್‌ಲೈನ್ ಶಿಕ್ಷಣದಿಂದಲೂ ವಿಮುಖವಾಗುವ ಭೀತಿಯಲ್ಲಿದ್ದರು. ಇಂತಹ ಸಮಯದಲ್ಲಿ ಇವರೆಲ್ಲರ ನೆರವಿಗೆ ನಿಂತವರು ಎಚ್.ಕುಸುಮಾ.

ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ನಾಯಕಿಯಾಗಿರುವ ಕುಸುಮಾ, ಈ ಬಿಕ್ಕಟ್ಟಿನ ಸಮಯದಲ್ಲಿ ನೊಂದವರ ನೋವಿಗೆ ಮಿಡಿದರು. ಬಡವರು, ಮಧ್ಯಮ ವರ್ಗದವರು, ಕಾರ್ಮಿಕರು, ಕೊಳೆಗೇರಿ ನಿವಾಸಿಗಳು... ಹೀಗೆ ಎಲ್ಲ ವರ್ಗದವರಿಗೂ ಸಹಾಯ ಹಸ್ತ ಚಾಚುವ ಮೂಲಕ ಅವರ ಬದುಕಲ್ಲಿ ಭರವಸೆಯ ಬೆಳಕು ಮೂಡಲು ಕಾರಣರಾದರು.

ಕೋವಿಡ್ ಸಂದರ್ಭದಲ್ಲಿ ಅನೇಕರು ಮನೆಯಿಂದ ಹೊರಗೆ ಕಾಲಿಡಲು ಭಯಪಡುತ್ತಿದ್ದರು. ಆದರೆ, ಕುಸುಮಾ ಇದ್ಯಾವುದಕ್ಕೂ ಅಂಜಲಿಲ್ಲ. ಜನಸೇವೆಯನ್ನೇ ಉಸಿರಾಗಿಸಿಕೊಂಡಿರುವ ಅವರು ಜನರ ಕಣ್ಣೀರು ಒರೆಸುವ ಕಾಯಕದಲ್ಲಿ ನಿರತರಾದರು. ಧರ್ಮ, ಜಾತಿ, ಮತವನ್ನು ಬದಿಗೊತ್ತಿ ಸರ್ವರ ಶ್ರೇಯೋಭಿವೃದ್ಧಿಗೂ ಶ್ರಮಿಸಿದರು. ಯಾರು ಯಾವುದೇ ಸಮಯದಲ್ಲಿ ಕರೆ ಮಾಡಿದರೂ ಅದಕ್ಕೆ ಸ್ಪಂದಿಸುತ್ತಿದ್ದರು. ಅವರ ಬಳಿಗೆ ಹೋಗಿ ತಮ್ಮಿಂದಾದ ಸಹಾಯ ಮಾಡಿ ಆತ್ಮಸ್ಥೈರ್ಯ ತುಂಬುತ್ತಿದ್ದರು. ಆ ಮೂಲಕ ತಾವು ನಿಜ ಅರ್ಥದ ನಾಯಕಿ ಎಂಬುದನ್ನು ಸಾಬೀತುಪಡಿಸಿದ್ದರು. ಅವರ ದಿಟ್ಟತನದ ಕಾರ್ಯಗಳನ್ನು ಕ್ಷೇತ್ರದ ಜನರೂ ಕೊಂಡಾಡುತ್ತಿದ್ದಾರೆ. ಹೊಗಳಿಕೆಗಳಿಂದ ಹಿಗ್ಗದ ಅವರು ಸಮಾಜಮುಖಿ ಕಾರ್ಯಗಳನ್ನು ಮುಂದುವರಿಸಿಕೊಂಡು ಸಾಗಿದ್ದಾರೆ.

ಸೌಮ್ಯ ಸ್ವಭಾವದವರಾದ ಕುಸುಮಾ, ಸರಳತೆಯನ್ನು ಮೈಗೂಡಿಸಿಕೊಂಡಿದ್ದಾರೆ. ತಂದೆ ಹನುಮಂತರಾಯಪ್ಪ ತೋರಿಸಿಕೊಟ್ಟ ಹಾದಿಯಲ್ಲಿ ಭರವಸೆಯ ಹೆಜ್ಜೆ ಗುರುತುಗಳನ್ನು ಮೂಡಿಸುತ್ತಿದ್ದಾರೆ. ಕಟ್ಟಡ ಕಾರ್ಮಿಕರು, ಆಟೋರಿಕ್ಷಾ ಚಾಲಕರು, ಟೆಂಪೊ ಚಾಲಕರು, ಗಾರ್ಮೆಂಟ್ಸ್ ಕಾರ್ಮಿಕರು ಹಾಗೂ ದಿನಗೂಲಿ ನೌಕರರಿಗೂ ನೆರವು ನೀಡಿ ಮಾನವೀಯತೆ ಮೆರೆದಿದ್ದಾರೆ.ಕೋವಿಡ್ ಸಮಯದಲ್ಲಿ ತಮ್ಮ ಪ್ರಾಣವನ್ನು ಪಣಕ್ಕಿಟ್ಟು ಕೆಲಸ ಮಾಡುತ್ತಿರುವ ಆಶಾ ಕಾರ್ಯಕರ್ತೆಯರು, ಪೌರಕಾರ್ಮಿಕರು ಹಾಗೂ ಅಂಗವಿಕಲರಿಗೂ ದಿನಸಿ ಕಿಟ್ ವಿತರಿಸಿದ್ದಾರೆ. ಆ ಮೂಲಕ ನಿಮ್ಮೊಂದಿಗೆ ನಾನಿದ್ದೇನೆ ಎಂಬ ಭರವಸೆ ನೀಡಿದ್ದಾರೆ.

ಹಸಿದವರಿಗೆ ಅನ್ನ; ಸೋಂಕಿತರಿಗೆ ಸಾಂತ್ವನ

ರಾಜರಾಜೇಶ್ವರಿ ಕ್ಷೇತ್ರದಲ್ಲಿ ಹಲವರು ಕೊರೊನಾ ಸೋಂಕಿಗೊಳಗಾಗಿದ್ದರು. ಅಂತಹವರ ಮನೆಗಳಿಗೆ ತೆರಳಿ ಅವರ ಯೋಗಕ್ಷೇಮ ವಿಚಾರಿಸಿ ಧೈರ್ಯ ತುಂಬುವ ಕೆಲಸವನ್ನು ಕುಸುಮಾ ಮಾಡಿದ್ದಾರೆ. ಅವರಿಗೆ ಅಗತ್ಯ ಔಷಧ ಪೂರೈಸುವ ಮೂಲಕ ಆತ್ಮಬಲ ಹೆಚ್ಚಿಸಿದ್ದಾರೆ. ಜೊತೆಗೆ ಕೊಳೆಗೇರಿಗಳು, ಕಟ್ಟಡ ಕಾರ್ಮಿಕರು ವಾಸಿಸುವ ಪ್ರದೇಶಗಳಿಗೆ ಭೇಟಿ ನೀಡಿ ಆಹಾರದ ಪೊಟ್ಟಣಗಳನ್ನು ವಿತರಿಸಿದ್ದಾರೆ.

ಯಾರೊಬ್ಬರೂ ಹಸಿವಿನಿಂದ ಬಳಲಬಾರದು ಎಂಬ ಉದ್ದೇಶದಿಂದ ಪ್ರತಿದಿನ 8 ಸಾವಿರ ಮಂದಿಗೆ ಬೆಳಿಗ್ಗೆ ಹಾಗೂ ಮಧ್ಯಾಹ್ನ ಊಟ ಮತ್ತು ಉಪಹಾರದ ವ್ಯವಸ್ಥೆ ಮಾಡಿದ್ದಾರೆ. ತಲಾ10 ಟೆಂಪೊ ಹಾಗೂ ಆಟೊಗಳಲ್ಲಿ ಆಹಾರದ ಪೊಟ್ಟಣಗಳನ್ನು ತುಂಬಿಕೊಂಡು ಅವುಗಳನ್ನು ಕೊಟ್ಟಿಗೆಪಾಳ್ಯ, ನರಸಿಂಹಯ್ಯನಪಾಳ್ಯ, ಲಗ್ಗೆರೆ, ಲಕ್ಷ್ಮಿದೇವಿ ನಗರ, ಗದ್ದೆಬಯಲು, ಲವಕುಶನಗರ, ಲಗ್ಗೆರೆ ಸರ್ಕಲ್, ಅಂಬೇಡ್ಕರ್ ಕಾಲೊನಿ, ಲಕ್ಷ್ಮಿದೇವಿನಗರ ಕ್ವಾಟ್ರಸ್, ಜೈಭುವನೇಶ್ವರಿ ನಗರ, ಸಂಜಯನಗರ, ಪೀಣ್ಯ, ಆಶ್ರಯನಗರ, ಜಾಲಹಳ್ಳಿ, ಜಾಲಹಳ್ಳಿ ಗ್ರಾಮ, ಜೆ.ಪಿ.ಪಾರ್ಕ್, ಸುಂದರ ನಗರ, ಪೂರ್ಣಪುರ, ಎಸ್.ಬಿ.ಎಂ.ಕಾಲೊನಿ, ಮುತ್ಯಾಲನಗರ, ಮುನೇಶ್ವರ ನಗರ, ಸುಮನಹಳ್ಳಿ, ಶ್ರೀನಿವಾಸನಗರ, ಪೈಪ್‌ಲೈನ್, ಹನುಮಂತರಾಯನ ಪಾಳ್ಯ, ಕೆಂಗುಂಟೆ, ಮಲ್ಲತ್ತಹಳ್ಳಿ, ಪಾಪರೆಡ್ಡಿಪಾಳ್ಯ, ಉಲ್ಲಾಳು ರಸ್ತೆ, ಬಂಗಾರಪ್ಪ ನಗರ ಪ್ರದೇಶಗಳಲ್ಲಿರುವವರಿಗೆ ಹಂಚಲಾಗುತ್ತಿದೆ. 65 ದಿನಗಳಿಂದ ಈ ಕೆಲಸ ನಿರಂತರವಾಗಿ ನಡೆಯುತ್ತಿದೆ. ಈ ಕಾರ್ಯಕ್ಕೆ ಕಾಂಗ್ರೆಸ್ ಕಾರ್ಯಕರ್ತರು, ಸ್ವಯಂ ಸೇವಕರು ಹಾಗೂ ಕುಸುಮಾ ಅವರ ಅಭಿಮಾನಿಗಳು ಕೈಜೋಡಿಸಿದ್ದಾರೆ.

ಕೊರೊನಾ ಸೋಂಕಿತರನ್ನು ಆಸ್ಪತ್ರೆಗೆ ದಾಖಲಿಸಲು, ಅವರಿಗೆ ಸಕಾಲದಲ್ಲಿ ಬಿಯು ಸಂಖ್ಯೆ ಕೊಡಿಸಲು ಕುಸುಮಾ ಹಾಗೂ ಅವರ ತಂಡದವರು ನೆರವಾಗುತ್ತಿದ್ದಾರೆ.

ಆರ್ಥಿಕವಾಗಿ ಹಿಂದುಳಿದವರಿಗೆ ಹಣಕಾಸಿನ ನೆರವನ್ನೂ ಒದಗಿಸುತ್ತಿದ್ದಾರೆ. ಕೋವಿಡ್‌ನಿಂದ ಮೃತಪಟ್ಟ ಕುಟುಂಬಗಳಿಗೆ ವೈಯಕ್ತಿಕವಾಗಿ ತಲಾ₹10 ಸಾವಿರದ ಚೆಕ್ ವಿತರಿಸಿದ್ದಾರೆ. ಇದರ ಜೊತೆಗೆ ಸಾವಿರಾರು ಮಂದಿಗೆ ಎನ್–95 ಮುಖಗವಸು ವಿತರಣೆ ಮಾಡಿದ್ದಾರೆ. ಕೊಳೆಗೇರಿ ನಿವಾಸಿಗಳಲ್ಲಿ ಶುಚಿತ್ವ ಹಾಗೂ ಆರೋಗ್ಯದ ಕುರಿತು ಜಾಗೃತಿ ಮೂಡಿಸುತ್ತಿದ್ದಾರೆ.

ಅಮೆರಿಕದಲ್ಲಿ ವ್ಯಾಸಂಗ; ಅತಿಥಿ ಉಪನ್ಯಾಸಕಿಯಾಗಿ ಕೆಲಸ

ಕುಸುಮಾ ಅವರು ಅಂಬೇಡ್ಕರ್ ಕಾಲೇಜಿನಲ್ಲಿ ಬಿ.ಇ ಪದವಿ ಪಡೆದರು. ಅಮೆರಿಕದ ಬೋಸ್ಟನ್‌ನಲ್ಲಿರುವ ವಿಶ್ವವಿದ್ಯಾಲಯದಲ್ಲಿ ಮಾಹಿತಿ ತಂತ್ರಜ್ಞಾನ ವಿಷಯದಲ್ಲಿ ಉನ್ನತ ಶಿಕ್ಷಣ ಪಡೆದಿದ್ದಾರೆ. ಜನಸೇವೆಯ ನಡುವೆಯೂ ದಯಾನಂದ ಸಾಗರ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕಿಯಾಗಿ ಕೆಲಸ ಮಾಡುತ್ತಿದ್ದಾರೆ. ವಾರದಲ್ಲಿ ಎರಡು ದಿನ ಅಲ್ಲಿ ಬೋಧನೆ ಮಾಡುತ್ತಾರೆ. ಇದರ ಜೊತೆಗೆ ಸರ್ಕಾರಿ ಶಾಲೆ ಹಾಗೂ ಕಾಲೇಜಿನ ವಿದ್ಯಾರ್ಥಿಗಳಿಗೂ ಪಾಠ ಹೇಳಿಕೊಡುತ್ತಾರೆ. ಬಡ ಹಾಗೂ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ನೋಟ್‌ಬುಕ್ ಹಾಗೂ ಲೇಖನ ಸಾಮಗ್ರಿಗಳನ್ನು ವಿತರಣೆ ಮಾಡುತ್ತಿದ್ದಾರೆ. ಬಡವರು ಹಾಗೂ ಮಧ್ಯಮ ವರ್ಗದವರೂ ಉನ್ನತ ಶಿಕ್ಷಣ ಪಡೆಯಬೇಕೆಂಬ ಆಶಯ ಹೊಂದಿದ್ದಾರೆ.



ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಅವರ ಆಶೀರ್ವಾದ ಪಡೆದ ಸಂದರ್ಭ

ಹಿರಿಯರ ಮಾರ್ಗದರ್ಶನ..

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಸಂಸದ ಡಿ.ಕೆ.ಸುರೇಶ್, ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ, ಬೆಂಗಳೂರು ಉತ್ತರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಂ.ರಾಜಕುಮಾರ್ ಸೇರಿದಂತೆ ಅನೇಕ ಹಿರಿಯರ ಮಾರ್ಗದರ್ಶನದಲ್ಲಿ ಅವರು ಕಾಂಗ್ರೆಸ್ ಪಕ್ಷ ಸಂಘಟಿಸುವ ಕೆಲಸದಲ್ಲೂ ತೊಡಗಿಕೊಂಡಿದ್ದಾರೆ. ಜನಸಾಮಾನ್ಯರ ಕಷ್ಟಗಳನ್ನು ಆಲಿಸಿ ಅವರಿಗೆ ನ್ಯಾಯ ಒದಗಿಸಲು ಪ್ರಯತ್ನಿಸುತ್ತಿದ್ದಾರೆ.

ಪೆಟ್ರೋಲ್, ಡೀಸೆಲ್ ಹಾಗೂ ಅಡುಗೆ ಅನಿಲ ದರ ವಿರುದ್ಧ ಬೀದಿಗಿಳಿದು ಪ್ರತಿಭಟಿಸಿದ್ದಾರೆ. ಆ ಮೂಲಕ ಸರ್ಕಾರಗಳಿಗೆ ಬಿಸಿ ಮುಟ್ಟಿಸಲು ಮುಂದಾಗುತ್ತಿದ್ದಾರೆ.

ಬೀದಿ ಬದಿ ವ್ಯಾಪಾರಿಗಳಿಗೆ ಸಕಾಲದಲ್ಲಿ ಸರ್ಕಾರದ ನೆರವು ತಲುಪದಿರುವುದನ್ನು ಗಮನಿಸಿರುವ ಅವರು ತಾವೇ ಅವರ ಅರ್ಜಿಗಳನ್ನು ಭರ್ತಿ ಮಾಡಿ ಅದನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ತಲುಪಿಸುತ್ತಿದ್ದಾರೆ. ಅಧಿಕಾರಿಗಳ ಮೇಲೆ ಒತ್ತಡ ತಂದು ನೆರವಿನ ಹಣ ಶೀಘ್ರವೇ ಫಲಾನುಭವಿಗಳ ಕೈಸೇರುವಂತೆ ಮಾಡುತ್ತಿದ್ದಾರೆ.ಕೋವಿಡ್ ಲಸಿಕೆಯ ಮಹತ್ವದ ಕುರಿತು ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯದಲ್ಲೂ ನಿರತರಾಗಿದ್ದಾರೆ.



ರಕ್ತದಾನ ಮಾಡಿದ ಸಂದರ್ಭ

ಪರಿಶಿಷ್ಟರ ಮನೆಯಲ್ಲಿ ವಾಸ್ತವ್ಯ; ಸ್ವಯಂಪ್ರೇರಿತವಾಗಿ ರಕ್ತದಾನ

ಆಶ್ರಯನಗರದ ಕೊಳೆಗೇರಿ ನಿವಾಸಿ ತಾಯಮ್ಮ ಅವರ ಮನೆಯಲ್ಲಿ ವಾಸ್ತವ್ಯ ಹೂಡಿ ಅಲ್ಲಿನ ಜನರ ಕುಂದು ಕೊರತೆ ಆಲಿಸುವ ಕೆಲಸ ಮಾಡಿದ್ದಾರೆ. ಅಲ್ಲಿನ ಮಕ್ಕಳಿಗೆ ಶಿಕ್ಷಣದ ಮಹತ್ವದ ಕುರಿತು ಅರಿವು ಮೂಡಿಸಿದ್ದಾರೆ. ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವಂತೆ ಪೋಷಕರಿಗೂ ಮನವಿ ಮಾಡಿದ್ದಾರೆ. ಜೊತೆಗೆ ಮಕ್ಕಳಿಗೆ ಪಾಠವನ್ನೂ ಹೇಳಿಕೊಟ್ಟಿದ್ದಾರೆ. ಅವರ ಶಿಕ್ಷಣಕ್ಕೆ ಅನುವಾಗಲಿ ಎಂಬ ಉದ್ದೇಶದಿಂದ 50ಕ್ಕೂ ಅಧಿಕ ವಿದ್ಯಾರ್ಥಿಗಳಿಗೆ ಟ್ಯಾಬ್ ಕೂಡ ವಿತರಣೆ ಮಾಡಿದ್ದಾರೆ.

ಕೋವಿಡ್ ಸಮಯದಲ್ಲಿ ಸೋಂಕು ತಗುಲಬಹುದು ಎಂಬ ಭಯದಿಂದ ಅನೇಕರು ರಕ್ತದಾನ ಮಾಡಲು ಹಿಂದೇಟು ಹಾಕುತ್ತಿದ್ದರು. ಇದನ್ನು ಮನಗಂಡ ಕುಸುಮಾ, ಸ್ವಯಂಪ್ರೇರಿತವಾಗಿ ರಕ್ತದಾನ ಮಾಡಿ ಯುವಸಮೂಹ ಹಾಗೂ ರಕ್ತದಾನಿಗಳಲ್ಲಿ ಇದ್ದ ಅಳುಕು ದೂರ ಮಾಡಿದ್ದಾರೆ. ಕ್ಷೇತ್ರದಲ್ಲಿ ಎರಡು ಕಡೆ ರಕ್ತದಾನ ಶಿಬಿರ ಹಮ್ಮಿಕೊಂಡು ಇತರರಿಗೆ ಮಾದರಿಯಾಗಿದ್ದಾರೆ.



ಪೌರ ಕಾರ್ಮಿಕರಿಗೆ ಸಂಸದ ಡಿ.ಕೆ.ಸುರೇಶ್ ಹಾಗೂ ಎಚ್.ಕುಸುಮಾ ಅವರು ಆಹಾರ ಧಾನ್ಯಗಳ ಕಿಟ್ ವಿತರಿಸಿದ ಕ್ಷಣ

ಬೇಳೆಕಾಳುಗಳ ಸಂಗ್ರಹ ಮಿತಿಗೆ ನಿರ್ಬಂಧ

ನವದೆಹಲಿ (ಪಿಟಿಐ): ಬೆಲೆ ಏರಿಕೆ ತಡೆಯುವ ನಿಟ್ಟಿನಲ್ಲಿ ಹೆಸರುಕಾಳು ಹೊರತುಪಡಿಸಿ ಉಳಿದ ಎಲ್ಲ ಬೇಳೆಕಾಳುಗಳ ಮೇಲಿನ ಸಂಗ್ರಹ ಮಿತಿಯನ್ನು ಶುಕ್ರವಾರ ವಿಧಿಸಿದೆ.

ಸಗಟುದಾರರು, ಚಿಲ್ಲರೆ ವ್ಯಾಪಾರಿಗಳಿಗೆ ಮತ್ತು ಆಮದು ದಾರರಿಗೆ ಈ ಆದೇಶ ಅನ್ವಯವಾಗಲಿದೆ ಎಂದು ಕೇಂದ್ರ ಆಹಾರ ಮತ್ತು ಗ್ರಾಹಕ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

ಸಗಟುದಾರರಿಗೆ 200 ಟನ್‌ಗಳ ಸಂಗ್ರಹ ಮಿತಿ ಹಾಗೂ ಚಿಲ್ಲರೆ ವ್ಯಾಪಾರಿಗಳಿಗೆ 5 ಟನ್ ಸಂಗ್ರಹದ ಮಿತಿಯನ್ನು ವಿಧಿಸಲಾಗಿದೆ ಎಂದು ತಿಳಿಸಿದೆ. ಸಂಗ್ರಹ ಮಿತಿ ಮೀರಿದರೆ ಗ್ರಾಹಕರ ವ್ಯವಹಾರಗಳ ಆನ್‌ಲೈನ್ ಪೋರ್ಟಲ್‌ನಲ್ಲಿ ವಿವರ ನೀಡಬೇಕು ಎಂದು ಸೂಚಿಸಿದೆ. ಜತೆಗೆ, 30 ದಿನಗಳ ಒಳಗೆ ನಿಗದಿಪಡಿಸಿದ ಮಿತಿ ಉಳಿಸಿಕೊಳ್ಳಬೇಕು ಎಂದು ನಿರ್ದೇಶನ ನೀಡಿದೆ. ಮಾರ್ಚ್, ಏಪ್ರಿಲ್ ತಿಂಗಳಲ್ಲಿ ಬೇಳೆ ಕಾಳುಗಳ ಬೆಲೆ ಹೆಚ್ಚುತ್ತಿರುವುದರಿಂದ ಸಚಿವಾಲಯ ಈ ಕ್ರಮಕ್ಕೈಗೊಂಡಿದೆ.

ಕೋವಿಡ್ ಮೂರನೇ ಅಲೆ ಕಾರಣ ಮಕ್ಕಳ ಐಸಿಯು ಹಾಸಿಗೆಗಳ ಸಂಖ್ಯೆ ದ್ವಿಗುಣ

ಐಜಿಐಸಿಎಚ್: ಮಕ್ಕಳ ರಕ್ಷಣೆಗೆ ಸಿದ್ಧತೆ

• ವರುಣ ಹೆಗಡೆ

ಬೆಂಗಳೂರು: ಕೋವಿಡ್ ಮೂರನೇ ಅಲೆ ಎದುರಿಸಲು ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯು (ಐಜಿಐಸಿಎಚ್) ಈಗಿನಿಂದಲೇ ಸಿದ್ಧತೆ ಪ್ರಾರಂಭಿಸಿದ್ದು, ಕೊರೊನಾ ಸೋಂಕಿತ ಮಕ್ಕಳ ಚಿಕಿತ್ಸೆಗೆ ತೀವ್ರ ನಿಗಾ ಘಟಕ (ಐಸಿಯು) ಹಾಸಿಗೆಗಳ ಸಂಖ್ಯೆಯನ್ನು ದ್ವಿಗುಣಗೊಳಿಸಲಾಗುತ್ತಿದೆ.

ರಾಜ್ಯದಲ್ಲಿ ಈವರೆಗೆ ಪತ್ತೆಯಾದ ಕೋವಿಡ್ ಪ್ರಕರಣಗಳಲ್ಲಿ ಶೇ 42.64ರಷ್ಟು ಪ್ರಕರಣಗಳು ಬೆಂಗಳೂರಿನಲ್ಲಿಯೇ ವರದಿಯಾಗಿವೆ. ಅದೇ ರೀತಿ, ಮೃತಪಟ್ಟವರಲ್ಲಿ ಶೇ 44.52ರಷ್ಟು ಮಂದಿ ಇಲ್ಲಿಯವರೇ ಆಗಿದ್ದಾರೆ. ಮಾರ್ಚ್ ಮೂರನೇ ವಾರದ ಬಳಿಕ ಸೋಂಕಿತರ ಸಂಖ್ಯೆ ಏರಿಕೆ ಕಂಡಿದ್ದರಿಂದ ನಗರದ ಆಸ್ಪತ್ರೆಗಳಲ್ಲಿ ಐಸಿಯು ಹಾಸಿಗೆಗಳ ಕೊರತೆ ಎದುರಾಗಿ, ಸೋಂಕಿತರು ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆದಾಟ ನಡೆಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿತ್ತು. ಇದರಿಂದ ಮರಣ ಪ್ರಮಾಣ ದರ ಏರಿಕೆಯಾಗಿತ್ತು.



ಇಂದಿರಾಗಾಂಧಿ ಮಕ್ಕಳ ಆಸ್ಪತ್ರೆ

ನಗರದಲ್ಲಿ ಒಟ್ಟು 25 ಲಕ್ಷ ಮಕ್ಕಳಿದ್ದಾರೆ. ಡಾ.ದೇವಿಪ್ರಸಾದ್ ಶೆಟ್ಟಿ ನೇತೃತ್ವದ 18 ಮಂದಿ ತಜ್ಞ ವೈದ್ಯರ ಸಮಿತಿಯು ಸರ್ಕಾರಕ್ಕೆ ಈಗಾಗಲೇ ಪ್ರಾಥಮಿಕ ವರದಿ ಸಲ್ಲಿಸಿದೆ. ಬೆಂಗಳೂರಿನಲ್ಲಿಯೇ 45,958 ಮಕ್ಕಳು ಸೋಂಕಿತರಾಗುವ ಬಗ್ಗೆ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಈ ನಿಟ್ಟಿನಲ್ಲಿ ರಾಜ್ಯದಲ್ಲಿಯೇ ಅತಿ ದೊಡ್ಡ ಮಕ್ಕಳ ಆಸ್ಪತ್ರೆಯಾದ ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯು ವೈದ್ಯಕೀಯ ವ್ಯವಸ್ಥೆಯನ್ನು ಮೇಲ್ದರ್ಜೆಗೆ ಏರಿಕೆ ಮಾಡಿಕೊಳ್ಳಲಾರಂಭಿಸಿದೆ.

ಪ್ರಜಾವಾಣಿ ವಿಶೇಷ

ಐಸಿಯು ಹಾಸಿಗೆ ಆದ್ಯತೆ: ಸಂಸ್ಥೆಯಲ್ಲಿ 500 ಹಾಸಿಗೆಗಳಿವೆ. ಇದರಲ್ಲಿ 300 ಹಾಸಿಗೆಗಳನ್ನು ಮಕ್ಕಳ ಚಿಕಿತ್ಸೆಗೆ, 150 ಹಾಸಿಗೆಗಳನ್ನು ಶಸ್ತ್ರಚಿಕಿತ್ಸೆಗೆ ಹಾಗೂ ಉಳಿದ ಹಾಸಿಗೆಗಳನ್ನು ತಾಯಂದಿರ ಚಿಕಿತ್ಸೆಗೆ ಬಳಸಲಾಗುತ್ತಿದೆ. ಸದ್ಯ 50 ಐಸಿಯು ಹಾಗೂ ವೆಂಟಿಲೇಟರ್ ಸಹಿತ ಐಸಿಯು ಹಾಸಿಗೆಗಳು ಇವೆ. ಈ ಸಂಖ್ಯೆಯನ್ನು ನೂರಕ್ಕೆ ಏರಿಸಲಾಗುತ್ತಿದೆ. ಎಚ್‌ಡಿಯು, ಎನ್‌ಐಸಿಯು ಹಾಸಿಗೆಗಳ ಸಂಖ್ಯೆಯನ್ನೂ ಹೆಚ್ಚಳ ಮಾಡಲಾಗುತ್ತಿದೆ.

ಈ ಕಾರ್ಯಕ್ಕೆ ಸಿಐಐ ಸಂಸ್ಥೆ ಕೂಡ ಕೈಜೋಡಿಸಿದ್ದು, ಕಾರ್ಪೊರೇಟ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ನಿಧಿ (ಸಿಎಸ್‌ಆರ್) ಅಡಿಯಲ್ಲಿ 40 ಐಸಿಯು ಹಾಸಿಗೆಗಳನ್ನು ರೂಪಿಸಲು ನೆರವು ನೀಡುತ್ತಿದೆ. ಮಕ್ಕಳಲ್ಲಿ ಕಾಣಿಸಿಕೊಳ್ಳುತ್ತಿರುವ ಬಹು ಅಂಗಾಂಗ ಉರಿಯೂತ ಸಮಸ್ಯೆಗೆ (ಮಲ್ಟಿಸಿಸ್ಟಮ್ ಇನ್‌ಫ್ಲಮೇಟರಿ ಸಿಂಡ್ರೋಮ್) ಸಂಸ್ಥೆಯನ್ನು ನೋಡಲ್ ಕೇಂದ್ರವನ್ನಾಗಿ ಗುರುತಿಸಲಾಗಿದೆ.

‘ಕೋವಿಡ್‌ನ ಸೌಮ್ಯ ಮತ್ತು ಮಧ್ಯಮ ಸ್ವರೂಪದ ಲಕ್ಷಣಗಳು ಕಾಣಿಸಿಕೊಳ್ಳುತ್ತಿರುವುದರಿಂದ ಮಕ್ಕಳು ಬೇಗ ಚೇತರಿಸಿಕೊಳ್ಳುತ್ತಿದ್ದಾರೆ. ಮೂರನೇ ಅಲೆಯಲ್ಲಿ ವೈರಾಣು ಯಾವ ರೀತಿ ರೂಪಾಂತರಗೊಂಡು, ಪರಿಣಾಮ ಬೀರುತ್ತದೆ ಎಂಬುದರ ಬಗ್ಗೆ ನಿಖರವಾಗಿ ಈಗಲೇ ಹೇಳಲು ಸಾಧ್ಯವಿಲ್ಲ. ಆದರೂ ಈಗಿನಿಂದಲೇ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ’ ಎಂದು ಸಂಸ್ಥೆಯ ನಿರ್ದೇಶಕ ಡಾ. ಸಂಜಯ್ ಕೆ.ಎಸ್. ತಿಳಿಸಿದರು.

ಆರೈಕೆ– ವೈದ್ಯರಿಗೆ ತರಬೇತಿ

ಕೋವಿಡ್ ಪೀಡಿತ ನವಜಾತ ಶಿಶುಗಳು, ಮಕ್ಕಳ ಆರೈಕೆ ಬಗ್ಗೆ ವೈದ್ಯರು ಹಾಗೂ ಆರೋಗ್ಯ ಸಿಬ್ಬಂದಿಗೆ ತರಬೇತಿ ನೀಡಲು ಸಂಸ್ಥೆ ಯೋಜನೆ ರೂಪಿಸಿದೆ. ನಗರದಲ್ಲಿ ಮಕ್ಕಳ ತಜ್ಞರ ಕೊರತೆ ಇರುವ ಕಾರಣ ಇತರ ವೈದ್ಯರಿಗೆ ಕೂಡ ತರಬೇತಿ ನೀಡಲಾಗುತ್ತದೆ. ಇದಕ್ಕೆ ಸಂಬಂಧಿಸಿದಂತೆ ತಜ್ಞ ವೈದ್ಯರ ತಂಡ ರಚಿಸಲಾಗುತ್ತಿದೆ. ಮಕ್ಕಳನ್ನು ಯಾವ ರೀತಿ ನಿರ್ವಹಣೆ ಮಾಡಬೇಕು, ಅವರಿಗೆ ನೀಡುವ ಔಷಧದ ಪ್ರಮಾಣ, ಆರೈಕೆ ವಿಧಾನ, ವೈದ್ಯಕೀಯ ಆಮ್ಲಜನಕ ಒದಗಿಸುವಿಕೆ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಪ್ರಾಯೋಗಿಕ ತರಬೇತಿ ನೀಡಲು ಸಂಸ್ಥೆ ಸಿದ್ಧತೆ ನಡೆಸಿದೆ.



ಒಂದು ವೇಳೆ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಗಂಭೀರವಾಗಿ ಅಸ್ವಸ್ಥರಾಗುವ ಸೂಚನೆ ಸಿಕ್ಕರೆ ಐಸಿಯು ಹಾಸಿಗೆಗಳ ಸಂಖ್ಯೆಯನ್ನು ಮತ್ತಷ್ಟು ವಿಸ್ತರಿಸಲಾಗುತ್ತದೆ

ಡಾ. ಸಂಜಯ್ ಕೆ.ಎಸ್.

ಐಜಿಐಸಿಎಚ್ ನಿರ್ದೇಶಕ

ಮನೋವಿಜ್ಞಾನ ಪ್ರಾಧ್ಯಾಪಕರ ಹುದ್ದೆ ಪರಿವರ್ತನೆ: ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಪದವಿ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಕೊರತೆಯಿಂದ ಕಾರ್ಯಭಾರ ಇಲ್ಲದಿರುವ ಮನೋವಿಜ್ಞಾನ ವಿಷಯದ ಪ್ರಾಧ್ಯಾಪಕ ಹುದ್ದೆಗಳನ್ನು ಸಸ್ಯವಿಜ್ಞಾನ ಮತ್ತು ಪ್ರಾಣಿವಿಜ್ಞಾನ ವಿಷಯಗಳಿಗೆ ಪರಿವರ್ತಿಸಲು ಮುಂದಾಗಿರುವ ಕಾಲೇಜು ಶಿಕ್ಷಣ ಇಲಾಖೆಯ ಕ್ರಮಕ್ಕೆ ಹುದ್ದೆಯ ಆಕಾಂಕ್ಷಿಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ ‘ಪಿವಿ ಬ್ರ್ಯಾಂಡ್ ಸ್ಪಾಟ್’ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.



ಲಸಿಕೆಗೆ ಸರದಿ

ಕೋವಿಡ್ ಲಸಿಕೆ ಹಾಕಿಸಿಕೊಳ್ಳಲು ಮಲ್ಲೇಶ್ವರದ ಮಾದರಿ ಲಸಿಕಾ ಕೇಂದ್ರದ ಆವರಣದಲ್ಲಿ ಜನತೆ ಶುಕ್ರವಾರ ಸಾಲುಗಟ್ಟಿ ನಿಂತಿದ್ದರು – ಪ್ರಜಾವಾಣಿ ಚಿತ್ರ

ವಾರಾಂತ್ಯ ಕರ್ಫ್ಯೂ ಸಡಿಲಿಕೆ ಚಿಂತನೆ

ನಿರ್ಬಂಧಗಳೊಂದಿಗೆ ಬೃಹತ್ ಮಾರುಕಟ್ಟೆ, ಚಿತ್ರಮಂದಿರ ತೆರೆಯಲು ನಿರ್ಧಾರ

ಪ್ರಜಾವಾಣಿ ವಾರ್ತೆ



ಗೌರವ್ ಗುಪ್ತ

ಬೆಂಗಳೂರು: ‘ನಗರದಲ್ಲಿ ಕೊರೊನಾ ಸೋಂಕು ಪ್ರಕರಣಗಳು ಕಡಿಮೆಯಾಗುತ್ತಿವೆ. ಹೀಗಾಗಿ, ವಾರಾಂತ್ಯ ಮತ್ತು ರಾತ್ರಿ ಕರ್ಫ್ಯೂವಿನಲ್ಲಿ ಕೆಲವು ಸಡಿಲಿಕೆ ತರುವ ಚಿಂತನೆ ಇದೆ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಹೇಳಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಕರ್ಫ್ಯೂ ಸಡಿಲಿಕೆ ಬಗ್ಗೆ ಮುಖ್ಯಮಂತ್ರಿಯವರೊಂದಿಗಿನ ಸಭೆಯ ನಂತರ ತೀರ್ಮಾನಿಸಲಾಗುತ್ತಿದೆ. ಯಾವ ಪ್ರದೇಶದಲ್ಲಿ ಸಡಿಲಿಕೆ ಇರಬೇಕು ಎಂಬ ಬಗ್ಗೆ ಅಧಿಕಾರಿಗಳ ಮಟ್ಟದಲ್ಲಿಯೇ ತೀರ್ಮಾನ ತೆಗೆದುಕೊಳ್ಳಲು ಹೇಳಲಾಗುತ್ತದೆ’ ಎಂದು ತಿಳಿಸಿದರು.

‘ನಗರದಲ್ಲಿ ಎಲ್ಲ ಚಟುವಟಿಕೆಗಳನ್ನು ಆರಂಭಿಸಬೇಕು ಎಂಬ ಮನವಿ ಇದೆ. ಮೊದಲ ಹಂತದಲ್ಲಿ ಕೆಲವು ನಿರ್ಬಂಧಗಳೊಂದಿಗೆ ಮಾಲ್‌ಗಳನ್ನು, ಎರಡನೇ ಹಂತದಲ್ಲಿ ಚಿತ್ರಮಂದಿರಗಳನ್ನು ತೆರೆಯಲು ಅವಕಾಶ ನೀಡಲು ಯೋಜಿಸಲಾಗಿದೆ’ ಎಂದೂ ಹೇಳಿದರು.

‘ನಗರದಲ್ಲಿ ಶೇ 1ಕ್ಕಿಂತ ಕಡಿಮೆ ಪಾಸಿಟಿವಿಟಿ ದರ ಇದೆ. ನಿತ್ಯ 65 ಸಾವಿರಕ್ಕೂ ಹೆಚ್ಚು ಕೋವಿಡ್ ಪರೀಕ್ಷೆ ಮಾಡಲಾಗುತ್ತಿದೆ. ನಿತ್ಯ 70 ಸಾವಿರದಿಂದ 80 ಸಾವಿರ ಜನರಿಗೆ ಲಸಿಕೆ ನೀಡಲಾಗುತ್ತಿದೆ. ಲಸಿಕೆ ಕೊರತೆ ಇಲ್ಲ’ ಎಂದೂ ಹೇಳಿದರು.

‘ಬೃಹತ್ ಮಾರುಕಟ್ಟೆಗಳನ್ನು ತೆರೆಯುವುದಕ್ಕೆ ಸಂಬಂಧಿಸಿದಂತೆ ಪರಿಶೀಲನೆ ನಡೆಯುತ್ತಿದೆ. ಇಂತಹ ಮಾರುಕಟ್ಟೆಗಳ ಬಯಲು ಪ್ರದೇಶದಲ್ಲಿ ವ್ಯಾಪಾರ–ವಹಿವಾಟಿಗೆ ಅವಕಾಶ ನೀಡಲಾಗುತ್ತದೆ. ಚಿಕ್ಕಪೇಟೆ ಕಡೆಗಳಲ್ಲಿ ಕೆಲವು ಕಡೆ ಅಂಗಡಿಗಳನ್ನು ತೆರೆಯಲಾಗಿದೆ. ಉಳಿದಂತೆ ಪೂರ್ಣವಾಗಿ ತೆರೆಯುವ ಬಗ್ಗೆ ಪುನರ್ ಅವಲೋಕನ ನಡೆಸಲಾಗುವುದು’ ಎಂದು ಗೌರವ್ ಗುಪ್ತ ಹೇಳಿದರು.

ಪತ್ತೆಯಾಗದ ಸೋಂಕಿತರು: ‘ಕೆಲವು ಸೋಂಕಿತರು ತಪ್ಪು ವಿಳಾಸ ನೀಡಿದ್ದಾರೆ. ಹಲವು ಸಂಪರ್ಕಕ್ಕೆ ಸಿಗುತ್ತಿಲ್ಲ. 3 ತಿಂಗಳು ಕಳೆದರೂ ಸಂಪರ್ಕ ಸಾಧ್ಯವಾಗುತ್ತಿಲ್ಲ. ಇಂತಹ ಪ್ರಕರಣಗಳನ್ನು ಈವರೆಗೆ ಸಕ್ರಿಯ ಪ್ರಕರಣಗಳು ಎಂದು ಪರಿಗಣಿಸಲಾಗುತ್ತಿತ್ತು. ಇನ್ನು ಮುಂದೆ, ಇವುಗಳನ್ನು ಸಕ್ರಿಯ ಪ್ರಕರಣಗಳಿಂದ ತೆಗೆಯಲಾಗುವುದು’ ಎಂದರು.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	18.36 ಕೋಟಿ ▲	3.04 ಕೋಟಿ
ಸಕ್ರಿಯ ಪ್ರಕರಣ	1.15 ಕೋಟಿ ▼	4.90 ಲಕ್ಷ ▼
ಗುಣಮುಖ	16.81 ಕೋಟಿ ▲	2.95 ಕೋಟಿ
ಸಾವು	39.75 ಲಕ್ಷ ▲	4.00 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	4.32 ಲಕ್ಷ ▲	41,061 ▼
ಗುಣಮುಖ	3.62 ಲಕ್ಷ ▼	53,826 ▼
ಸಾವು	8,316 ▼	695 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಅಮೆರಿಕ	ಬ್ರೆಜಿಲ್	ರಷ್ಯಾ
16,949 ▲	63,140 ▲	23,543 ▲

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ಬ್ರೆಜಿಲ್	ರಷ್ಯಾ
48.88 ▼	11.70 ▼	3.84 ▲

(* ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು)

ಮಹಾರಾಷ್ಟ್ರ	1.22 ಲಕ್ಷ
ದೆಹಲಿ	24,983 ▲
ತಮಿಳುನಾಡು	32,818 ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	60.79 ▲
ಕೇರಳ	29.49 ▲
ತಮಿಳುನಾಡು	24.88 ▲

ಪ್ರಜಾವಾಣಿ ಗ್ರಾಫಿಕ್ಸ್

ನಗರದ ಕೋವಿಡ್ ಅಂಕಿ–ಅಂಶ

ಒಟ್ಟು ಪ್ರಕರಣಗಳು (12,14,235 ನಿನ್ನೆಯ ವಿವರ)	12,14,828 ▲
ಸಕ್ರಿಯ ಪ್ರಕರಣಗಳು	23,424 ▼
ಗುಣಮುಖರಾದವರು	11,75,748 ▲
ಒಟ್ಟು ಸಾವು	15,655 ▲

ಶುಕ್ರವಾರದ ಏರಿಕೆ

ಹೊಸ ಪ್ರಕರಣ	593 ▼
ಗುಣಮುಖ	10,674 ▼
ಸಾವು	11 ▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಸಿ. ಶಿಖಾ ಬಿಎಂಟಿಸಿ ಎಂ.ಡಿ

ಬೆಂಗಳೂರು: ವಾಣಿಜ್ಯ ತೆರಿಗೆ ಆಯುಕ್ತರಾದ ಸಿ.ಶಿಖಾ ಅವರಿಗೆ ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಯ ಜವಾಬ್ದಾರಿಯನ್ನು ಹೆಚ್ಚುವರಿ ನೀಡಲಾಗಿದೆ.

ಕೊಪ್ಪಳ ಜಿಲ್ಲಾಧಿಕಾರಿ ಸುರಾಲ್‌ಕರ್ ವಿಕಾಸ್ ಕಿಶೋರ್ ಅವರಿಗೆ ಕೊಪ್ಪಳ ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

ವಿಳಂಬವಾದ ಲಾಕ್‌ಡೌನ್: ಹೆಚ್ಚಿದ ಪ್ರಕರಣ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್–19 ಎರಡನೇ ಅಲೆಯ ಸಂದರ್ಭದಲ್ಲಿ ಮಾರ್ಚ್ ತಿಂಗಳ ಮಧ್ಯದಲ್ಲೇ ಲಾಕ್‌ಡೌನ್ ಘೋಷಿಸಿದ್ದರೆ ಸುಮಾರು 1.3 ಕೋಟಿ ಪ್ರಕರಣಗಳು ಕಡಿಮೆಯಾಗುತ್ತಿದ್ದವು ಮತ್ತು 1.10 ಲಕ್ಷ ಸಾವುಗಳು ಸಂಭವಿಸುತ್ತಿರಲಿಲ್ಲ ಎನ್ನುವುದು ಅಧ್ಯಯನದಿಂದ ತಿಳಿದು ಬಂದಿದೆ.

ಬಹುತೇಕ ರಾಜ್ಯಗಳು ತಡವಾಗಿ ಲಾಕ್‌ಡೌನ್ ಘೋಷಿಸಿದ್ದರಿಂದ ಪ್ರಕರಣಗಳ ಸಂಖ್ಯೆ ಹೆಚ್ಚಾಗಲು ಕಾರಣವಾಯಿತು ಎಂದು ಅಧ್ಯಯನ ವರದಿಯಲ್ಲಿ ತಿಳಿಸಲಾಗಿದೆ.

ಮಿಷಿಗನ್ ವಿಶ್ವವಿದ್ಯಾಲಯದ ಸಾಂಕ್ರಾಮಿಕ ರೋಗಗಳ ತಜ್ಞ ಭ್ರಮಾರ್ ಮುಖರ್ಜಿ ಅವರು, ಕೋವಿಡ್–19 ಎರಡನೆ ಅಲೆಯ ಬಗ್ಗೆ ಅಧ್ಯಯನ ನಡೆಸಿದ್ದಾರೆ.

2020ರ ಡಿಸೆಂಬರ್ ಮತ್ತು 2021ರ ಜನವರಿಯಲ್ಲಿ ಕಡಿಮೆ ಪ್ರಕರಣಗಳು ಪತ್ತೆಯಾಗಿದ್ದವು. ಆದರೆ, ಮಹಾರಾಷ್ಟ್ರ, ಪಂಜಾಬ್ ಮತ್ತು ಛತ್ತೀಸಗಡದಲ್ಲಿ 2021ರ ಫೆಬ್ರುವರಿಯಿಂದಲೇ ಪ್ರಕರಣಗಳ ಸಂಖ್ಯೆಯಲ್ಲಿ ಏರಿಕೆಯಾಗತೊಡಗಿತು. ಆದರೂ, ಕಠಿಣ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಲಿಲ್ಲ ಎಂದು ವರದಿ ತಿಳಿಸಿದೆ.

ಮಹಾರಾಷ್ಟ್ರದಲ್ಲಿ ಏಪ್ರಿಲ್ 14ರಂದು ಲಾಕ್‌ಡೌನ್ ಜಾರಿಗೊಳಿಸಲಾಯಿತು. ಆದರೆ, ಇದು ತಡವಾಗಿತ್ತು. ಈ ಸಮಯಕ್ಕೆ ದೇಶದಾದ್ಯಂತ ಪ್ರಕರಣಗಳ ಸಂಖ್ಯೆಯಲ್ಲಿ ಏರಿಕೆಯಾಗಿತ್ತು.

ಮಾರ್ಚ್ ಮಧ್ಯದಲ್ಲಿ ಲಾಕ್‌ಡೌನ್ ಜಾರಿಗೊಳಿಸಿದ್ದರೆ ಪ್ರಕರಣಗಳ ಸಂಖ್ಯೆಯಲ್ಲಿ ಇಳಿಕೆಯಾಗುತ್ತಿತ್ತು ಎಂದು ಮುಖರ್ಜಿ ತಿಳಿಸಿದ್ದಾರೆ.

ರೇವಾ: 3,830 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

ಪ್ರಜಾವಾಣಿ ವಾರ್ತೆ

ಯಲಹಂಕ: ರೇವಾ ವಿಶ್ವವಿದ್ಯಾಲಯದ ಎಂಜಿನಿಯರಿಂಗ್ ಸೇರಿದಂತೆ ವಿವಿಧ ವಿಷಯಗಳಲ್ಲಿ ಪದವಿ ಪೂರ್ಣಗೊಳಿಸಿದ 3,830 ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ಶುಕ್ರವಾರ ಪದವಿ ಪ್ರದಾನ ಮಾಡಲಾಯಿತು.

ಈ ಬಾರಿಯ ಕಾರ್ಯಕ್ರಮವನ್ನು ಕೋವಿಡ್ ಕಾರಣದಿಂದಾಗಿ ಆನ್‌ಲೈನ್ ವೇದಿಕೆಯಲ್ಲಿ ಹಮ್ಮಿಕೊಳ್ಳಲಾಗಿತ್ತು. ವಿವಿಧ ರಾಜ್ಯಗಳು ಹಾಗೂ ವಿದೇಶಗಳಿಂದ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಶೈಕ್ಷಣಿಕವಾಗಿ ಅತ್ಯುತ್ತಮ ಸಾಧನೆ ಮಾಡಿದ್ದ 45 ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು.



ರೇವಾ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ಪಿ.ಶ್ಯಾಮರಾಜು ಕಾರ್ಯಕ್ರಮ ಉದ್ಘಾಟಿಸಿದರು. ಕುಲಪತಿ ಡಾ.ಎಂ.ಧನಂಜಯ, ಕುಲಸಚಿವ ಡಾ.ಎನ್.ರಮೇಶ್, ಪರೀಕ್ಷಾ ನಿಯಂತ್ರಣ ವಿಭಾಗದ ಮುಖ್ಯಸ್ಥೆ ಡಾ.ಜಿ.ಬೀನಾ, ವಾಣಿಜ್ಯ ಮತ್ತು ನಿರ್ವಹಣೆ ವಿಭಾಗದ ನಿರ್ದೇಶಕಿ ಡಾ.ಶುಭಾ ಇದ್ದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ರೇವಾ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ಪಿ. ಶ್ಯಾಮರಾಜು,‘ಸಂಸ್ಥೆಯಿಂದ ಶಿಕ್ಷಣ ಪಡೆದು, ಹೊರ ಹೋಗಿರುವ ಸಾಕಷ್ಟು ವಿದ್ಯಾರ್ಥಿಗಳು ಸಮಾಜದ ಅತ್ಯುತ್ತಮ ಹುದ್ದೆಗಳನ್ನು ಅಲಂಕರಿಸಿದ್ದಾರೆ. ಇಲ್ಲಿನ ಮೂಲ ಸೌಕರ್ಯಗಳು, ಅಧ್ಯಯನಕ್ಕೆ ಪೂರಕವಾದ ವಾತಾವರಣ, ಗುಣಮಟ್ಟದ ಶಿಕ್ಷಣಕ್ಕೆ ಆದ್ಯತೆ, ವಿದ್ಯಾರ್ಥಿಗಳ ನಿರಂತರಪ್ರಯತ್ನ ಹಾಗೂ ಶಿಕ್ಷಕರ ಕಾಳಜಿಯೇ ಇದಕ್ಕೆ ಕಾರಣ’ ಎಂದರು.

‘ಪದವಿ ಪಡೆಯುವುದು ಮುಖ್ಯವಲ್ಲ. ಜೀವನದಲ್ಲಿ ಶಿಸ್ತು ಮತ್ತು ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡು, ಸಮಾಜದಲ್ಲಿ ಸಂಕಷ್ಟದಲ್ಲಿನ ಜನರಿಗಾಗಿ ಶ್ರಮಿಸಬೇಕು. ಉದ್ಯೋಗಿಗಳಾದರೆ ಸಾಲದು, ಉದ್ಯೋಗಗಳನ್ನು ನೀಡುವ ಉದ್ಯಮಿಗಳಾಗಿ ಬೆಳೆಯಬೇಕು’ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಒಂದೇ ತಿಂಗಳಲ್ಲಿ ಎರಡು ಸೆಮಿಸ್ಟರ್ ಪರೀಕ್ಷೆ: ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಫಾರ್ಮಸಿ ಹಾಗೂ ಪ್ಯಾರಾ ಮೆಡಿಕಲ್ ವಿದ್ಯಾರ್ಥಿಗಳಿಗೆ ಹಿಂದಿನ ಸೆಮಿಸ್ಟರ್‌ನ ಪರೀಕ್ಷೆಗಳನ್ನು ರದ್ದುಗೊಳಿಸಿ, ಆಂತರಿಕ ಮೌಲ್ಯಮಾಪನ ಅಥವಾ ವೈಜ್ಞಾನಿಕ ಮಾನದಂಡಗಳ ಮೌಲ್ಯಮಾಪನ ನಡೆಸಬೇಕು’ ಎಂದು ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್ (ಎಐಡಿಎಸ್‌ಒ) ಸಂಘಟನೆ ಆಗ್ರಹಿಸಿದೆ.

ಈ ಸಂಬಂಧ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಸಂಘಟನೆ ಪತ್ರ ಬರೆದಿದೆ.

‘ಕೋವಿಡ್ ಬಿಕ್ಕಟ್ಟಿನಿಂದಾಗಿ ಹಿಂದಿನ ಸೆಮಿಸ್ಟರ್‌ಗಳ ಪರೀಕ್ಷೆಗಳನ್ನು ರದ್ದು ಮಾಡಲಾಗಿತ್ತು. ವಿದ್ಯಾರ್ಥಿಗಳೂ ಈಗ ಮುಂದಿನ ಸೆಮಿಸ್ಟರ್‌ನಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಈ ಹಿಂದಿನ ಸೆಮಿಸ್ಟರ್‌ನ ಪರೀಕ್ಷೆ ನಡೆಸುವ ದಿಢೀರ್ ನಿರ್ಧಾರ ಸರಿಯಲ್ಲ. ಇದರಿಂದ ವಿದ್ಯಾರ್ಥಿಗಳ ಮೇಲೆ ಹೊರೆ ಹೆಚ್ಚಾಗಲಿದೆ’ ಎಂದು ಎಐಡಿಎಸ್‌ಒ ರಾಜ್ಯ ಘಟಕದ ಅಧ್ಯಕ್ಷೆ ಕೆ.ಎಸ್.ಅಶ್ವಿನಿ ಕಳವಳ ವ್ಯಕ್ತಪಡಿಸಿದರು.

‘ಒಂದೇ ತಿಂಗಳಲ್ಲಿ ಎರಡು ಸೆಮಿಸ್ಟರ್‌ಗಳ ಪರೀಕ್ಷೆ ನಡೆಸುವ ನಿರ್ಧಾರವನ್ನು ಕೂಡಲೇ ಕೈಬಿಡಬೇಕು. ಶಿಕ್ಷಣ ತಜ್ಞರು, ಪೋಷಕರು, ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳ ಜೊತೆ ಚರ್ಚಿಸಿ, ಶೈಕ್ಷಣಿಕ ವೇಳಾಪಟ್ಟಿ, ಪರೀಕ್ಷೆ, ಮೌಲ್ಯಮಾಪನ ಸಂಬಂಧ ವೈಜ್ಞಾನಿಕ ನೀತಿ ರೂಪಿಸಬೇಕು’ ಎಂದು ಸಲಹೆ ನೀಡಿದರು.

‘ಪರೀಕ್ಷೆಗಳಿಗೆ ಹಾಜರಾಗಲು ಸಾಧ್ಯವಿಲ್ಲದ ವಿದ್ಯಾರ್ಥಿಗಳಿಗೆ ಪರ್ಯಾಯ ವ್ಯವಸ್ಥೆಗಳನ್ನು ಕಲ್ಪಿಸಬೇಕು’ ಎಂದೂ ಒತ್ತಾಯಿಸಿದರು.

ಎಎಪಿಯಿಂದ ‘ಶುಲ್ಕ ಇಳಿಸಿ; ಮಕ್ಕಳ ಭವಿಷ್ಯ ಉಳಿಸಿ’ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಉಂಟಾಗಿರುವ ಶೈಕ್ಷಣಿಕ ಗೊಂದಲಗಳ ನಿವಾರಣೆಗಾಗಿ ಸರ್ಕಾರದ ಮೇಲೆ ಒತ್ತಡ ಹೇರುವ ಉದ್ದೇಶದಿಂದ ಆಮ್ ಆದ್ಮಿ ಪಕ್ಷವು (ಎಎಪಿ) ‘ಶುಲ್ಕ ಇಳಿಸಿ; ಮಕ್ಕಳ ಭವಿಷ್ಯ ಉಳಿಸಿ’ ಅಭಿಯಾನ ಹಮ್ಮಿಕೊಂಡಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪಕ್ಷದ ಬೆಂಗಳೂರು ನಗರ ಅಧ್ಯಕ್ಷ ಮೋಹನ್ ದಾಸರಿ, ‘ಖಾಸಗಿ ಶಾಲೆಗಳ ಶುಲ್ಕವನ್ನು ಶೇ 30ರಷ್ಟು ಇಳಿಸಿ ಪೋಷಕರಿಗೆ ಸಹಾಯ ಮಾಡಬೇಕು. ಖಾಸಗಿ ಶಾಲೆಗಳ ಶಿಕ್ಷಕರಿಗೆ ಸಂಬಳ ಕೊಟ್ಟು ಶಾಲೆಗಳು ಪುನರಾರಂಭವಾಗಲು ಅನುವು ಮಾಡಿಕೊಡಬೇಕು. ಶುಲ್ಕ ನಿಯಂತ್ರಣ ಪ್ರಾಧಿಕಾರ ರಚಿಸಬೇಕು’ ಎಂದು ಒತ್ತಾಯಿಸಿದರು.

‘ಸರ್ಕಾರಿ ಶಾಲೆಗಳ ಸ್ಥಿತಿ ಶೋಚನೀಯವಾಗಿದ್ದು, ಪೋಷಕರು ಖಾಸಗಿ ಶಾಲೆಗಳ ಕಡೆಗೆ ಮುಖಮಾಡಿದ್ದಾರೆ. ಅವರು ಕೇಳಿದಷ್ಟು ಶುಲ್ಕ ಕೊಡುವಂತಾಗಿದೆ. ಈ ಕುರಿತು ಸರ್ಕಾರದ ಗಮನ ಸೆಳೆಯುವ ಉದ್ದೇಶದಿಂದ ಈ ಅಭಿಯಾನ ಆಯೋಜಿಸಲಾಗಿದೆ’ ಎಂದರು.

‘ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಪೃಥ್ವಿ ರೆಡ್ಡಿ ಅವರು ಇದೇ 5ರಂದು ಬೆಳಿಗ್ಗೆ 9 ಗಂಟೆಗೆ ಅಭಿಯಾನಕ್ಕೆ ಚಾಲನೆ ನೀಡಲಿದ್ದಾರೆ. ಸಂಪಂಗಿರಾಮನಗರ ವಾರ್ಡ್‌ನಲ್ಲಿ ನಿಗದಿಯಾಗಿರುವ ಕಾರ್ಯಕ್ರಮದಲ್ಲಿ ಪ್ರಚಾರ ಸಮಿತಿ ಅಧ್ಯಕ್ಷೆ ಶಾಂತಲಾ ದಾಮ್ಲೆ ಅವರೂ ಪಾಲ್ಗೊಳ್ಳಲಿದ್ದಾರೆ. ಅಭಿಯಾನದ ಅಂಗವಾಗಿ ಪಕ್ಷದ ಕಾರ್ಯಕರ್ತರು ರಾಜ್ಯದ ಎಲ್ಲ ಜಿಲ್ಲೆ ಹಾಗೂ ತಾಲ್ಲೂಕುಗಳಲ್ಲಿ ಮನೆ ಮನೆಗೆ ತೆರಳಿ ಕನಿಷ್ಠ 5 ಲಕ್ಷ ಮಂದಿಯ ಸಹಿ ಸಂಗ್ರಹಿಸಲಿದ್ದಾರೆ. 15 ದಿನ ಈ ಅಭಿಯಾನ ನಡೆಯಲಿದೆ. ಇದರ ಭಾಗವಾಗಲು 7669100500ಗೆ ಮಿಸ್ ಕಾಲ್ ನೀಡಿ’ ಎಂದು ಮನವಿ ಮಾಡಿದರು.

ಪಕ್ಷದ ರಾಜ್ಯ ಮಾಧ್ಯಮ ಸಂಚಾಲಕ ಜಗದೀಶ್ ಸದಂ, ಪ್ರಕಾಶ್, ಉಷಾ ಮೋಹನ್, ವಿಜಯ್ ಶಾಸ್ತ್ರಿಮಠ್ ಇದ್ದರು.

ಪರವಾನಗಿ ಪಡೆಯದ ಬಂಕ್: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: ಗ್ರಾಮ ಪಂಚಾಯಿತಿಯಿಂದ ಪರವಾನಗಿ ಪಡೆಯದೇ ಕಾರ್ಯ ನಿರ್ವಹಿಸುತ್ತಿದ್ದ ಸಾಯಿ ಆಂಜನೇಯ ಪೆಟ್ರೋಲ್ ಬಂಕ್ ಕ್ರಮವನ್ನು ಖಂಡಿಸಿ ಶಿವಕೋಟೆ ಗ್ರಾಮ ಪಂಚಾಯಿತಿ ಸದಸ್ಯರು ಪ್ರತಿಭಟನೆ ನಡೆಸಿದರು.

ಗ್ರಾಮ ಪಂಚಾಯಿತಿಯಿಂದ ಪೆಟ್ರೋಲ್ ಬಂಕ್ ಪರವಾನಗಿ ಪಡೆಯುವ ತನಕ ಕೆಲಸ ನಿರ್ವಹಿಸಬಾರದು ಎಂದು ಶಿವಕೋಟೆ ಗ್ರಾಮಸ್ಥರು ಪಟ್ಟು ಹಿಡಿದಾಗ ಪೊಲೀಸರು ಬಂಕ್‌ನ್ನು ಮುಚ್ಚಿಸಿದರು.

‘ಶಿವಕೋಟೆ ಗ್ರಾಮದಿಂದ ಹೆಸರಘಟ್ಟ ಗ್ರಾಮಕ್ಕೆ ಹೋಗುವ ಮಾರ್ಗಮಧ್ಯೆ ಇರುವ ಈ ಬಂಕ್ ಪಂಚಾಯಿತಿಯಲ್ಲಿ ಯಾವುದೇ ಪರವಾನಗಿ ಪಡೆದಿಲ್ಲ. ರಿಜಿಸ್ಟ್ರರ್ ಅಂಚೆ ಮೂಲಕ ನೋಟಿಸ್ ನೀಡಿದರೂ ಯಾವುದೇ ಉತ್ತರ ಕೊಟ್ಟಿಲ್ಲ’ ಎಂದು ಮಾವಳ್ಳಿಪುರ ಗ್ರಾಮ ಪಂಚಾಯಿತಿ ಸದಸ್ಯ ಕೆಂಪಣ್ಣ ಆಕ್ರೋಶ ವ್ಯಕ್ತಪಡಿಸಿದರು.

‘ನಾಲ್ಕು ಗುಂಟೆ ಕೆರೆ ಜಾಗವನ್ನು ಒತ್ತುವರಿ ಮಾಡಿಕೊಂಡು ಬಂಕ್‌ಗೆ ರಸ್ತೆಯನ್ನು ನಿರ್ಮಿಸಲಾಗಿದೆ. ಈ ಬಗ್ಗೆ ಅಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿಲ್ಲ. ಬಂಡವಾಳಶಾಹಿಗಳ ತಾಳಕ್ಕೆ ಕುಣಿಯುತ್ತಿದ್ದಾರೆ’ ಎಂದು ಮತ್ಕೂರು ಗ್ರಾಮ ಪಂಚಾಯಿತಿ ಸದಸ್ಯ ಸಂಜೀವಪ್ಪ ದೂರಿದರು.



ಪೆಟ್ರೋಲ್ ಬಂಕ್ ಮಾಲೀಕರನ್ನು ಶಿವಕೋಟೆ ಗ್ರಾಮ ಪಂಚಾಯಿತಿ ಸದಸ್ಯರು ತರಾಟೆಗೆ ತೆಗೆದುಕೊಂಡು ಬಂಕ್ ಮುಚ್ಚಿಸಿದರು

ಚಿನ್ನದ ಸರ ಕಳವು: ಇಬ್ಬರ ಸೆರೆ

ಬೆಂಗಳೂರು: ಉತ್ತರ ವಿಭಾಗ ವ್ಯಾಪ್ತಿಯಲ್ಲಿ ಮಹಿಳೆಯರು ಹಾಗೂ ವೃದ್ಧರನ್ನು ಗುರಿಯಾಗಿಸಿಕೊಂಡು ಸರ ಕಳವು ಮಾಡುತ್ತಿದ್ದ ಆರೋಪದಡಿ ಇಬ್ಬರನ್ನು ಮಲ್ಲೇಶ್ವರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಪಾದರಾಯನಪುರ ಗೋರಿ ಪಾಳ್ಯದ ಇಬ್ರಾಹಿಂ ಪಾಷಾ ಅಲಿಯಾಸ್ ಕಾಲೂ (32) ಹಾಗೂ ಶಿವಾಜಿನಗರದ ಅಜರ್ ಪಾಷಾ (29) ಬಂಧಿತರು. ಅವರಿಂದ 223 ಗ್ರಾಂ ಚಿನ್ನಾಭರಣ ಹಾಗೂ 3ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ' ಎಂದು ಡಿಸಿಪಿ ಧರ್ಮೇಂದ್ರ ಕುಮಾರ್ ಮೀನಾ ಹೇಳಿದರು.

'ಆರೋಪಿಗಳು, ಪ್ರಕರಣವೊಂದರಲ್ಲಿ ಈ ಹಿಂದೆ ಜೈಲಿಗೆ ಹೋಗಿದ್ದರು. ಕೋವಿಡ್ ಲಾಕ್‌ಡೌನ್ ಕಾರಣದಿಂದಾಗಿ ಜಾಮೀನು ಪಡೆದು ಜೈಲಿನಿಂದ ಹೊರಗೆ ಬಂದಿದ್ದರು. ಸಂಚು ರೂಪಿಸಿ ದ್ವಿಚಕ್ರ ವಾಹನ ಕದಿಯುತ್ತಿದ್ದರು. ರಸ್ತೆಯಲ್ಲಿ ಓಡಾಡುತ್ತಿದ್ದ ಮಹಿಳೆಯರು ಹಾಗೂ ವೃದ್ಧರ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗುತ್ತಿದ್ದರು' ಎಂದೂ ತಿಳಿಸಿದರು.

ಬೆನ್ನಟ್ಟಿದ ಪೊಲೀಸರು: 'ಮಲ್ಲೇಶ್ವರದ 8ನೇ ಮುಖ್ಯರಸ್ತೆ ಬಳಿ ಗುರುವಾರ ಬೆಳಿಗ್ಗೆ ಪೊಲೀಸರು ಗಸ್ತು ತಿರುಗುತ್ತಿದ್ದರು. ಅದೇ ಮಾರ್ಗದಲ್ಲಿ ಹೊರಟಿದ್ದ ಆರೋಪಿಗಳು, ಪೊಲೀಸರನ್ನು ಕಂಡು ಪರಾರಿಯಾಗುತ್ತಿದ್ದಾಗ, ಪೊಲೀಸರು ಬೆನ್ನಟ್ಟಿ ಹಿಡಿದಿದ್ದಾರೆ' ಎಂದರು.

ಮಾಧ್ಯಮಗಳ ವಿರುದ್ಧ ನಗರ ಸಿವಿಲ್ ನ್ಯಾಯಾಲಯದಿಂದ ಸ್ಟೇ ತಂದ ಕೇಂದ್ರ ಸಚಿವ

ಮಾನಹಾನಿ ಸುದ್ದಿ ಪ್ರಕಟಿಸದಂತೆ ಡಿವಿಎಸ್ ತಡೆಯಾಜ್ಞೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮ್ಮ ಮಾನಕ್ಕೆ ಹಾನಿ ತರುವ ಯಾವುದೇ ಸುದ್ದಿಯನ್ನು ಪ್ರಕಟಿಸಬಾರದು ಎಂದು ಮಾಧ್ಯಮಗಳ ವಿರುದ್ಧ ಕೇಂದ್ರ ಸಚಿವ ಡಿ.ವಿ.ಸದಾನಂದ ಗೌಡ ಅವರು ಬೆಂಗಳೂರು ಸಿಟಿ ಸಿವಿಲ್ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿರುವುದು ಈಗ ಸಾರ್ವಜನಿಕ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.

ಕೇಂದ್ರ ಸಚಿವ ಸಂಪುಟ ಪುನರ್ ರಚನೆ ಸಂದರ್ಭದಲ್ಲಿ ತಮ್ಮ ವಿರುದ್ಧ ಅಪಪ್ರಚಾರ ನಡೆಸಬಹುದು ಎಂಬ ಕಾರಣಕ್ಕೆ ತಡೆಯಾಜ್ಞೆ ತಂದಿರುವ ಸಾಧ್ಯತೆ ಇದೆ ಎಂದು ಬಿಜೆಪಿ ಮೂಲಗಳು ಹೇಳಿವೆ.

ಈ ಹಿಂದೆ ಬಿಜೆಪಿಯ ರಮೇಶ ಜಾರಕಿಹೊಳಿ ವಿರುದ್ಧ ಸಿ.ಡಿ ಬಿಡುಗಡೆ ಮಾಡಿದ್ದರಿಂದ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕಾಯಿತು. ಅದರ ಬೆನ್ನಲ್ಲೇ ಹಲವು ಸಚಿವರು ತಮ್ಮ ವಿರುದ್ಧ ಸಿ.ಡಿ ಬಿಡುಗಡೆ ಆಗಬಹುದು ಎಂಬ ಭೀತಿಯಿಂದ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದರು. ಇದೀಗ ಸದಾನಂದ ಗೌಡ ಅವರು ಎಲ್ಲ ಪತ್ರಿಕೆ ಮತ್ತು ಸುದ್ದಿ ವಾಹಿನಿಗಳ ಹೆಸರಿನಲ್ಲಿ ತಡೆಯಾಜ್ಞೆ ತಂದಿದ್ದಾರೆ.

ಮಾರಕಾಸ್ತ್ರಗಳಿಂದ ಹೊಡೆದು ಕೊಲೆ

ಬೆಂಗಳೂರು: ಬನಶಂಕರಿ ದೇವಸ್ಥಾನ ಸಮೀಪದ ಮೆಟ್ರೊ ಪಿಲ್ಲರ್ ಬಳಿ ಮದನ್ ಎಂಬುವವರನ್ನು ಮಾರಕಾಸ್ತ್ರಗಳಿಂದ ಹೊಡೆದು ಕೊಲೆ ಮಾಡಲಾಗಿದ್ದು, ಈ ಸಂಬಂಧ ಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಲಕ್ಕಸಂದ್ರ ನಿವಾಸಿ ಮದನ್, ತರಕಾರಿ ಖರೀದಿಸಲೆಂದು ಶುಕ್ರವಾರ ಮಧ್ಯಾಹ್ನ 12 ಗಂಟೆ ಸುಮಾರಿಗೆ ಬೈಕ್‌ನಲ್ಲಿ ಬಂದಿದ್ದರು. ಅವರನ್ನು ಹಿಂಬಾಲಿಸಿಕೊಂಡು ಮೂರು ಬೈಕ್‌ನಲ್ಲಿ ಬಂದಿದ್ದ ದುಷ್ಕರ್ಮಿಗಳು, ಕೊಲೆ ಮಾಡಿ ಪರಾರಿಯಾಗಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'2018ರಲ್ಲಿ ಲಕ್ಕಸಂದ್ರದಲ್ಲಿ ವಿಜಿ ಎಂಬಾತನ ಕೊಲೆಯಾಗಿತ್ತು. ಆ ಪ್ರಕರಣ ದಲ್ಲಿ ಆರೋಪಿಗಳಿಗೆ ಮದನ್ ಸಹಾಯ ಮಾಡಿದ್ದನೆಂಬ ಸುದ್ದಿ ಇತ್ತು. ಇದೇ ವೈಷಮ್ಯದಿಂದಾಗಿ ವಿಜಿ ಕಡೆಯವರು ಕೃತ್ಯ ಎಸಗಿರುವ ಅನುಮಾನವಿದೆ' ಎಂದೂ ತಿಳಿಸಿವೆ.

ಮಹಿಳೆ ಸೂಟ್‌ಕೇಸ್‌ನಲ್ಲಿ 8 ಕೆ.ಜಿ ಡ್ರಗ್ಸ್ ಪತ್ತೆ

ನಗರದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದಿದ್ದ ಮಹಿಳಾ ಪ್ರಯಾಣಿಕರೊಬ್ಬರ ಸೂಟ್‌ಕೇಸ್‌ನಲ್ಲಿ 8 ಕೆ.ಜಿ ಹೆರಾಯಿನ್ ಪತ್ತೆಯಾಗಿದ್ದು, ಮಹಿಳೆಯನ್ನು ಕಸ್ಟಮ್ಸ್ ಅಧಿಕಾರಿಗಳುವಶಕ್ಕೆ ಪಡೆದಿದ್ದಾರೆ.

'ಬೆಂಗಳೂರಿನಲ್ಲಿ ನೆಲೆಸಿದ್ದರು ಎನ್ನಲಾದ ಮಹಿಳೆ, ದುಬೈನಿಂದ ಎಮಿರೆಟ್ಸ್ ವಿಮಾನದಲ್ಲಿ ನಿಲ್ದಾಣಕ್ಕೆ ಬಂದಿದ್ದರು. ನಿರ್ಗಮನ ದ್ವಾರದಲ್ಲಿ ಪರಿಶೀಲನೆ ನಡೆಸಿದಾಗ ಡ್ರಗ್ಸ್ ಸಮೇತ ಸಿಕ್ಕಿಬಿದ್ದರು' ಎಂದು ಕಸ್ಟಮ್ಸ್ ಮೂಲಗಳು ಹೇಳಿವೆ.

'ಬೆಂಗಳೂರಿನಲ್ಲಿ ಮಾರಾಟ ಮಾಡಲು ಆರೋಪಿ, ಹೆರಾಯಿನ್ ತಂದಿರುವುದಾಗಿ ಗೊತ್ತಾಗಿದೆ. ಎನ್‌ಡಿಪಿಎಸ್ ಕಾಯ್ದೆಯಡಿ ಮಹಿಳೆ ವಿರುದ್ಧ ಪ್ರಕರಣ ದಾಖಲಾಗಿದೆ. ವಿಚಾರಣೆ ನಡೆಸಲಾಗುತ್ತಿದೆ' ಎಂದೂ ಮೂಲಗಳು ಹೇಳಿವೆ.

ರೌಡಿ ಬಚ್ಚನ್ ಗಡಿಪಾರು

ಬೆಂಗಳೂರು: ಪದೇ ಪದೇ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗುತ್ತಿದ್ದ ಕಮರ್ಷಿಯಲ್ ಠಾಣೆ ವ್ಯಾಪ್ತಿಯ ರೌಡಿ ಮಹಮ್ಮದ್ ಅವೇಜ್ ಅಲಿಯಾಸ್ ಬಚ್ಚನ್‌ನನ್ನು (24) ಮುಂದಿನ ಒಂದು ವರ್ಷದವರೆಗೆ ಬೆಂಗಳೂರು ಜಿಲ್ಲೆಯಿಂದ ಗಡಿಪಾರು ಮಾಡಲಾಗಿದೆ.

'ಕೊಲೆ ಯತ್ನ, ದರೋಡೆ, ಜೀವ ಬೆದರಿಕೆ ಸೇರಿದಂತೆ 27 ಪ್ರಕರಣದಲ್ಲಿ ಆರೋಪಿಯಾಗಿದ್ದ ಬಚ್ಚನ್, ಜೈಲಿಗೆ ಹೋಗಿ ಬಂದಿದ್ದ. ಪುನಃ ಅಪರಾಧ ಕೃತ್ಯಗಳಲ್ಲಿ ತೊಡಗಿ ಸಮಾಜದ ಸ್ವಾಸ್ಥ್ಯ ಹಾಳು ಮಾಡಿ, ಜನರಲ್ಲಿ ಭಯವನ್ನುಂಟು ಮಾಡುತ್ತಿದ್ದ' ಎಂದು ಪೊಲೀಸರು ಹೇಳಿದರು.

'ರೌಡಿಯನ್ನು ಗಡಿಪಾರು ಮಾಡುವಂತೆ ಕಮರ್ಷಿಯಲ್ ಸ್ಟ್ರೀಟ್ ಠಾಣೆ ಇನ್‌ಸ್ಪೆಕ್ಟರ್, ಎಸಿಪಿ ಮೂಲಕ ಡಿಸಿಪಿ ಅವರಿಗೆ ಪ್ರಸ್ತಾವ ಸಲ್ಲಿಸಿದ್ದರು. ಅದನ್ನು ಪರಿಶೀಲಿಸಿದ ವಿಶೇಷ ಕಾರ್ಯನಿರ್ವಾಹಕ ದಂಡಾಧಿಕಾರಿಯೂ ಆಗಿರುವ ಉತ್ತರ ವಿಭಾಗದ ಡಿಸಿಪಿ ಎಸ್.ಡಿ. ಶರಣಪ್ಪ, ರೌಡಿಯ ಗಡಿಪಾರು ಮಾಡಿ ಆದೇಶ ಹೊರಡಿಸಿದ್ದಾರೆ' ಎಂದೂ ತಿಳಿಸಿದರು.

ಜಾಮೀನು ಮೇಲೆ ಹೊರಬಂದು ವಾಹನ ಕಳವು

ಜೈಲಿನಿಂದ ಜಾಮೀನು ಮೇಲೆ ಹೊರಬಂದು ದ್ವಿಚಕ್ರ ವಾಹನ ಕಳವು ಮಾಡುತ್ತಿದ್ದ ಮೂವರು ಆರೋಪಿಗಳನ್ನು ಹಲಸೂರು ಪೊಲೀಸರು ಬಂಧಿಸಿದ್ದಾರೆ.

'ಲಿಂಗರಾಜಪುರ ಜಾನಕಿರಾಮ್ ಲೇಔಟ್ ನಿವಾಸಿ ವಿಕ್ರಮ್ ಅಲಿಯಾಸ್ ವಿಕ್ಕಿ (20), ಕಾಕ್ಸ್ ಟೌನ್ ಮುನಿಯಪ್ಪ ಗಾರ್ಡನ್ ನಿವಾಸಿ ವಿಮಲ್ ರಾಜ್ (24) ಹಾಗೂ ವಿನೋದ್ ಅಲಿಯಾಸ್ ಎಸ್ಕೇಪ್ ಗುಂಡಾ (21) ಬಂಧಿತರು. ಅವರಿಂದ ₹ 6 ಲಕ್ಷ ಮೌಲ್ಯದ 11 ದ್ವಿಚಕ್ರ ವಾಹನಗಳು ಹಾಗೂ 1 ಚಿನ್ನದ ಸರ ಜಪ್ತಿ ಮಾಡಲಾಗಿದೆ. 'ವಿಕ್ರಮ್, ಕೋವಿಡ್ ಕಾರಣದಿಂದ ಜಾಮೀನು ಪಡೆದು ಹೊರ ಬಂದು ದ್ವಿಚಕ್ರ ವಾಹನ ಕಳವು ಮಾಡಲಾರಂಭಿಸಿದ್ದ' ಎಂದು ಪೊಲೀಸರು ಹೇಳಿದರು.

ಸುದ್ದಿ 2 ನಿಮಿಷ

'ಶಬ್ದ ಮಾಲಿನ್ಯ–ಕ್ರಮ ಆರಂಭ'

ಬೆಂಗಳೂರು: ಹೈಕೋರ್ಟ್ ಪದೇ ಪದೇ ಆದೇಶ ನೀಡಿದ ಬಳಿಕ ಶಬ್ದ ಮಾಲಿನ್ಯ ನಿಯಂತ್ರಣ ನಿಯಮಗಳ ಅಡಿಯಲ್ಲಿ ಕ್ರಮ ಕೈಗೊಳ್ಳಲು ನಗರ ಪೊಲೀಸರು ಆರಂಭಿಸಿದ್ದಾರೆ. ಈ ಕುರಿತು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರು ಹೈಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿದ್ದಾರೆ.

'ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿ (ಕೆಎಸ್‌ಪಿಸಿಬಿ) ಮೂಲಕ ಸ್ವೀಕರಿಸಿದ 11 ದೂರುಗಳ ವಿಚಾರಣೆ ಆರಂಭಿಸಲಾಗಿದೆ. ಧಾರ್ಮಿಕ ಸ್ಥಳಗಳಿಂದ ಶಬ್ದ ಮಾಲಿನ್ಯ ಹೆಚ್ಚುತ್ತಿದೆ ಎಂಬ ದೂರುಗಳು ಬಂದಿವೆ' ಎಂದು ಪ್ರಮಾಣಪತ್ರದಲ್ಲಿ ತಿಳಿಸಿದ್ದಾರೆ.

'ಶಬ್ದ ಮಾಪನ ಉಪಕರಣ ನಿರ್ವಹಿಸುವ ಸಂಬಂಧ ಕೆಎಸ್‌ಪಿಸಿಬಿಯಿಂದ ಪೊಲೀಸ್ ಸಿಬ್ಬಂದಿಗೆ ತರಬೇತಿಯನ್ನು ಕಳೆದ ಅಕ್ಟೋಬರ್‌ನಲ್ಲೇ ಕೊಡಿಸಲಾಗಿದೆ. ಎಲ್ಲ ಠಾಣೆಗಳಿಗೆ ಉಪಕರಣ ಒದಗಿಸಲಾಗಿದೆ. ಶಬ್ದ ಮಾಲಿನ್ಯ ನಿಯಂತ್ರಣ ನಿಯಮಗಳನ್ನು ಜಾರಿಗೆ ತರಲು ಮತ್ತು ನಿಯಮ ಉಲ್ಲಂಘಿಸಿದವರ ವಿರುದ್ಧ ಪರಿಸರ ಸಂರಕ್ಷಣಾ ಕಾಯ್ದೆ 1986ರ ಸೆಕ್ಷನ್ 15ರ ಅಡಿಯಲ್ಲಿ ಪ್ರಕರಣ ದಾಖಲಿಸಲು ತಿಳಿಸಲಾಗಿದೆ' ಎಂದು ವಿವರಿಸಿದ್ದಾರೆ.

ಪರಿಸರ ಸಂರಕ್ಷಣಾ ಕಾಯ್ದೆಯ ಸೆಕ್ಷನ್ 19ರ ಅಡಿಯಲ್ಲಿ ಕ್ರಮ ಕೈಗೊಳ್ಳಲು ಎಸಿಪಿಗಳಿಗೆ ಅಧಿಕಾರ ಇದೆಯೇ ಎಂಬುದರ ಬಗ್ಗೆ ಹೆಚ್ಚುವರಿ ಪ್ರಮಾಣಪತ್ರ ಸಲ್ಲಿಸುವಂತೆ ನಗರ ಪೊಲೀಸ್ ಕಮಿಷನರ್ ಅವರಿಗೆ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ನಿರ್ದೇಶನ ನೀಡಿತು.

ಧಾರ್ಮಿಕ ಕೇಂದ್ರಗಳಲ್ಲಿ ಸುಪ್ರೀಂ ಕೋರ್ಟ್ ಮಾರ್ಗಸೂಚಿ ಉಲ್ಲಂಘಿಸಿ ಧ್ವನಿವರ್ಧಕ ಬಳಸುತ್ತಿರುವವರ ವಿರುದ್ಧ ಕ್ರಮ ಜರುಗಿಸಲು ಆದೇಶಿಸುವಂತೆ ಕೋರಿ ಸಾಮಾಜಿಕ ಕಾರ್ಯಕರ್ತ ಗಿರೀಶ್ ಭಾರದ್ವಾಜ್ ಅರ್ಜಿ ಸಲ್ಲಿಸಿದ್ದರು.



ಆಂಧ್ರದಿಂದ ಡ್ರಗ್ಸ್ ತಂದು ಮಾರುತ್ತಿದ್ದ ಇಬ್ಬರ ಬಂಧನ

ಬೆಂಗಳೂರು: ಆಂಧ್ರಪ್ರದೇಶದಿಂದ ನಗರಕ್ಕೆ ಗಾಂಜಾ ತಂದು ಮಾರುತ್ತಿದ್ದ ಇಬ್ಬರು ಆರೋಪಿಗಳನ್ನು ಮೈಕೊ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಬೊಮ್ಮನಹಳ್ಳಿ ವಿರಾಟ್ ನಗರದ ಜಿಲಾಲ್ ಖಾನ್ ಅಲಿಯಾಸ್ ಜುನೈದ್ (20) ಹಾಗೂ ಕೋರಮಂಗಲದ ಲಕ್ಕಸಂದ್ರದ ನಿಶಾಂತ್ ಹರಿರಾಮ್ (25) ಬಂಧಿತರು. ಅವರಿಂದ 12 ಕೆ.ಜಿ ಗಾಂಜಾ, 69 ಎಲ್‌ಎಸ್‌ಡಿ ಕಾಗದದ ಚೂರು, 22 ಗ್ರಾಂ ಎಂಡಿಎಂಎ ಮಾತ್ರೆಗಳನ್ನು ಜಪ್ತಿ ಮಾಡಲಾಗಿದೆ. ಕೆಲ ಕಾಲೇಜು ವಿದ್ಯಾರ್ಥಿಗಳು, ಕೆಲ ಸಾಫ್ಟ್‌ವೇರ್ ಕಂಪನಿಗಳ ಉದ್ಯೋಗಿ ಗಳಿಗೆ ಆರೋಪಿಗಳು ಡ್ರಗ್ಸ್ ಮಾರುತ್ತಿದ್ದರು. ಬಿಟಿಎಂ ಲೇಔಟ್ ಹಾಗೂ ಸುತ್ತಮುತ್ತ ಸ್ಥಳಗಳಲ್ಲಿ ಗ್ರಾಹಕರಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಕೋಳಿ ಅಂಗಡಿಯಲ್ಲಿ ಕೆಲಸ: 'ಆರೋಪಿ ಜಿಲಾಲ್ ಖಾನ್, ಬೊಮ್ಮನಹಳ್ಳಿಯ ಕೋಳಿ ಮಾಂಸ ಮಾರಾಟ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ. ಇನ್ನೊಬ್ಬ ಆರೋಪಿ ನಿಶಾಂತ್, ಖಾಸಗಿ ಕಂಪನಿ ನೌಕರ. ಇಬ್ಬರೂ ಆಂಧ್ರಪ್ರದೇಶದಲ್ಲಿ ಗಾಂಜಾ ಖರೀದಿಸಿ ನಗರಕ್ಕೆ ತಂದು ಪ್ರತ್ಯೇಕವಾಗಿ ಮಾರಾಟ ಮಾರುತ್ತಿದ್ದರು' ಎಂದೂ ತಿಳಿಸಿದರು.

ವಸಿಷ್ಠ ಕ್ರೆಡಿಟ್ ಸೊಸೈಟಿ ಅಕ್ರಮ: ಠಾಣೆಗೆ ಹಾಜರಾದ ಅಪ್ಪ–ಮಗ

ಬೆಂಗಳೂರು: ಶ್ರೀವಸಿಷ್ಠ ಕೋ–ಆಪರೇಟಿವ್ ಕ್ರೆಡಿಟ್ ಸೊಸೈಟಿ ವಿರುದ್ಧ ದಾಖಲಾಗಿರುವ ಪ್ರಕರಣದಲ್ಲಿ ತಲೆಮರೆಸಿಕೊಂಡಿದ್ದ ಅಧ್ಯಕ್ಷ ವೇಂಕಟ ನಾರಾಯಣ ಹಾಗೂ ನಿರ್ದೇಶಕ ಕೃಷ್ಣಪ್ರಸಾದ್, ಹನುಮಂತ ನಗರ ಠಾಣೆಗೆ ಶುಕ್ರವಾರ ರಾತ್ರಿ ದಿಢೀರ್ ಹಾಜರಾದರು.

ಹೆಚ್ಚಿನ ಬಡ್ಡಿ ಆಮಿಷವೊಡ್ಡಿ ಠೇವಣಿದಾರರಿಂದ ಹಣ ಸಂಗ್ರಹಿಸಿ ವಂಚಿಸಿದ್ದ ಆರೋಪದಡಿ ಪ್ರಕರಣ ದಾಖಲಾಗುತ್ತಿದ್ದಂತೆ ವೇಂಕಟನಾರಾಯಣ ಹಾಗೂ ಅವರ ಮಗ ಕೃಷ್ಣಪ್ರಸಾದ್ ತಲೆ ಮರೆಸಿಕೊಂಡು ಓಡಾಡುತ್ತಿದ್ದರು.

ಬಂಧನ ಭೀತಿಯಿಂದ ಅವರಿಬ್ಬರು, ನಿರೀಕ್ಷಣಾ ಜಾಮೀನು ಕೋರಿ ಸಿಸಿಎಚ್ 56ನೇ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಲಯ, ಅರ್ಜಿಯನ್ನು ತಿರಸ್ಕರಿಸಿದೆ. ಇದರ ಬೆನ್ನಲ್ಲೇ ಇಬ್ಬರೂ ಆರೋಪಿಗಳು, ತನಿಖಾಧಿಕಾರಿ ಎದುರು ಹಾಜರಾಗಿ ಹೇಳಿಕೆ ದಾಖಲಿಸಿದರು.

'ಆರೋಪಿಗಳಿಗಾಗಿ ಹುಡುಕಾಟ ನಡೆಸಲಾಗುತ್ತಿತ್ತು. ವಿಚಾರಣೆಗೆ ಬರುವಂತೆಯೂ ಆರೋಪಿಗಳ ವಿಳಾಸಕ್ಕೆ ನೋಟಿಸ್ ಕಳುಹಿಸಲಾಗಿತ್ತು. ಅದಕ್ಕೆ ಯಾವುದೇ ಪ್ರತಿಕ್ರಿಯೆ ನೀಡದ ಆರೋಪಿಗಳು, ಜಾಮೀನು ಕೋರಿದ್ದರು. ಅವರಿಬ್ಬರ ಅರ್ಜಿ ತಿರಸ್ಕೃತವಾಗಿದ್ದರಿಂದ ಶುಕ್ರವಾರ ರಾತ್ರಿ 8 ಗಂಟೆ ಸುಮಾರಿಗೆ ಠಾಣೆಗೆ ಬಂದಿದ್ದರು. ಇಬ್ಬರಿಂದಲೂ ಹೇಳಿಕೆ ಪಡೆಯಲಾಗಿದೆ. ಶನಿವಾರ ಬೆಳಿಗ್ಗೆ ಪುನಃ ವಿಚಾರಣೆಗಾಗಿ ಠಾಣೆಗೆ ಬರುವಂತೆಯೂ ಸೂಚಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಈ ನಡುವೆ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಸ್ಥಾನಕ್ಕೆ ವೇಂಕಟನಾರಾಯಣ ರಾಜೀನಾಮೆ ಸಲ್ಲಿಸಿದ್ದಾರೆ.

'₹ 7 ಕೋಟಿ ವಂಚನೆಗೆ ಪುರಾವೆ'

'ಆರೋಪಿಗಳಿಂದ ಆಗಿರುವ ವಂಚನೆ ಬಗ್ಗೆ ಇದುವರೆಗೂ 50 ಠೇವಣಿದಾರರು ದೂರು ನೀಡಿದ್ದಾರೆ. ಸುಮಾರು ₹ 7 ಕೋಟಿ ವಂಚನೆ ಆಗಿರುವುದಕ್ಕೆ ಪುರಾವೆಗಳನ್ನು ಒದಗಿಸಿದ್ದಾರೆ. ವಂಚನೆ ಮೊತ್ತ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದೆ' ಎಂದೂ ಪೊಲೀಸ್ ಮೂಲಗಳು ಹೇಳಿವೆ.

'ವಂಚನೆಗೀಡಾದವರು ಠಾಣೆಗೆ ಬಂದು ದೂರು ನೀಡಬಹುದು' ಎಂದೂ ಮೂಲಗಳು ಕೋರಿವೆ.

ಕಳವು: ಬಂಧನ

ಬೆಂಗಳೂರು: ಜ್ಞಾನಭಾರತಿ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಕಳ್ಳತನ ಮಾಡಿದ್ದ ಆರೋಪಿ ಮುರುಗನ್‌ನನ್ನು (24) ಪೊಲೀಸರು ಬಂಧಿಸಿದ್ದಾರೆ.

'ತಮಿಳುನಾಡಿನ ಡಂಕಣಿಕೋಟೆ ನಿವಾಸಿ ಮುರುಗನ್, ಕೆಲಸ ಹುಡುಕಿಕೊಂಡು ನಗರಕ್ಕೆ ಬಂದು ಕೃತ್ಯ ಎಸಗಿದ್ದ. ಆತನಿಂದ ₹ 2.50 ಲಕ್ಷ ಮೌಲ್ಯದ ಬೆಳ್ಳಿ ಸಾಮಗ್ರಿ ಹಾಗೂ ಹಿತ್ತಾಳೆ ಸಾಮಗ್ರಿಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ದೂರುದಾರ ಜೂನ್ 16ರಂದು ಕುಟುಂಬ ಸಮೇತ ಮೈಸೂರಿಗೆ ಹೋಗಿದ್ದರು. 24ರಂದು ವಾಪಸು ಬಂದು ನೋಡಿದಾಗ ಕಳ್ಳತನವಾಗಿದ್ದು ಗೊತ್ತಾಗಿತ್ತು. ಈ ಬಗ್ಗೆ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು.'

'ಮನೆಯಲ್ಲಿ ಯಾರೂ ಇಲ್ಲದಿರುವುದನ್ನು ಗಮನಿಸಿದ್ದ ಆರೋಪಿ, ಮೊದಲ ಮಹಡಿಯ ಬಾಗಿಲು ಮೀಟಿ ಮನೆಯೊಳಗೆ ನುಗ್ಗಿ ಪೂಜಾ ಕೊಠಡಿ ಹಾಗೂ ಇತರೆಡೆ ಇದ್ದ ಸಾಮಗ್ರಿಗಳನ್ನು ಕದ್ದು ಪರಾರಿಯಾಗಿದ್ದ. ಪುರಾವೆಸಂಗ್ರಹಿಸಿ ಆತನನ್ನು ಬಂಧಿಸಲಾಗಿದೆ' ಎಂದರು.

ಮಳಿಗೆಗಳಲ್ಲಿ ಕಳವು: ಹುಬ್ಬಳ್ಳಿಯಲ್ಲಿ ಸಿಕ್ಕಿಬಿದ್ದ ಆರೋಪಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಮಳಿಗೆಗಳಲ್ಲಿ ಮೊಬೈಲ್ ಹಾಗೂ ಲ್ಯಾಪ್‌ಟಾಪ್ ಕಳವು ಮಾಡಿಕೊಂಡು ದೆಹಲಿಗೆ ರೈಲಿನಲ್ಲಿ ಹೊರಟಿದ್ದ ಆರೋಪಿಗಳು ಹುಬ್ಬಳ್ಳಿಯಲ್ಲಿ ಪೊಲೀಸರ ಕೈಗೆ ಸಿಕ್ಕಿಬಿದ್ದಿದ್ದಾರೆ.

'ಕಾಡುಗೋಡಿ ದಿಣ್ಣೂರು ನಿವಾಸಿ ಎನ್. ಮಂಜುನಾಥ್ (20) ಹಾಗೂ ಹೂಡಿ ನಿವಾಸಿ ಸೌರವ್ ಕುಮಾರ್ (20) ಬಂಧಿತರು. ಅವರಿಂದ ₹ 5 ಲಕ್ಷ ಮೌಲ್ಯದ 39 ಮೊಬೈಲ್‌ಗಳು. ಲ್ಯಾಪ್‌ಟಾಪ್‌ಗಳು ಹಾಗೂ ಇತರೆ ವಸ್ತುಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಮಹದೇವಪುರ, ವೈಟ್‌ಫೀಲ್ಡ್, ಹೊಸಕೋಟೆ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿರುವ ಮಳಿಗೆಗಳಲ್ಲಿ ಆರೋಪಿಗಳು ಕೃತ್ಯ ಎಸಗಿದ್ದರು. ರಾತ್ರಿ ವೇಳೆ ಮಳಿಗೆ ಬೀಗ ಮುರಿದು ಒಳ ನುಗ್ಗುತ್ತಿದ್ದರು. ಮೊಬೈಲ್, ಲ್ಯಾಪ್‌ಟಾಪ್ ಹಾಗೂ ಇತರೆ ವಸ್ತುಗಳನ್ನು ಕಳವು ಮಾಡಿದ್ದರು.'

'ಕದ್ದ ವಸ್ತುಗಳನ್ನು ಮಾರಾಟ ಮಾಡಲು ಆರೋಪಿಗಳು, ದೆಹಲಿಗೆ ರೈಲಿನಲ್ಲಿ ಹೊರಟಿದ್ದರು. ಈ ಬಗ್ಗೆ ಮಾಹಿತಿ ಕಲೆಹಾಕಿದ್ದ ಮಹದೇವಪುರ ಪೊಲೀಸರ ತಂಡ, ಆರೋಪಿಗಳ ಬಂಧನಕ್ಕೆ ಬಲೆ ಬೀಸಿತ್ತು. ಹುಬ್ಬಳ್ಳಿ ಮೂಲಕ ರೈಲು ಹೊರಡುವುದನ್ನು ತಿಳಿದಿದ್ದ ತಂಡ, ಅಲ್ಲಿಯ ರೈಲು ನಿಲ್ದಾಣ ಪೊಲೀಸರಿಗೆ ಮಾಹಿತಿ ನೀಡಿತ್ತು. ಅವರ ಸಹಾಯದಿಂದ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದೆ' ಎಂದೂ ತಿಳಿಸಿದರು.

ಯುವತಿ ಪೋಷಕರ ವಶಕ್ಕೆ: 'ಆರೋಪಿ ಮಂಜುನಾಥ್, ತನ್ನ ಸ್ನೇಹಿತೆಯಾಗಿದ್ದ ಯುವತಿಯನ್ನೂ ಜೊತೆಗೆ ಕರೆದೊಯ್ಯುತ್ತಿದ್ದ. ಆಕೆಯನ್ನು ರಕ್ಷಿಸಿ ಪೋಷಕರಿಗೆ ಒಪ್ಪಿಸಲಾಗಿದೆ' ಎಂದೂ ಹೇಳಿದರು.



ಜಪ್ತಿ ಮಾಡಲಾದ ವಸ್ತುಗಳ ಜೊತೆ ಆರೋಪಿಗಳು ಹಾಗೂ ಅವರನ್ನು ಬಂಧಿಸಿದ ಮಹದೇವಪುರ ಪೊಲೀಸರ ತಂಡ

ಅಪರಾಧ ಸುದ್ದಿ

ಕೆರೆ ಪ್ರದೇಶ ಒತ್ತುವರಿ ತೆರವು

ಬೆಂಗಳೂರು: ಮಹದೇವಪುರ ವಲಯದ ಹೂಡಿ ವಾರ್ಡ್‌ನಲ್ಲಿನ ವಾರಣಾಸಿ ಗ್ರಾಮದಲ್ಲಿ ಒತ್ತುವರಿ ಮಾಡಿಕೊಳ್ಳಲಾಗಿದ್ದ 1.6 ಎಕರೆ ಕೆರೆ ಪ್ರದೇಶವನ್ನು ಶುಕ್ರವಾರ ತೆರವುಗೊಳಿಸಲಾಯಿತು.

ಬಿದರಹಳ್ಳಿ ಹೋಬಳಿಯ ವಾರಣಾಸಿ ಗ್ರಾಮದ ಸರ್ವೆ ನಂ. 47 ರಲ್ಲಿರುವ ಒಟ್ಟು 8 ಎಕರೆ 24 ಗುಂಟೆ ವಿಸ್ತೀರ್ಣದ ವಾರಣಾಸಿ (ಜಿಂಕೆತಿಮ್ಮನಹಳ್ಳಿ) ಕೆರೆ ಅಂಗಳದ ಜಮೀನಿನಲ್ಲಿ ಸ್ಥಳೀಯರು, 1 ಎಕರೆ 6 ಗುಂಟೆ ಜಮೀನನ್ನು ಒತ್ತುವರಿ ಮಾಡಿಕೊಂಡು, ಶೀಟಿನ ಮನೆಗಳನ್ನು ನಿರ್ಮಿಸಿಕೊಂಡಿದ್ದರು. ಈ ಜಾಗ ಅಂದಾಜು ₹30 ಕೋಟಿ ಮೌಲ್ಯದ್ದಾಗಿದೆ.

'ಒತ್ತುವರಿ ತೆರವುಗೊಳಿಸಿದ ಸ್ಥಳದಲ್ಲಿ ಕೂಡಲೇ ತಂತಿ ಬೇಲಿ ಅಳವಡಿಸಲು ಕ್ರಮ ಕೈಗೊಳ್ಳಲಾಗಿದೆ' ಎಂದು ಬಿಬಿಎಂಪಿ ಕೆರೆ ವಿಭಾಗದ ಮುಖ್ಯ ಎಂಜಿನಿಯರ್ ಬಿ.ಟಿ.ಮೋಹನ್ ಕೃಷ್ಣ ಹೇಳಿದರು.

'ಈ ಕೆರೆಯನ್ನು ನವ ನಗರೋತ್ಥಾನ ಯೋಜನೆಯಡಿ ₹3 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. ಶೇ 45ರಷ್ಟು ಕಾಮಗಾರಿ ಪೂರ್ಣಗೊಂಡಿದೆ' ಎಂದರು.

ಪಾಲಿಕೆ ವಿಶೇಷ ಆಯುಕ್ತ (ಆಸ್ತಿಗಳು) ರೆಡ್ಡಿ ಶಂಕರಬಾಬು ನೇತೃತ್ವದಲ್ಲಿ ಕಾರ್ಯಾಚರಣೆ ನಡೆಯಿತು. ಕಂದಾಯ ಇಲಾಖೆ ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕು ಮತ್ತು ಭೂದಾಖಲೆಗಳ ಸಹಾಯಕ ನಿರ್ದೇಶಕ, ಕೆ.ಆರ್.ಪುರ ತಾಲ್ಲೂಕು ಭೂಮಾಪಕರು ಮತ್ತು ಹೂಡಿ ಉಪವಿಭಾಗದ ಎಂಜಿನಿಯರ್, ಪೊಲೀಸರು ಹಾಗೂ ಪಾಲಿಕೆಯ ಬಿಎಂಟಿಎಫ್ ಪೊಲೀಸರು ಕಾರ್ಯಾಚರಣೆಗೆ ಕೈ ಜೋಡಿಸಿದ್ದರು.

> ಹೈಕೋರ್ಟ್, ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ಆದೇಶದಂತೆ ಒತ್ತುವರಿಯಾದ ಕೆರೆಗಳ ತೆರವು ಕಾರ್ಯವನ್ನು ಹಂತಹಂತವಾಗಿ ಕೈಗೆತ್ತಿಕೊಳ್ಳಲಾಗುವುದು.
>
> **ಬಿ.ಟಿ.ಮೋಹನ್ ಕೃಷ್ಣ,** ಮುಖ್ಯ ಎಂಜಿನಿಯರ್, ಬಿಬಿಎಂಪಿ ಕೆರೆ ವಿಭಾಗ



ಶಾಲಾ ಸಭಾಂಗಣವನ್ನು ಸಚಿವ ಬೈರತಿ ಬಸವರಾಜ ಉದ್ಘಾಟಿಸಿದರು. ಕ್ಷೇತ್ರ ಶಿಕ್ಷಣಾಧಿಕಾರಿ ಹನುಮಂತರಾಯ, ಶಾಲೆಯ ಆಡಳಿತ ಮಂಡಳಿ ಅಧ್ಯಕ್ಷ ಆರ್. ಮಂಜುನಾಥ್, ಭಾರತಿ, ನಿರ್ಮಲಾ, ತುಳಸಿ ಬಾಯಿ ಇತರರು ಇದ್ದರು.

'ಗುಣಮಟ್ಟದ ಶಿಕ್ಷಣ ಒದಗಿಸಲು ಬದ್ಧ'

ಕೆ.ಆರ್.ಪುರ: 'ಕ್ಷೇತ್ರದಲ್ಲಿರುವ ಸರ್ಕಾರಿ ಶಾಲೆಗಳಲ್ಲಿ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಒದಗಿಸಲು ಅಗತ್ಯ ಸವಲತ್ತುಗಳನ್ನು ಒದಗಿಸಲಾಗುವುದು' ಎಂದು ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ತಿಳಿಸಿದರು.

ರಾಮಮೂರ್ತಿನಗರ ವಾರ್ಡ್‌ನ ಅಂಬೇಡ್ಕರ್ ನಗರ ಸರ್ಕಾರಿ ಹಿರಿಯ ಪ್ರಾಥಮಿಕ, ಪ್ರೌಢಶಾಲೆ ಹಾಗೂ ಬಾಲಕಿಯರ ಪದವಿ ಪೂರ್ವ ಕಾಲೇಜಿನಲ್ಲಿ ₹2 ಕೋಟಿ ವೆಚ್ಚದಲ್ಲಿ ನೂತನ ಕೊಠಡಿ, ತಡೆಗೋಡೆ, ಶೌಚಾಲಯ ಸೇರಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

'ಸರ್ಕಾರಿ ಶಾಲೆಯ ಮಕ್ಕಳು ಯಾವುದೇ ರೀತಿಯಲ್ಲಿ ಹಿಂದುಳಿಯಬಾರದು, ಅವರ ಕಲಿಕೆಗೆ ಅವಶ್ಯಕವಾಗಿರುವ ಸೌಲಭ್ಯಗಳನ್ನು ಕಲ್ಪಿಸಲು ಬದ್ಧ' ಎಂದರು.

ಯುದ್ಧ ವಿಮಾನ ಹಾರಾಟ ನಡೆಸಿಲ್ಲ: ಭಾರತೀಯ ವಾಯುದಳ

ರಾಜಧಾನಿಯಲ್ಲಿ ದೊಡ್ಡ ಸದ್ದು: ಕಾರಣ ನಿಗೂಢ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವೆಡೆ ಶುಕ್ರವಾರ ಮಧ್ಯಾಹ್ನ ದೊಡ್ಡ ಪ್ರಮಾಣದಲ್ಲಿ ಸದ್ದು ಕೇಳಿಸಿದ್ದು, ಕಾರಣ ನಿಗೂಢವಾಗಿದೆ. ಸದ್ದಿನಿಂದಾಗಿ ಸ್ಥಳೀಯರಲ್ಲಿ ಆತಂಕ ಉಂಟಾಗಿತ್ತು. ಕೆಲವೆಡೆ ಜನರು ಮನೆಯಿಂದ ಹೊರಗೆ ಓಡಿ ಬಂದಿದ್ದರು.

ಜಯನಗರ, ಕುಮಾರಸ್ವಾಮಿ ಲೇ ಔಟ್, ಮಡಿವಾಳ, ಪರಪ್ಪನ ಅಗ್ರಹಾರ, ಆನೇಕಲ್, ಮಾಗಡಿ ರಸ್ತೆ, ಬಸವೇಶ್ವರ ನಗರ, ವಿಜಯನಗರ, ರಾಜರಾಜೇಶ್ವರಿನಗರ ಹಾಗೂ ಸುತ್ತಮುತ್ತಲಿನ ಕೆಲ ಸ್ಥಳಗಳಲ್ಲಿ ನಿಗೂಢ ಸದ್ದು ಕೇಳಿಸಿರುವ ಬಗ್ಗೆ ನಿವಾಸಿಗಳು ಅಭಿಪ್ರಾಯ ಹಂಚಿಕೊಂಡಿದ್ದಾರೆ

'ಮಧ್ಯಾಹ್ನ 12.18ರ ಸಮಯದಲ್ಲಿ ಬೆಂಗಳೂರು ದಕ್ಷಿಣ ಭಾಗದಲ್ಲಿ ದೊಡ್ಡ ಶಬ್ಧ ಬಂತು. ಭೂಮಿ ಕಂಪಿಸಿದ ರೀತಿಯಲ್ಲಿ ಅನುಭವ ಆಯಿತು' ಎಂದು ಸಾರ್ವಜನಿಕರೊಬ್ಬರು ಸಾಮಾಜಿಕ ಜಾಲತಾಣದಲ್ಲಿ ಬರೆದುಕೊಂಡಿದ್ದಾರೆ. ಅದಕ್ಕೆ ಪ್ರತಿಕ್ರಿಯಿಸಿರುವ ಹಲವರು, 'ನಾವು ವಾಸವಿರುವ ಸ್ಥಳದಲ್ಲೂ 5 ಸೆಕೆಂಡ್‌ನಿಂದ 10 ಸೆಕೆಂಡ್ ಸದ್ದು ಕೇಳಿಸಿತು' ಎಂದಿದ್ದಾರೆ.

ಮಾಗಡಿ ರಸ್ತೆ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಸದ್ದು ಕೇಳುತ್ತಿದ್ದಂತೆ ಜನರೆಲ್ಲರೂ ಮನೆಯಿಂದ ಹೊರಗೆ ಬಂದಿದ್ದರು.


ಈ ಬಗ್ಗೆಯೂ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್‌ಗಳು ಹರಿದಾಡುತ್ತಿವೆ.

ಭೂಕಂಪದ ಸೂಚನೆಗಳಿಲ್ಲ: ನಿಗೂಢ ಸದ್ದು ಕೇಳಿ ಆತಂಕಗೊಂಡ ಜನರು, ಹವಾಮಾನ ಇಲಾಖೆ ಅಧಿಕಾರಿಗಳಿಗೂ ಕರೆ ಮಾಡಿ ವಿಚಾರಿಸಿದ್ದರು, 'ಎಲ್ಲಿಯೋ ಭೂಕಂಪ ಆಗಿರಬೇಕು. ಅದರ ಪರಿಣಾಮ ಬೆಂಗಳೂರು ಮೇಲಾಗಿದೆ' ಎಂದು ಅನುಮಾನಪಟ್ಟಿದ್ದರು.

ರಾಜ್ಯದ 14 ಭೂಕಂಪ ಮಾಪನ ಕೇಂದ್ರದಲ್ಲಿ ಪರಿಶೀಲನೆ ನಡೆಸಿದ ಅಧಿಕಾರಿಗಳು, 'ಭೂಕಂಪದ ಯಾವುದೇ ಸೂಚನೆಗಳು ದಾಖಲಾಗಿಲ್ಲ. ಭೂಕಂಪವೆಂದು ಜನರು ಆತಂಕ ಪಡುವ ಅಗತ್ಯವಿಲ್ಲ' ಎಂದು ಹೇಳಿಕೆ ಬಿಡುಗಡೆ ಮಾಡಿದರು.

ಯುದ್ಧ ವಿಮಾನವೂ ಹಾರಾಡಿಲ್ಲ: ಕಳೆದ ವರ್ಷವೂ ನಗರದಲ್ಲಿ ನಿಗೂಢ ಸದ್ದು ಕೇಳಿಸಿತ್ತು. 'ಯುದ್ಧ ವಿಮಾನವು ಶಬ್ದಾತೀತ ವೇಗದಲ್ಲಿ ಹೋದಾಗ ಈ ರೀತಿ ಆಗುತ್ತದೆ' ಎಂಬುದಾಗಿ ತಜ್ಞರು ಅಭಿಪ್ರಾಯಪಟ್ಟಿದ್ದರು.

ಶುಕ್ರವಾರದ ನಿಗೂಢ ಸದ್ದಿನ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿರುವ ಭಾರತೀಯ ವಾಯುದಳದ ಅಧಿಕಾರಿಗಳು, 'ಸದ್ದು ಕೇಳಿತು ಎನ್ನಲಾದ ಸಮಯದಲ್ಲಿ ಯಾವುದೇ ಯುದ್ಧ ವಿಮಾನವೂ ಹಾರಾಟ ನಡೆಸಿಲ್ಲ' ಎಂದಿದ್ದಾರೆ.



ಶ್ರೀ ನಾಯಕರ ಯಲ್ಲಪ್ಪ
ನಿವೃತ್ತ ಶಿಕ್ಷಕರು, ಎನ್‌ವೈ.ಜಿ ತಂದೆ



ಶ್ರೀಮತಿ ನಾಯಕರ ಯಲ್ಲಮ್ಮ
ತಾಯಿ

ಅಭಿವೃದ್ಧಿಯ ಹರಿಕಾರ ಶಾಸಕ ಎನ್.ವೈ.ಗೋಪಾಲಕೃಷ್ಣ



70ನೇ ವರ್ಷದ ಜನ್ಮದಿನದ ಶುಭಾಶಯಗಳು

ಸರಳ, ಸಜ್ಜನಿಕೆಯ ರಾಜಕಾರಣಿ ಎಂದೇ ಸುಪ್ರಸಿದ್ಧಿ ಪಡೆದ ನಮ್ಮ ಹೆಮ್ಮೆಯ ಎನ್.ವೈ.ಜಿ ನಮ್ಮ ಕೂಡ್ಲಿಗಿ ವಿಧಾನಸಭಾ ಕ್ಷೇತ್ರದ ಶಾಸಕರಾಗಿದ್ದು ನಮ್ಮ ಭಾಗ್ಯವೇ ಸರಿ. ಅನನ್ಯ, ಅನುಪಮ, ಅನುಭಾವಿ ಈ ಶ್ವೇತಧಾರಿ. ಪರಿಶುದ್ಧ ಮನಸ್ಸಿನ ನೇರ ನುಡಿಯ ಹೃದಯ ಸಂಸ್ಕಾರಿ. ಮತದಾರರ ಋಣಭಾರವನ್ನು ಶಿರದ ಮೇಲೆ ಧರಿಸಿದ ಅವರಿಗೆ ಕ್ಷೇತ್ರದ ಅಭಿವೃದ್ಧಿಯೇ ಪರಮ ಗುರಿ. ರೈತಾಪಿ ಜನರ ಪಾಲಿಗೆ ಇವರು ಐಸಿರಿ. ಬರದ ನಾಡಿಗೆ ನೀರು ಹರಿಸಿದ 'ಭಗೀರಥ'ನಂತೆ ಈ ಮುರಾರಿ. ಅಪಾರ ಶಿಕ್ಷಣ ಪ್ರೇಮಿ ಈ ರಾಜಕೀಯ ಸೂತ್ರಧಾರಿ. ಮಕ್ಕಳ ಬಾಳಿನ ಭವಿಷ್ಯಕ್ಕೆ ಇವರು ಹೊನ್ನಗರಿ. ಕೋಟಿಗಟ್ಟಲೆ ಅನುದಾನ ತಂದ ಈ ರಾಜಕೀಯ ಮುತ್ಸದ್ಧಿ. ಈ ಕ್ಷೇತ್ರಕ್ಕೆ ಅಂಟಿದ ಹಿಂದುಳಿದ ಪ್ರದೇಶವೆಂಬ ಹಣೆಪಟ್ಟಿ ಅಳಿಸಿ ಹಾಕಲು ಅಹರ್ನಿಷಿ ದುಡಿಯುತಿಹ ಎನ್.ವೈ.ಜಿ ಈ ಕ್ಷೇತ್ರದ ಮಹಾಮಾನವತಾವಾದಿ.

ಎನ್‌ವೈಜಿ ಕಾರ್ಯ ಐತಿಹಾಸಿಕ



1008 ಜಗದ್ಗುರು ಸಿದ್ದಲಿಂಗರಾಜದೇಶಿ ಕೇಂದ್ರ ಶಿವಾಚಾರ್ಯ ಸ್ವಾಮೀಜಿ ಸದ್ಧರ್ಮ ಪೀಠ, ಉಜ್ಜನಿ

ಬರದ ನಾಡಾಗಿದ್ದ ಕೂಡ್ಲಿಗಿ ವಿಧಾನಸಭಾ ಕ್ಷೇತ್ರದ ಕೆರೆಗಳಿಗೆ ನೀರು ತುಂಬಿಸುವ ಯೋಜನೆಯನ್ನು ತಂದಿರುವ ಶಾಸಕ ಎನ್.ವೈ. ಗೋಪಾಲಕೃಷ್ಣ ಅವರ ಕಾರ್ಯ ಐತಿಹಾಸಿಕವಾದುದ್ದು. ಇದರಿಂದಾಗಿ ಅವರು, ಕೂಡ್ಲಿಗಿ ಕ್ಷೇತ್ರದ ಜನರ ಮನಸ್ಸಿನಲ್ಲಿ ಸದಾ ಹಸಿರಾಗಿ ನಿಲ್ಲುವಂತಾಗಿದ್ದಾರೆ. ಇಂತಹ ಮಹಾನ್ ಕಾರ್ಯ ಮಾಡಿದ ಶಾಸಕರಿಗೆ ಶ್ರೀ ಮಠದ ಬೆಂಬಲ ಹಾಗೂ ಶುಭಾಶೀರ್ವಾದ ಸದಾ ಇರುತ್ತದೆ.



2020ರಂದು ಮಳೆಗೆ ತುಂಬಿದ ಗುಡೇಕೋಟೆ ಕೆರೆಗೆ ಬಾಗಿನ ಅರ್ಪಿಸಿದ ಶಾಸಕ ಎನ್‌ವೈ. ಗೋಪಾಲಕೃಷ್ಣ



ಕೂಡ್ಲಿಗಿಯಲ್ಲಿ ನಡೆದ ಸಮಾರಂಭವೊಂದರಲ್ಲಿ ಬಿಜೆಪಿ ಹಿರಿಯ ಮುಖಂಡ, ಸಚಿವ ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅವರೊಂದಿಗೆ ಸಮಾಲೋಚನೆಯಲ್ಲಿ ತೊಡಗಿರುವ ಶಾಸಕ ಎನ್‌ವೈ. ಗೋಪಾಲಕೃಷ್ಣ



ಪತ್ನಿ ಗೀತಾ ಹಾಗೂ ಮೊಮ್ಮಕ್ಕಳೊಂದಿಗೆ ಶಾಸಕ ಎನ್‌ವೈ. ಗೋಪಾಲಕೃಷ್ಣ

2018-19, 2019-20 ಮತ್ತು 2020-21 ಸಾಲಿನ ಕೂಡ್ಲಿಗಿ ತಾಲ್ಲೂಕಿನ ವಿವಿಧ ಇಲಾಖೆಗಳ ಅಭಿವೃದ್ಧಿ ಕಾಮಗಾರಿಗಳ ವಿವರ

ಕ್ರ. ಸಂ	ಇಲಾಖೆ ಹೆಸರು	ಕೆಲಸ	ಮೊತ್ತ (₹ ಕೋಟಿಗಳಲ್ಲಿ)
1	ಲೋಕೋಪಯೋಗಿ ಇಲಾಖೆ	248	254
2	ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ	391	74
3	ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ	365	800
4	ಸಣ್ಣ ನೀರಾವರಿ ಇಲಾಖೆ ಅನುದಾನ	36	22
5	ಪಟ್ಟಣ ಪಂಚಾಯಿತಿ ಕೂಡ್ಲಿಗಿ: (2020-21 ಸಾಲಿಗೆ)	143	3.16
6	ಕರ್ನಾಟಕ ಭೂ ಸೇನಾ ನಿಗಮ ಕೂಡ್ಲಿಗಿ	44	16
7	ಮಿನಿ ವಿಧಾನ ಸೌಧ ಕಟ್ಟಡ ನಿರ್ಮಾಣ (6ನೇ ಹಂತದಲ್ಲಿ)	1	10
8	ಖನಿಜ ನಿಧಿ (ಡಿ.ಎಂ.ಎಫ್) ಯೋಜನೆ	17	42
9	ಗ್ರಾಮೀಣ ರಸ್ತೆಗಳು (ಪಿ.ಎಂ.ಜಿ.ಎಸ್.ವೈ)	7	16
10	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ	2	4
11	ಕೃಷಿ ಇಲಾಖೆ ಕಟ್ಟಡಕ್ಕೆ	1	01
12	ನಿರ್ಮಿತಿ ಕೇಂದ್ರ	10	12
	ಒಟ್ಟು	1265	1254.16

ಮೂರು ವರ್ಷದ ಅಭಿವೃದ್ಧಿ ಕಾರ್ಯಗಳು

- ಪಿಡಬ್ಲ್ಯೂಡಿ 248 ರಸ್ತೆ ಕಾಮಗಾರಿಗಳಿಗೆ ₹254 ಕೋಟಿ
- ಸಣ್ಣ ನೀರಾವರಿ ಇಲಾಖೆಯ ಚೆಕ್ ಡ್ಯಾಂನ 36 ಕಾಮಗಾರಿಗಳಿಗೆ ₹22 ಕೋಟಿ
- ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯಕ್ಕೆ ಸಂಬಂಧಿಸಿದ 365 ಕಾಮಗಾರಿಗಳಿಗೆ ₹800 ಕೋಟಿ
- ಪಂಚಾಯತ್ ರಾಜ್ ಎಂಜಿನಿಯರಿಂಗ್‌ನ 391 ಕಾಮಗಾರಿಗಳಿಗೆ ₹74 ಕೋಟಿ
- ಶಿಕ್ಷಣ ಇಲಾಖೆಯಲ್ಲಿ 239 ಶಾಲಾ ಕೊಠಡಿ, 30 ಬಿಸಿ ಊಟದ ಕೊಠಡಿ, 21 ಶೌಚಾಲಯಗಳ ನಿರ್ಮಾಣ, 10 ಶುದ್ದ ಕುಡಿಯುವ ನೀರಿನ ಘಟಕ, 9 ಶಾಲೆಗಳಿಗೆ ಪ್ರಯೋಗಾಲಯ ಹಾಗೂ 2ಶಾಲೆಗಳಿಗೆ
- ಆಟದ ಸಾಮಗ್ರಿಗಳ ವಿತರಣೆ ಸೇರಿದಂತೆ, ಒಟ್ಟು ಅನುದಾನ ₹25. 29 ಕೋಟಿ ಮಂಜೂರಾಗಿದ್ದು, ಕಾಮಗಾರಿಗಳು ಪೂರ್ಣಗೊಂಡಿವೆ
- ಆರೋಗ್ಯ ಇಲಾಖೆಯಲ್ಲಿ ಆಸ್ಪತ್ರೆಗೆ ಹೆಚ್ಚುವರಿ ವಸತಿ ಗೃಹ, ರಸ್ತೆ ನಿರ್ಮಾಣ, ಕಾಂಪೌಂಡ್, ಮೂಲ ಸೌಕರ್ಯಕ್ಕಾಗಿ ₹6.05 ಕೋಟಿ
- ಕೂಡ್ಲಿಗಿ ಮಿನಿ ವಿಧಾನಸೌಧ ನಿರ್ಮಾಣಕ್ಕೆ ₹10 ಕೋಟಿ (ಕಾಮಗಾರಿ ಮುಗಿಯುವ ಹಂತದಲ್ಲಿದೆ)
- ಕೂಡ್ಲಿಗಿ ಪಟ್ಟಣದಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಕಟ್ಟಡಕ್ಕೆ ₹10 ಕೋಟಿ (ಕಾಮಗಾರಿ ಪೂರ್ಣಗೊಂಡಿದೆ)
- ಮಹದೇವ ಮೈಲಾರ ಕ್ರೀಡಾಂಗಣ ಅಭಿವೃದ್ದಿಗೆ ₹3.18 ಲಕ್ಷ ಮತ್ತು ಕಾಂಪೌಂಡ್ ನಿರ್ಮಾಣಕ್ಕೆ ₹39 ಲಕ್ಷ ಮಂಜೂರು. ಕಾಮಗಾರಿ ಪ್ರಗತಿಯಲ್ಲಿ
- ಪಂಚಾಯತ್ ರಾಜ್ ಎಂಜಿನಿಯರಿಂಗ್ ಉಪ ವಿಭಾಗ ಮತ್ತು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗ ಕಟ್ಟಡಕ್ಕೆ ₹1 ಕೋಟಿ (ಕಟ್ಟಡ ನಿರ್ಮಾಣವಾಗಿ ಉದ್ಘಾಟನೆಗೊಂಡಿದೆ)
- ಡಿ.ಎಂ.ಎಫ್ ಯೋಜನೆಯಡಿ (6ನೇ ಹಂತದಲ್ಲಿ)ಒಟ್ಟು ₹12.00 ಕೋಟಿ
- ಪಟ್ಟಣದ ಐತಿಹಾಸಿಕ ಗಾಂಧಿ ಚಿತಾಭಸ್ಮವಿರುವ ಹುತಾತ್ಮರ ಸ್ಮಾರಕದ ಅಭಿವೃದ್ದಿಗೆ ₹1.25 ಕೋಟಿ ಬಿಡುಗಡೆಯಾಗಿ ಕೆಲಸ ಪೂರ್ಣಗೊಂಡಿದೆ
- ಕೂಡ್ಲಿಗಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಹೆಚ್ಚುವರಿ ಕೊಠಡಿ ಮತ್ತು ಇತರ ಅಭಿವೃದ್ದಿ ಕಾಮಗಾರಿಗಳಿಗೆ ಒಟ್ಟು ₹2.75 ಕೋಟಿ
- ಹುರುಳಿಹಾಳ್ ಗ್ರಾಮದ ಹತ್ತಿರ ಪರಿಶಿಷ್ಟ ವರ್ಗಗಳ ಮೊರಾರ್ಜಿ ದೇಸಾಯಿ ಶಾಲೆಗೆ ₹25 ಕೋಟಿ
- ಕೂಡ್ಲಿಗಿ ಪಟ್ಟಣದಲ್ಲಿ ಪಟ್ಟಣ ಪಂಚಾಯಿತಿ ಕಚೇರಿಗೆ ₹1.80 ಕೋಟಿ ಮಂಜೂರು. ಕೆಲಸ ಪ್ರಗತಿಯಲ್ಲಿದೆ
- ಹೊಸಹಳ್ಳಿ ಸಂಗಮೇಶ್ವರ ಬೆಟ್ಟದ ಹತ್ತಿರ ಅಂಬೇಡ್ಕರ್ ವಸತಿ ಶಾಲೆ ನಿರ್ಮಾಣಕ್ಕೆ ₹9.98 ಎಕರೆ ಜಮೀನು
- ಹಿರೇಹೆಗ್ಡಾಳು ಗ್ರಾಮದ ಹತ್ತಿರ ಕಿತ್ತೂರು ರಾಣಿ ಚೆನ್ನಮ್ಮ ಶಾಲೆ ನಿರ್ಮಾಣ ಮಾಡಲು 8 ಎಕರೆ ಜಮೀನು ಮಂಜೂರು ಹಾಗೂ ಕಾಮಗಾರಿಗೆ ₹20 ಕೋಟಿ ಬಿಡುಗಡೆ. ಶೀಘ್ರದಲ್ಲಿ ಶಂಕು ಸ್ಥಾಪನೆಯಾಗಲಿದೆ
- ಹೂಡೇಂ ಗ್ರಾಮದ ಹತ್ತಿರ ಏಕಲವ್ಯ ವಸತಿ ಶಾಲೆ ನಿರ್ಮಾಣಕ್ಕೆ 15 ಎಕರೆ ಜಾಗ ಮಂಜೂರು
- ಕೂಡ್ಲಿಗಿ ಪ.ಪಂ.ಗೆ 2020-21ನೇ ಸಾಲಿನ ಹಣಕಾಸು ವರ್ಷಕ್ಕೆ 143 ಕಾಮಗಾರಿಗೆ ₹3.16 ಕೋಟಿ

ಕೂಡ್ಲಿಗಿ ರಾಜ್ಯದಲ್ಲಿಯೇ ಎರಡನೇ ಅತಿ ದೊಡ್ಡ ತಾಲ್ಲೂಕು ಎಂಬ ಹೆಮ್ಮೆ ಇದ್ದರೂ, ಅಭಿವೃದ್ಧಿಯಲ್ಲಿ ಅಷ್ಟೇ ಹಿಂದುಳಿದಿತ್ತು. ಕೃಷಿಯನ್ನೇ ನಂಬಿಕೊಂಡು ಬದುಕುವ ಇಲ್ಲಿ ಯಾವುದೇ ನೀರಾವರಿ ಮೂಲಗಳು ಹಾಗೂ ಕೈಗಾರಿಕೆಗಳು ಇಲ್ಲ. ಸದಾ ಬರಗಾಲವನ್ನೆ ಅನುಭವಿಸುತ್ತಿದ್ದ ಇಲ್ಲಿನ ಜನ ಜೀವನೋಪಯ-ಕ್ಕಾಗಿ ರಾಜ್ಯದ ವಿವಿಧಡೆಗೆ ಗುಳೆ ಹೋಗುವುದು ಸಾಮಾನ್ಯವಾಗಿತ್ತು. ಇನ್ನು, ಕೃಷಿಕರು ಬಿತ್ತಿದ ಬೆಳೆ ಬಾರದೆ ಆತ್ಮಹತ್ಯೆ ಮಾಡಿಕೊಳ್ಳುವ ಸ್ಥಿತಿ ಇತ್ತು.

ಇಂತಹ ಪರಿಸ್ಥಿತಿಯಲ್ಲಿ 2018ರಲ್ಲಿ ಅನಿರೀಕ್ಷಿತವಾಗಿ ಕೂಡ್ಲಿಗಿ ವಿಧಾನಸಭಾ ಕ್ಷೇತ್ರದಲ್ಲಿ ಶಾಸಕರಾಗಿ ಆಯ್ಕೆಯಾದವರು ಎನ್.ವೈ. ಗೋಪಾಲಕೃಷ್ಣ. ತಮಗೆ ಸಿಕ್ಕ ಅವಕಾಶವನ್ನು ಬಳಸಿಕೊಂಡು, ಸಾವಿರಾರು ಕೋಟಿ ಅನುದಾನ ತಂದು ಕ್ಷೇತ್ರದಲ್ಲಿ ಶಿಕ್ಷಣ, ರಸ್ತೆ, ನೀರಾವರಿ, ಕುಡಿಯುವ ನೀರು ಸೇರಿದಂತೆ, ಅನೇಕ ಮೂಲಸೌಕರ್ಯ ಕಲ್ಪಿಸಿ ಕೊಡಲು ಸಂಕಲ್ಪ ಮಾಡಿ, ಅನುಷ್ಠಾನಕ್ಕೆ ತರುವಲ್ಲಿ ಯಶಸ್ವಿಯಾಗಿದ್ದಾರೆ.

ಮಿಗಿಲಾಗಿ ಕ್ಷೇತ್ರದ 74 ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ಮುಖ್ಯಮಂತ್ರಿಗಳಿಂದ ಸಮ್ಮತಿ ಪಡೆದು, ಸಚಿವ ಸಂಪುಟದ ಅನುಮೋದನೆಯೊಂದಿಗೆ ಒಟ್ಟು ₹670 ಕೋಟಿ ಅನುದಾನ ಬಿಡುಗಡೆ ಮಾಡಿಸಿದ್ದಾರೆ. ಹಸಿರು ಕ್ರಾಂತಿ ಮೂಲಕ ಕ್ಷೇತ್ರದ ಅಭಿವೃದ್ಧಿಗೆ ಮತ್ತಷ್ಟು ಮುನ್ನುಡಿ ಬರೆದಿದ್ದಾರೆ.

ಎನ್‌ವೈಜಿ ಜನ್ಮದಿನಕ್ಕೆ ಬಿಎಸ್‌ವೈ ಉಡುಗೊರೆ

ಇತ್ತೀಚೆಗೆ ನಡೆದ ಸಚಿವ ಸಂಪುಟದ ಸಭೆಯಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ಸಚಿವರು ಕೂಡ್ಲಿಗಿ ವಿಧಾನಸಭಾ ಕ್ಷೇತ್ರದ 74 ಕೆರೆಗಳಿಗೆ ಶಾಶ್ವತ ನೀರು ಒದಗಿಸುವ ಯೋಜನೆಗೆ ₹670 ಕೋಟಿ ಅನುದಾನ ಬಿಡುಗಡೆ ಮಾಡುವ ಮೂಲಕ, ಶಾಸಕ ಗೋಪಾಲ ಕೃಷ್ಣ ಅವರ ಜನ್ಮದಿನಕ್ಕೆ ಭರ್ಜರಿ ಕೊಡುಗೆಯನ್ನೇ ನೀಡಿದ್ದಾರೆ. ಅದಕ್ಕಾಗಿ, ಕೂಡ್ಲಿಗಿ ಕ್ಷೇತ್ರದ ಸಮಸ್ತ ನಾಗರಿಕರ ಪರವಾಗಿ ಹಾಗೂ ರೈತಾಪಿ ವರ್ಗದವರಿಂದ ಕರ್ನಾಟಕದ 'ರಾಜ ಹುಲಿ' ಎಂದೇ ಖ್ಯಾತರಾಗಿರುವ ರೈತ ಬಂಧು, ಕರುಣಾಮಯಿ, ಸನ್ಮಾನ್ಯ ಬಿ.ಎಸ್. ಯಡಿಯೂರಪ್ಪ ಅವರಿಗೆ ಹೃದಯಪೂರ್ವಕ ಧನ್ಯವಾದಗಳು. ಈ ಯೋಜನೆಯ ಅನುಷ್ಠಾನಕ್ಕೆ ಹಗಲಿರುಳು ಶ್ರಮಿಸಿದ ನಮ್ಮ ಹೆಮ್ಮೆಯ ಶಾಸಕರಾದ 'ಎನ್.ವೈ. ಗೋಪಾಲಕೃಷ್ಣ' ಅವರಿಗೆ ಅಭಿನಂದನೆಗಳು. ಕ್ಷೇತ್ರದ ಮತದಾರ ಬಾಂಧವರಿಗೆ ನೀಡಿದ ವಚನದಂತೆ, ಬರದ ನಾಡಿಗೆ ಭದ್ರೆಯ ಹರಿಸಿದ ಬಂಗಾರದ ಮನುಷ್ಯ ಎನ್‌ವೈಜಿ.

ಚುನಾವಣೆ ಪ್ರಣಾಳಿಕೆಯಲ್ಲಿ ಬಹು ಮುಖ್ಯವಾದ ಕೂಡ್ಲಿಗಿ ತಾಲ್ಲೂಕಿನ 74 ಕೆರೆಗಳಿಗೆ ಶಾಶ್ವತ ನೀರು ಒದಗಿಸುವ ಯೋಜನೆ ಜಾರಿಗೆ ತರಲು ಶ್ರಮಿಸುತ್ತೇನೆ ಎಂದು ಭರವಸೆ ನೀಡಿದ್ದರು. ಅದರಂತೆ ತಾಲ್ಲೂಕಿನಲ್ಲಿ ಇದಕ್ಕಾಗಿ ನಾಗರಿಕರು ಯಾವುದೇ ಹೋರಾಟಗಳನ್ನು ನಡೆಸುವ ಅವಶ್ಯಕತೆ ಇಲ್ಲವೆಂದು ಮನವರಿಕೆ ಮಾಡಿ ಕೊಟ್ಟಿದ್ದರು. ಅದರಂತೆ ಮುಖ್ಯಮಂತ್ರಿ ಹಾಗೂ ಸಚಿವ ಸಂಪುಟಕ್ಕೆ ಯೋಜನೆಯ ಅಗತ್ಯವನ್ನು ಮನವರಿಕೆ ಮಾಡಿ, ಕಡೆಗೆ ಜಾರಿಗೆ ತರುವಲ್ಲಿ ಗೋಪಾಲಕೃಷ್ಣ ಯಶಸ್ವಿಯಾಗಿದ್ದಾರೆ.

ದೇಶ ಸ್ವಾತಂತ್ರ್ಯ ಪಡೆದಾಗಿನಿಂದಲೂ, ಅದರಲ್ಲೂ ಕೂಡ್ಲಿಗಿ ತಾಲ್ಲೂಕಿಗೆ ಕೂಗಳತೆ ದೂರದಲ್ಲಿ ತುಂಗಾಭದ್ರ ಅಣೆಕಟ್ಟು ನಿರ್ಮಾಣವಾದರೂ, ನಮ್ಮ ಭಾಗದ ರೈತರಿಗೆ ಸ್ವಲ್ಪವೂ ಉಪಯೋಗವಾಗಿರಲಿಲ್ಲ. ಜಲ ಸಂಪನ್ಮೂಲದಿಂದ ವಂಚಿತವಾಗಿದ್ದ ಕ್ಷೇತ್ರದ ರೈತರ ಭೂಮಿಯು ನೀರಾವರಿ ಸೌಲಭ್ಯ-ವಿಲ್ಲದೆ ಬಂಜರು ಭೂಮಿಯಂತಾಗಿತ್ತು. ಎಸ್. ನಿಜಲಿಂಗಪ್ಪ ಅವರು ಮುಖ್ಯಮಂತ್ರಿ ಆದಾಗಿನಿಂದಲೂ ತಾಲ್ಲೂಕಿಗೆ ನೀರಾವರಿಗಾಗಿ ಹೋರಾಟ ನಡೆಸಿದ್ದರೂ ಫಲಪ್ರದವಾಗಿರಲಿಲ್ಲ. ಆದರೆ, ಗೋಪಾಲಕೃಷ್ಣ ಅವರ ಮನವಿಗೆ ಸ್ಪಂದಿಸಿದ ಮುಖ್ಯಮಂತ್ರಿ ಯೋಜನೆಗೆ ಒಪ್ಪಿಗೆ ನೀಡಿ, ಸಂಪುಟದಲ್ಲಿ ಅನುಮೋದನೆ ಕೊಡಿಸಿ, ತಾಲ್ಲೂಕಿನಲ್ಲಿ ಹಸಿರು ಮೂಡುವಂತೆ ಮಾಡಿದ್ದಾರೆ.

ಇದರಿಂದಾಗಿ ಕೂಡ್ಲಿಗಿ ಕ್ಷೇತ್ರದಲ್ಲಿ ಸಮಗ್ರ ನೀರಾವರಿ ಯೋಜನೆಯು 'ಐತಿಹಾಸಿಕ ದಾಖಲೆ'ಯಾಗಿದೆ. ಇದು ಸರಳ, ಮೆದು ಮನದ, ಹೃದಯವಂತ ಶಾಸಕ ಎನ್. ವೈ. ಗೋಪಾಲಕೃಷ್ಣ ಅವರಿಂದ ಮಾತ್ರ ಸಾಧ್ಯವಾಗಿದೆ ಎನ್ನುತ್ತಾರೆ ನಮ್ಮ ಕೂಡ್ಲಿಗಿ ನಾಗರಿಕರು. ಹಿಂದುಳಿದ ಪ್ರದೇಶ, ಬರದ ನಾಡು ಎಂದು ಹಣೆಪಟ್ಟಿ ಕಟ್ಟಿಕೊಂಡಿದ್ದ ಕೂಡ್ಲಿಗಿ ತಾಲ್ಲೂಕು ಇನ್ನು ಮುಂದೆ, 'ಸಮೃದ್ಧ ಬೆಳೆಗಳ ನಾಡಾಗಿ, ಬಂಗಾರದ ಬೀಡಾಗಿ ಕಂಗೊಳಿಸಲಿ' ಎಂದು ಈ ಕ್ಷೇತ್ರದ ಭೂತಾಯಿ ಮಕ್ಕಳಿಗೆ ಸನ್ಮಾನ್ಯ ಎನ್. ವೈ. ಗೋಪಾಲ ಕೃಷ್ಣ ಅವರು ಶುಭ ಹಾರೈಸಿದ್ದಾರೆ.



ಎನ್‌ವೈ. ಹನುಮಂತಪ್ಪ
ನಿವೃತ್ತ ನ್ಯಾಯಾಧೀಶರು
ಮಾಜಿ ಸಂಸದರು,
ಚಿತ್ರದುರ್ಗ, ಎನ್‌ವೈಜಿ
ಹಿರಿಯ ಸಹೋದರ



ಎನ್‌ವೈ. ಪೆನ್ನೋಬಳಸ್ವಾಮಿ
ಉದ್ಯಮಿ, ಬಿಜೆಪಿ
ಮುಖಂಡರು, ರಾಂಪುರ
ಎನ್‌ವೈಜಿ ಸಹೋದರ



ಎನ್‌ವೈ. ಗುರುಪ್ರಕಾಶ್
ವಕೀಲರು
ಎನ್‌ವೈಜಿ ಸಹೋದರ

ಎನ್‌ವೈಜಿ ಜನ್ಮ ವೃತ್ತಾಂತ

ಶ್ರೀಯುತ ಗೋಪಾಲ ಕೃಷ್ಣ ಅವರು ಮೂಲತಃ ಮೊಳಕಾಲ್ಮೂರು ತಾಲ್ಲೂಕಿನ ಎಲೆ ರಾಂಪುರದವರು. ತಂದೆ ಯಲ್ಲಪ್ಪ ಅವರು, ತತ್ವ-ಸಿದ್ಧಾಂತ ಅಳವಡಿಸಿಕೊಂಡ ಆದರ್ಶ ಶಿಕ್ಷಕ. ತಾಯಿ ಯಲ್ಲಮ್ಮನವರು ಪತಿಗೆ ನೆಚ್ಚಿನ ಸತಿಯಾಗಿದ್ದರು.

ನಾಲ್ವರು ಪುತ್ರರು ಹಾಗೂ ನಾಲ್ವರು ಪುತ್ರಿಯರಿದ್ದ ಬಲು ದೊಡ್ಡ ಅವಿಭಕ್ತ ಕುಟುಂಬವಾದ್ದರಿಂದ ಸಂಸಾರ ಸಾಗಿಸುವುದು ಬಲು ಕಷ್ಟವಾಗಿತ್ತು. ಬಡತನದಲ್ಲಿ ಬೆಳೆದು ಬಂದ ಗೋಪಾಲ ಕೃಷ್ಣ ಅವರು ತಾಯಿಗೆ 3ನೇ ಮುದ್ದು ಮಗನಾಗಿದ್ದರು. ಅಪಾರ ಜನಮನ್ನಣೆಯ ಈ ಎನ್.ವೈ. ಕುಟುಂಬಕ್ಕೆ ಒಮ್ಮೆ ಯಲ್ಲಮ್ಮನವರಿಗೆ ನಾಗಸಮುದ್ರದಿಂದ ಜಿಲ್ಲಾ ಪಂಚಾಯಿತಿಗೆ ಸ್ಪರ್ಧಿಸುವ ಅವಕಾಶ ಒದಗಿ ಬಂತು. ಅಕ್ಕರೆಯ ಈ ಎನ್.ವೈ. ಕುಟುಂಬದ ಯಲ್ಲಮ್ಮ ಅವರನ್ನು, ಜನರು ಪ್ರಚಂಡ ಬಹುಮತದಿಂದ ಆಯ್ಕೆ ಮಾಡಿ, ಚಿತ್ರದುರ್ಗ ಜಿಲ್ಲಾ ಪಂಚಾಯಿತಿ ಸದಸ್ಯೆಯನ್ನಾಗಿಸಿದರು. ಇದರಿಂದ ಅಕ್ಷರಶಃ ಎನ್.ವೈ. ಕುಟುಂಬ 'ರಾಜಕೀಯ ಪ್ರವೇಶ' ಪಡೆಯಲು ದಾರಿಯಾಯಿತು.

ತಾಯಿಯ ಪ್ರೇರಣೆಯಿಂದ ಎನ್‌ವೈಜಿ ಅವರು ರಾಜಕೀಯಕ್ಕೆ ಪದಾರ್ಪಣೆ ಮಾಡಿದರು. ಯಲ್ಲಮ್ಮ ಅವರು ತಮ್ಮ ಮುದ್ದು ಮಗನಾದ, ಸುಶಿಕ್ಷಿತ ಸಂಸ್ಕಾರ ಹೊಂದಿದ್ದ, ಜನಮನ ಗೆಲ್ಲಬಲ್ಲವರಾಗಿದ್ದ, ಸರಳತೆ ಮೈಗೂಡಿಸಿಕೊಂಡಿದ್ದ ಎಂ.ಬಿ.ಎ ಪದವೀಧರರಾಗಿ ನೌಕರಿಯಲ್ಲಿದ್ದ ಎನ್.ವೈ. ಗೋಪಾಲಕೃಷ್ಣ ಅವರನ್ನು ರಾಜಕೀಯಕ್ಕೆ ಕರೆತಂದರು. ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರದಿಂದ ಮೊದಲ ಬಾರಿಗೆ ಸ್ಪರ್ಧಿಸಿದ ಎನ್‌ವೈಜಿ ಗೆಲುವಿನ ಪತಾಕೆ ಹಾರಿಸಿ, ರಾಜಕೀಯ ಪ್ರವೇಶಿಸಿದರು. ನಂತರ ರಾಜಕೀಯದಲ್ಲಿ ಹಿಂದಿರುಗಿ ನೋಡಲಿಲ್ಲ. ಸತತ ನಾಲ್ಕು ಬಾರಿ ಮೊಳಕಾಲ್ಮೂರು ಕ್ಷೇತ್ರದಿಂದ ಆಯ್ಕೆಯಾಗಿದ್ದ ಅವರು, ಒಮ್ಮೆ ಬಳ್ಳಾರಿ ಗ್ರಾಮೀಣ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ಬದಲಾದ ರಾಜಕೀಯ ಸನ್ನಿವೇಶದಲ್ಲಿ ಅನಿರೀಕ್ಷಿತವಾಗಿ ಕೂಡ್ಲಿಗಿ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿದ ಅವರನ್ನು ಮತದಾರರು ಕೈ ಬಿಡಲಿಲ್ಲ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಮಾನವೀಯತೆಯ ಮೂರ್ತಿ

ಬಾಲ್ಯದಿಂದಲೂ ಬಡತನದ ಬವಣೆ ಅರಿತಿದ್ದ ಶಾಸಕ ಎನ್‌ವೈಜಿ ಅವರಿಗೆ ತಮ್ಮ ಕ್ಷೇತ್ರಕ್ಕೆ ಮೂಲಸೌಕರ್ಯಗಳನ್ನು ಸಮರ್ಪಕವಾಗಿ ಒದಗಿಸಬೇಕೆಂಬ ಉತ್ಕಟ ಬಯಕೆ ಇತ್ತು. ರೈತರ ಬವಣೆ ಜತೆಗೆ, ಕೂಲಿ ಕಾರ್ಮಿಕರ ಸ್ಥಿತಿಗತಿಗಳನ್ನು ಅವರು ಕಣ್ಣಾರೆ ಕಂಡಿದ್ದರು. ಮಕ್ಕಳು ಬಾಲ ಕಾರ್ಮಿಕರಾಗಿ ದುಡಿಯುವುದನ್ನು ನೋಡಿ ಮರುಗಿದ್ದರು. ಮಳೆಯಾಶ್ರಿತ ಭೂಮಿಗಳನ್ನು ನಂಬಿದ ರೈತರು ಬರ ಬಂದಾಗ ರಾಜ್ಯದ ವಿವಿಧೆಡೆ ಗುಳೆ ಹೋಗುವುದನ್ನು ಕಂಡು ಕಂಬನಿ ಮಿಡಿದಿದ್ದರು. ನೆಲೆಯಿಲ್ಲದೆ ಅಲೆದಾಡುವ ಸ್ಥಿತಿಯಲ್ಲಿದ್ದ ಜನರನ್ನು ನೋಡಿ ಇವರ ಮನ ಮುದುಡಿ ಹೋಗಿತ್ತು. ಮನಸ್ಸು ಅವಕಾಶಕ್ಕಾಗಿ ಕಾಯುತ್ತಿತ್ತು. ಜನ ಅವರನ್ನು ಸತತವಾಗಿ ಶಾಸಕರಾಗಿ ಆಯ್ಕೆ ಮಾಡಿ 'ಜನ ಸೇವೆ' ಮಾಡುವ ಆಸೆ ಈಡೇರಿಸಿದ್ದಾರೆ.

ಇವರಿಗೆ ತಾಯಿ ಹೇಳಿದ ಮಾತುಗಳು ಪದೇ ಪದೇ ನೆನಪಿಗೆ ಬರುತ್ತಿತ್ತು. 'ಮಗು ಒಳ್ಳೆಯ ವಿಷಯಗಳಿಗೆ ಮನುಷ್ಯನು ತನ್ನನ್ನು ತಾನು ತೆರೆದುಕೊಳ್ಳಬೇಕು. ಇನ್ನೊಬ್ಬರ ಕಷ್ಟದಲ್ಲಿ ಭಾಗಿಯಾಗಬೇಕು. ಪರರ ದುಃಖ ನೋಡಿ ತಾನೂ ದುಃಖಿತನಾಗುವ ಹೃದಯವಂತಿಕೆ ಹೊಂದಿರಬೇಕು. ಕಷ್ಟ ಪರಿಹರಿಸಲು ಅಪೇಕ್ಷೆ ಇಲ್ಲದೆ ದುಡಿಯಬೇಕು. ಯಾರನ್ನೋ ಮೆಚ್ಚಿಸುವುದಕ್ಕಾಗಲಿ ಫಲಾಪೇಕ್ಷೆ ನಿರೀಕ್ಷಿಸಿ ಕಾರ್ಯದಲ್ಲಿ ತೊಡಗಿದರೆ ಅದು ಡಂಬಾಚಾರವಾಗುವುದು. ನಿಷ್ಕಲ್ಮಶ ಗುಣದಿಂದ ಕೆಲಸದಲ್ಲಿ ಭಾಗಿಯಾಗಬೇಕು' ಎಂದು ಎನ್‌ವೈಜಿ-ಕಾರ್ಯಕರ್ತರ ಸಭೆಗಳಲ್ಲಿ ಅವರು ತಮ್ಮ ತಾಯಿಯ ಮಾತುಗಳನ್ನು ಭಾವಪರವಶ-ರಾಗಿ ಹೇಳುತ್ತಿದ್ದರು.

ಬದಲಾದ ರಾಜಕೀಯ ವಿದ್ಯಮಾನದಿಂದಾಗಿ ಎನ್‌ವೈಜಿ ಅವರು, ಕೇವಲ ಒಂದು ವಾರದ ಅಂತರದಲ್ಲಿ ಕೂಡ್ಲಿಗಿ ವಿಧಾನಸಭಾ ಕ್ಷೇತ್ರಕ್ಕೆ ಅಭ್ಯರ್ಥಿಯಾಗಿ ಬಂದರು.

ಅಲ್ಪ ಸಮಯದಲ್ಲಿ ಕ್ಷೇತ್ರದ 216 ಹಳ್ಳಿಗಳಿಗೂ ಭೇಟಿ ನೀಡಿ, ಮತ ಕೇಳಲು ಸಮಯವಿಲ್ಲದ ಸ್ಥಿತಿ ಎದುರಾಗಿತ್ತು. ಇಂತಹ ಸಂದಿಗ್ಧದಲ್ಲಿ ಕ್ಷೇತ್ರದ ಮತದಾರರು ಇವರನ್ನು ನಂಬಿ ಮತ ನೀಡಿ, ಗೆಲುವಿನ ದಡ ಸೇರಿಸಿದರು. ಗೆಲುವಿನಿಂದ ಬೀಗದ ಅವರು, 'ಮತದಾರರ ಋಣ ತೀರಿಸಲು ಕ್ಷೇತ್ರದ ಅಭಿವೃದ್ಧಿಗೆ ಹಗಲಿರಳು ದುಡಿಯುತ್ತೇನೆ' ಎಂದು ಕಾರ್ಯಕ್ರ-ಮಗಳಲ್ಲಿ ಹೇಳಿಯೇ ಮಾತು ಮುಗಿಸುತ್ತಿದ್ದರು. ಕಷ್ಟಗಳನ್ನು ಕಂಡಿದ್ದ ಜನತೆಗೆ ಈ ಮಾನವೀಯತೆಯ ಮಹನೀಯ, ಕ್ಷೇತ್ರದ ಸಂಕಷ್ಟ ಪರಿಹರಿಸುವ ಕಲಿಯುಗದ ಗೋಪಾಲಕೃಷ್ಣನಾಗಿ ಅವತಾರವನ್ನೆತ್ತಿ ಬಂದಿರುವವರೋ ಎಂದೆನಿಸುತ್ತಿದೆ.

ಅಧಿಕಾರ ದಾಹಿಯಾಗದೆ, ಅಭಿವೃದ್ದಿ ಹರಿಕಾರರಾದ ಎನ್‌ವೈಜಿ ತುಂಬಿದ ಕೊಡ ತುಳಕದು ಎನ್ನುವ ನಾಣ್ಣುಡಿಯಂತೆ, ಆರು ಬಾರಿ ಶಾಸಕರಾದರೂ ಸಚಿವ ಸ್ಥಾನಕ್ಕೆ ಎಂದೂ ಲಾಬಿ ನಡೆಸಲಿಲ್ಲ. ಬದಲಿಗೆ ಕ್ಷೇತ್ರಕ್ಕೆ ಸಾಕಷ್ಟು ಅನುದಾನ ತಂದು ಅಭಿವೃದ್ಧಿ ಕಾರ್ಯ ಕೈಗೊಳ್ಳಬೇಕೆಂಬುದು ಅವರ ಗುರಿಯಾಗಿತ್ತು. ತಮ್ಮನ್ನೇ ಅರಸಿಬಂದ ಬಂದ ಕೆಲ ಹುದ್ದೆಗಳನ್ನು ಅಲಂಕರಿಸಿ, ಸಮರ್ಥವಾಗಿ ಸೇವೆ ಸಲ್ಲಿಸಿದ್ದಾರೆ. ಇವುಗಳಲ್ಲಿ 2005ರಲ್ಲಿ ಉಪ ಸಭಾಪತಿಯಾಗಿ, 2011ರಲ್ಲಿ ಜವಳಿ ಮತ್ತು ಕೈಮಗ್ಗ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ, 2016ರಲ್ಲಿ ನಂಜುಂಡಪ್ಪ ವರದಿ ಅನುಷ್ಠಾನ ಸಮಿತಿ ಅಧ್ಯಕ್ಷರಾಗಿ ಕಾರ್ಯನಿರ್ವಹಣೆ.. ಹೀಗೆ 4 ದಶಕಗಳಿಗೂ ಹೆಚ್ಚು ರಾಜಕೀಯ ಅನುಭವ ಹೊಂದಿರುವ ಎನ್‌ವೈಜಿ ಅವರಿಗೆ ವಿಧಾನಸೌಧದ ಎಲ್ಲಾ ಮೊಗಸಾಲೆಗಳ ಅಧಿಕಾರಿ ವರ್ಗದವರು ಚಿರಪರಿಚಿತ.

ಎನ್‌ವೈಜಿ ಅವರ ತಂದೆ ಆದರ್ಶ ಶಿಕ್ಷಕರಾಗಿದ್ದ-ರಿಂದ ಅವರ ಮಹತ್ವಾಕಾಂಕ್ಷೆಯ ಹಿನ್ನೆಲೆಯಲ್ಲಿ, ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಿದರು. ಅತ್ಯಂತ ಹಿಂದುಳಿದ, ಪರಿಶಿಷ್ಟ ವರ್ಗದವರೇ ಹೆಚ್ಚಾಗಿರುವ ಸಮುದಾಯಗಳನ್ನು ಸಮಾಜದ ಮುಖ್ಯ ವಾಹಿನಿಗೆ ತರಲು ಶಿಕ್ಷಣದಿಂದಲೇ ಮಾತ್ರ ಸಾಧ್ಯ ಎಂದು ಅರಿತ ಎನ್‌ವೈಜಿ, ಕ್ಷೇತ್ರದಲ್ಲಿ ಶಿಕ್ಷಣಕ್ಕಾಗಿ ಹೆಚ್ಚಿನ ಆದ್ಯತೆ ನೀಡಿದರು. ಕ್ಷೇತ್ರದಲ್ಲಿ 460 ಶಾಲಾ ಕೊಠಡಿಗಳನ್ನು ನಿರ್ಮಾಣ ಮಾಡಿದ್ದಾರೆ. ಗ್ರಾಮೀಣ ಭಾಗದ ವಿದ್ಯಾ-ರ್ಥಿಗಳಿಗೆ ಅನುಕೂಲವಾಗಲೆಂದು ವಸತಿ ನಿಲಯ ಸ್ಥಾಪಿಸಿ, ಹಿಂದುಳಿದ ಹಾಗೂ ರೈತಾಪಿ ಮಕ್ಕಳಿಗೆ ಶಿಕ್ಷಣ ಕೊಡಿಸಲು ಮುಂದಾಗಿದ್ದಾರೆ. ಗ್ರಾಮೀಣ ವಿದ್ಯಾರ್ಥಿ-ಗಳಿಗೆ ತಾಂತ್ರಿಕ ಶಿಕ್ಷಣಕ್ಕಾಗಿ ದೂರದ ಪಟ್ಟಣಗಳಿಗೆ ಹೋಗುವ ಅನಿವಾರ್ಯತೆ ಮನಗಂಡ ಎನ್‌ವೈಜಿ, ಕೂಡ್ಲಿಗಿ ಪಟ್ಟಣದಲ್ಲೇ ಸುಸಜ್ಜಿತ ಪಾಲಿಟೆಕ್ನಿಕ್ ಕಾಲೇಜು ನಿರ್ಮಾಣ ಮಾಡಲು ಅನುದಾನ ಒದಗಿಸಿದರು.

ಈ ಸುಸಜ್ಜಿತ ಕಟ್ಟಡದಲ್ಲಿ ಅನೇಕ ತಾಂತ್ರಿಕ ವಿಭಾಗಗಳಿಗೆ ಅನುಕೂಲವಾಗುವಂತಹ ಪ್ರಯೋಗ ಶಾಲೆ, ಗ್ರಂಥಾಲಯ, ಭೋಜನಾಲಯ, ಶೌಚಾಲಯ ಹಾಗೂ ಗ್ರಾಮೀಣ ವಿದ್ಯಾರ್ಥಿನಿಯರಿಗೆ ಹಾಸ್ಟೆಲ್ ಸೇರಿದಂತೆ 9 ಎಕರೆಯ ಮೈದಾನಕ್ಕೆ ಕಾಂಪೌಂಡ್ ವ್ಯವಸ್ಥೆಯನ್ನು ಕಲ್ಪಿಸಿದ್ದಾರೆ. ಕ್ಷೇತ್ರದ ಮತದಾರರು ನೀಡಿದ ಗೆಲುವನ್ನು ಭಾವನಾತ್ಮಕವಾಗಿ ಸ್ವೀಕರಿಸಿದ ಎನ್‌ವೈಜಿ, ತಮ್ಮ ಮನಸಿಗೆ ತಾವೇ ವಚನ ನೀಡುವುದರ ಮೂಲಕ, ಕಾಯ-ವಾಚ-ಮನಸ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಪಣ ತೊಟ್ಟರು. ಅದರಂತೆ ಮೂರು ವರ್ಷಗಳಲ್ಲಿ ವಿವಿಧ ಇಲಾಖೆಗಳಿಗೆ ಕೋಟ್ಯಂತರ ರೂಪಾಯಿ ಅನುದಾನ ತಂದು, ಕ್ಷೇತ್ರವನ್ನು ಅಭಿವೃದ್ದಿ ದಿಕ್ಕಿನತ್ತ ಕೊಂಡೊಯ್ಯುತ್ತಿದ್ದಾರೆ.

24 ತಾಸಿನೊಳಗೆ ಪರಿಹಾರ

ಕ್ಷೇತ್ರದಲ್ಲಿನ ಕುದುರೆಡವು, ನೆಲಬೊಮ್ಮನಹಳ್ಳಿ, ಕ್ಯಾಸನಕೆರೆ ಹಾಗೂ ಎಂ.ಬಿ. ಅಯ್ಯನಹಳ್ಳಿ ಗ್ರಾಮಗಳಲ್ಲಿ ಆಕಸ್ಮಿಕವಾಗಿ ಪ್ರಕೃತಿ ವಿಕೋಪಗಳಿಗೆ ತುತ್ತಾಗಿ ಮೃತಪಟ್ಟಿದ್ದ ಬಡ ಕುಟುಂಬಗಳಿಗೆ ಕೇವಲ 24 ತಾಸಿನಲ್ಲಿ ಸರ್ಕಾರದಿಂದ ಬರಬೇಕಾದ ಪರಿಹಾರದ ಮೊತ್ತ ತಲಾ ₹5.25 ಲಕ್ಷವನ್ನು ಮೃತರ ಕುಟುಂಬಕ್ಕೆ ನೀಡಿ, ಅವರಿಗೆ ಧೈರ್ಯ ತುಂಬಿದ್ದಾರೆ.

ಕೊರೊನಾ ಸೋಂಕಿನಿಂದ ಹೈರಾಣದ ಜನತೆಗೆ ಧೈರ್ಯ ತುಂಬಿದ ಎನ್‌ವೈಜಿ, ಕಂಗೆಟ್ಟದ ಕ್ಷೇತ್ರದ ಜನರನ್ನು ಸುರಕ್ಷಿತವಾಗಿಡಲು ಪಣ ತೊಟ್ಟರು. ಆರೋಗ್ಯ ಇಲಾಖೆ ಸೇರಿದಂತೆ ಇತರ ಇಲಾಖೆಗಳೊಡನೆ ಸದಾ ಸಂಪರ್ಕವಿದ್ದು, ತಾಲ್ಲೂಕು ಮಟ್ಟದ ಅಧಿಕಾ-ರಿಗಳೊಂದಿಗೆ ಕೊರೊನಾ ಹತೋಟಿಗಾಗಿ ಸರಣಿ ಸಭೆಗಳನ್ನು ನಡೆಸಿದರು. ಅವಶ್ಯವಿರುವ ಔಷಧ ಸಾಮಗ್ರಿಯನ್ನು ಒದಗಿಸುವ ಜೊತೆಗೆ, ಇತ್ತೀಚಿಗೆ ಶಾಸಕರ ಅನುದಾನದಲ್ಲಿರುವ 42 ಆಮ್ಲಜನಕ ಸಿಲಿಂಡರ್‌ಗಳನ್ನು ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಗೆ ನೀಡಿದರು. ಕೋವಿಡ್ ಚಿಕಿತ್ಸೆಗಾಗಿ ಬಂದವರಿಗೆ ಆಸ್ಪತ್ರೆಯಲ್ಲಿ ಹಾಸಿಗೆ ಕೊರತೆಯಾಗದಂತೆ ಯೋಜನೆ ರೂಪಿಸಿದರು. ಕಂದಗಲ್ಲು ಹಾಗು ಚಿಕ್ಕಜೋಗಿಹಳ್ಳಿಗಳಲ್ಲಿ ಕೋವಿಡ್ ಆರೈಕೆ ಕೇಂದ್ರಗಳನ್ನು ಸ್ಥಾಪಿಸಿದರು. ಸೋಂಕು ತಡೆಗೆ ಮುಂಚೂಣಿಯಲ್ಲಿರುವ ಕೊರೊನಾ ವಾರಿಯರ್‌ಗಳಿಗೆ ನೈತಿಕ ಸ್ಥೈರ್ಯ ತುಂಬುತ್ತಾ, ಅವರ ಸೇವೆಯನ್ನು ಶ್ಲಾಘಿಸಿ ಸನ್ಮಾನಿಸಿದರು.

ಕ್ಷೇತ್ರದಲ್ಲಿ ಕೋವಿಡ್‌ನಿಂದ ಮೃತಪಟ್ಟವರ ಕುಟುಂ-ಬದವರೊಂದಿಗೆ ಇದ್ದ ಎನ್‌ವೈಜಿ, ಜೀವ ತೆತ್ತವರಿಗೆ ಶ್ರದ್ಧಾಂಜಲಿ ಸಲ್ಲಿಸಿದರು. ಮೃತರಿಗೆ ಅಂತಿಮ ವಿಧಿ ವಿಧಾನಗಳನ್ನು ಪೂರೈಸಲಾಗದ ಕುಟುಂಬಗಳಿಗೆ ಸಾಮೂಹಿಕವಾಗಿ ಶ್ರದ್ಧಾಂಜಲಿ ಕಾರ್ಯಕ್ರಮ ನಡೆಸಿದರು. ಜೊತೆಗೆ, 60 ಮೃತರ ಕುಟುಂಬಗಳಿಗೆ ವೈಯಕ್ತಿಕವಾಗಿ ತಲಾ ₹20 ಸಾವಿರದಂತೆ ನೆರವು ನೀಡಿದರು.



ಕುದುರೆಡುವು ಗ್ರಾಮದಲ್ಲಿ ಸಿಡಿಲಿನಿಂದ ಮೃತಪಟ್ಟಿದ್ದ ರೈತನ ಕುಟುಂಬಕ್ಕೆ 24 ಗಂಟೆಯೊಳಗೆ ಸರ್ಕಾರದಿಂದ ಪರಿಹಾರ ವಿತರಿಸಿದ ಶಾಸಕ ಗೋಪಾಲಕೃಷ್ಣ



ಕೋವಿಡ್ ಮೊದಲ ಅಲೆಯಲ್ಲಿ ಅವಿರತ ಸೇವೆ ಸಲ್ಲಿಸಿದ ಆಶಾ ಕಾರ್ಯಕರ್ತೆಯರಿಗೆ ಸರ್ಕಾರದಿಂದ ₹3 ಸಾವಿರ ಪ್ರೋತ್ಸಾಹಧನದ ಚೆಕ್ ವಿತರಿಸಿದ ಎನ್‌ವೈಜಿ



ಕೋವಿಡ್ ಎರಡನೇ ಅಲೆಯಲ್ಲಿ ಮೃತಪಟ್ಟವರಿಗೆ ಶಾಸಕ ಎನ್‌ವೈ. ಗೋಪಾಲಕೃಷ್ಣ ಅವರು, ವೈಯಕ್ತಿಕವಾಗಿ ಪ್ರತಿ ಕುಟುಂಬಕ್ಕೆ ತಲಾ ₹20 ಸಾವಿರ ನೆರವು ನೀಡಿದರು



ತಾಲ್ಲೂಕು ಪಂಚಾಯ್ತಿ ಅನುದಾನದಲ್ಲಿ ಅಂಗವಿಕಲ ಫಲಾನುಭವಿಗಳಿಗೆ ಶಾಸಕ ಎನ್‌ವೈ. ಗೋಪಾಲಕೃಷ್ಣ ಹೊಲಿಗೆ ಯಂತ್ರಗಳನ್ನು ವಿತರಿಸಿದರು

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)				
ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	92.14	1,275	4,719
ಹಾರಂಗಿ	2,859	2,841.55	387	80
ಕಬಿನಿ	2284.00	2,275.84	1,138	700
ಹೇಮಾವತಿ	2,922	2,895.92	899	200
ಲಿಂಗನಮಕ್ಕಿ	1,819	1,784.95	3,311	5,285.25
ಸೂಪಾ (ಮೀ)	564	538.73	2,528	5,142
ಮಾಣಿ	594	573.66	86	-
ತುಂಗಭದ್ರಾ	1,633	1,609.12	5,230	261
ಮಲಪ್ರಭಾ	2079.5	2,062.80	692	194
ಘಟಪ್ರಭಾ	2175	2,134.81	1,419	129
ಭದ್ರಾ	186	155	2,557	80
ಆಲಮಟ್ಟಿ (ಮೀ)	519.6	517.46	8,078	9,617
ನಾರಾಯಣಪುರ (ಮೀ)	492.25	489.80	10,000	-

* ನೆಲಮಟ್ಟದಿಂದ

ಕೊಡಗಿನಲ್ಲಿ ಸಾಧಾರಣ ಮಳೆ

ಮಡಿಕೇರಿ: ಕೊಡಗು ಜಿಲ್ಲೆಯ ಮಡಿಕೇರಿ, ನಾಪೋಕ್ಲು, ಭಾಗಮಂಡಲ, ತಲಕಾವೇರಿ ವ್ಯಾಪ್ತಿಯಲ್ಲಿ ಶುಕ್ರವಾರ ಮಧ್ಯಾಹ್ನ ತನಕವೂ ಸಾಧಾರಣ ಮಳೆ ಸುರಿಯಿತು. ಮಧ್ಯಾಹ್ನದ ಬಳಿಕ ಮತ್ತೆ ಬಿಸಿಲು ವಾತಾವರಣ ಕಂಡುಬಂತು. ಜಿಲ್ಲೆಯಲ್ಲಿ ವಾರದಿಂದ ಮುಂಗಾರು ಮಳೆ ಬಿಡುವು ಕೊಟ್ಟಿತ್ತು.

‘ಜೀವವೈವಿಧ್ಯ ಜಾಗೃತಿ ಅಭಿಯಾನ’ದಲ್ಲಿ ಮುಖ್ಯಮಂತ್ರಿ ಹೇಳಿಕೆ

ಶ್ರೀಗಳ ಹೆಸರಿನಲ್ಲಿ ಸ್ಮೃತಿವನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತುಮಕೂರಿನಲ್ಲಿ ಸಿದ್ಧಗಂಗಾ ಶ್ರೀಗಳು ಹಾಗೂ ಉಡುಪಿಯಲ್ಲಿ ಪೇಜಾವರ ಶ್ರೀಗಳ ಹೆಸರಿನಲ್ಲಿ ಸ್ಮೃತಿವನ ನಿರ್ಮಿಸಲಾಗುವುದು ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದರು.

ಕರ್ನಾಟಕ ಜೀವವೈವಿಧ್ಯ ಮಂಡಳಿ ಹಮ್ಮಿಕೊಂಡಿರುವ ‘ಜೀವವೈವಿಧ್ಯ ಜಾಗೃತಿ ಅಭಿಯಾನ’ಕ್ಕೆ ನಗರದಲ್ಲಿ ಶುಕ್ರವಾರ ಚಾಲನೆ ನೀಡಿ ಮಾತನಾಡಿದ ಅವರು, ‘ನಾಡಿನ ಕೆರೆ, ನದಿ, ಕಣಿವೆಗಳು ಸೇರಿದಂತೆ ನಿಸರ್ಗ ಸಂಪತ್ತುಗಳ ಸಂರಕ್ಷಣೆಗೆ ಸ್ಥಳೀಯರೇ ಮುಂದಾಗಬೇಕು’ ಎಂದರು.

‘ನೈಸರ್ಗಿಕ ಸಂಪತ್ತುಗಳ ಸಂರಕ್ಷಣೆ ಬಗ್ಗೆ ಜಾಗೃತಿ ಮೂಡಿಸಲು ಮಂಡಳಿಯು ರಚನಾತ್ಮಕ ಆಂದೋಲನವನ್ನು ಕೈಗೆತ್ತಿಕೊಂಡಿದೆ. ನಮ್ಮ ಸರ್ಕಾರವು ಬಜೆಟ್‌ನಲ್ಲಿ ನವೀನ ಪರಿಸರ-ಅರಣ್ಯ ಅಭಿವೃದ್ಧಿ ಯೋಜನೆಗಳನ್ನು ಘೋಷಿಸಿದೆ’ ಎಂದು ಹೇಳಿದರು.



ಮಂಡಳಿಯ ಕಾರ್ಯಚಟುವಟಿಕೆಗಳ ವರದಿಯನ್ನು ಅನಂತ ಹೆಗಡೆ ಆಶೀಸರ ಅವರು ಬಿ.ಎಸ್. ಯಡಿಯೂರಪ್ಪ ಅವರಿಗೆ ಸಲ್ಲಿಸಿದರು.

ಮಂಡಳಿಯ ಅಧ್ಯಕ್ಷ ಅನಂತ ಹೆಗಡೆ ಅಶೀಸರ, ‘ಈ ಅಭಿಯಾನವು ಆ.15ರವರೆಗೆ ರಾಜ್ಯದೆಲ್ಲೆಡೆ ನಡೆಯಲಿದೆ. ರಾಜ್ಯದಲ್ಲಿನ ಪಂಚಾಯತಿ, ನಗರ ಸಂಸ್ಥೆಗಳಲ್ಲಿ ರಚಿತಗೊಂಡಿರುವ ಜೀವವೈವಿಧ್ಯ ಸಮಿತಿಗಳು ಸಕ್ರಿಯವಾಗಬೇಕು. ಸ್ಥಾನಿಕವಾಗಿ ಜಿಲ್ಲಾ, ತಾಲ್ಲೂಕು ಹಾಗೂ ಗ್ರಾಮ ಮಟ್ಟದಲ್ಲಿನ ನಿಸರ್ಗ ಸಂಪತ್ತಿನ ಪರಿಸ್ಥಿತಿಯ ಅವಲೋಕನವಾಗಬೇಕು. ಕೆರೆಗಳು ಹಾಗೂ ವನಗಳ ಪುನಶ್ಚೇತನ ಕಾರ್ಯಗಳಲ್ಲಿ ಜನತೆ ಪಾಲ್ಗೊಳ್ಳಬೇಕೆಂಬ ಉದ್ದೇಶದಿಂದ ಈ ಅಭಿಯಾನ ರೂಪಿಸಲಾಗಿದೆ’ ಎಂದು ಹೇಳಿದರು.

‘ಹಾಸನದ ಗೆಂಡೆಕಟ್ಟೆಯಲ್ಲಿ ಜೀವವೈವಿಧ್ಯ ವನ ನಿರ್ಮಾಣಕ್ಕೆ ಮುಂದಾಗಿದ್ದೇವೆ. 5 ಜಿಲ್ಲೆಗಳಲ್ಲಿ ರಕ್ತಚಂದನ, ಶ್ರೀಗಂಧ, ಸೀತಾ ಅಶೋಕ ಸೇರಿದಂತೆ ವಿನಾಶದ ಅಂಚಿನ ಸಸ್ಯಗಳ ವನಗಳ ನಿರ್ಮಾಣ ಮತ್ತು ಪುನಶ್ಚೇತನ ಯೋಜನೆಗೆ ಚಾಲನೆ ನೀಡಲಿದ್ದೇವೆ’ ಎಂದು ಮಾಹಿತಿ ನೀಡಿದರು.

ವಾಹನವಿಲ್ಲದೇ ಕೋಟ್ಯಂತರ ಸಾಲ!

ಮೈಸೂರು: ವಾಹನ ಇಲ್ಲದೆಯೇ ನಕಲಿ ದಾಖಲೆ ಸೃಷ್ಟಿಸಿ ಕೋಟ್ಯಂತರ ರೂಪಾಯಿ ಸಾಲ ಪಡೆದಿರುವ ಬೃಹತ್ ಜಾಲವನ್ನು ಬಯಲಿಗೆಳೆದಿರುವ ನಗರದ ದೇವರಾಜ ಠಾಣೆಯ ಪೊಲೀಸರು 15 ಮಂದಿಯನ್ನು ಬಂಧಿಸಿದ್ದಾರೆ.

ಆರೋಪಿಗಳು ವಿವಿಧ ಹಣಕಾಸು ಸಂಸ್ಥೆಗಳಿಂದ ಬರೋಬರಿ ₹ 1.35 ಕೋಟಿ ಸಾಲ ಪಡೆದಿದ್ದಾರೆ. ಅದಕ್ಕಾಗಿ ಬಳಕೆ ಮಾಡಿದ 7 ಲಾರಿ, 2 ಕಾರುಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಆರೋಪಿಗಳ ಪೈಕಿ ಬಹುತೇಕರು ತಮಿಳುನಾಡಿಗೆ ಸೇರಿದವರು.

‘ಸಾಲದ ಕಂತು ಪಾವತಿಸದವರ ಲಾರಿಯನ್ನು ವಶಕ್ಕೆ ಪಡೆಯಲು ಹೋದಾಗ ಅಲ್ಲಿ ವಾಹನವೇ ಇರಲಿಲ್ಲ’ ಎಂದು ಚೋಳಮಂಡಲಂ ಫೈನಾನ್ಸ್ ಸ್ಥಳೀಯ ವ್ಯವಸ್ಥಾಪಕ ವಿಜಯ್ ದೂರು ನೀಡಿದ್ದರು.


ಏನಿದು ಪ್ರಕರಣ?: ಆಂಧ್ರಪ್ರದೇಶದ ವಿವಿಧ ಆರ್‌ಟಿಒ ಕಚೇರಿಗಳಲ್ಲಿ ನೋಂದಣಿಯಾಗಿರುವಂತೆ ನಕಲಿ ಆರ್.ಸಿ ಶೀಟ್‌ನ್ನು ಸೃಷ್ಟಿಸಿರುವ ಆರೋಪಿಗಳು ಕರ್ನಾಟಕದ ಹಲವು ಆರ್‌ಟಿಒ ಕಚೇರಿಗಳಲ್ಲಿ ವರ್ಗಾವಣೆ, ಮರು ನೋಂದಣಿಗಾಗಿ ಅರ್ಜಿ ಸಲ್ಲಿಸಿ ಸ್ಥಳೀಯ ವಿಳಾಸದ ನಕಲಿ ದಾಖಲೆಗಳನ್ನು ನೀಡಿ, ವರ್ಗಾವಣೆ ಮಾಡಿಸಿಕೊಳ್ಳುತ್ತಿದ್ದರು.

’2019ರಿಂದ ಇಲ್ಲಿಯವರೆಗೆ ಒಟ್ಟು 200 ನಕಲಿ ಆರ್.ಸಿ ಕಾರ್ಡ್ ಸೃಷ್ಟಿಸಿದ್ದಾರೆ. ಈ ದಾಖಲೆಗಳ ಆಧಾರದಲ್ಲೇ ಹಣಕಾಸು ಸಂಸ್ಥೆಗಳಿಂದ ವಾಹನ ಸಾಲ ಪಡೆದು ವಂಚಿಸುತ್ತಿದ್ದರು. ಆಂಧ್ರಪ್ರದೇಶದಲ್ಲಿ ಇನ್ನೂ ವಾಹನಗಳ ನೋಂದಣಿ ಪ್ರಕ್ರಿಯೆ ಡಿಜಿಟಲೀಕರಣಗೊಂಡಿಲ್ಲ. ಹಾಗಾಗಿ, ಆರೋಪಿಗಳು ಮೂಲ ನಕಲಿ ನೋಂದಣಿಯನ್ನು ಆಂಧ್ರದಲ್ಲೆ ಮಾಡಿಸುತ್ತಿದ್ದರು ಎಂಬ ಅಂಶ ತನಿಖೆ ವೇಳೆ ಗೊತ್ತಾಗಿದೆ’ ಎಂದು ಅಧಿಕೃತ ಮೂಲಗಳು ತಿಳಿಸಿವೆ. ದೇವರಾಜ ಎಸಿಪಿ ಎಂ.ಎನ್.ಶಶಿಧರ್ ತನಿಖೆಯ ನೇತೃತ್ವ ವಹಿಸಿದ್ದಾರೆ.

ತಂಗಿಯ ಶವ ಒಯ್ಯುವಾಗ ಅಪಘಾತ: ಅಣ್ಣ ಸಾವು

ಆದಿವಾಲ (ಹಿರಿಯೂರು): ತಾಲ್ಲೂಕಿನ ಆದಿವಾಲ ಸಮೀಪದ ಪುಣೆ–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಗುರುವಾರ ತಡ ರಾತ್ರಿ ತಂಗಿಯ ಮೃತದೇಹ ವಿದ್ದ ಆಂಬುಲೆನ್ಸ್ ಹಿಂಬಾಲಿಸುತ್ತಿದ್ದ ಇನ್ನೋವಾ ಕಾರು ಹಾಗೂ ಲಾರಿ ನಡುವೆ ಸಂಭವಿಸಿದ ಅಪಘಾತದಲ್ಲಿ ಅಣ್ಣ ಕೂಡ ಮೃತಪಟ್ಟಿದ್ದಾರೆ.

ಹಿರೇಕೆರೂರು ತಾಲ್ಲೂಕಿನ ಹಿರೇಮೊರಬ ಗ್ರಾಮದ ರಾಮು ಮುದಿಗೌಡರ (56) ಮೃತಪಟ್ಟವರು. ರಾಮು ಅವರ ಸಹೋದರಿ ರೇಣುಕಾ ಅನಾರೋಗ್ಯದಿಂದ ಬಳಲುತ್ತಿದ್ದರಿಂದ ಬೆಂಗಳೂರಿನ ವಿಕ್ರಂ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೇ ಗುರುವಾರ ರಾತ್ರಿ ಅವರು ಮೃತಪಟ್ಟಿದ್ದರು. ಆಂಬುಲೆನ್ಸ್‌ನಲ್ಲಿ ಸಹೋದರಿಯ ಶವ ತೆಗೆದುಕೊಂಡು ಹಿರೇಕೆರೂರಿಗೆ ಹೊರಟಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.



ರಾಮು

ಪತ್ರಕರ್ತರಾಗಿದ್ದ ರಾಮು ಅವರು ಹಿರೇಕೆರೂರು ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿ, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾಗಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಅಭಿವೃದ್ಧಿ ಮಂಡಳಿ ಸದಸ್ಯರಾಗಿ, ಹಿರೇಮೊರಬದ ವಿಎಸ್‌ಎಸ್ ಬ್ಯಾಂಕಿನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು.

ಕಾರಿನ ಚಾಲಕ ವಿಜಯಕುಮಾರ್ ಹಾಗೂ ಮಂಜುಳಾ ಅವರಿಗೆ ಸಣ್ಣ–ಪುಟ್ಟ ಗಾಯಗಳಾಗಿವೆ ಎಂದು ಗ್ರಾಮಾಂತರ ಠಾಣೆ ಎಸ್‌ಐ ಪರಮೇಶ್ ತಿಳಿಸಿದ್ದಾರೆ.

ವಿಟಿಯು– ಎಎಫ್‌ಟಿಸಿ ಒಡಂಬಡಿಕೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಇಲ್ಲಿನ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು) ಮತ್ತು ಬೆಂಗಳೂರಿನ ವಾಯುದಳ ತಾಂತ್ರಿಕ ಕಾಲೇಜು (ಏರ್‌ಫೋರ್ಸ್ ಟೆಕ್ನಿಕಲ್ ಕಾಲೇಜು-ಎಎಫ್‌ಟಿಸಿ) ನಡುವೆ ಶೈಕ್ಷಣಿಕ ಒಡಂಬಡಿಕೆ ಮಾಡಿಕೊಂಡಿದೆ.

ವಿಟಿಯು ಕುಲಪತಿ ಪ್ರೊ.ಕರಿಸಿದ್ದಪ್ಪ ಅವರ ಉಪಸ್ಥಿತಿಯಲ್ಲಿ ಎಎಫ್‌ಟಿಸಿ ಕಮಾಂಡೆಂಟ್ ಏರ್‌ಕಮೋಡರ್ ಬಿ.ಜಿ. ಫಿಲಿಪ್ ಹಾಗೂ ವಿಟಿಯು ಕುಲಸಚಿವ ಪ್ರೊ.ಎ.ಎಸ್. ದೇಶಪಾಂಡೆ ಒಪ್ಪಂದಕ್ಕೆ ಸಹಿ ಹಾಕಿದರು.

‘ಈ ಒಪ್ಪಂದದ ಪ್ರಕಾರ ಏರ್‌ಫೋರ್ಸ್‌ನಲ್ಲಿ ನೇಮಕಗೊಂಡು ಸ್ನಾತಕೋತ್ತರ ಶಿಕ್ಷಣ ಮುಂದುವರಿಸಲು ಬಯಸುವ ಅಧಿಕಾರಿಗಳಿಗೆ ಎ.ಎಫ್.ಟಿ.ಸಿ.-ವಿಟಿಯು ಮುಖಾಂತರ ಎಂ.ಟೆಕ್ ಪದವಿ ನೀಡಬಹುದು. ಏರೊನಾಟಿಕಲ್ ಎಂಜಿನಿಯರಿಂಗ್‌ನಲ್ಲಿ ಬರುವ ಆರು ವಿಶೇಷ ವಿಷಯಗಳಲ್ಲಿ ಈ ಪದವಿಯನ್ನು ಎಐಸಿಟಿಇ ನಿಯಮದಂತೆ ನೀಡಲಾಗುತ್ತದೆ ಎಂದು ತಿಳಿಸಲಾಗಿದೆ. ಒಪ್ಪಂದವು ಎರಡೂ ಸಂಸ್ಥೆಗಳ ಕೌಶಲ ಮತ್ತು ಸಂಶೋಧನಾ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ’ ಎಂದು ಕುಲಪತಿ ಪ್ರೊ.ಕರಿಸಿದ್ದಪ್ಪ ತಿಳಿಸಿದರು.

‘3 ತಿಂಗಳಲ್ಲಿ ಶಿಕ್ಷಕರ ವರ್ಗಾವಣೆ ಪ್ರಕ್ರಿಯೆ ಮುಗಿಸಿ’

ಬೆಂಗಳೂರು: ರಾಜ್ಯದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ವರ್ಗಾವಣೆ ಪ್ರಕ್ರಿಯೆಯನ್ನು ಮೂರು ತಿಂಗಳೊಳಗೆ ಮುಗಿಸಬೇಕು ಎಂದು ಶಿಕ್ಷಕರ ಸಂಘದ ಪ್ರತಿನಿಧಿಗಳು ಒತ್ತಾಯಿಸಿದ್ದಾರೆ.

ಸಾರ್ವಜನಿಕ ಶಿಕ್ಷಣ ಇಲಾಖೆಯು ಶಿಕ್ಷಕರ ವರ್ಗಾವಣೆಗೆ ಹೊರಡಿಸಿರುವ ಅಧಿಸೂಚನೆ ಪ್ರಕಾರ, ಈ ಪ್ರಕ್ರಿಯೆಯು ಏಳು ತಿಂಗಳು ನಡೆಯಲಿದೆ. ಈ ಅವಧಿಯನ್ನು ಪರಿಷ್ಕರಿಸಿ, ಅಲ್ಪಾವಧಿಯೊಳಗೆ ವರ್ಗಾವಣೆ ಪ್ರಕ್ರಿಯೆ ಪೂರ್ಣಗೊಳಿಸಬೇಕು ಎಂದು ಇಲಾಖೆಗೆ ಮನವಿ ಮಾಡಿಕೊಂಡಿದ್ದಾರೆ.

‘ಸುದೀರ್ಘ ವೇಳಾಪಟ್ಟಿಯು ಶಿಕ್ಷಕರಲ್ಲಿ ಗೊಂದಲ ಮೂಡಿಸುತ್ತಿದೆ. ಜುಲೈನಲ್ಲಿ ಆರಂಭವಾಗಿರುವ ಪ್ರಕ್ರಿಯೆ ಅಂತ್ಯಗೊಳ್ಳಲು 2022 ಫೆಬ್ರವರಿಯವರೆಗೆ ಕಾಯಬೇಕು. ವೇಳಾಪಟ್ಟಿಯ ಪ್ರಕಾರ, ಸೆ.30ರಿಂದ ಅ.19ರವರೆಗೆ ಯಾವುದೇ ಪ್ರಕ್ರಿಯೆ ನಡೆಯುವುದಿಲ್ಲ. ವೇಳಾಪಟ್ಟಿಯನ್ನು ಪುನರ್ ಪರಿಶೀಲಿಸಿ ಎರಡನೇ ಹಂತದ ವರ್ಗಾವಣಾ ಪ್ರಕ್ರಿಯೆಯನ್ನು ಬೇಗ ಪೂರ್ಣಗೊಳಿಸಬೇಕು’ ಎಂದು ಸಂಘದ ಅಧ್ಯಕ್ಷ ಶಂಭುಲಿಂಗನಗೌಡ ಪಾಟೀಲ ಮನವಿ ಮಾಡಿದ್ದಾರೆ.

ಲಸಿಕೆ ಹಂಚಿಕೆಯಲ್ಲಿ ತಾರತಮ್ಯ ಇಲ್ಲ: ಡಾ.ಕೆ. ಸುಧಾಕರ್

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಲಸಿಕೆ ಹಂಚಿಕೆಯಲ್ಲಿ ಯಾವುದೇ ತಾರತಮ್ಯ ಇಲ್ಲ. ವೈಜ್ಞಾನಿಕ ಮಾನದಂಡಗಳ ಆಧಾರದಲ್ಲಿ ಲಸಿಕೆ ಹಂಚಿಕೆ ಮಾಡಲಾಗುತ್ತಿದೆ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, ‘ಜನ ಸಾಂದ್ರತೆ, ಆದ್ಯತಾ ಗುಂಪಿನಲ್ಲಿರುವ ಜನರ ಸಂಖ್ಯೆ ಆಧರಿಸಿ ವಿವಿಧ ಜಿಲ್ಲೆಗಳು, ತಾಲ್ಲೂಕುಗಳಿಗೆ ಕೋವಿಡ್ ಲಸಿಕೆ ಹಂಚಿಕೆ ಮಾಡಲಾಗುತ್ತಿದೆ. ಇದರಲ್ಲಿ ಯಾವುದೇ ರಾಜಕೀಯ ಇಲ್ಲ. ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರೇ ಲಸಿಕೆ ಹಂಚಿಕೆಯ ಮೇಲೆ ನಿಗಾ ಇರಿಸಿದ್ದಾರೆ’ ಎಂದರು.

ರಾಜ್ಯಕ್ಕೆ ಹಂಚಿಕೆಯಾಗಬೇಕಿದ್ದ ಪ್ರಮಾಣಕ್ಕಿಂತಲೂ ಹೆಚ್ಚು ಲಸಿಕೆ ಬಂದಿದೆ. ಗುರುವಾರ ರಾಜ್ಯಕ್ಕೆ 7.5 ಲಕ್ಷ ಡೋಸ್ ಲಸಿಕೆ ಪೂರೈಕೆಯಾಗಿದೆ. ರಾಜ್ಯದಲ್ಲಿ ಹೆಚ್ಚು ಪ್ರಮಾಣದ ಲಸಿಕೆ ನೀಡುತ್ತಿರುವುದರಿಂದ ಇನ್ನೂ ಹೆಚ್ಚಿನ ಲಸಿಕೆ ಅಗತ್ಯವಿದೆ. ಹೆಚ್ಚು ಲಸಿಕೆ ಹಂಚಿಕೆ ಮಾಡುವಂತೆ ಕೇಂದ್ರ ಸರ್ಕಾರದ ಮುಂದೆ ಬೇಡಿಕೆ ಮಂಡಿಸಲು ಶೀಘ್ರದಲ್ಲಿ ದೆಹಲಿಗೆ ತೆರಳಲಾಗುವುದು ಎಂದು ತಿಳಿಸಿದರು.

ಗೀಳೆಂಬ ವ್ಯಾಧಿಯಿಂದ ಬಾಡದಿರಲಿ ಬದುಕು



ವಿನುತ ಮುರಳೀಧರ

‘ಕೊರೊನಾ ಬಂದ ಮೇಲೆ ಇವಳು ಎಷ್ಟೊತ್ತಿಗೆ ನೋಡಿದರೂ ಕೈ ತೊಳಿತಾನೇ ಇರ್ತಾಳೆ. ದಿನವಿಡೀ ಇದೇ ಕೆಲಸ. ಒಂದು ಸಲ ತೊಳೆದು ಐದು ನಿಮಿಷವೂ ಆಗಿರಲ್ಲ, ಮತ್ತೆ ಸಿಂಕ್ ಹತ್ರ ಓಡ್ತಾಳೆ. ನಂಗಂತೂ ಹೇಳಿ ಹೇಳಿ ಸಾಕಾಗಿ ಹೋಯಿತು. ತೊಳೆದೂ ತೊಳೆದೂ ಇವಳ ಕೈಯೆಲ್ಲಾ ಹೇಗಾಗಿ ಬಿಟ್ಟಿದೆ ನೋಡಿ. ಹೇಗೆ ಬಿಡಿಸೋದು ಅಂತನೇ ಗೊತ್ತಾಗ್ತಿಲ್ಲ. ನೀವು ಏನಾದರೂ ಪರಿಹಾರ ಹೇಳ್ತೀರೇನೋ ಅಂತ ಕರೆದುಕೊಂಡು ಬಂದೆ’ ಒಂದೇ ಉಸಿರಲ್ಲಿ ತಮ್ಮ ಅಳಲು ತೋಡಿಕೊಂಡರು ಹನ್ನೆರಡರ ಹರೆಯದ ಮಗಳೊಂದಿಗೆ ಆಪ್ತಸಮಾಲೋಚನೆಗೆಂದು ಬಂದಿದ್ದ ಆ ಮಹಿಳೆ.

> ಪದೇ ಪದೇ ಕೈ ತೊಳೆಯುವುದು, ಸ್ನಾನ ಮಾಡುವಂತಹ ಗೀಳು ರೋಗ ಹಲವರಲ್ಲಿದ್ದು, ಕೋವಿಡ್–19 ಶುರುವಾದ ಮೇಲೆ ಈ ರೋಗ ಲಕ್ಷಣ ಹಠಾತ್ ಹೆಚ್ಚಾಗಿದೆ. ಭಯ ಬೇಡ, ಈ ಮಾನಸಿಕ ಕಾಯಿಲೆ ನಿವಾರಣೆಗೆ ಸರಳ ಮಾರ್ಗಗಳಿವೆ.

‘ದಿನಕ್ಕೆ ಏಳೆಂಟು ಸಲ ಸ್ನಾನ ಮಾಡಿದ್ರೂ ಮನಸ್ಸಿಗೆ ಸಮಾಧಾನ ಇಲ್ಲ, ಇನ್ನೂ ಈ ಹಾಳ್ ಕೊರೊನಾ ರೋಗಾಣುಗಳು ಪೂರ್ತಿ ಹೋಗಿಲ್ಲ ಅನಿಸುತ್ತೆ. ತರಕಾರಿ, ಪಾತ್ರೆ, ಬಟ್ಟೆ, ಬಚ್ಚಲು, ಟಾಯ್ಲೆಟ್‌ನೆಲ್ಲಾ ಒಂದ್ಸಲ ತೊಳೆದಿರ್‍ತೀನಿ, ಆದ್ರೂ ಕ್ರಿಮಿಗಳು ಉಳ್ಕೊಂಡ್ರೆ ಅಂತ ಹೆದರಿಕೆ ಶುರುವಾಗಿ ಮತ್ತೆ ಕ್ಲೀನಿಂಗ್‌ಗೆ ಹೊರಡ್ತೀನಿ. ಮನಸ್ಸಿಗೆ ಬರೀ ಕಿರಿಕಿರಿ. ಸಮಯ ಪೂರ್ತಿ ಇದಕ್ಕೇ ಬೇಕು. ಗಂಡ, ಮಕ್ಕಳ ಕಡೆ ಗಮನ ಕೊಡೋಕೆ ಆಗುತ್ತಿಲ್ಲ. ಒಂದೊಂದು ಸಲ ತಲೆ ಪೂರ್ತಿ ಕೆಟ್ಹೋಗಿ ಸಾಯಬೇಕು ಅನ್ಸುತ್ತೆ. ಈ ಯೋಚನೆಗಳಿಂದ ವಿಪರೀತ ತ್ರಾಸಾಗುತ್ತಿದೆ..’ ಮೂವತ್ತರ ಹರೆಯದ ಯುವತಿ ತಮ್ಮ ನೋವು ತೋಡಿಕೊಳ್ಳುತ್ತಾ ಕಣ್ಣೀರು ಹಾಕಿದರು.

ಹೌದು, ಕೋವಿಡ್ ಸಾಂಕ್ರಾಮಿಕ ರೋಗ ಕಾಣಿಸಿದ ನಂತರದಿಂದ ಈ ಪರಿಯ ಮಾನಸಿಕ ಸಮಸ್ಯೆಯಿಂದ ಬಳಲುತ್ತಿರುವವರ ಸಂಖ್ಯೆ ಏರುಮುಖದಲ್ಲಿದೆ. ಕೊರೊನಾ ಅಂಟದಂತೆ ತಡೆಯಲು ಆಗಾಗ ಕೈ ತೊಳೆಯಬೇಕು, ಸ್ಯಾನಿಟೈಸ್ ಮಾಡಿಕೊಳ್ಳಬೇಕು ಎಂಬ ಎಚ್ಚರಿಕೆಯ ಮಾತುಗಳನ್ನು ಅತಿಯಾಗಿ ಪಾಲಿಸಿ ಈ ಬಗೆಯ ಗೀಳಿನ ಸಮಸ್ಯೆ ಹಠಾತ್ ಹೆಚ್ಚಳವಾಗಿದೆ. ಯಾವುದೇ ಆಲೋಚನೆ, ಅನುಮಾನ, ವಿಚಾರ ಅಥವಾ ಘಟನೆ ಮನಸ್ಸಿನೊಳಗೆ ಪದೇ ಪದೇ ಬರುವುದೇ ಗೀಳು ಚಟದ ಕಾಯಿಲೆ. ಇಲ್ಲಿ ವ್ಯಕ್ತಿಯೊಬ್ಬ ಒಂದೇ ವರ್ತನೆಯನ್ನು ಪುನಃ ಪುನಃ ಪ್ರದರ್ಶಿಸುತ್ತಾನೆ. ಇಂತಹ ಯೋಚನೆಗಳು ಒಳ್ಳೆಯದಲ್ಲ, ಮನಸ್ಸಿನೊಳಗೆ ಬಿಟ್ಟುಕೊಳ್ಳಬಾರದೆಂದು ತಿಳಿದಿದ್ದರೂ ತಡೆಯುವುದು ಅಸಾಧ್ಯವೆನಿಸುತ್ತದೆ.

ಲಕ್ಷಣಗಳು

ಪದೇ ಪದೇ ಸ್ನಾನ ಮಾಡೋದು, ಕೈ-ಕಾಲು, ಪಾತ್ರೆ, ಬಟ್ಟೆ, ತರಕಾರಿಗಳನ್ನೆಲ್ಲಾ ತೊಳೆಯುತ್ತಲೇ ಇರುವುದು, ಸ್ಟವ್, ಲೈಟ್ ಸ್ವಿಚ್, ನಲ್ಲಿಗಳನ್ನು ಆಫ್ ಮಾಡಿದ್ದೇನೋ ಇಲ್ವೋ ಎಂದು ಮತ್ತೆ ಮತ್ತೆ ಪರೀಕ್ಷಿಸೋದು, ಹೊರ ಹೋಗುವಾಗ ಮನೆಯ ಬೀಗ ಸರಿಯಾಗಿ ಹಾಕಿದೆಯೋ ಇಲ್ಲವೋ ಎಂದು ನಾಲ್ಕಾರು ಬಾರಿ ಎಳೆದೆಳೆದು ನೋಡುವುದು, ಸಂಶಯ ಪ್ರವೃತ್ತಿ, ಯಾರನ್ನೇ ನೋಡಲಿ ಲೈಂಗಿಕ ಭಾವನೆ ಕೆರಳುವುದು, ದೇವರನ್ನು ಕಂಡಾಕ್ಷಣ ಕೆಟ್ಟ ಯೋಚನೆ ಬಂದು ಬಯ್ಯಬೇಕೆನಿಸುವುದು, ಕೆಲವೊಂದು ಸ್ತೋತ್ರಗಳನ್ನು ಇಷ್ಟು ಬಾರಿ ಹೇಳಿದರೆ ಅಂದುಕೊಂಡ ಕೆಲಸವಾಗುತ್ತದೆ ಎಂಬ ಭಾವನೆ, ದಾರಿಯಲ್ಲಿ ನಡೆದು ಹೋಗುವಾಗ ಲೈಟ್‌ಕಂಬ, ಮರಗಳನ್ನು ಒಂದಷ್ಟು ಸಲ ಮುಟ್ಟಿ ಮುನ್ನಡೆದರೆ ಒಳ್ಳೆಯದಾಗತ್ತೆ ಎಂಬ ಆಲೋಚನೆ, ದುಡ್ಡು ಕೊಡಬೇಕಿದ್ದಾಗ ಪದೇ ಪದೇ ನೋಟುಗಳನ್ನು ಎಣಿಸುವುದು, ಬೇರೆಯವರಿಗೆ ಬಯ್ಯಬೇಕು, ಹೊಡಿಬೇಕು, ಹಿಂಸಿಸಬೇಕು ಎಂಬ ಅನಿಸಿಕೆ... ಈ ರೀತಿ ಸಹಜತೆಗಿಂತ ವಿಪರೀತವಾದ ಮನೋಭಾವವೇ ಗೀಳುರೋಗದ ಪ್ರಮುಖ ಲಕ್ಷಣ.

ಈ ಸಮಸ್ಯೆಯಿಂದ ಬಳಲುತ್ತಿರುವವರಿಗೆ ಕೆಲವು ಕೆಲಸಗಳನ್ನು ಮಾಡಲೇಬೇಕೆಂಬ ಆಂತರಿಕ ಒತ್ತಡ ಉಂಟಾಗಿ ಅವುಗಳನ್ನು ಮಾಡಲಾಗದಿದ್ದರೆ ವಿಪರೀತ ತಳಮಳ, ಹಿಂಸೆಯೆನಿಸುವುದು. ಕೆಲವೊಮ್ಮೆ ಒತ್ತಡ ಅತಿಯಾಗಿ ಆತ್ಮಹತ್ಯೆಗೂ ಪ್ರಯತ್ನಿಸುವರು.

ಮೆದುಳಿನ ಸೆರಟೋನಿನ್ ಎಂಬ ನರವಾಹಕದ ಅಸಮತೋಲನವೇ ಗೀಳು ಮನೋಬೇನೆಗೆ ಕಾರಣ. ಆನುವಂಶೀಯತೆ, ಮೆದುಳಿನ ಸೋಂಕು, ಹಾರ್ಮೋನ್‌ಗಳ ಏರುಪೇರು, ವಿಪರೀತ ಒತ್ತಡ, ಅತಿಭಯದಿಂದಲೂ ಈ ಸಮಸ್ಯೆ ಹುಟ್ಟಿಕೊಳ್ಳಬಹುದು. ಗೀಳು ವ್ಯಾಧಿ ಜೀವ ತೆಗೆಯದಿದ್ದರೂ ಜೀವನವನ್ನು ಹಾಳುಮಾಡಬಲ್ಲದು. ಮಕ್ಕಳು ಓದಿನಲ್ಲಿ ಹಿಂದೆ ಬೀಳುವರು. ತಮ್ಮ ವರ್ತನೆಯಿಂದ ಅಪಹಾಸ್ಯಕ್ಕೀಡಾಗಬಹುದೆಂಬ ಚಿಂತೆಯಿಂದ ಸಾಮಾಜಿಕವಾಗಿ ಹಿಂಜರಿಯುವರು. ಯಾವುದೇ ಕೆಲಸವನ್ನು ಪೂರ್ಣವಾಗಿ ಮಾಡಲು ಸಾಧ್ಯವಾಗದಿರುವುದು, ಕುಟುಂಬದಲ್ಲಿ ಒಡಕು, ವಿಚ್ಛೇದನ, ಹತಾಶೆ, ಖಿನ್ನತೆ, ಆತ್ಮಹತ್ಯೆಯ ಆಲೋಚನೆ... ಇವೆಲ್ಲಾ ಗೀಳುರೋಗಿಗಳು ಸಾಮಾನ್ಯವಾಗಿ ಅನುಭವಿಸುವ ತೊಂದರೆಗಳು.

(ಲೇಖಕಿ: ಆಪ್ತ ಸಮಾಲೋಚಕಿ, ತೀರ್ಥಹಳ್ಳಿ)

ಮಕ್ಕಳು, ಮಹಿಳೆಯರಲ್ಲಿ ಹೆಚ್ಚು

ಮಾಧ್ಯಮಗಳಲ್ಲಿ ಪ್ರಸಾರವಾಗುವ ಸುದ್ದಿಗಳನ್ನು ನೋಡಿ ಭಯ ಬೀಳುವ ಹೆಣ್ಣುಮಕ್ಕಳು ಪದೇ ಪದೇ ಕೈ ತೊಳೆಯುವುದು, ಸ್ಯಾನಿಟೈಸರ್ ಬಳಸುವುದು, ಹೊರಗಡೆಯಿಂದ ತಂದಿರುವುದನ್ನು ತೊಳೆಯುತ್ತಲೇ ಇರುವುದು ಮಾಡುತ್ತಿದ್ದಾರೆ. ಇದು ಅವರಲ್ಲಿ ಗೀಳಾಗಿ ಮಾರ್ಪಟ್ಟಿದೆ. ಹೆಣುಮಕ್ಕಳಲ್ಲಿ ಭಯದೊಂದಿಗೆ ಕುಟುಂಬದವರೆಲ್ಲರೂ ಸಾಯುತ್ತಾರೆ, ನಮ್ಮ ಕುಟುಂಬವನ್ನು ರಕ್ಷಿಸಬೇಕು ಎನ್ನುವ ಕಾಳಜಿ ಕೂಡ ಗೀಳಿಗೆ ಕಾರಣವಾಗಿದೆ. ಹೆಣ್ಣುಮಕ್ಕಳಲ್ಲಿ ಮೊದಲು ಗೀಳಿನ ಸಮಸ್ಯೆ ಇದ್ದರೂ ಅದು ಅವರ ಜೀವನಶೈಲಿ ಮೇಲೆ ಯಾವುದೇ ಪರಿಣಾಮ ಬೀರಿರಲಿಲ್ಲ. ಆದರೆ ಕೊರೊನಾದಿಂದ ಉಂಟಾದ ಗೀಳು ಅವರ ಜೀವನಶೈಲಿಯ ಜೊತೆಗೆ ಚರ್ಮದ ಸಮಸ್ಯೆಗೂ ಕಾರಣವಾಗಿದೆ.


ಪರಿಹಾರವೇನು?

ಗೀಳು ಸಮಸ್ಯೆಗೆ ಉತ್ತಮ ಪರಿಹಾರಗಳಿವೆ. ಬೇಗನೆ ಗುರುತಿಸಿ ಚಿಕಿತ್ಸೆ ಪಡೆದಾಗ ಸಂಪೂರ್ಣ ಗುಣ ಸಾಧ್ಯ. ಮಾಟ, ಮಂತ್ರ-ತಂತ್ರಗಳೆಂದು ಮೂಢನಂಬಿಕೆಗೆ ಮೊರೆ ಹೋಗದೆ ಲಕ್ಷಣಗಳು ಕಂಡಾಗ ತಡಮಾಡದೆ ಮನೋಚಿಕಿತ್ಸಕರ ನೆರವು ಪಡೆಯಬೇಕು. ಈ ಕಾಯಿಲೆಗೆ ಪರಿಣಾಮಕಾರಿ ಔಷಧಗಳಿವೆ. ಜೊತೆಗೆ ಬೇಡದ ಆಲೋಚನೆಗಳು ಮನಸ್ಸಿಗೆ ಬಾರದಂತೆ ಹತೋಟಿ ಸಾಧಿಸಲು ವರ್ತನಾ ಚಿಕಿತ್ಸೆ, ಸಾಂತ್ವನ, ಸಮಾಧಾನ ಹೇಳಬಲ್ಲ ಮನೋಚಿಕಿತ್ಸೆ, ಮನಸ್ಸನ್ನು ಉಲ್ಲಾಸಗೊಳಿಸುವ ಧ್ಯಾನ, ಯೋಗ, ಸಂಗೀತ, ಪ್ರಾಣಾಯಾಮದಂತಹ ಅಭ್ಯಾಸಗಳು ರೋಗವನ್ನು ಗುಣಪಡಿಸುವಲ್ಲಿ ಸಹಕಾರಿ. ಇವೆಲ್ಲದರ ಜೊತೆಗೆ ಕುಟುಂಬದ ಸಂಪೂರ್ಣ ಸಹಕಾರವಿದ್ದಾಗ ಮಾತ್ರ ಈ ಮಾನಸಿಕ ಕಾಯಿಲೆಯನ್ನು ಗೆಲ್ಲಬಹುದು.

ಮನೆಯಂಗಳದಲ್ಲಿದೆ ಆರೋಗ್ಯದ ಗುಟ್ಟು

ರೇಷ್ಮಾ

ಕೊರೊನಾ ಬಂದಾಗಿನಿಂದ ಜನರು ತಮ್ಮ ದೈಹಿಕ ಹಾಗೂ ಮಾನಸಿಕ ಸ್ವಾಸ್ಥ್ಯ ಕಾಪಾಡಿಕೊಳ್ಳುವತ್ತ ಹೆಚ್ಚು ಗಮನ ಹರಿಸುತ್ತಿದ್ದಾರೆ. ಇದರೊಂದಿಗೆ ರೋಗನಿರೋಧಕ ಶಕ್ತಿ ಹೆಚ್ಚಿಸಿಕೊಳ್ಳುವ ಮಾರ್ಗವನ್ನು ಅನುಸರಿಸುತ್ತಿದ್ದಾರೆ. ಮನೆಯಂಗಳದಲ್ಲಿ ಬೆಳೆಯುವ ಹಲವು ಸಸ್ಯ ಹಾಗೂ ಗಿಡಮೂಲಿಕೆಗಳು ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುವ ಜೊತೆಗೆ, ಹಲವು ಆರೋಗ್ಯ ಸಮಸ್ಯೆಯನ್ನು ನಿವಾರಿಸುತ್ತವೆ. ಭಾರತೀಯ ವಿಕಾಸ ಟ್ರಸ್ಟ್ ಮಣಿಪಾಲ ಇದರ ವತಿಯಿಂದ ನಡೆದ ವಿಡಿಯೊ ಸಂವಾದ ಕಾರ್ಯಕ್ರಮದಲ್ಲಿ ದಿನನಿತ್ಯದ ಆಹಾರದಲ್ಲಿ ಮನೆಯಂಗಳದ ಸಸ್ಯಗಳ ಉಪಯೋಗದ ಕುರಿತು ತಿಳಿಸಿದ್ದಾರೆ ಪ್ರಗತಿಪರ ಕೃಷಿಕರಾದ ಆರೂರು ಮಂಜುನಾಥ ರಾವ್.



ಮಂಜುನಾಥ ರಾವ್

ದಿನಕ್ಕೊಂದು ತಂಬುಳಿ: ಪ್ರತಿನಿತ್ಯ ಸಸ್ಯಗಳ ಚಿಗುರು, ಹೂವು, ಕಾಯಿ, ಬೀಜ, ಕಾಂಡ ಮುಂತಾದ ಸೇವನೆಗೆ ಯೋಗ್ಯವಾದ ಸಸ್ಯದ ಭಾಗದಿಂದ ತಯಾರಿಸಿದ ತಂಬುಳಿ ರೋಗ ನಿರೋಧಕ ಹಾಗೂ ವ್ಯಾಧಿ ನಿವಾರಕವೂ ಹೌದು. ತಂಬುಳಿಗೆ ಬಳಸುವ ಶುಂಠಿ, ಜೀರಿಗೆ, ಕಾಳುಮೆಣಸು, ಕರಿಬೇವು, ಮಜ್ಜಿಗೆ ಜೀರ್ಣಕಾರಿ ಹಾಗೂ ಇದರಲ್ಲಿ ಶೇ 100 ರಷ್ಟು ಪೌಷ್ಟಿಕಾಂಶವಿದೆ.



ಅಮೃತಬಳ್ಳಿ

ಅಮೃತಬಳ್ಳಿ: ಮನೆಯಂಗಳದಲ್ಲಿ ಸುಲಭವಾಗಿ ಬೆಳೆಯಲು ಸಾಧ್ಯವಿರುವ ಅಮೃತಬಳ್ಳಿ ಹೃದ್ರೋಗ, ಮೂಲವ್ಯಾಧಿ, ಮಧುಮೇಹ, ಚರ್ಮರೋಗ, ಜ್ವರ, ಕೆಮ್ಮು, ರಕ್ತದೊತ್ತಡ, ಕಾಮಾಲೆ, ಹಾಲಿನ ಕೊರತೆ, ನರ ದೌರ್ಬಲ್ಯ, ರಕ್ತಹೀನತೆ ಇತ್ಯಾದಿ ಸಮಸ್ಯೆಗಳಿಗೆ ಪರಿಹಾರ ನೀಡುತ್ತದೆ. ಇದರಿಂದ ಕಷಾಯ ತಯಾರಿಸಿಕೊಂಡು ಕುಡಿಯಬಹುದು.

ಜಲಬ್ರಾಹ್ಮಿ: ಮೆದುಳು, ನರದೌರ್ಬಲ್ಯ, ತಲೆನೋವು, ನಿದ್ರಾಹೀನತೆ, ತಲೆಕೂದಲ ಬೆಳವಣಿಗೆ, ತೊದಲು, ಮೂರ್ಛೆ ಸಮಸ್ಯೆ ಇರುವವರು ಜಲಬ್ರಾಹ್ಮಿ ಸೊಪ್ಪನ್ನು ಸೇವಿಸಬಹುದು.

ನೆಲನೆಲ್ಲಿ: ಕಾಮಾಲೆ, ಮೂತ್ರಕೋಶದಲ್ಲಿ ಕಲ್ಲು, ಋತುಶೂಲೆ, ಚರ್ಮರೋಗ, ಅಜೀರ್ಣದಂತಹ ಸಮಸ್ಯೆ ಇರುವವರು ನೆಲನೆಲ್ಲಿಯನ್ನು ಸೇವಿಸಬಹುದು.

ಹಾಲುಕುಡಿ ಅಥವಾ ನಾಗಾರ್ಜುನಿ: ಇದರ ಸೇವನೆಯಿಂದ ರಕ್ತದಲ್ಲಿನ ಹಿಮೋಗ್ಲೋಬಿನ್ ಅಂಶವನ್ನು ಹೆಚ್ಚಿಸಿಕೊಳ್ಳಬಹುದು. ಅಜೀರ್ಣಕ್ಕೆ ಸಂಬಂಧಿಸಿದ ತೊಂದರೆ, ಚರ್ಮರೋಗ, ಕಣ್ಣಿನ ತೊಂದರೆ, ಹೊಟ್ಟೆನೋವು ಬೇಧಿ, ಕೆಮ್ಮು, ಉಬ್ಬಸ, ಗಜಕರ್ಣ, ಮೈಕೈನೋವು, ಡೆಂಗಿ ಮುಂತಾದ ಸಮಸ್ಯೆ ಹಾಗೂ ಕಾಯಿಲೆಗಳಿಗೆ ಇದರಿಂದ ಪರಿಹಾರ ಕಂಡುಕೊಳ್ಳಬಹುದು.



ಹರಿತ ಮಂಜರಿ

ಹರಿತ ಮಂಜರಿ: ಹರಿತ ಮಂಜರಿ ಸೇವನೆಯಿಂದ ಅರೆ ತಲೆನೋವು ಅಥವಾ ಮೈಗ್ರೇನ್ ಸಮಸ್ಯೆಯನ್ನು ನಿವಾರಿಸಿಕೊಳ್ಳಬಹುದು. ಕೊಲೆಸ್ಟ್ರಾಲ್ ನಿಯಂತ್ರಣಕ್ಕೂ ಇದು ಸಹಕಾರಿ.

ನುಗ್ಗೆಸೊಪ್ಪು: ನುಗ್ಗೆಕಾಯಿ ಸೇವನೆ ದೇಹಾರೋಗ್ಯಕ್ಕೆ ಉತ್ತಮ ಎನ್ನುವುದು ಎಲ್ಲರಿಗೂ ತಿಳಿದಿರುವ ವಿಷಯ. ಆದರೆ ನುಗ್ಗೆಸೊಪ್ಪಿನ ಸೇವನೆಯಿಂದಲೂ ಹಲವು ರೀತಿಯ ಉಪಯೋಗಗಳಿವೆ. ಇದು ಮೂಲವ್ಯಾಧಿ, ಇರುಳುಗಣ್ಣು, ನರದೌರ್ಬಲ್ಯ, ಕೆಮ್ಮು ಮುಂತಾದ ಸಮಸ್ಯೆಗಳಿಗೆ ಪರಿಹಾರ ನೀಡುತ್ತದೆ. ಇದರೊಂದಿಗೆ ನುಗ್ಗೆಸೊಪ್ಪಿನ ಸೇವನೆಯಿಂದ ಶಕ್ತಿ ವರ್ಧಿಸಿಕೊಳ್ಳಬಹುದು, ಮುಖದ ಕಾಂತಿಯನ್ನು ಹೆಚ್ಚಿಸಿಕೊಳ್ಳಬಹುದು. ಇದರಲ್ಲಿ ಹೇರಳ ಕಬ್ಬಿಣಾಂಶ ಇರುವುದರಿಂದ ಸ್ತ್ರೀಯರಿಗೆ ಉತ್ತಮ.

ಚಕ್ರಮುನಿ: ಇದರ ಸೇವನೆಯಿಂದ ದೇಹದಲ್ಲಿ ವಿವಿಧ ಜೀವಸತ್ವಗಳ ಪ್ರಮಾಣ ಹೆಚ್ಚುತ್ತದೆ, ಕಬ್ಬಿಣಾಂಶದ ಪ್ರಮಾಣ ಹೆಚ್ಚುತ್ತದೆ ಹಾಗೂ ಮಲಬದ್ಧತೆಯಂತಹ ಸಮಸ್ಯೆಯನ್ನು ನಿವಾರಿಸಿಕೊಳ್ಳಬಹುದು.

ನಾಚಿಕೆಮುಳ್ಳು ಅಥವಾ ಮುಟ್ಟಿದರೆ ಮುನಿ ಸಸ್ಯ: ಇದರ ಕಷಾಯದ ಸೇವನೆಯಿಂದ ಮಲಬದ್ಧತೆ ಹಾಗೂ ಮೂಲವ್ಯಾಧಿ ನಿವಾರಣೆಯಾಗುತ್ತದೆ. ಇದರ ರಸದ ಲೇಪನದಿಂದ ಗಾಯ ಬೇಗನೆ ವಾಸಿಯಾಗುತ್ತದೆ.

ಹೀರೆಕಾಯಿ: ಹೀರೆಕಾಯಿ ಸೇವನೆಯು ಹಲವು ಸಮಸ್ಯೆಗಳಿಗೆ ಪರಿಹಾರ ನೀಡುತ್ತದೆ. ಮೂಗಿನಿಂದ ಮತ್ತು ಆಸನದಿಂದ ಬರುವ ರಕ್ತಶಮನ, ಕೆಮ್ಮು, ಮೂಲವ್ಯಾಧಿ ನಿವಾರಕ, ಪಿತ್ತ-ಜ್ವರಕ್ಕೆ ಪರಿಹಾರ ನೀಡುತ್ತದೆ.



ದಾಸವಾಳ

ದಾಸವಾಳ: ದಾಸವಾಳ ಸೊಪ್ಪು ಕೂದಲಿನ ರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಇದನ್ನು ರುಬ್ಬಿ ಕೂದಲಿಗೆ ಹಚ್ಚಿಕೊಂಡು ಸ್ನಾನ ಮಾಡುವುದರಿಂದ ಕೂದಲು ಉದುರುವುದು ನಿಲ್ಲುತ್ತದೆ, ಕೂದಲು ಸೊಂಪಾಗಿ ಬೆಳೆಯಲು ನೆರವಾಗುತ್ತದೆ. ಅಲ್ಲದೇ ಇದು ಮುಟ್ಟಿನ ಸಮಸ್ಯೆ ನಿವಾರಕವೂ ಹೌದು. ದಾಸವಾಳದ ಹೂವು ಮೂತ್ರದ ಸೋಂಕಿನ ಸಮಸ್ಯೆಗೆ ಪರಿಹಾರ ನೀಡುತ್ತದೆ.



ಇಲಿಕಿವಿ

ಇಲಿಕಿವಿ: ಮನೆಯ ಪರಿಸರದಲ್ಲಿ ಕಸದಂತೆ ಬೆಳೆಯುವ ಇಲಿಕಿವಿ ಸಸ್ಯದ ಎಲೆಯ ಸೇವನೆಯಿಂದ ಜೀರ್ಣಕ್ರಿಯೆಯನ್ನು ಹೆಚ್ಚಿಸಿಕೊಳ್ಳಬಹುದು. ಇದು ರಕ್ತಹೀನತೆಯನ್ನು ಕಡಿಮೆ ಮಾಡಲು ಸಹಕಾರಿ.

ಕವಳೆಕಾಯಿ: ಕವಳೆಕಾಯಿಯಲ್ಲಿ ಕಬ್ಬಿಣಾಂಶ ಹೇರಳವಾಗಿದೆ. ಇದು ಜೀರ್ಣಕಾರಿ. ಅದರೊಂದಿಗೆ ಅತಿತೂಕ ಹಾಗೂ ಬೊಜ್ಜು ನಿವಾರಕವೂ ಹೌದು.

ಶತಾವರಿ: ಶತಾವರಿ ಸೇವನೆಯಿಂದ ಎದೆಹಾಲಿನ ಕೊರತೆಯನ್ನು ನೀಗಿಸಿಕೊಳ್ಳಬಹುದು. ವೃದ್ಧಾಪ್ಯದ ಸಮಸ್ಯೆ, ಹೃದಯ ದೌರ್ಬಲ್ಯ, ಅಪಸ್ಮಾರ, ಜ್ವರದಂತಹ ಸಮಸ್ಯೆಗಳಿಗೂ ಪರಿಹಾರ ಕಂಡುಕೊಳ್ಳಬಹುದು.

ಹುಣಸೆ: ಹುಣಸೆಹಣ್ಣಿನ ಅತಿಯಾದ ಸೇವನೆ ಒಳ್ಳೆಯದಲ್ಲ ಎನ್ನುತ್ತಾರೆ. ಆದರೆ ಹುಣಸೆಯ ಚಿಗುರು ಸೇವನೆ ಮಾಡುವುದರಿಂದ ಹಲವು ದೈಹಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದು. ತಲೆನೋವು, ಮೂಲವ್ಯಾಧಿ, ಅಜೀರ್ಣ, ಹುಳ್ಳುಕಡ್ಡಿ ನಿವಾರಣೆಗೆ ಇದು ಸಹಕಾರಿ.

ಪಾತಾ ಅಥವಾ ಅಗಳು ಶುಂಠಿ: ಇದು ಕಣ್ಣಿನ ಸಮಸ್ಯೆ, ತಲೆಹೊಟ್ಟು, ಹೇನು, ಹೊಟ್ಟೆ ಉರಿ, ಉರಿ ಮೂತ್ರ, ಮೂಲವ್ಯಾಧಿ ಮುಂತಾದವುಗಳಿಗೆ ಪರಿಹಾರ ನೀಡುತ್ತದೆ.

ಲಸಿಕೆ ಹಾಕಿಸಿದರೆ ಮಕ್ಕಳಾಗುವುದಿಲ್ಲವೇ?

ಸ್ಪಂದನ



ಡಾ. ವೀಣಾ ಎಸ್. ಭಟ್

- **ನಾನು ಈಗ 8 ತಿಂಗಳು ಗರ್ಭಿಣಿ. 7 ತಿಂಗಳ ಗರ್ಭಿಣಿಯಾಗಿದ್ದಾಗ ನನಗೆ ಜ್ವರ, ಕೆಮ್ಮು ಬಂತು ಎಂದು ಪರೀಕ್ಷಿಸಿದಾಗ ಕೋವಿಡ್ ಪರೀಕ್ಷೆ ಪಾಸಿಟಿವ್ ಬಂದು 15 ದಿನ ಸ್ವಲ್ಪ ಸುಸ್ತು, ಹೊಟ್ಟೆನೋವು ಎಲ್ಲಾ ಉಂಟಾಗಿ ಈಗ ಏನೂ ತೊಂದರೆ ಇಲ್ಲ. ಆರಾಮಾಗಿರುವೆ. ಈಗ ವ್ಯಾಕ್ಸಿನ್ ಹಾಕಿಸಿ ಎಂದು ಎಲ್ಲರೂ ಹೇಳುತ್ತಿದ್ದಾರೆ. ಕೆಲವರು ಹಾಕಿಸಬೇಡ, ಮುಂದೆ ಮಕ್ಕಳಾಗುವುದಿಲ್ಲ ಎಂದು ಹೆದರಿಸುತ್ತಿದ್ದಾರೆ, ನನಗೆ ರೋಗನಿರೋಧಕ ಶಕ್ತಿ ಬಂದಿದೆ ಅಲ್ವೇ, ಮತ್ತೆ ಯಾಕೆ ವ್ಯಾಕ್ಸಿನ್ ಹಾಕಿಸಬೇಕು?**

ಛಾಯಾ, ಊರಿನ ಹೆಸರು ತಿಳಿಸಿಲ್ಲ

ಛಾಯಾರವರೇ, ನೀವು ಈಗಾಗಲೇ ಕೋವಿಡ್ ಸೋಂಕಾಗಿ ಗುಣಮುಖರಾಗಿದ್ದರೆ ನೀವು ಹೆರಿಗೆಯ ನಂತರ ಲಸಿಕೆ ಹಾಕಿಸಿಕೊಳ್ಳಿ. ಇದರಿಂದ ನಿಮ್ಮ ರೋಗನಿರೋಧಕ ಪ್ರತಿಕಾಯಗಳು ಇನ್ನೂ ಹೆಚ್ಚಾಗಿ ರೋಗನಿರೋಧಕ ಶಕ್ತಿ ಹೆಚ್ಚುತ್ತದೆಯೇ ಹೊರತು ಕಡಿಮೆಯಾಗುವುದಿಲ್ಲ. ಕಳೆದ ವಾರವಷ್ಟೇ ಭಾರತ ಸರ್ಕಾರದ ಐ.ಸಿ.ಎಂ.ಆರ್ ನಿಂದ ಗರ್ಭಿಣಿಯರಿಗೂ ಲಸಿಕೆ ಹಾಕಿಸಲು ಅನುಮತಿ ಸಿಕ್ಕಿದೆ. ಕಳೆದ ತಿಂಗಳು ಎದೆ ಹಾಲುಣಿಸುವ ತಾಯಂದಿರಿಗೆ ಅನುಮತಿ ಸಿಕ್ಕಿತ್ತು. ಲಸಿಕೆಯಿಂದ ಮತ್ತೆ ಮಕ್ಕಳಾಗುವುದಿಲ್ಲ ಎನ್ನುವುದು ಸತ್ಯಕ್ಕೆ ದೂರವಾದ ಮಾತು. ಲಸಿಕೆಯಿಂದ ಗರ್ಭಿಣಿಯರ ಮೇಲಾಗುವ ಪರಿಣಾಮಗಳ ಬಗ್ಗೆ ದೀರ್ಘಾವಧಿ ಅಧ್ಯಯನಗಳು ಇನ್ನು ದೊರೆತಿಲ್ಲವಾದರೂ ಕೋವಿಡ್ ಲಸಿಕೆ ಗರ್ಭಿಣಿಯರು ತೆಗೆದುಕೊಳ್ಳುವುದರಿಂದ ಆಗುವ ಸಣ್ಣಪುಟ್ಟ ತೊಂದರೆಗಿಂತ ಅನುಕೂಲಗಳೇ ಹೆಚ್ಚು. ಇದರಿಂದ ತೀವ್ರನಿಗಾ ಘಟಕದಲ್ಲಿ ಅಡ್ಮಿಟ್ ಆಗುವ ಸಂಭವ ಕಡಿಮೆಯಾಗುತ್ತದೆ. ಕೋವಿಡ್ ಲಸಿಕೆಯಲ್ಲಿ ಯಾವುದೇ ಜೀವಂತ ವೈರಾಣು ಕಣಗಳಿರುವುದಿಲ್ಲ. ಹಾಗಾಗಿ ಚಿಂತಿಸದೇ ಲಸಿಕೆ ತೆಗೆದುಕೊಳ್ಳಿ.

ಬೇರೆಲ್ಲಾ ಔಷಧಗಳ ಹಾಗೆ ಸಣ್ಣಪುಟ್ಟ ಪಾರ್ಶ್ವ ದುಷ್ಪರಿಣಾಮಗಳು ಈ ಲಸಿಕೆ ತೆಗೆದುಕೊಂಡಾಗ ಆಗಬಹುದು. ಸ್ವಲ್ಪ ಜ್ವರ, ಮೈ-ಕೈ ನೋವು, ಇಂಜೆಕ್ಷನ್ ಜಾಗದಲ್ಲಿ ನೋವು ಎರಡು ಮೂರು ದಿನ ಇರಬಹುದು. ಎಲ್ಲೋ ಒಂದರಿಂದ ಐದು ಲಕ್ಷ ಜನರಿಗೊಬ್ಬರಲ್ಲಿ ಸ್ವಲ್ಪ ಉಸಿರಾಡಲು ಕಷ್ಟ ಆದ ಹಾಗೆ, ಎದೆ ಹಿಡಿದ ಹಾಗೆ, ಎದೆನೋವು, ಹೊಟ್ಟೆನೋವು, ವಾಂತಿ, ಕಾಲುಗಳಲ್ಲಿ ಸೆಳೆತ, ಒತ್ತಿದ ಅನುಭವ, ಮೈ ಮೇಲೆ ಸಣ್ಣ ಸಣ್ಣ ರಕ್ತಸ್ರಾವದ ಕಲೆಗಳು, ಒಂದು ಭಾಗದಲ್ಲಿ ಕೈ-ಕಾಲು ಸ್ವಾಧೀನ ಕಡಿಮೆಯಾಗಬಹುದು. ಮೊದಲು ಅಪಸ್ಮಾರವಿಲ್ಲದಿದ್ದರೂ ಫಿಟ್ಸ್ ಬಂದ ಹಾಗಾಗಬಹುದು, ಈ ಮೊದಲು ಮೈಗ್ರೇನ್ ಅಥವಾ ಅರೆತಲೆನೋವು ಇಲ್ಲದಿದ್ದರೂ ವಾಂತಿ ಬಂದ ಹಾಗಾಗಬಹುದು, ಕಣ್ಣು ಮಂಜು, ಪದೇ ಪದೇ ವಾಂತಿ, ಇನ್ನಿತರ ಆರೋಗ್ಯ ಸಮಸ್ಯೆಗಳಾದಲ್ಲಿ ತಜ್ಞರ ತಪಾಸಣೆ ಹಾಗೂ ಮೇಲ್ವಿಚಾರಣೆ ಅಗತ್ಯ. ನಿಮಗೊಮ್ಮೆ ಕೋವಿಡ್ ಬಂದು ಹೋಗಿದ್ದರೂ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸುತ್ತಾ ಹೆರಿಗೆಯ ನಂತರ ಆದಷ್ಟು ಬೇಗ ವ್ಯಾಕ್ಸಿನ್ ಹಾಕಿಸಿಕೊಳ್ಳಿ.

- **ನನಗೆ ಈಗ 34 ವರ್ಷ, ಮದುವೆಯಾಗಿ 5 ವರ್ಷವಾಗಿದೆ. ಆದರೆ ಮಕ್ಕಳಾಗಿಲ್ಲ. ಕಳೆದ ಎರಡು ವರ್ಷಗಳಿಂದ ಔಷಧ ಮಾಡಿ ಈ ಕೋವಿಡ್ ಸಮಯದಿಂದ ನಿಲ್ಲಿಸಿದ್ದೇವೆ. ನಾವು ಇಬ್ಬರೂ ಕೋವಿಡ್ ವ್ಯಾಕ್ಸಿನ್ ತೆಗೆದುಕೊಳ್ಳಬಹುದೇ?**

ಉಷಾ ಉಪ್ಪಿನಂಗಡಿ, ಮಂಗಳೂರು

ಉಷಾರವರೆ ಈಗಾಗಲೇ ನಿಮಗೆ 34 ವರ್ಷವಾದ್ದರಿಂದ ನೀವು ಮಕ್ಕಳನ್ನು ಪಡೆಯುವ ಪ್ರಯತ್ನವನ್ನು ನಿಲ್ಲಿಸಬೇಡಿ. ಕೊರೊನಾ ಲಸಿಕೆಯನ್ನು ನೀವು ಹಾಗೂ ನಿಮ್ಮ ಪತಿ ಇಬ್ಬರೂ ತಪ್ಪದೇ ಹಾಕಿಸಿಕೊಳ್ಳಿ. ಯಾವುದೇ ಭಯ, ಆತಂಕ ಬೇಡ. ಮಕ್ಕಳನ್ನು ಪಡೆಯುವುದಕ್ಕೆ ಕೊರೊನಾ ವ್ಯಾಕ್ಸಿನ್ ಅಡ್ಡಿ ಏನೂ ಅಲ್ಲ. ಬದಲಾಗಿ ವ್ಯಾಕ್ಸಿನ್‌ನಿಂದ ಹೆಚ್ಚುವ ರೋಗನಿರೋಧಕ ಶಕ್ತಿಯಿಂದ ನಿಮ್ಮಲ್ಲಿ ಬದುಕಿನ ಬಗ್ಗೆ, ಮಕ್ಕಳನ್ನು ಪಡೆಯುವ ಬಗ್ಗೆ ಹೆಚ್ಚು ಸಕಾರಾತ್ಮಕ ಭಾವನೆ ಉಂಟಾಗುತ್ತದೆ.

ಸ್ಪಂದನ...

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳಿದ್ದರೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ. ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು **bhoomika@prajavani.co.in** ಗೆ ಕಳಿಸಬಹುದು.

ಡ್ರ್ಯಾಗನ್ ಚಿಕನ್, ಚಿಕನ್ ಕೈಮಾ ಮಂಚೂರಿಯನ್

ನಳಪಾಕ



ರೇಖಾ ಎಂ.

ಡ್ರ್ಯಾಗನ್ ಚಿಕನ್

ಬೇಕಾಗುವ ಸಾಮಗ್ರಿಗಳು: ಮೂಳೆ ರಹಿತ ಚಿಕನ್ - ಅರ್ಧ ಕೆ.ಜಿ, ಕಾರ್ನ್‌ಫ್ಲೋರ್ - ಅರ್ಧ ಕಪ್, ಮೊಟ್ಟೆಯ ಬಿಳಿ ಭಾಗ – 1, ಕೊತ್ತಂಬರಿ ಸೊಪ್ಪು - ಅರ್ಧ ಕಪ್, ಕಾಳು ಮೆಣಸಿನ ಪುಡಿ - 1 ಚಮಚ, ಗೋಡಂಬಿ - 10, ಶುಂಠಿ - 1 ಇಂಚು, ಬೆಳ್ಳುಳ್ಳಿ - 2 ಚಮಚ, ಹಸಿ ಮೆಣಸಿನಕಾಯಿ - 2, ರೆಡ್ ಚಿಲ್ಲಿ ಸಾಸ್ - 2 ಚಮಚ, ಟೊಮೆಟೊ ಸಾಸ್ - ಅರ್ಧ ಚಮಚ, ಸೋಯಾ ಸಾಸ್ - 1 ಟೀ ಚಮಚ, ವಿನೆಗರ್ – 1 ಟೀ ಚಮಚ, ಈರುಳ್ಳಿ - 1, ಕ್ಯಾಪ್ಸಿಕಂ - 1, ಅಡುಗೆ ಎಣ್ಣೆ, ರುಚಿಗೆ ತಕ್ಕಷ್ಟು ಉಪ್ಪು.

ರೆಸಿಪಿ ವಿಡಿಯೊಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ತಯಾರಿಸುವ ವಿಧಾನ: ಒಂದು ಬಟ್ಟಲಿಗೆ ಚಿಕನ್, ವಿನೆಗರ್, ಸೋಯಾ ಸಾಸ್, ಕಾಳುಮೆಣಸಿನ ಪುಡಿ, ಮೊಟ್ಟೆಯ ಬಿಳಿಭಾಗ, ರುಚಿಗೆ ತಕ್ಕಷ್ಟು ಉಪ್ಪು ಮತ್ತು ಕಾರ್ನ್‌ಫ್ಲೋರ್ ಹಾಕಿ ಚೆನ್ನಾಗಿ ಕಲೆಸಿ, ಅರ್ಧ ಗಂಟೆ ಇಡಿ. ಒಂದು ಬಾಣಲೆಯಲ್ಲಿ ಎಣ್ಣೆ ಬಿಸಿ ಮಾಡಿ, ಕಲೆಸಿ ಇಟ್ಟಿದ್ದ ಚಿಕನ್ ಒಂದೊಂದೇ ತುಂಡುಗಳನ್ನು ಹಾಕಿ ಕರಿಯಿರಿ. ನಂತರ ಪ್ಯಾನ್‌ನಲ್ಲಿ 3 ಚಮಚ ಅಡುಗೆ ಎಣ್ಣೆ ಹಾಕಿ, ಅದಕ್ಕೆ ಸಣ್ಣಗೆ ಹೆಚ್ಚಿದ ಶುಂಠಿ, ಬೆಳ್ಳುಳ್ಳಿ, ಗೋಡಂಬಿ ಹಾಕಿ ಹುರಿದುಕೊಳ್ಳಿ. ಇದಕ್ಕೆ ಹೆಚ್ಚಿದ ಹಸಿಮೆಣಸಿನಕಾಯಿ, ಕತ್ತರಿಸಿದ ಈರುಳ್ಳಿ, ಕ್ಯಾಪ್ಸಿಕಂ ಹಾಕಿ 1 ನಿಮಿಷ ಹುರಿದುಕೊಳ್ಳಿ. ಕಡಿಮೆ ಉರಿಯಲ್ಲಿ ಸೋಯಾ ಸಾಸ್, ವಿನೆಗರ್, ರೆಡ್ ಚಿಲ್ಲಿ ಸಾಸ್, ಟೊಮೆಟೊ ಸಾಸ್, ಕರಿಮೆಣಸಿನ ಪುಡಿ ಮತ್ತು ರುಚಿಗೆ ಉಪ್ಪು ಹಾಕಿ 30 ಸೆಕೆಂಡ್ ಹುರಿದುಕೊಳ್ಳಿ. ಇದಕ್ಕೆ 4 ಚಮಚ ನೀರನ್ನು ಸೇರಿಸಿ ಮಿಶ್ರಣ ಮಾಡಿಕೊಳ್ಳಿ ಮತ್ತು ಕರಿದ ಚಿಕನ್ ಹಾಕಿ ಫ್ರೈ ಮಾಡಿ, ಇದಕ್ಕೆ ಬಿಳಿ ಎಳ್ಳು ಸೇರಿಸಿ ಚೆನ್ನಾಗಿ ಹುರಿದರೆ ರುಚಿಯಾದ ಡ್ರ್ಯಾಗನ್ ಚಿಕನ್ ಸವಿಯಲು ಸಿದ್ಧ.

ಚೆಟ್ಟಿನಾಡ್ ಚಿಕನ್



ಬೇಕಾಗುವ ಸಾಮಗ್ರಿಗಳು: ಚಿಕನ್ - ಅರ್ಧ ಕೆಜಿ, ಈರುಳ್ಳಿ - 2, ಟೊಮೆಟೊ - 2, ತೆಂಗಿನಕಾಯಿ - 1/2 ಕಪ್, ಅರಿಸಿನ ಪುಡಿ - 1/2 ಚಮಚ, ಶುಂಠಿ ಬೆಳ್ಳುಳ್ಳಿ ಪೇಸ್ಟ್ - 1 ಚಮಚ, ಕೊತ್ತಂಬರಿ ಸೊಪ್ಪು - 1/2 ಕಪ್, ನಿಂಬೆಹಣ್ಣು - 1/2, ಕರಿಬೇವಿನ ಸೊಪ್ಪು - 1 ಚಮಚ, ಒಣ ಮೆಣಸು - 3, ಚಕ್ಕೆ - 3, ಏಲಕ್ಕಿ - 3, ಜಾಪತ್ರೆ ಹೂ - 1, ಮರಾಠಿ ಮೊಗ್ಗು - 1, ನಕ್ಷತ್ರ ಹೂ - 1, ಕಾಳುಮೆಣಸು - 1 ಟೀ ಚಮಚ, ಜೀರಿಗೆ - 1 ಟೀ ಚಮಚ, ಸೋಂಪು - 1 ಟೀ ಚಮಚ, ಕೊತ್ತಂಬರಿ ಕಾಳು - 1 ಟೀ ಚಮಚ, ಅಡುಗೆ ಎಣ್ಣೆ ಮತ್ತು ರುಚಿಗೆ ತಕ್ಕಷ್ಟು ಉಪ್ಪು.

ತಯಾರಿಸುವ ವಿಧಾನ: ಒಂದು ಬಟ್ಟಲಿನಲ್ಲಿ ತೊಳೆದು ಕತ್ತರಿಸಿದ ಚಿಕನ್, ಉಪ್ಪು, ನಿಂಬೆರಸ, ಅರಿಸಿನ ಪುಡಿ ಹಾಕಿ ಚೆನ್ನಾಗಿ ಮಿಶ್ರಣ ಮಾಡಿಕೊಂಡು 15 ರಿಂದ 20 ನಿಮಿಷ ನೆನೆಸಿಡಿ. ಒಂದು ಬಾಣಲೆಗೆ ಒಣ ಮೆಣಸು, ಚಕ್ಕೆ, ಏಲಕ್ಕಿ, ಜಾಪತ್ರೆ ಹೂ, ಮರಾಠಿ ಮೊಗ್ಗು, ನಕ್ಷತ್ರ ಹೂ, ಕಾಳುಮೆಣಸು, ಜೀರಿಗೆ, ಸೋಂಪು, ಕೊತ್ತಂಬರಿ ಕಾಳು ಮತ್ತು ಹಸಿ ತೆಂಗಿನಕಾಯಿ ಹಾಕಿ ಚೆನ್ನಾಗಿ ಹುರಿದುಕೊಳ್ಳಿ. ಹುರಿದ ಪದಾರ್ಥಗಳು ತಣ್ಣಗಾದ ನಂತರ ಒಂದು ಮಿಕ್ಸಿಯಲ್ಲಿ ಹಾಕಿ ಪೌಡರ್ ಮಾಡಿಕೊಳ್ಳಿ. ಒಂದು ಬಾಣಲೆಗೆ 5 ಚಮಚ ಎಣ್ಣೆ ಹಾಕಿ, ಈರುಳ್ಳಿ, ಟೊಮೆಟೊ, ಶುಂಠಿ-ಬೆಳ್ಳುಳ್ಳಿ ಪೇಸ್ಟ್ ಹಾಕಿ 1 ನಿಮಿಷ ಚೆನ್ನಾಗಿ ಹುರಿದುಕೊಳ್ಳಿ. ನಂತರ ಇದಕ್ಕೆ ಮಿಶ್ರಣ ಮಾಡಿದ್ದ ಚಿಕನ್ ಹಾಕಿ 10 ನಿಮಿಷ ಮಧ್ಯಮ ಉರಿಯಲ್ಲಿ ಚಿಕನ್ ನೀರಿನ ಅಂಶ ಬಿಡುವವರೆಗೂ ಹುರಿದುಕೊಳ್ಳಿ. ಚಿಕನ್ ಡ್ರೈ ಆದ ಮೇಲೆ ರುಬ್ಬಿದ ಮಸಾಲೆ ಪುಡಿ ಸೇರಿಸಿ ಮಿಶ್ರಣ ಮಾಡಿ, ಇದಕ್ಕೆ ಮುಕ್ಕಾಲು ಕಪ್ ನೀರು, ಸ್ವಲ್ಪ ಉಪ್ಪು ಹಾಕಿ ಮಿಶ್ರಣ ಮಾಡಿ. ನಂತರ ಕಡಿಮೆ ಉರಿ ಇಟ್ಟು ಮುಚ್ಚಳ ಮುಚ್ಚಿ 10 ನಿಮಿಷ ಬಿಡಿ (ಮಧ್ಯದಲ್ಲಿ ಒಂದೆರೆಡು ಬಾರಿ ಕಲೆಸಿಕೊಳ್ಳಿ), ಕೊನೆಗೆ ಕರಿಬೇವಿನ ಸೊಪ್ಪು, ಕೊತ್ತಂಬರಿ ಸೊಪ್ಪು ಸೇರಿಸಿದರೆ ಸೂಪರ್ ಚೆಟ್ಟಿನಾಡ್ ಚಿಕನ್ ಸವಿಯಲು ಸಿದ್ಧ.

ಚಿಕನ್ ಕೈಮಾ ಮಂಚೂರಿಯನ್



ಬೇಕಾಗುವ ಸಾಮಗ್ರಿಗಳು: ಚಿಕನ್ ಕೈಮಾ - 1 ಕೆಜಿ, ಕಾರ್ನ್‌ಫ್ಲೋರ್ - 4 ಚಮಚ, ಮೈದಾ ಹಿಟ್ಟು - 2 ಚಮಚ, ಮೊಟ್ಟೆ - 1, ಈರುಳ್ಳಿ - 2, ಕ್ಯಾಪ್ಸಿಕಂ - 1, ಖಾರದಪುಡಿ - 1 ಟೀ ಚಮಚ, ಕಾಳುಮೆಣಸಿನ ಪುಡಿ - 1 ಟೀ ಚಮಚ, ಹಸಿಮೆಣಸಿನಕಾಯಿ - 3, ಹೆಚ್ಚಿದ ಶುಂಠಿ - 2 ಚಮಚ, ಹೆಚ್ಚಿದ ಬೆಳ್ಳುಳ್ಳಿ - 2 ಚಮಚ, ಶುಂಠಿ ಬೆಳ್ಳುಳ್ಳಿ ಪೇಸ್ಟ್ - 1 ಚಮಚ, ಟೊಮೆಟೊ ಸಾಸ್ - 4 ಚಮಚ, ಸೋಯಾ ಸಾಸ್ - 1 ಚಮಚ, ರೆಡ್ ಚಿಲ್ಲಿ ಸಾಸ್ - 2 ಚಮಚ, ಕೊತ್ತಂಬರಿ ಸೊಪ್ಪು - 1/4 ಕಪ್, ಅಡುಗೆ ಎಣ್ಣೆ ಮತ್ತು ರುಚಿಗೆ ತಕ್ಕಷ್ಟು ಉಪ್ಪು.

ತಯಾರಿಸುವ ವಿಧಾನ: ಒಂದು ಬಟ್ಟಲಿಗೆ ಚಿಕನ್ ಕೈಮಾ ಹಾಕಿಕೊಳ್ಳಿ, ಇದಕ್ಕೆ ಮೊಟ್ಟೆ, ಹೆಚ್ಚಿದ ಈರುಳ್ಳಿ, ಶುಂಠಿ-ಬೆಳ್ಳುಳ್ಳಿ ಪೇಸ್ಟ್ ಅರ್ಧ ಚಮಚ, ಕಾಳುಮೆಣಸಿನ ಪುಡಿ ಅರ್ಧ ಚಮಚ, ಖಾರದ ಪುಡಿ ಅರ್ಧ ಚಮಚ, ರುಚಿಗೆ ತಕ್ಕಷ್ಟು ಉಪ್ಪು, ಕಾರ್ನ್‌ಫ್ಲೋರ್ 3 ಚಮಚ, ಮೈದಾಹಿಟ್ಟು 2 ಚಮಚ ಹಾಕಿ ಚೆನ್ನಾಗಿ ಮಿಶ್ರಣ ಮಾಡಿಕೊಳ್ಳಿ. ಈಗ ಒಂದು ಬಾಣಲೆಯಲ್ಲಿ ಮಧ್ಯಮ ಉರಿಯಲ್ಲಿ ಎಣ್ಣೆ ಬಿಸಿಮಾಡಿಕೊಂಡು ಚಿಕ್ಕ ಚಿಕ್ಕ ಉಂಡೆ ಆಕಾರದಲ್ಲಿ ಕರಿಯಿರಿ. ಸರಿಯಾಗಿ ಬಣ್ಣ ಬದಲಾಗುವವರೆಗೂ ಬೇಯಿಸಿಕೊಂಡು ಪಕ್ಕಕ್ಕೆ ಇಡಿ. ಒಂದು ಕಡಾಯಿಯಲ್ಲಿ 4 ಚಮಚ ಎಣ್ಣೆ ಹಾಕಿಕೊಂಡು ಅದಕ್ಕೆ ಹೆಚ್ಚಿದ ಶುಂಠಿ, ಬೆಳ್ಳುಳ್ಳಿ, ಹಸಿಮೆಣಸಿನಕಾಯಿ, ಈರುಳ್ಳಿ, ಕ್ಯಾಪ್ಸಿಕಂ ಹಾಕಿ ಹಸಿ ವಾಸನೆ ಹೋಗುವವರೆಗೂ ಹುರಿಯಿರಿ. ಉರಿ ಕಡಿಮೆ ಮಾಡಿ ಇದಕ್ಕೆ ಸೋಯಾ ಸಾಸ್, ರೆಡ್ ಚಿಲ್ಲಿ ಸಾಸ್, ಟೊಮೆಟೊ ಸಾಸ್ ಹಾಕಿ ಉಳಿದಿರುವ ಕಾಳುಮೆಣಸಿನಪುಡಿ, ಖಾರದಪುಡಿ ಮತ್ತು ರುಚಿಗೆ ತಕ್ಕಷ್ಟು ಉಪ್ಪು ಹಾಕಿ ಹುರಿದುಕೊಳ್ಳಿ, ಒಂದೂವರೆ ಕಪ್ ನೀರು ಹಾಕಿ ಮಿಶ್ರಣ ಮಾಡಿಕೊಳ್ಳಿ. ನಂತರ ಇದಕ್ಕೆ ಕರಿದ ಚಿಕನ್ ಉಂಡೆಗಳನ್ನು ಸೇರಿಸಿ 2 ನಿಮಿಷ ಹುರಿಯಿರಿ. ಕೊನೆಗೆ ಕೊತ್ತಂಬರಿ ಸೊಪ್ಪು ಸೇರಿಸಿ ಬಿಸಿ ಬಿಸಿಯಾದ ರುಚಿಕರವಾದ ಚಿಕನ್ ಕೈಮಾ ಮಂಚೂರಿಯನ್ ತಿನ್ನಲು ಕೊಡಿ.

ಲೇಖಕಿ: ‘ರೇಖಾ ಅಡುಗೆ’ ಯೂಟ್ಯೂಬ್ ಚಾನೆಲ್ ನಿರ್ವಾಹಕಿ

ಅಭಿಮತ



ಸುಭಾಷಿತ

ತಮ್ಮ ಸಮಾಜ ಯಾವುದನ್ನು ಪುರಸ್ಕರಿಸುತ್ತದೋ ಅದನ್ನೇ ಜನ ಮಾಡುತ್ತಾರೆ. ಸಮಾಜವು ವಿಶ್ವಾಸಕ್ಕೆ ಮನ್ನಣೆ ನೀಡಿದರೆ, ಜನ ಕೂಡ ವಿಶ್ವಾಸಾರ್ಹತೆ ಹೊಂದಿರುತ್ತಾರೆ.

–ಅಮಿಶ್ ತ್ರಿಪಾಠಿ

ಸಾರ್ವಜನಿಕ ಶೌಚಾಲಯ: ಕೊರತೆ ನಿವಾರಿಸಿ, ಶುಚಿತ್ವ ಕಾಪಾಡಿ

ಬೆಂಗಳೂರು ಮಹಾನಗರವು ಸ್ವಚ್ಛ ಭಾರತ ಸರ್ವೆ ಪ್ರಕಾರ ಬಯಲು ಶೌಚಮುಕ್ತ ಸ್ಥಾನಮಾನವನ್ನು 2020ರಲ್ಲೇ ಪಡೆದುಕೊಂಡಿದೆ. ಆದರೂ ಚೆನ್ನೈ, ಹೈದರಾಬಾದ್ ಮತ್ತು ಅಹಮದಾಬಾದ್ ನಗರಗಳಿಗೆ ಹೋಲಿಸಿದರೆ ಇಲ್ಲಿರುವ ಸಾರ್ವಜನಿಕ ಶೌಚಾಲಯಗಳ ಸಂಖ್ಯೆ ಕಡಿಮೆ. ನಗರದ ಪ್ರತೀ ವಾರ್ಡ್‌ನಲ್ಲಿ ಸರಾಸರಿ 2.3ರಷ್ಟು ಸಾರ್ವಜನಿಕ ಶೌಚಾಲಯಗಳು ಮಾತ್ರ ಇವೆ. ಲಭ್ಯವಿರುವ ಸಾರ್ವಜನಿಕ ಶೌಚಾಲಯಗಳ ಸೌಕರ್ಯಗಳನ್ನು ಏಕಕಾಲದಲ್ಲಿ 3,528 ಮಂದಿ ಮಾತ್ರ ಬಳಸಬಹುದು. ನಗರಕ್ಕೆ ಹೀಗೆ ಬಂದು ಹಾಗೆ ಹೋಗುವವರ ಸಂಖ್ಯೆಯೇ 21 ಲಕ್ಷದಷ್ಟಿದೆ. ಈಗ ಲಭ್ಯವಿರುವ ಸಾರ್ವಜನಿಕ ಶೌಚಾಲಯಗಳು ಆ ಸಂಖ್ಯೆಯ ಮೂರನೇ ಎರಡು ಭಾಗದಷ್ಟು ಜನರ ಅಗತ್ಯವನ್ನೂ ಪೂರೈಸಲಾರವು. ಅವರ ಅಗತ್ಯ ಪೂರೈಸುವ ಸಲುವಾಗಿಯೇ ತುರ್ತಾಗಿ ಇನ್ನೂ 277 ಸಾರ್ವಜನಿಕ ಶೌಚಾಲಯಗಳ ಅವಶ್ಯಕತೆ ಇದೆ ಎನ್ನುತ್ತದೆ ಬೆಂಗಳೂರು ನೈರ್ಮಲ್ಯ ಯೋಜನಾ ವರದಿ. ನಗರದಲ್ಲಿ ಪ್ರಸ್ತುತ 462 ಸಾರ್ವಜನಿಕ ಶೌಚಾಲಯಗಳಿವೆ. ಆದರೆ, ಕೆಲವೊಂದು ಶೌಚಾಲಯಗಳಿಗೆ ಸದಾ ಬೀಗ ಹಾಕಲಾಗಿರುತ್ತದೆ. ಇವುಗಳಲ್ಲಿ ಕೆಲವು ಉಗ್ರಾಣಗಳಂತೆ ಬಳಕೆಯಾಗುತ್ತಿವೆ. 'ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಲೋಕಲ್ ಸೆಲ್ಫ್ ಗವರ್ನಮೆಂಟ್' ಕೂಡ ನಗರದ ಸಾರ್ವಜನಿಕ ಶೌಚಾಲಯಗಳ ಸರ್ವೆ ನಡೆಸಿತ್ತು. ಆಗ 21 ಸಾರ್ವಜನಿಕ ಶೌಚಾಲಯಗಳಿಗೆ ಹಾಗೂ ಮೂರು ಸಮುದಾಯ ಶೌಚಾಲಯಗಳಿಗೆ ಬೀಗ ಹಾಕಿರುವುದು ಕಂಡುಬಂದಿತ್ತು. ಒಟ್ಟು 139 ಶೌಚಾಲಯಗಳು ತುರ್ತಾಗಿ ದುರಸ್ತಿಪಡಿಸಬೇಕಾದ ಸ್ಥಿತಿಯಲ್ಲಿದ್ದವು. ಸಾರ್ವಜನಿಕ ಶೌಚಾಲಯಗಳ ವಿನ್ಯಾಸವು ಅಂಗವಿಕಲರ ಬಳಕೆಗೆ ಹಾಗೂ ಸ್ಯಾನಿಟರಿ ನ್ಯಾಪ್ಕಿನ್‌ಗಳ ವಿಲೇವಾರಿಗೆ ಪೂರಕವಾಗಿಲ್ಲ, ಈ ಶೌಚಾಲಯಗಳ ನಿರ್ವಹಣಾ ಸಿಬ್ಬಂದಿಗೆ ಒದಗಿಸಲಾದ ಕೊಠಡಿಯೂ ತೀರಾ ಸಣ್ಣದು, ನಿರ್ವಹಣಾ ಸಿಬ್ಬಂದಿ ಸ್ನಾನ ಮಾಡುವುದಕ್ಕೆ ಸೌಕರ್ಯಗಳಿಲ್ಲ, ಕೆಲವು ಸಮುದಾಯ ಶೌಚಾಲಯಗಳಿಗೆ ಹಾಗೂ ಸಾರ್ವಜನಿಕ ಶೌಚಾಲಯಗಳಿಗೆ ಟ್ಯಾಂಕರ್‌ನಲ್ಲಿ ನೀರು ಪೂರೈಸಬೇಕಾದ ಸ್ಥಿತಿ ಇದೆ ಎಂಬ ಅಂಶಗಳನ್ನೂ ಬೆಂಗಳೂರು ನೈರ್ಮಲ್ಯ ಯೋಜನಾ ವರದಿ ಬೊಟ್ಟು ಮಾಡಿದೆ. ಕೆಲವು ಶೌಚಾಲಯಗಳು ಹೇಗೆ ಗಬ್ಬು ನಾರುತ್ತವೆ ಎನ್ನುವುದನ್ನು ಪ್ರತ್ಯೇಕವಾಗಿ ಬಿಡಿಸಿ ಹೇಳಬೇಕಿಲ್ಲ. ಭವಿಷ್ಯದಲ್ಲಿ ಶೌಚಾಲಯಗಳ ವಿನ್ಯಾಸ ರೂಪಿಸುವಾಗ ಎಲ್ಲ ಕೊರತೆಗಳನ್ನು ನಿವಾರಿಸುವ ಬಗ್ಗೆ ಬಿಬಿಎಂಪಿ ವಿಶೇಷ ಗಮನ ವಹಿಸಬೇಕಿದೆ.




ಸಾರ್ವಜನಿಕ ಮತ್ತು ಸಮುದಾಯ ಶೌಚಾಲಯಗಳನ್ನು ಹೊಂದುವ ಹಾಗೂ ಅವುಗಳನ್ನು ನಿರ್ವಹಿಸುವ ಕುರಿತು ಬಿಬಿಎಂಪಿ ಸಮಗ್ರ ನೀತಿಯನ್ನು ತುರ್ತಾಗಿ ರೂಪಿಸಬೇಕು

ಶೌಚಾಲಯಗಳು ಎಷ್ಟು ಜನಸ್ನೇಹಿಯಾಗಿವೆ ಎಂದು ನೋಡಿದಾಗ ಇಲ್ಲೂ ಲಿಂಗ ತಾರತಮ್ಯ ಢಾಳಾಗಿ ಕಾಣಿಸುತ್ತದೆ. ಮಹಿಳೆಯರು ಸಾರ್ವಜನಿಕ ಶೌಚಾಲಯ ಬಳಸುವ ಪ್ರಮಾಣ ತೀರಾ ಕಡಿಮೆ. ಮಹಿಳೆಯರು ಮುಕ್ತವಾಗಿ ಬಳಸಲು ಸಾರ್ವಜನಿಕ ಶೌಚಾಲಯಗಳು ಪೂರಕವಾಗಿ ಇಲ್ಲದಿರುವುದೇ ಇದಕ್ಕೆ ಕಾರಣ. ಪಾದಚಾರಿ ಮಾರ್ಗಗಳಲ್ಲಿ, ಸುಲಭವಾಗಿ ಹೋಗಲಾಗದ ಇಕ್ಕಟ್ಟಿನ ಪ್ರದೇಶಗಳಲ್ಲಿ ಶೌಚಾಲಯಗಳನ್ನು ನಿರ್ಮಿಸಿದರೆ ಅದರಿಂದ ಪ್ರಯೋಜನವಾಗದು. ಕೆಲವು ಶೌಚಾಲಯಗಳ ಸ್ಥಿತಿ ಶೋಚನೀಯವಾಗಿದ್ದು, ಅವುಗಳ ನಿರ್ವಹಣೆಗೆ ಬಿಬಿಎಂಪಿ ಕೊಡಬೇಕಾದಷ್ಟು ಮಹತ್ವವನ್ನು ನೀಡಿಲ್ಲ. ಬಹಳಷ್ಟು ಶೌಚಾಲಯಗಳನ್ನು ತುರ್ತಾಗಿ ದುರಸ್ತಿಪಡಿಸಬೇಕಾದ ಅಗತ್ಯವಿದೆ. ಶೌಚಾಲಯಗಳನ್ನು ಸರಿಯಾಗಿ ನಿರ್ವಹಣೆ ಮಾಡದಿರುವುದು ಪರೋಕ್ಷವಾಗಿ ಬಯಲುಶೌಚಕ್ಕೆ ಕಾರಣವಾಗಬಲ್ಲದು. 'ಸ್ಮಾರ್ಟ್ ಸಿಟಿ'ಯನ್ನು ನಿರ್ಮಿಸಲು ಹೊರಟಿರುವ ಬೆಂಗಳೂರಿನ ಆಡಳಿತ ವ್ಯವಸ್ಥೆಯು ಮನುಷ್ಯನ ಮೂಲಭೂತ ಅಗತ್ಯವನ್ನು ಪೂರೈಸಲು ಬೇಕಾಗಿರುವ ಸೌಕರ್ಯಗಳ ಬಗ್ಗೆ ಎಷ್ಟು ಅನಾದರ ತೋರಿದೆ ಎಂಬುದನ್ನು ಬೆಂಗಳೂರು ನೈರ್ಮಲ್ಯ ಯೋಜನೆ ವರದಿ ಎತ್ತಿತೋರಿಸಿದೆ. ಕೇವಲ ದಾಖಲೆಗಳಿಗಾಗಿ ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಿಸಿದರೆ ಸಾಲದು. ಅವುಗಳ ನಿರ್ವಹಣೆಗೂ ಸಮರ್ಪಕ ವ್ಯವಸ್ಥೆ ಮಾಡಬೇಕು. ಅವುಗಳಿಗೆ ನೀರಿನ ಪೂರೈಕೆಯಲ್ಲಿ ಕೊರತೆಯಾಗದಂತೆ ನೋಡಿಕೊಳ್ಳಬೇಕು. ಶೌಚಾಲಯಗಳ ಸುಸ್ಥಿರ ನಿರ್ವಹಣೆ ಒಂದು ಸವಾಲು. ಇದನ್ನು ಸಮರ್ಥವಾಗಿ ನಿಭಾಯಿಸಲು ಬಿಬಿಎಂಪಿಯು ಹೊಸತನದ ಮೊರೆಹೋಗಬೇಕು. ಶೌಚಾಲಯಗಳಿಗೆ ಆಧುನಿಕ ಸ್ಪರ್ಶ ನೀಡಬೇಕು. ಖಾಸಗಿ ವಲಯದ ಸಹಭಾಗಿತ್ವದಲ್ಲಿ ಶೌಚಾಲಯಗಳನ್ನು ನಿರ್ಮಿಸಿ ನಿರ್ವಹಣೆ ಮಾಡುವುದು ಒಳ್ಳೆಯದೇ. ಆದರೆ, ಈ ವ್ಯವಸ್ಥೆ ಸಮರ್ಪಕವಾಗಿ ನಡೆಯುವಂತೆ ನೋಡಿಕೊಳ್ಳುವ ಜವಾಬ್ದಾರಿಯೂ ಬಿಬಿಎಂಪಿ ಮೇಲಿದೆ.

ಕೆಲವು ಶೌಚಾಲಯಗಳಲ್ಲಿ ಬಳಕೆದಾರರಿಂದ ಹೆಚ್ಚಿನ ಹಣ ವಸೂಲಿ ಮಾಡುತ್ತಿರುವುದರ ಕುರಿತು ದೂರುಗಳಿವೆ. ಶೌಚಾಲಯ ಬಳಕೆಗೆ ದರನೀತಿಯನ್ನು ಬಿಬಿಎಂಪಿ ಇದುವರೆಗೂ ಸಿದ್ಧಪಡಿಸಿಲ್ಲ. ಸಾರ್ವಜನಿಕ ಬಳಕೆಗೆ ಲಭ್ಯವಾಗಬೇಕಾದ ಶೌಚಾಲಯಗಳಿಗೆ ಬೀಗ ಹಾಕುವುದು, ಅವುಗಳನ್ನು ಉಗ್ರಾಣಗಳಂತೆ ಬಳಸುತ್ತಿರುವುದಂತೂ ನಿರ್ವಹಣೆ ವ್ಯವಸ್ಥೆಯ ಲೋಪಗಳಿಗೆ ಹಿಡಿದ ಕೈಗನ್ನಡಿ. ನಗರದಲ್ಲಿ ಶೌಚಾಲಯ ಸಮಸ್ಯೆಗಳ ಕುರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆಯ ವೇಳೆ ಬೆಂಗಳೂರು ನೈರ್ಮಲ್ಯ ಯೋಜನಾ ವರದಿಯನ್ನು ಬಿಬಿಎಂಪಿಯೇ ಹೈಕೋರ್ಟ್‌ಗೆ ಸಲ್ಲಿಸಿದೆ. ಈ ವರದಿಯನ್ನು ಪರಿಶೀಲಿಸಿರುವ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, 'ಅಗತ್ಯ ಇರುವ ಕಡೆಗಳಲ್ಲಿ ಶೌಚಾಲಯ ನಿರ್ಮಾಣ, ನಿರ್ವಹಣೆ, ಗುಣಮಟ್ಟ ಸುಧಾರಣೆ ಬಗ್ಗೆ ತಕ್ಷಣ ಗಮನಹರಿಸಬೇಕು' ಎಂದು ಬಿಬಿಎಂಪಿಗೆ ನಿರ್ದೇಶನ ನೀಡಿದೆ. ಹೈಕೋರ್ಟ್ ನಿರ್ದೇಶನ ನೀಡಿದ ಬಳಿಕವಾದರೂ ಬಿಬಿಎಂಪಿ ಎಚ್ಚೆತ್ತುಕೊಳ್ಳಬೇಕು. ಸಾರ್ವಜನಿಕ ಮತ್ತು ಸಮುದಾಯ ಶೌಚಾಲಯಗಳನ್ನು ಹೊಂದುವ ಹಾಗೂ ಅವುಗಳ ನಿರ್ವಹಣೆ ಕುರಿತು ಸಮಗ್ರ ನೀತಿಯನ್ನು ಬಿಬಿಎಂಪಿ ತುರ್ತಾಗಿ ರೂಪಿಸಬೇಕು.

ದಿನದ ಟ್ವೀಟ್

ಗಂಭೀರವಾಗಿ ಪರಿಗಣಿಸಿ



39 ವರ್ಷದ ನನ್ನ ಸೋದರಸಂಬಂಧಿ ನಿನ್ನೆ ರಾತ್ರಿ ನಿಧನರಾದರು. ಕೋವಿಡ್ -19 ಎರಡನೇ ಅಲೆಯಲ್ಲಿ ಈ ವರ್ಷ ಅವರು ಕೆಲಸ ಕಳೆದುಕೊಂಡಿದ್ದರು. ಖಿನ್ನತೆಗೆ ಒಳಗಾಗಿದ್ದ ಅವರು ಯಾರೊಂದಿಗೂ ಸಂಪರ್ಕದಲ್ಲಿ ಇರಲಿಲ್ಲ. ಕೋವಿಡ್ ಸಮಯದಲ್ಲಿ ಮಾನಸಿಕ ಆರೋಗ್ಯವು ವಿವಿಧ ಕಾರಣಗಳಿಂದಾಗಿ ಗಂಭೀರ ಸ್ಥಿತಿ ತಲುಪುತ್ತಿದೆ. ನಿಮ್ಮ ಪ್ರೀತಿಪಾತ್ರರ ಬಗ್ಗೆ ಕಾಳಜಿ ವಹಿಸಿ.

ಪ್ರಿಯಾಂಕಾ ರಾಯ್ ಬ್ಯಾನರ್ಜಿ, ಪತ್ರಕರ್ತೆ

25 ವರ್ಷಗಳ ಹಿಂದೆ

ಬುಧವಾರ, 3-7-1996

• ಎಪಿಎಂಸಿ ಪೂರ್ಣ ಬಂದ್

ಬೆಂಗಳೂರು, ಜುಲೈ 2– ಈಗಾಗಲೇ ಏರಿಸಲಾಗಿರುವ ಕೃಷಿ ಉತ್ಪನ್ನ ಮಾರುಕಟ್ಟೆ ಶುಲ್ಕವನ್ನು ಶೇ 2ರಿಂದ ಶೇ 1ಕ್ಕೆ ಇಳಿಸುವವರೆಗೆ ವ್ಯಾಪಾರ ಸ್ಥಗಿತಗೊಳಿಸುವುದಾಗಿ ಕೃಷಿ ಉತ್ಪನ್ನ ಮಾರುಕಟ್ಟೆ ಜಂಟಿ ಕ್ರಿಯಾ ಸಮಿತಿ ಬಿಗಿ ನಿಲುವು ತಾಳುವುದರೊಂದಿಗೆ ರಾಜ್ಯದ ನಿಯಂತ್ರಿತ ಮಾರುಕಟ್ಟೆಗಳಲ್ಲಿ ವ್ಯಾಪಾರ ವಹಿವಾಟು ಸದ್ಯ ಪುನರಾರಂಭವಾಗುವ ಲಕ್ಷಣ ಕಾಣುತ್ತಿಲ್ಲ.

• ಸರ್ಕಾರ ಅಭದ್ರ: ಎಚ್ಚರಿಕೆ

ಹುಬ್ಬಳ್ಳಿ, ಜುಲೈ 2– ಪಕ್ಷದಲ್ಲಿ ಗುಂಪುಗಾರಿಕೆ ನಡೆಸುತ್ತಿರುವ ವ್ಯಕ್ತಿಗಳಿಂದ ಜೆ.ಎಚ್.ಪಟೇಲ್ ನೇತೃತ್ವದ ಸರ್ಕಾರ ಅಭದ್ರವಾಗಿದೆ, ಇಂತಹವರ ವಿರುದ್ಧ ಪಟೇಲರು ಉಗ್ರ ಕ್ರಮ ಕೈಗೊಳ್ಳಬೇಕು ಎಂದು ಜನತಾದಳದಿಂದ ಉಚ್ಚಾಟನೆಗೊಂಡಿರುವ ರಾಮಕೃಷ್ಣ ಹೆಗಡೆ ಹೇಳಿದ್ದಾರೆ.

50 ವರ್ಷಗಳ ಹಿಂದೆ

ಶನಿವಾರ, 3-7-1971

• ಶಿರೂರು ಮಠಕ್ಕೆ ನೂತನ ಶ್ರೀಗಳು

ಉಡುಪಿ, ಜುಲೈ 2– ಉಡುಪಿ ಅಷ್ಟಮಠಗಳಿಗೆ ಸೇರಿದ ಶ್ರೀ ಶಿರೂರು ಮಠದ ಶ್ರೀ ಲಕ್ಷ್ಮೀಮನೋಜ್ಞ ತೀರ್ಥ ಶ್ರೀಪಾದಂಗಳವರು ತಮ್ಮ ಸನ್ಯಾಸಿ ಪಟ್ಟವನ್ನು ತೊರೆಯುವ ನಿರ್ಧಾರ ಮಾಡಿದುದರಿಂದ, ದ್ವಂದ್ವ ಮಠದ ಗುರುಗಳಾದ ವಿಶೋತ್ತಮ ತೀರ್ಥ ಶ್ರೀಪಾದಂಗಳವರು ಜುಲೈ 1ರಂದು ನೂತನ ವಟುವಿಗೆ ಶಿರೂರು ಮಠದ ಸನ್ಯಾಸದ ದೀಕ್ಷೆಯನ್ನಿತ್ತು ಮುಂದಿನ ಮಠಾಧಿಪತಿಗಳನ್ನಾಗಿ ನೇಮಿಸಿದರು.

• ಕಾವೇರಿ ವಿವಾದ: ಪ್ರಧಾನಿ ಭೇಟಿ ಮಾಡಿದ ಸಂಸದರು

ನವದೆಹಲಿ, ಜುಲೈ 2– ಕಾವೇರಿ ಜಲವಿವಾದವನ್ನು ಪಂಚಾಯ್ತಿಗೆ ಒಪ್ಪಿಸಬೇಕೆಂಬ ತಮಿಳುನಾಡು ರಾಜ್ಯದ ಒತ್ತಾಯವನ್ನು ಪರಿಶೀಲಿಸುವುದಾಗಿ ಪ್ರಧಾನಿ ಇಂದಿರಾ ಗಾಂಧಿಯವರು ಇಂದು ರಾಜ್ಯದ ಸರ್ವಪಕ್ಷಗಳ ಸಂಸತ್ ಸದಸ್ಯರ ನಿಯೋಗವೊಂದಕ್ಕೆ ಆಶ್ವಾಸನೆ ನೀಡಿದರು.

ಉಷ್ಣವರ್ಧಕ ಅನಿಲ ನಿಯಂತ್ರಣ ಕುರಿತು ಭಾರತ ಸ್ಪಷ್ಟ ನಿರ್ಧಾರ ತಳೆಯಬೇಕಾಗಿದೆ

ಎಥನಾಲ್ ಇಂಧನ: ಏಕೆ ಮಣೆ?



ವಿಶ್ಲೇಷಣೆ

ಟಿ.ಆರ್.ಅನಂತರಾಮು

ಪರಿಸರಕ್ಕೆ ಹಾನಿಯಾಗದ, ಸುಸ್ಥಿರ ಅಭಿವೃದ್ಧಿಗೆ ನೆಚ್ಚಬಹುದಾದ ಶಕ್ತಿಮೂಲಗಳಿಗಾಗಿ ಎಲ್ಲ ದೇಶಗಳೂ ಹುಡುಕಾಟ ನಡೆಸಿವೆ. ಹಸಿರು ಶಕ್ತಿ ಎನ್ನುವುದು ಈ ಪರಿಕಲ್ಪನೆಯ ಒಂದು ಭಾಗವೇ. ಈ ಹುಡುಕಾಟದಲ್ಲಿ ಬಹುತೇಕ ದೇಶಗಳಿಗೆ, ಹೆಚ್ಚು ಶ್ರಮವಿಲ್ಲದೆ ಸಿಕ್ಕಿದ್ದು ಎಥನಾಲ್.

ಎಥನಾಲ್ ಉತ್ಪನ್ನ ಹೊಸತೇನಲ್ಲ. ಶಕ್ತಿಯ ಆಕರವಾಗಿ ಬಳಸಬಹುದೆಂದು ಕಂಡುಕೊಂಡದ್ದು ಇತ್ತೀಚೆಗೆ ಅಷ್ಟೇ. ಕಬ್ಬಿನಹಾಲಿನಲ್ಲಿ ಸಕ್ಕರೆ ಮಾಡುವಾಗ ಕಾಕಂಬಿಯೂ ಬರುತ್ತದೆ. ಅದು ಕಂದು ಬಣ್ಣದ ಸಿಹಿ ಪಾಕ. ಇದನ್ನು ಬಟ್ಟಿ ಇಳಿಸಿ ಪಡೆಯುವುದೇ ಎಥನಾಲ್. ಕಾಕಂಬಿಯಿಂದ ಬೆಲ್ಲ ತೆಗೆಯುವುದು ರೈತರಿಗೆ ಗೊತ್ತು. ಆದರೆ ಎಥನಾಲ್ ಎಂಬ ಇಂಧನವನ್ನೂ ಇದರಿಂದ ಪಡೆಯಬಹುದೆಂದು, ವಾಣಿಜ್ಯಿಕವಾಗಿ ಅದರ ಉತ್ಪಾದನೆ ಲಾಭದಾಯಕವೆಂದು ಕಂಡುಕೊಂಡದ್ದು ಕಳೆದ ಹತ್ತು- ಹದಿನೈದು ವರ್ಷಗಳ ಬೆಳವಣಿಗೆ.

ವಾಸ್ತವವಾಗಿ ಎಥನಾಲ್ ಅನ್ನು ಈಥೈಲ್ ಆಲ್ಕೊಹಾಲ್ ಎಂಬ ಹೆಸರಿನಲ್ಲಿ ಮದ್ಯಪಾನವಾಗಿ ಸೇವಿಸುವುದೂ ಉಂಟು. ಸ್ಯಾನಿಟೈಸರ್‌ನಲ್ಲೂ ಇದರ ಬಳಕೆಯುಂಟು. ಅದರಲ್ಲೂ ಕೋವಿಡ್ ವ್ಯಾಪಕವಾಗಿ ಹರಡಿರುವ ಈ ಸಂದರ್ಭದಲ್ಲಿ ಹಿಂದೆಂದಿಗಿಂತಲೂ ಇದಕ್ಕೆ ಹೆಚ್ಚು ಬೇಡಿಕೆ ಇದೆ. ಆದರೆ ಇಂಧನವಾಗಿ ಅದಕ್ಕಿರುವ ಕಿಮ್ಮತ್ತೇ ಬೇರೆ. ಅದು ಬೇಗ ಹೊತ್ತಿ ಉರಿಯುತ್ತದೆ, ಅಷ್ಟೇ ತ್ವರಿತವಾಗಿ ಬಾಷ್ಪವಾಗುತ್ತದೆ. ಬಣ್ಣರಹಿತ ದ್ರವ, ಸುಲಭವಾಗಿ ಪೆಟ್ರೋಲ್‌ನಲ್ಲಿ ವಿಲೀನವಾಗುತ್ತದೆ. ಎಥನಾಲ್ ಬೆರೆತ ಪೆಟ್ರೋಲ್, ಎಂಜಿನನ್ನು ಡಬ್ ಡಬ್ ಎಂದು ಒದೆಯುವುದಿಲ್ಲ. ಪೆಟ್ರೋಲ್, ಡೀಸೆಲ್ ಎಲ್ಲವೂ ಮಾಲಿನ್ಯಕಾರಕ ಎಂಬುದು ಈಗ ಸಾಬೀತಾಗಿರುವ ವಿಚಾರ. ವಿಶೇಷವಾಗಿ, ಅವುಗಳನ್ನು ಉರಿಸುವುದರಿಂದ ಕಾರ್ಬನ್ ಡೈ ಆಕ್ಸೈಡ್, ನೈಟ್ರಸ್ ಆಕ್ಸೈಡ್, ಹೈಡ್ರೊ ಕಾರ್ಬನ್‌ಗಳು ಅಧಿಕ ಉತ್ಪಾದನೆಯಾಗಿ ವಾಯುಗೋಳವನ್ನು ಹದಗೆಡಿಸಿವೆ, ಭೂತಾಪವನ್ನು ಹೆಚ್ಚಿಸಿವೆ ಎಂಬುದನ್ನು ಜಗತ್ತೇ ಬಲ್ಲದು. ಎಥನಾಲ್‌ಗೆ ಇಂಥ ದುರ್ಗುಣಗಳಿಲ್ಲ.

ಬ್ರೆಜಿಲ್ ಈಗ ತಯಾರಿಸುತ್ತಿರುವ ಬಹುಪಾಲು ಗ್ಯಾಸೋಲಿನ್ ಕಾರುಗಳಿಗೆ ಶೇ 25ರಷ್ಟು ಭಾಗ ಎಥನಾಲ್ ಬಳಸಿ ಭರ್ಜರಿ ವಹಿವಾಟು ನಡೆಸುತ್ತಿದೆ. ಅಷ್ಟರಮಟ್ಟಿಗೆ ಪೆಟ್ರೋಲ್‌ನ ಉಳಿತಾಯವಾಗುತ್ತಿದೆ ಎಂದು ಹೇಳುತ್ತಿದೆ. ಆದರೆ ಎಥನಾಲ್ ಮೂಲವಾಗಿ ಸಂಪೂರ್ಣವಾಗಿ ಕಬ್ಬನ್ನೇ ಅದು ಆಶ್ರಯಿಸು ತ್ತಿದೆ. ಇದು ಇತರ ದೇಶಗಳಿಗೂ ಪೈಪೋಟಿಗಿಳಿಯಲು ಅವಕಾಶ ಒದಗಿಸಿದೆ.

ಇದೇ ಜೂನ್ 5ರ ವಿಶ್ವ ಪರಿಸರ ದಿನದಂದು ನಮ್ಮ ಕೇಂದ್ರ ಸರ್ಕಾರ ಬಹು ದೊಡ್ಡ ಸುದ್ದಿಯೊಂದನ್ನು ಬಿಡುಗಡೆ ಮಾಡಿತು. 2030ರ ಹೊತ್ತಿಗೆ ಭಾರತವು ಪೆಟ್ರೋಲ್‌ಗೆ ಶೇ 20ರಷ್ಟು ಭಾಗ ಎಥನಾಲನ್ನು ಕಡ್ಡಾಯವಾಗಿ ಬೆರೆಸಬೇಕೆಂಬ ತನ್ನ ನಿರ್ಧಾರವನ್ನು ಐದು ವರ್ಷ ಹಿಂದಕ್ಕೆ ಹಾಕಿ ಆದೇಶವೊಂದನ್ನು ಹೊರಡಿಸಿತು. ಇದರಲ್ಲಿ ಎರಡು ಅಂಶಗಳು ಮುನ್ನೆಲೆಗೆ ಬರುತ್ತವೆ. ಒಂದು, ಎಥನಾಲ್ ಉತ್ಪಾದನೆಯಿಂದ ಕಬ್ಬು ಬೆಳೆಯುವ ರೈತರಿಗೂ ಆದಾಯ ತರುವುದು, ಇನ್ನೊಂದು, ಪರಿಶುದ್ಧ ಶಕ್ತಿಯ ಮೂಲವಾಗಿ ಇದನ್ನು ಬಳಸುವುದರಿಂದ ಪೆಟ್ರೋಲ್ ಆಮದಿನಲ್ಲಿ ವಾರ್ಷಿಕ ₹ 30,000 ಕೋಟಿ ಉಳಿತಾಯ ಮಾಡುವುದು. 2020- 21ರ ಸಾಲಿನಲ್ಲಿ ಭಾರತವು ಪೆಟ್ರೋಲಿಯಂ ಉತ್ಪನ್ನದ ಆಮದಿಗಾಗಿ ₹1,81,681 ಕೋಟಿ ವ್ಯಯಿಸಿರುವುದನ್ನು ಪೆಟ್ರೋಲಿಯಂ ಸಚಿವಾಲಯವೇ ಬಹಿರಂಗಪಡಿಸಿದೆ.

ಭಾರತದಲ್ಲಿ ಪೆಟ್ರೋಲಿಯಂಗೆ ಶೇ 5 ಎಥನಾಲ್ ಬೆರೆಸುವುದನ್ನು ಕೇಂದ್ರ ಸರ್ಕಾರ 2003ರಲ್ಲೇ ಅನುಮೋದಿಸಿತ್ತು. ಕರ್ನಾಟಕವೂ ಸೇರಿದಂತೆ ಎಂಟು ರಾಜ್ಯಗಳಲ್ಲಿ ಮೊದಲ ಹಂತದಲ್ಲಿ ಅನುಷ್ಠಾನವೂ ಆಯಿತು. ಇದಕ್ಕೆ ಮುನ್ನ ಮಹಾರಾಷ್ಟ್ರ ಮತ್ತು ಉತ್ತರಪ್ರದೇಶದ ಮೂರು ಆಯ್ದ ಕೇಂದ್ರಗಳಲ್ಲಿ ಪ್ರಾಯೋಗಿಕ ಪರೀಕ್ಷೆಯೂ ನಡೆದು ಅದಕ್ಕೆ ಹಸಿರು ನಿಶಾನೆ ಸಿಕ್ಕಿತು. ಈಗ ಶೇ 20ರಷ್ಟು ಬೆರೆಸಬೇಕೆಂಬ ನಿರ್ಧಾರ ಅದರ ಮುಂದುವರಿದ ಭಾಗ ಅಷ್ಟೇ.

ಹಸಿರು ಇಂಧನ ಬಳಕೆ ಕುರಿತು ಜಾಗತಿಕವಾಗಿ ಭಾರತವೂ ಸೇರಿದಂತೆ ಬಹುತೇಕ ದೇಶಗಳು ಒತ್ತಡದಲ್ಲಿವೆ. ಹವಾಗುಣ ಬದಲಾವಣೆಗೆ ಕಾರಣವಾಗುವ ಉಷ್ಣವರ್ಧಕ ಅನಿಲಗಳ ನಿಯಂತ್ರಣ ಮಾಡಬೇಕಾಗಿರುವುದು ಈ ಒತ್ತಡದ ಹಿನ್ನೆಲೆಯಲ್ಲಿರುವ ನಿಜವಾದ ಕಾರಣ. ಭಾರತ ಕೂಡ ತನ್ನ ಸ್ಪಷ್ಟ ನಿರ್ಧಾರಗಳನ್ನು ಜಗತ್ತಿನ ಮುಂದೆ ಇಡಬೇಕಾದ ಅನಿವಾರ್ಯವೂ ಇದೆ.

ಕೇಂದ್ರ ಸರ್ಕಾರವು ನೀತಿ ಆಯೋಗಕ್ಕೆ ಈ ಹೊಣೆಯನ್ನು ಕೊಟ್ಟು ಸಮಿತಿಯನ್ನು ತ್ವರಿತವಾಗಿ ನೇಮಿಸುವ ಸೂಚನೆಯನ್ನು ಕೊಟ್ಟಿತ್ತು. ನೀತಿ ಆಯೋಗ ಕೇವಲ 75 ದಿನಗಳಲ್ಲಿ ವರದಿ ತಯಾರಿಸಿದೆ. ತೈಲ ಕಂಪನಿಗಳೇ ಅಲ್ಲದೆ ಸಾರಿಗೆ ಸಂಪರ್ಕ, ಭಾರಿ ವಾಹನ ತಯಾರಿಕಾ ಸಂಸ್ಥೆಗಳ ತಜ್ಞರು ಸೇರಿ ಚರ್ಚಿಸಿದ್ದಾರೆ. ಇದರ ಸಾಧಕ ಬಾಧಕಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ. ಶೇ 20ರಷ್ಟು ಭಾಗ ಎಥನಾಲ್ ಬಳಸುವುದನ್ನು ಸಮಿತಿ ಸಮರ್ಥಿಸಿಕೊಂಡಿದೆ. ಆದರೆ ನೀತಿ ಆಯೋಗಕ್ಕೆ ಅನೇಕ ಸಮಸ್ಯೆಗಳು ಎದುರಾಗಿವೆ. ಕಬ್ಬಿನ ಮೂಲದಿಂದ ಎಥನಾಲ್ ಪಡೆಯುವುದು ತಾಂತ್ರಿಕವಾಗಿ ಸಮಸ್ಯೆಯೇ ಅಲ್ಲ, ಆದರೆ ಕಬ್ಬು ಮತ್ತು ಭತ್ತ ಇಡೀ ನೀರಾವರಿಯ ಶೇ 70ರಷ್ಟು ಭಾಗ ನೀರನ್ನು ಬೇಡುತ್ತವೆ. ಒಂದು ಟನ್ನು ಕಬ್ಬಿನಿಂದ 100 ಕೆ.ಜಿ. ಸಕ್ಕರೆ, 70 ಲೀಟರ್ ಎಥನಾಲನ್ನು ಉತ್ಪಾದಿಸಬಹುದು. ಆದರೆ ನೀರಿನ ಬಳಕೆಯ ಪ್ರಶ್ನೆ ಬಂದಾಗ, ಒಂದು ಲೀಟರ್ ಎಥನಾಲ್ ಪಡೆಯಲು 2,860 ಲೀಟರ್ ನೀರು ಬೇಕು. ಎಲ್ಲ ಕಡೆಯೂ ಅಣೆಕಟ್ಟು ಮತ್ತು ನದಿ ನೀರಿನ ಸೌಲಭ್ಯವಿಲ್ಲ. ಹಾಗಿದ್ದಲ್ಲಿ, ಅಂತರ್ಜಲ ಭಂಡಾರ ಬರಿದಾಗುವುದಿಲ್ಲವೇ?


ಇನ್ನೊಂದು ಪ್ರಶ್ನೆ ಎಥನಾಲ್ ಮೂಲಕ್ಕೇ ಸಂಬಂಧಿಸಿದ್ದು. ಎಥನಾಲ್ ಪಡೆಯಲು ಬರೀ ಕಬ್ಬನ್ನೇ ಮೂಲವಾಗಿ ಬಳಸಬೇಕಾಗಿಲ್ಲ. ಮೆಕ್ಕೆಜೋಳ, ಮುಗ್ಗಿದ ಗೋಧಿ, ಅಕ್ಕಿ ಮತ್ತು ಇತರ ಧಾನ್ಯಗಳಿಂದಲೂ ಎಥನಾಲನ್ನು ಪಡೆಯಬಹುದು. ಮುಗ್ಗಿದ ಅಕ್ಕಿ ಎಂದರೆ ಅದನ್ನು ಭಾರತ ಆಹಾರ ನಿಗಮದಿಂದ ಪಡೆಯಬೇಕು. ಅದು ಕೂಡ ಸರ್ಕಾರ ನಿಗದಿಪಡಿಸಿದ ಬೆಲೆಯಲ್ಲೇ ಕೊಳ್ಳಬೇಕು. ಇದರಲ್ಲಿ ಇನ್ನೂ ಒಂದು ಸಮಸ್ಯೆ ಸೇರಿಕೊಂಡಿದೆ. ಭಾರತ ತನ್ನ ಗೋದಾಮಿನಲ್ಲಿ ಇಷ್ಟೊಂದು ದವಸ, ಧಾನ್ಯವನ್ನು ಮುಗ್ಗಾಗಲು ಬಿಡುವಷ್ಟು ಶ್ರೀಮಂತ ರಾಷ್ಟ್ರವೇ?

ಸದ್ಯ ಸರ್ಕಾರ 70 ಸಕ್ಕರೆ ಕಾರ್ಖಾನೆಗಳಿಗೆ ಎಥನಾಲ್ ಬಟ್ಟಿ ಇಳಿಸುವ ಘಟಕಗಳ ಸ್ಥಾಪನೆಗಾಗಿ ಈ ವರ್ಷ ₹ 3,600 ಕೋಟಿ ಬಿಡುಗಡೆ ಮಾಡಿದೆ. ತಜ್ಞರ ಲೆಕ್ಕಾಚಾರದಂತೆ, ಪ್ರತೀ ಲೀಟರು ಎಥನಾಲನ್ನು ಉತ್ಪಾದನೆ ಮಾಡಲು ₹ 62 ಖರ್ಚು ಬರುತ್ತದೆ. ಅಮೆರಿಕ, ಬ್ರೆಜಿಲ್ ಮುಂತಾದ ದೇಶಗಳಲ್ಲಿ ಇದಕ್ಕಿಂತ ಅರ್ಧ ಖರ್ಚಿನಲ್ಲಿ ಉತ್ಪಾದನೆ ಮಾಡಬಹುದು. ಕಬ್ಬಿಗೆ ಹೆಚ್ಚಿಗೆ ಬೆಲೆ ತೆರಬೇಕೆಂದರೆ ಎಥನಾಲ್ ಬೆಲೆಯನ್ನೂ ಹೆಚ್ಚಿಸಲೇಬೇಕು. ಜೈವಿಕ ಇಂಧನಗಳ ಅಭಿವೃದ್ಧಿಗೆ ಇದೊಂದು ದೊಡ್ಡ ಸವಾಲು. ಇದರ ಜೊತೆಗೆ ಪೆಟ್ರೋಲ್‌ಗೆ ಅಬಕಾರಿ ಸುಂಕ ಅನ್ವಯಿಸುತ್ತದೆಯಾದರೆ, ಎಥನಾಲ್‌ಗೆ ಸದ್ಯ ಸರಕು ಸೇವಾ ತೆರಿಗೆ ಅನ್ವಯವಾಗುತ್ತಿದೆ. ಇದು ಕೂಡ ಧಾರಾಳ ಬಳಕೆಗೆ ಅಡ್ಡಿಯೇ.

ಹಾಗಿದ್ದರೆ 2025ರ ಹೊತ್ತಿಗೆ ಎಥನಾಲ್ ಉತ್ಪಾದನೆಯನ್ನು 684 ಕೋಟಿ ಲೀಟರಿಗೆ ಹೆಚ್ಚಿಸುವ ಬಗೆ ಹೇಗೆ? ಸದ್ಯದಲ್ಲಿ ಆಹಾರ ನಿಗಮದಲ್ಲಿ 40 ಲಕ್ಷ ಟನ್ನು ಮುಗ್ಗಿದ ಧಾನ್ಯವಿದೆ ಎಂದು ಸರ್ಕಾರವೇ ಲೆಕ್ಕ ಕೊಟ್ಟಿದೆ. ಉಳಿದೆಲ್ಲ ಎಥನಾಲ್ ಮೂಲಗಳನ್ನು ಸೇರಿಸಿದರೂ ಅದು ಕಬ್ಬಿನಿಂದ ಪಡೆಯುವ ಎಥನಾಲ್‌ಗೆ ಸಮವಾಗುವುದಿಲ್ಲ. ಇದೆಲ್ಲದರ ನಡುವೆಯೂ ಅದೇ ಪ್ರಶ್ನೆ ಏಳುತ್ತದೆ. ಶೇ 20ರಷ್ಟು ಭಾಗ ಎಥನಾಲನ್ನು ಗ್ಯಾಸೋಲಿನ್‌ಗೋ ಪೆಟ್ರೋಲ್‌ಗೋ ಬೆರೆಸಿ ವಾಹನಗಳಲ್ಲಿ ಬಳಸಿದರೆ ವಾಯುಮಾಲಿನ್ಯಕ್ಕೆ ಇದು ನಿಜಕ್ಕೂ ಪರಿಹಾರವೇ? ಪ್ರತೀ ದೇಶವೂ ಈಗ ಸಾಂಪ್ರದಾಯಿಕ ಇಂಧನ ಮೂಲಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಲು ಯೋಚಿಸುತ್ತಿದೆ. ಭಾರತದ ನಡೆ ಆ ದಿಸೆಯಲ್ಲಿರಬೇಕು.



ಚುರುಮುರಿ



ಫಲಿಸಿದ ಪ್ಲ್ಯಾನು!

• ಪ್ರೊ. ಎಸ್.ಬಿ.ರಂಗನಾಥ್

ಮೊನ್ನೆ ಸ್ಕೂಟರ್‌ನಿಂದ ಬಿದ್ದು ಕೈಮುರಿದುಕೊಂಡಿದ್ದ ಗೆಳೆಯನನ್ನು ನೋಡಲು ಆಸ್ಪತ್ರೆಗೆ ಹೋಗಿದ್ದ ಚಿಕ್ಕೇಶಿ.

'ಸ್ಕೂಟರ್ ನಿಧಾನವಾಗಿ ಓಡಿಸೋ ಅಂದ್ರೆ ಕೇಳಿದೆಯಾ?!' ಅಂದ ಗೆಳೆಯನಿಗೆ.

ಇಲ್ಲಯ್ಯಾ, ಹತ್ತೇ ಕಿಲೋಮೀಟರ್ ಸ್ಪೀಡ್‌ನಲ್ಲಿದ್ದೆ. ರಸ್ತೆಯಲ್ಲಿ ನೀರು, ಗುಂಡಿಗಳ ತಪ್ಪಿಸೋದ್ರಲ್ಲಿ ಗಾಡಿ ಸ್ಕಿಡ್ ಆಯ್ತು. ನಗರಸಭೆ ಮೇಲೆ ಕೇಸ್ ಹಾಕೋಣಾಂತಿದೀನಿ' ಎಂದು ನೋವಿನಿಂದ ಮುಲುಕಿದ ಸ್ನೇಹಿತ.

ಅಷ್ಟರಲ್ಲಿ ಪಕ್ಕದ ಬಡಾವಣೆಯ ಒಬ್ಬರನ್ನು ಸ್ಟ್ರೆಚರ್‌ನಲ್ಲಿ ಕರೆದೊಯ್ದರು. 'ಕುಡಿಯೋ ನೀರಿನಿಂದ ಡಯೇರಿಯಾ ಆಗಿದೇಂದ್ರು ಡಾಕ್ಟ್ರು. ಕಾಲುವೆ ನೀರನ್ನು ಹಾಗೇ ಜನರಿಗೆ ಕುಡಿಸಿದ್ರೆ ಇನ್ನೇನಾಗುತ್ತೆ?' ಎಂದರು ಜೊತೆಗಿದ್ದ ಮಹಿಳೆ.

ಚಿಕ್ಕೇಶಿಗೆ ಹೊರಗೆ ಮಿತ್ರ ಗುಂಡಣ್ಣ ಎದುರಾದ. ಕೇಳಿದ್ದಕ್ಕೆ 'ನಿನ್ನೆ ರಾತ್ರಿ ಮೋಟರ್ ಬೈಕ್ ಕಳ್ಳರು ನನ್ನ ಹೆಂಡ್ತಿ ಕೊರಳ ಸರಕ್ಕೆ ಕೈ ಹಾಕಿದಾಗ ಅದನ್ನು ಗಟ್ಟಿಯಾಗಿ ಹಿಡಕೊಂಡ್ಲಂತೆ. ಓಲೆ ಕಿತ್ಕೊಂಡು ಹೋಗಿದಾರೆ. ಡಾಕ್ಟ್ರು ಕಿವಿಗೆ ಸ್ಟಿಚ್ ಹಾಕಿದ್ರು... ನಮ್ಮ ಸ್ಟ್ರೀಟ್ ಲೈಟ್ ಬರ್ನ್ ಆಗಿ ತಿಂಗಳಾಯ್ತು'.

ಸಂಜೆ ಬಡಾವಣೆ ಹಿತರಕ್ಷಣಾ ಸಮಿತಿ ಸಭೆಯಲ್ಲಿ ನಗರಸಭಾಧ್ಯಕ್ಷರ ಗುಣಗಾನ! 'ಎಷ್ಟು ಹೇಳಿದ್ರೂ ಹಂದಿಗಳನ್ನು ಸ್ಥಳಾಂತರಿಸಲಿಲ್ಲ, ಸೊಳ್ಳೆ ನಿಯಂತ್ರಣಕ್ಕೆ ಫಾಗಿಂಗ್ ಮಾಡಿಸಲಿಲ್ಲ, ಕಸದ ರಾಶಿ ತೆಗೆಸಲಿಲ್ಲ'.

'ಬೆಳಿಗ್ಗೆ ಎಲ್ಲಾ ನಗರಸಭೆಗೆ ಬನ್ನಿ... ಪ್ಲ್ಯಾನ್ ಮಾಡೋಣ' ಎಂದ ಚಿಕ್ಕೇಶಿ.

ಬೆಳಿಗ್ಗೆ ಬಡಾವಣೆ ನಾಗರಿಕರು ಧಿಕ್ಕಾರ ಕೂಗುತ್ತಾ ಹೋದಾಗ ನಗರಸಭಾಧ್ಯಕ್ಷರು ಕಚೇರಿಯಲ್ಲಿ ಗತ್ತಿನಿಂದ ಕೂತಿದ್ದರು. ಚಿಕ್ಕೇಶಿ ಕೈಲಿದ್ದ ವೃತ್ತಪತ್ರಿಕೆಯನ್ನು ಮೇಜಿನ ಮೇಲೆ ಹರಡಿ ಬೆರಳಿಟ್ಟು ತೋರಿಸಿದ. ಜನರ ಕಷ್ಟಕ್ಕೆ ಸ್ಪಂದಿಸದ ದಕ್ಷಿಣ ಮೆಕ್ಸಿಕೊದ ನಗರವೊಂದರ ಮೇಯರನ್ನು ಜನರು ಟ್ರಕ್‌ಗೆ ಕಟ್ಟಿ ಬೀದಿಗಳಲ್ಲಿ ಎಳೆಸಿದ ಸಚಿತ್ರ ಸುದ್ದಿ ಇತ್ತು!

'ಹೊರಗೆ ಟ್ರಕ್ ರೆಡಿ ಇದೆ!' ಎಂದ ಚಿಕ್ಕೇಶಿ.

ಬೆವರು ಒರೆಸಿಕೊಂಡ ನಗರಸಭಾಧ್ಯಕ್ಷರು, 'ಬೇಡ, ಬೇಡ, ಕೂಡ್ಲೇ ಕ್ರಮ ವಹಿಸ್ತೀನಿ' ಎಂದು ಕೈ ಮುಗಿಯುತ್ತಾ ಮೇಲೆದ್ದರು!

ಚರ್ಚೆ

ಆಹಾ ಜಾತಿ... ಜ್ಞಾನಕೇಂದ್ರಗಳಿಗೆಷ್ಟು ಪ್ರೀತಿ!

ವಿಶ್ವವಿದ್ಯಾಲಯಗಳು ಜಾತಿ ವ್ಯವಸ್ಥೆಯ ಕರಿನೆರಳಿನಲ್ಲಿ ಸಿಲುಕಿ ನಲುಗುತ್ತಿವೆ

• ರಾಜಕುಮಾರ ಕುಲಕರ್ಣಿ

ಪರಿಚಯದ ಹುಡುಗನೊಬ್ಬ ಕೆಲವು ವರ್ಷಗಳ ಹಿಂದೆ ಪಿಎಚ್.ಡಿ ಪದವಿಗಾಗಿ ವಿಶ್ವವಿದ್ಯಾಲಯವೊಂದರಲ್ಲಿ ಹೆಸರು ನೋಂದಾಯಿಸಿದ್ದ. ಬಹು ಹಿಂದಿನಿಂದಲೂ ಡಾಕ್ಟರೇಟ್ ಕನಸು ಕಾಣುತ್ತಿದ್ದವನಿಗೆ ಇದು ಸಹಜವಾಗಿಯೇ ಖುಷಿ ನೀಡಿತ್ತು. ಸಮಾಜವಿಜ್ಞಾನ ವಿದ್ಯಾರ್ಥಿಯಾದ ಅವನಿಗೆ ತನ್ನ ಸಂಶೋಧನೆಯಿಂದ ಸಮಾಜಕ್ಕೊಂದು ವಿಶಿಷ್ಟ ಕೊಡುಗೆ ನೀಡುವ ಆಸೆಯಿತ್ತು. ನಂತರ ಹಲವು ತಿಂಗಳುಗಳ ಕಾಲ ನಮ್ಮಿಬ್ಬರ ನಡುವೆ ಸಂಪರ್ಕ ಇರಲಿಲ್ಲ.

ನನ್ನೂರಿಗೆ ಹೋಗುತ್ತಿದ್ದಾಗೊಮ್ಮೆ ಅನಿರೀಕ್ಷಿತವಾಗಿ ಅವನ ಭೇಟಿಯಾಯಿತು. ಮಾತಿನ ನಡುವೆ, 'ಎಲ್ಲಿಯವರೆಗೆ ಬಂದಿದೆ ನಿನ್ನ ಸಂಶೋಧನಾ ಕಾರ್ಯ?' ಎಂದು ಕೇಳಿದ್ದಕ್ಕೆ ಅಳುವೇ ಅವನ ಉತ್ತರವಾಗಿತ್ತು. ಮಾರ್ಗದರ್ಶಕರು ಸಹಕರಿಸುತ್ತಿಲ್ಲವಾದ್ದರಿಂದ ಸಂಶೋಧನಾ ಅಧ್ಯಯನವನ್ನು ಅರ್ಧಕ್ಕೇ ಬಿಟ್ಟುಬಿಡಲು ನಿರ್ಧರಿಸಿರುವುದಾಗಿ ಹೇಳಿದ. ಜೊತೆಗೆ ವಿಶ್ವವಿದ್ಯಾಲಯದಲ್ಲಿ ಜಾತೀಯತೆಯ ಲಾಬಿ ಬಹಳಷ್ಟಿದೆ, ಆ ವಾತಾವರಣದಲ್ಲಿ ಅಧ್ಯಯನ ಸಾಧ್ಯವಾಗುತ್ತಿಲ್ಲವೆಂದು ಅಸಹಾಯಕತೆ ತೋಡಿಕೊಂಡ. ನಿರುತ್ಸಾಹಗೊಳ್ಳದಿರೆಂದು ಧೈರ್ಯ ಹೇಳಿ ಬೀಳ್ಕೊಟ್ಟೆ.

ಜ್ಞಾನಕೇಂದ್ರಗಳಾದ ವಿಶ್ವವಿದ್ಯಾಲಯಗಳಲ್ಲಿ ಜಾತಿ ಆಧರಿಸಿ ಗುಂಪುಗಾರಿಕೆ ವ್ಯಾಪಕವಾಗುತ್ತಿದೆ. ಸಮಾಜದಲ್ಲಿ ಜಾತಿ ವ್ಯವಸ್ಥೆ ಎಷ್ಟೊಂದು ವ್ಯವಸ್ಥಿತವಾಗಿ ವಿಭಿನ್ನ ಸ್ತರಗಳಲ್ಲಿ ಬೆಳೆಯುತ್ತಿದೆ ಎನ್ನುವುದನ್ನು ನೋಡಲು ನಾವು ಬೇರೆಲ್ಲೂ ಹೋಗಬೇಕಿಲ್ಲ. ವಿಶ್ವವಿದ್ಯಾಲಯಗಳೇ ಅಂಥದ್ದೊಂದು ಮಾಹಿತಿಯನ್ನು ಪ್ರಾಯೋಗಿಕವಾಗಿ ತೋರಿಸಿಕೊಡುತ್ತಿವೆ.

ಒಂದು ನಿರ್ದಿಷ್ಟ ಜಾತಿಯ ಪ್ರಾಧ್ಯಾಪಕರಿಗೆ ಸಂಶೋಧನಾ ವಿದ್ಯಾರ್ಥಿಯು ಅದೇ ಜಾತಿಯವನೇ ಆಗಿರಬೇಕು. ಕೆಲವರಿಗೆ ಆ ಮಟ್ಟಿಗೆ ಜಾತಿ ಪ್ರೀತಿ. ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕ ಮತ್ತು ವಿದ್ಯಾರ್ಥಿಗಣ ಹತ್ತು ಹಲವು ಜಾತಿ, ಉಪಜಾತಿಗಳಾಗಿ ವಿಂಗಡಣೆಗೊಂಡಿದೆ. ತನ್ನ ಜಾತಿಗೆ ಸೇರಿದ ವಿದ್ಯಾರ್ಥಿ ಅದೆಷ್ಟೇ ಅಯೋಗ್ಯನಾದರೂ ಸರಿ ಅಂಥವರನ್ನು ಹಿಡಿದು ತಂದು ಸಂಶೋಧನೆಗೆ ಹಚ್ಚುವ ಪ್ರಭೃತಿಗಳ ಸಂಖ್ಯೆಯೇನೂ ಕಡಿಮೆ ಇಲ್ಲ.

ಆಶ್ಚರ್ಯದ ಸಂಗತಿ ಎಂದರೆ, ಕೆಲವೊಮ್ಮೆ ಕುಲಪತಿಗಳೇ ಈ ಜಾತಿವ್ಯವಸ್ಥೆಗೆ ಕುಮ್ಮಕ್ಕು ಕೊಡುವುದುಂಟು. ಆಗ, ಕುಲಪತಿಯ ಜಾತಿಗೆ ಸೇರಿದ ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳು ಇಡೀ ವಿಶ್ವವಿದ್ಯಾಲಯವನ್ನೇ ತಮ್ಮ ಹತೋಟಿಗೆ ತೆಗೆದುಕೊಂಡು ಆಡಳಿತ ವ್ಯವಸ್ಥೆಯಲ್ಲಿ ಹಸ್ತಕ್ಷೇಪ ಮಾಡುವುದೂ ಇದೆ. ಹೊರಗೆ ಸಮಾಜದಲ್ಲಿ ಜಾತಿವ್ಯವಸ್ಥೆಯ ನಿರ್ಮೂಲನೆ ಕುರಿತು ಭಾಷಣ ಬಿಗಿಯುವ ನಮ್ಮ ವಿಶ್ವವಿದ್ಯಾಲಯಗಳಲ್ಲಿನ ಪ್ರಕಾಂಡ ಪಂಡಿತರು, ಅಂತರ್ಯದಲ್ಲಿ ಅದನ್ನು ಅತ್ಯಂತ ಜೋಪಾನವಾಗಿ ಕಾಯ್ದುಕೊಂಡು ಬರುತ್ತಿರುವುದು, ವೈಚಾರಿಕ ಕ್ರಾಂತಿಯ ನೆಲೆಯೆಂದೇ ನಂಬಿರುವ ವಿಶ್ವವಿದ್ಯಾಲಯಕ್ಕೆ ಮಾಡುತ್ತಿರುವ ದೊಡ್ಡ ಅಪಚಾರ.

ಇಂಥ ಪರಿಸ್ಥಿತಿಯಲ್ಲಿ, ನಿರುಪಯುಕ್ತ ವಿಷಯಗಳ ಮೇಲೇ ಹೆಚ್ಚಿನ ಸಂಶೋಧನಾ ಪ್ರಬಂಧಗಳು ಪ್ರಕಟಗೊಳ್ಳುತ್ತಿವೆ. ಸಾಹಿತ್ಯ, ಸಂಗೀತ, ಸಮಾಜಸೇವೆ ಇತ್ಯಾದಿ ಕ್ಷೇತ್ರಗಳನ್ನು ಜಾತಿಯ ಚೌಕಟ್ಟಿಗೆ ಸೀಮಿತಗೊಳಿಸಿ ಸಂಶೋಧನೆ ಮಾಡಲಾಗುತ್ತಿದೆ.

ಈ ಜಾತಿಪ್ರೀತಿ ನಮ್ಮ ಪ್ರಾಧ್ಯಾಪಕರು ಮತ್ತು ಸಂಶೋಧನಾ ವಿದ್ಯಾರ್ಥಿಗಳನ್ನು ಅದು ಹೇಗೆ ಕುರುಡರನ್ನಾಗಿಸಿದೆ ಎನ್ನುವುದಕ್ಕೆ ಒಂದು ಉದಾಹರಣೆ: ಕೆಲವು ವರ್ಷಗಳ ಹಿಂದೆ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಒಬ್ಬ ಸಂಶೋಧನಾ ವಿದ್ಯಾರ್ಥಿಯ ಪರಿಚಯವಾಯಿತು. ಕನ್ನಡ ಸಾಹಿತ್ಯದ ಮೇಲೆ ಸಂಶೋಧನೆ ಮಾಡುತ್ತಿದ್ದ ಆತ, ಒಂದು ನಿರ್ದಿಷ್ಟ ಜಾತಿಗೆ ಸೇರಿದ ಕಥೆಗಾರರ ಕುರಿತು ಸಂಶೋಧನೆ ಮಾಡುತ್ತಿರುವುದಾಗಿ ಹೇಳಿದ. ಅದರ ವಿಷಯ ವ್ಯಾಪ್ತಿ ಬಹಳ ಸೀಮಿತವಾಗಿರುವುದಾಗಿ ಅಳಲು ತೋಡಿಕೊಂಡ. ಹಾಗಾದರೆ ಜಾತಿ ಬದಲು ಭೌಗೋಳಿಕ ವ್ಯಾಪ್ತಿಯನ್ನು ಆಧಾರವಾಗಿ ಇಟ್ಟುಕೊಳ್ಳಬಹುದಲ್ಲ ಎಂದು ಸಲಹೆ ನೀಡಿದೆ. ಮಾರ್ಗದರ್ಶಕರಿಗೆ ತಮ್ಮ ಜಾತಿ ಕುರಿತು (ಸಂಶೋಧನಾ ವಿದ್ಯಾರ್ಥಿಯೂ ಅದೇ ಜಾತಿಗೆ ಸೇರಿದವನು) ಅತ್ಯಂತ ಅಭಿಮಾನ ಇರುವುದರಿಂದ ವಿಷಯ ಬದಲಾವಣೆಗೆ ಸಮ್ಮತಿಸುತ್ತಿಲ್ಲವೆಂದು ಹೇಳಿದನಲ್ಲದೆ, ಬೇರೆ ಜಾತಿಗೆ ಸೇರಿದ ಬರಹಗಾರರನ್ನು ಸಂಶೋಧನೆಗೆ ಪರಿಗಣಿಸುವುದಿರಲಿ ಅವರ ಪುಸ್ತಕಗಳನ್ನೂ ಓದದಂತೆ ಎಚ್ಚರಿಸಿರುವರೆಂದು ಹೇಳಿದ. ಒಟ್ಟಿನಲ್ಲಿ, ಜಾತಿ ವ್ಯವಸ್ಥೆಯ ವಿರುದ್ಧ ವೈಚಾರಿಕ ಪ್ರತಿಭಟನೆಗಿಳಿಯಬೇಕಿದ್ದ ವಿಶ್ವವಿದ್ಯಾಲಯಗಳೇ ಆ ವ್ಯವಸ್ಥೆಯನ್ನು ರಕ್ಷಿಸಿಕೊಂಡು ಬರುತ್ತಿವೆ.



ಕೆಲವು ವರ್ಷಗಳ ಹಿಂದೆ ಸಂಗೀತಗೋಷ್ಠಿಯೊಂದಕ್ಕೆ ಹೋಗಿದ್ದೆ. ಸಂಗೀತಗಾರರಲ್ಲಿ ಬಹುತೇಕರು ಗದುಗಿನ ಪಂಡಿತ ಪುಟ್ಟರಾಜ ಗವಾಯಿಗಳಲ್ಲಿ ಕಲಿತು ಬಂದವರಾಗಿದ್ದರು. ಎಲ್ಲರಿಗೂ 'ವೀರೇಶ್ವರ ಪುಣ್ಯಾಶ್ರಮ'ದಲ್ಲಿ ಕಲಿತು ಬಂದ ಅಭಿಮಾನವಿತ್ತು. ಮಾತಿನ ನಡುವೆ ಅವರು ಹೇಳಿದ ವಿಷಯಗಳಲ್ಲಿ ನನ್ನನ್ನು ಅನೇಕ ದಿನ ಕಾಡಿದ ಸಂಗತಿ ಎಂದರೆ, ಆಶ್ರಮದಲ್ಲಿ ಗುರುಗಳು ಪ್ರತಿಯೊಬ್ಬ ಶಿಕ್ಷಣಾರ್ಥಿಯನ್ನೂ ಆತನ ಊರಿನ ಹೆಸರಿನಿಂದ ಕರೆಯುತ್ತಿದ್ದರಂತೆ. ವಿದ್ಯಾರ್ಥಿಯ ಮನೆತನದ ಹೆಸರನ್ನು ತಪ್ಪಿಯೂ ಬಳಸುತ್ತಿರಲಿಲ್ಲವಂತೆ. ಮನೆತನದ ಹೆಸರು ಜಾತಿ ಸೂಚಕವಾಗಿರುವುದರಿಂದ ಆಶ್ರಮದಲ್ಲಿ ಜಾತಿವ್ಯವಸ್ಥೆಯೊಂದು ಅನಾವರಣಗೊಳ್ಳುವುದು ಗುರುಗಳಿಗೆ ಇಷ್ಟವಿರಲಿಲ್ಲವಂತೆ. ಹೀಗೆ ಜಾತಿ ವ್ಯವಸ್ಥೆಯಿಂದ ದೂರವಿರುವುದರಿಂದಲೇ ಇವತ್ತಿಗೂ ವೀರೇಶ್ವರ ಪುಣ್ಯಾಶ್ರಮವು ರಾಜ್ಯದ ರಾಜಕೀಯ ಸ್ಥಿತಿಗತಿಯನ್ನು ನಿರ್ಧರಿಸುವ ಮಟ್ಟಕ್ಕೆ ಪ್ರಾಮುಖ್ಯ ಪಡೆದಿಲ್ಲ!

ಜಾತಿ ಹೆಸರಿನಿಂದ ವಿದ್ಯಾರ್ಥಿಗಳನ್ನು ಕೂಗಿ ಕರೆಯುವ ನಮ್ಮ ಪ್ರಾಧ್ಯಾಪಕರು, ವೀರೇಶ್ವರ ಪುಣ್ಯಾಶ್ರಮಕ್ಕೊಮ್ಮೆ ಭೇಟಿ ನೀಡುವುದೊಳಿತು.

ವಾಚಕರ ವಾಣಿ

ಪಿಯು ಪೂರಕ ಪರೀಕ್ಷಾರ್ಥಿಗಳಿಗೂ 'ಕೃಪೆ' ಇರಲಿ

ಕೊರೊನಾ ಸೋಂಕಿನ ಕಾರಣದಿಂದಾಗಿ ದ್ವಿತೀಯ ಪಿಯು ವಿದ್ಯಾರ್ಥಿಗಳಿಗೆ ವಾರ್ಷಿಕ ಪರೀಕ್ಷೆ ಇಲ್ಲದೆ ಉತ್ತೀರ್ಣತೆಯ ಫಲಿತಾಂಶ ನೀಡುತ್ತಿರುವುದು ಪ್ರತಿಭಾವಂತ ವಿದ್ಯಾರ್ಥಿಗಳಲ್ಲಿ ಕಳವಳ ಉಂಟು ಮಾಡಿದೆ. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು, ಪಾಲಕರ ಸಲಹೆ ಸೂಚನೆಗಳನ್ನೂ ಕೇಳಿ ತೀರ್ಮಾನ ತೆಗೆದುಕೊಳ್ಳುವುದು ಅವಶ್ಯ. ಅದರಂತೆ ರಾಜ್ಯ ಸರ್ಕಾರವು ತಜ್ಞ ಸದಸ್ಯರ ಸಮಿತಿ ರಚಿಸಿ, ಸೂತ್ರ ರೂಪಿಸುತ್ತಿರುವುದು ಸ್ವಾಗತಾರ್ಹ ಸಂಗತಿ (ಪ್ರ.ವಾ., ಜೂನ್ 1).

ದ್ವಿತೀಯ ಪಿಯು ಪರೀಕ್ಷೆಗೆ ನೋಂದಾಯಿಸಿರುವ ನಿಯಮಿತ (ರೆಗ್ಯುಲರ್) ವಿದ್ಯಾರ್ಥಿಗಳನ್ನು ಉತ್ತೀರ್ಣ ಮಾಡುವುದರ ಜೊತೆಗೆ ಈ ಹಿಂದೆ ನಿಯಮಿತವಾಗಿ ಕಾಲೇಜಿಗೆ ಹಾಜರಾಗಿ ಒಂದೋ ಎರಡೋ ವಿಷಯಗಳಲ್ಲಿ ಅನುತ್ತೀರ್ಣರಾಗಿರುವ ಅಭ್ಯರ್ಥಿಗಳನ್ನೂ ಈ ಸಂದರ್ಭದಲ್ಲಿ ಕೃಪಾಂಕ ಅಥವಾ ಗ್ರೇಡ್ ನೀಡಿ ಉತ್ತೀರ್ಣ ಮಾಡಬೇಕು. ಇದರಿಂದ ವಯೋಮಿತಿ, ಕೀಳರಿಮೆಯಿಂದ ಕುಗ್ಗಿಹೋಗಿರುವ ಯುವಜನರನ್ನು ಮುಂದಿನ ಶಿಕ್ಷಣ ಪಡೆಯಲು ಉತ್ತೇಜಿಸಿದಂತೆ ಆಗುತ್ತದೆ.

ಡಾ. ರಾಜಶೇಖರ ಸಿ.ಡಿ., ಸವಣೂರು, ಹಾವೇರಿ

ಉಬ್ಬಸ ತಗ್ಗಿಸಿತು ಮಾಸ್ಕ್ ಮಹಿಮೆ!

ಪರಿಚಯದ ವೈದ್ಯರು ಬಹಳ ದಿನಗಳ ತರುವಾಯ ಸಿಕ್ಕಿದ್ದರು. ಪ್ರಸ್ತುತ ಕೊರೊನಾ ಪರಿಸ್ಥಿತಿಯ ಬಗ್ಗೆ ಮಾತು ಹೊರಳಿತು. ಅವರ ಅನಿಸಿಕೆಯಂತೆ, ಕಳೆದ ವರ್ಷ ಹಾಗೂ ಈ ವರ್ಷ ಮಾಮೂಲಿಯಾಗಿ ಬರುವ ನೆಗಡಿ, ಕೆಮ್ಮು, ಜ್ವರ, ಉಬ್ಬಸ ಮಳೆಗಾಲದಲ್ಲಿ ಕಡಿಮೆಯಾಗಿವೆ. ಪ್ರತಿಯೊಬ್ಬರೂ ಮಾಸ್ಕ್ ಬಳಸಿದ್ದು, ಸಾರ್ವಜನಿಕ ಸಂಪರ್ಕ ಕಡಿಮೆಯಾಗಿದ್ದು ಇದಕ್ಕೆ ಕಾರಣ. ಹಾಗಿದ್ದರೆ, ಮಾಸ್ಕ್ ಮಹಿಮೆಯನ್ನು ಮೆಚ್ಚಲೇಬೇಕು!

ಪೂರ್ಣಿಮಾ ಎಚ್.ಎನ್., ಹೊಸನಗರ

ಕುರೂಪಗೊಂಡ ಸ್ಥಳನಾಮ: ವೈಶಿಷ್ಟ್ಯ ಮರೆಯಾದೀತು

'ಎಲ್ಲರಿಗೂ ಬೇಕು ಎಲ್ಲದಕ್ಕೂ ಬೇಕು' ಎಂಬ ಒಗಟಿಗೆ ಉತ್ತರ 'ಹೆಸರು'. ಯಾವುದೇ ವ್ಯಕ್ತಿ, ವಸ್ತು, ಸ್ಥಳಗಳ ಹೆಸರಿನ ಜೊತೆ ಚಾರಿತ್ರಿಕವಾದ, ಸಾಂಸ್ಕೃತಿಕವಾದ, ಭಾವನಾತ್ಮಕವಾದ ಸಂಬಂಧವಿರುತ್ತದೆ. ಕರ್ನಾಟಕದ ಗಡಿ ಭಾಗದಲ್ಲಿರುವ ಕೇರಳದ ಕಾಸರಗೋಡು ತಾಲ್ಲೂಕಿನ ಊರುಗಳ ಕನ್ನಡ ಹೆಸರುಗಳನ್ನು ಬದಲಾಯಿಸಬಾರದು, ಅಲ್ಲಿನ ಕನ್ನಡ ಮನಸ್ಸುಗಳಿಗೆ ಗಾಸಿ ಮಾಡಬಾರದು ಎನ್ನುವ ಚರ್ಚೆ ನಡೆಯುತ್ತಿರುವ ಈ ಹೊತ್ತಿನಲ್ಲಿ, ರಾಜ್ಯದ ಇನ್ನಿತರ ಭಾಗಗಳಿಗೂ ಈ ಆಸಕ್ತಿಯನ್ನು ಹೊರಳಿಸಬೇಕು.

ರಾಜ್ಯದಲ್ಲಿನ ಹೆದ್ದಾರಿಗಳ ಬದಿಯ ಅನೇಕ ಊರಿನ ಹೆಸರುಗಳು ಹೀಗೆ ಕುರೂಪಗೊಂಡಿರುವುದು ಕಂಡುಬರುತ್ತದೆ. ಉದಾಹರಣೆಗೆ, ರಾಷ್ಟ್ರೀಯ ಹೆದ್ದಾರಿ- 04ರಲ್ಲಿ ಹಾದು ಹೋಗುತ್ತ ಶಿರಾ ತಾಲ್ಲೂಕಿನ ಕಳ್ಳಂಬೆಳ್ಳದ ಹತ್ತಿರ ಒಂದು ಹೆದ್ದಾರಿ ಸುಂಕ ವಸೂಲಾತಿ ಕೇಂದ್ರವಿದೆ. ಅದು ಈಗ 'ಕರಜೀವನ ಹಳ್ಳಿ'ಯಾಗಿದೆ. ಅಲ್ಲಿ ರಸ್ತೆ ಕರವನ್ನು ವಸೂಲಿ ಮಾಡುತ್ತಿರುವುದಕ್ಕೂ ಆ ಹೆಸರಿಗೂ ಕಾಕತಾಳೀಯವಾದ ಹೊಂದಾಣಿಕೆಯಾಗಿ, ಇಂಥ ಹೆಸರು ಬಂದಿದೆ. ಆದರೆ ಆ ಊರಿನ ಹೆಸರು 'ಕರೆಜವನಹಳ್ಳಿ'. ಇದಕ್ಕೆ ಇರುವ ಸಾಂಸ್ಕೃತಿಕವಾದ, ಪೌರಾಣಿಕವಾದ ಅರ್ಥವೇ ಬೇರೆ. ನಮ್ಮ ಹಿರಿಯರು ಯಮನನ್ನು ಜವನೆಂದು ಕರೆದು, ಅವನ ವಾಹನ ಕೋಣವಾದ್ದರಿಂದ ಅವನು 'ಕರೆಜವ' ಆಗಿರಬಹುದು ಎನ್ನುವ ವಿಶಾಲಾರ್ಥವನ್ನು ಈ ಹೆಸರು ಕೊಡುತ್ತದೆ. ಆದರೆ ಈಗ ಇಲ್ಲಿ ಕರ ವಸೂಲಿ ಮಾಡುವುದರಿಂದ ಕರಜೀವನಹಳ್ಳಿ ಎಂಬ ಸಂಕುಚಿತವಾದ ತಪ್ಪು ಅರ್ಥಕ್ಕೆ ಕಾರಣವಾಗಿದೆ. ಹೀಗೆ ಈ ಹೆದ್ದಾರಿಗಳ ಗುಂಟ ಹೋದರೆ ಇಂತಹ ಅನೇಕ ಕುರೂಪಗೊಂಡ, ಸ್ಥಳನಾಮ ವಿಶೇಷಗಳನ್ನೇ ಮರೆಮಾಡುತ್ತಿರುವ ಹೆಸರುಗಳು ಸಿಗಬಹುದು. ಹೆದ್ದಾರಿ ಪ್ರಾಧಿಕಾರಗಳು ಊರಿನ ಹೆಸರುಗಳ ನಾಮಫಲಕಗಳನ್ನು ಹಾಕುವಾಗ ಸ್ಥಳನಾಮಗಳ ವಿಶೇಷಗಳನ್ನು ಸ್ಥಳೀಯರಿಂದ ತಿಳಿದುಕೊಂಡು, ಸರಿಯಾಗಿ ಬರೆಸಿ ಹಾಕುವ ಸೂಕ್ಷ್ಮ ಮನೋಭಾವ ಬೆಳೆಸಿಕೊಳ್ಳಬೇಕು. ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಈ ಬಗ್ಗೆ ಗಮನಹರಿಸಬೇಕು.

ಡಾ. ಮೂರ್ತಿತಿಮ್ಮನಹಳ್ಳಿ, ಹೊಸಂಗಡಿ

ಕೂಡಿಟ್ಟ ಹೊನ್ನು ಕಷ್ಟಕ್ಕಾಗಲಿ

ಕೋವಿಡ್- 19 ಸಾಂಕ್ರಾಮಿಕದಿಂದ ಜನಸಾಮಾನ್ಯರ ಜೀವನೋಪಾಯಕ್ಕೆ ಕಂಟಕ ಬಂದೊದಗಿದೆ. ಸರ್ಕಾರಗಳ ಖಜಾನೆ ತೀವ್ರಗತಿಯಲ್ಲಿ ಖಾಲಿಯಾಗುತ್ತಿದೆ. ದೇಶವು ಇಂತಹ ಆರ್ಥಿಕ ದುಃಸ್ಥಿತಿಯಿಂದ ಚೇತರಿಸಿಕೊಳ್ಳಲು ದಶಕಗಳೇ ಬೇಕಾಗಿರುವುದರಿಂದ, ಭಾರತ ಸಂವಿಧಾನದ 360ನೇ ವಿಧಿ (ಹಣಕಾಸು ತುರ್ತುಪರಿಸ್ಥಿತಿಗೆ ಸಂಬಂಧಿಸಿದ ಉಪಬಂಧಗಳು) ಉಪಯೋಗಿಸಿ ಆರ್ಥಿಕ ತುರ್ತುಪರಿಸ್ಥಿತಿಯನ್ನು ಘೋಷಿಸಲು ಇದು ಸಕಾಲ. ವರ್ಲ್ಡ್ ಗೋಲ್ಡ್ ಕೌನ್ಸಿಲ್ 2017ರಲ್ಲಿ ಪ್ರಕಟಿಸಿರುವ ಅಧ್ಯಯನ ವರದಿಯ ಪ್ರಕಾರ, 'ಸುಮಾರು 3,000ದಿಂದ 4,000 ಟನ್‌ಗಳಷ್ಟು ಬಂಗಾರ ನಮ್ಮ ದೇಶದ ಮಂದಿರ, ಚರ್ಚ್ ಮತ್ತು ಮಸೀದಿಗಳಲ್ಲಿ ನಿಷ್ಪ್ರಯೋಜಕವಾಗಿ ಕೊಳೆಯುತ್ತಿದೆ'.

ಆಪತ್ಕಾಲಕ್ಕೆ ನೆರವಾಗಲು ಆಗದೇ ಇರುವ ಅಪಾರ ಮೊತ್ತದ ಸಂಪತ್ತು ಚಿನ್ನದ ರೂಪದಲ್ಲಿ ಧಾರ್ಮಿಕ ಸಂಸ್ಥೆಗಳಲ್ಲಿ ಇದ್ದರೆ ಅದರಿಂದೇನು ಪ್ರಯೋಜನ? ಇಂಥ ಸಂದರ್ಭದಲ್ಲಿ ಸಂವಿಧಾನದ 360ನೇ ವಿಧಿಯನ್ನು ಮೊದಲು ಮಾಡಿ ಸರ್ಕಾರವು ಆರ್ಥಿಕ ತುರ್ತುಪರಿಸ್ಥಿತಿ ಘೋಷಿಸಿ, ಈ ಸಂಪತ್ತನ್ನು ಸ್ವಾಧೀನ ಪಡಿಸಿಕೊಳ್ಳಬಹುದು. ತುರ್ತುಪರಿಸ್ಥಿತಿ ಘೋಷಣೆಯ ಅವಧಿಯಲ್ಲಿ ರಾಷ್ಟ್ರವನ್ನು ಆರ್ಥಿಕವಾಗಿ ಸಬಲಗೊಳಿಸಲು 25ನೇ ವಿಧಿ (ಧಾರ್ಮಿಕ ಸ್ವಾತಂತ್ರ್ಯದ ಹಕ್ಕು) ಹಾಗೂ 26ನೇ ವಿಧಿಯನ್ನು (ಧಾರ್ಮಿಕ ವ್ಯವಹಾರಗಳನ್ನು ನಿರ್ವಹಿಸುವ ಸ್ವಾತಂತ್ರ್ಯ) ಅಮಾನತಿನಲ್ಲಿ ಇಡಬಹುದು. 'ಎಸ್.ಆರ್.ಬೊಮ್ಮಾಯಿ ಮತ್ತು ಇತರರ ವಿರುದ್ಧ ಭಾರತದ ಒಕ್ಕೂಟ ಮತ್ತು ಇತರರು' ಪ್ರಕರಣದಲ್ಲಿ ಸುಪ್ರೀಂ ಕೋರ್ಟ್, ಯಾವ ಸಂದರ್ಭದಲ್ಲಿ ಆರ್ಥಿಕ ತುರ್ತುಪರಿಸ್ಥಿತಿ ಘೋಷಿಸಲು ಸಾಧ್ಯವಿದೆ ಎಂಬುದನ್ನು ವಿವರವಾಗಿ ನಿರೂಪಿಸಿದೆ. ನಮ್ಮ ಧಾರ್ಮಿಕ ನಂಬಿಕೆಗಳು, ಕೊರೊನಾ ಬಿಕ್ಕಟ್ಟಿನ ದುರಿತ ಕಾಲದಲ್ಲಿ ಅನಿವಾರ್ಯವಾದ ಅಗತ್ಯವನ್ನು ಬೆಂಬಲಿಸುವಂತೆ ಆಗಬೇಕಾಗಿದೆ. ಕೇಂದ್ರ ಸರ್ಕಾರವು ಈ ಬಂಗಾರದ ಸಂಪತ್ತನ್ನು ಭಾರತೀಯ ರಿಸರ್ವ್ ಬ್ಯಾಂಕ್‌ನಲ್ಲಿ ಠೇವಣಿಯಿಟ್ಟು, ಹೆಚ್ಚು ನಗದನ್ನು ಮಾರುಕಟ್ಟೆಗೆ ಚಲಾವಣೆಗೆ ಬಿಡಬೇಕು. ಆ ಮೂಲಕ ಈ ಸಂಪತ್ತಿನ ಸದುಪಯೋಗ ಮಾಡಿಕೊಳ್ಳಲು ಅತ್ಯುತ್ತಮ ಸಂದರ್ಭ ಇದು.

ಸಿ.ಎಚ್.ಹನುಮಂತರಾಯ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಸದ್ಯದ ಸ್ಥಿತಿಯಲ್ಲಿ ಭಾರತದಲ್ಲಿ ಎರಡು ಮಕ್ಕಳ ನೀತಿ ಜಾರಿಯ ಅಗತ್ಯ ಇದೆಯೇ?

ಜನಸಂಖ್ಯೆ ಸ್ಫೋಟ ಭೀತಿಗೆ ಆಧಾರವಿಲ್ಲ

• ಶ್ರೀಲತಾ ರಾವ್ ಶೇಷಾದ್ರಿ



ಭಾರತದ 'ಜನಸಂಖ್ಯಾ ಸ್ಫೋಟ'ದ ಭೀತಿಗೆ ಯಾವ ಆಧಾರವೂ ಇರಲಿಲ್ಲ ಎಂಬುದನ್ನು ಇತ್ತೀಚಿನ ದತ್ತಾಂಶಗಳು ಹೇಳುತ್ತಿವೆ. ವಿಶ್ವ ಬ್ಯಾಂಕ್ ಅಂದಾಜಿನ ಪ್ರಕಾರ, 2019ರಲ್ಲಿ ಭಾರತದಲ್ಲಿ ಫಲವತ್ತತೆ ದರವು 2.2ರಷ್ಟು ಇತ್ತು. ಅದು ಹೊಸ ತಲೆಮಾರು ಸೃಷ್ಟಿ ದರಕ್ಕೆ (2.1) ಹತ್ತಿರದಲ್ಲಿಯೇ ಇದೆ

ಎರಡು ಮಕ್ಕಳ ನೀತಿಯು ಉದ್ದೇಶಿತವಲ್ಲದ ಪರಿಣಾಮಗಳಿಗೆ ಕಾರಣ ಆಗಬಹುದು ಎಂಬುದಕ್ಕೆ ಪುರಾವೆಗಳು ಇವೆ. ಮೊದಲನೆಯದಾಗಿ, ಹೆಣ್ಣು ಭ್ರೂಣ ಹತ್ಯೆಯನ್ನು ಇದು ಗಣನೀಯವಾಗಿ ಹೆಚ್ಚಿಸಬಹುದು ಮತ್ತು ಲಿಂಗಾನುಪಾತದ ಸ್ಥಿತಿ ಇನ್ನೂ ಶೋಚನೀಯವಾಗಬಹುದು. ಲಿಂಗ ಪತ್ತೆಯ ಬಳಿಕದ ಗರ್ಭಪಾತದಿಂದಾಗಿ 1990ರಿಂದ ಈವರೆಗೆ 1.58 ಕೋಟಿ ಹೆಣ್ಣು ಮಕ್ಕಳು 'ನಾಪತ್ತೆ' ಆಗಿದ್ದಾರೆ ಎಂದು ದಿ ಪಾಪ್ಯುಲೇಷನ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಅಂದಾಜಿಸಿದೆ. ಎರಡು ಮಕ್ಕಳ ನೀತಿಯು ಈ ಪರಿಸ್ಥಿತಿಯನ್ನು ಇನ್ನಷ್ಟು ಗಂಭೀರವಾಗಿಸುತ್ತದೆ.

ಎರಡನೆಯದಾಗಿ, ಮಹಿಳೆಯರ ಸಂತಾನೋತ್ಪತ್ತಿ ಹಕ್ಕುಗಳ ಉಲ್ಲಂಘನೆಯು ಇನ್ನಷ್ಟು ತೀವ್ರಗೊಳ್ಳುವ ಸಾಧ್ಯತೆ ಇದೆ. ಕುಟುಂಬದ ಗಾತ್ರವನ್ನು ನಿಯಂತ್ರಿಸುವ ಹೊರೆಯು ಅಸಮತೋಲಿತವಾಗಿ, ಮಹಿಳೆಯರ ಮೇಲೆಯೇ ಬೀಳುತ್ತದೆ ಎಂಬುದನ್ನು ದತ್ತಾಂಶಗಳು ತೋರಿಸುತ್ತವೆ. ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ-4ರ (ಎನ್‌ಎಫ್‌ಎಚ್‌ಎಸ್) (2015-16) ದತ್ತಾಂಶ ಪ್ರಕಾರ, 15-49ರ ವಯೋಮಾನದ ಶೇ 36ರಷ್ಟು ಮಹಿಳೆಯರು ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದಾರೆ. ಇವರಲ್ಲಿ ಹೆಚ್ಚಿನವರು ಬಡವರು ಮತ್ತು ಅನಕ್ಷರಸ್ಥರು. ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆಗೆ ಒಳಗಾದ ಪುರುಷರ ಪ್ರಮಾಣ ಕೇವಲ ಶೇ 0.3ರಷ್ಟು ಮತ್ತು ಶೇ 5.6ರಷ್ಟು ಪುರುಷರು ಮಾತ್ರ ಕಾಂಡೋಮ್ ಬಳಸುತ್ತಾರೆ.

ಎರಡು ಮಕ್ಕಳನ್ನಷ್ಟೇ ಹೊಂದಬೇಕು ಎಂಬ ದುಷ್ಟ ನೀತಿಯಿಂದಾಗಿ ಮಹಿಳೆಯರು ಅನಪೇಕ್ಷಿತ ಗರ್ಭಪಾತಕ್ಕೆ ಒಳಗಾಗಬೇಕಾಗುತ್ತದೆ ಎಂಬ ಪಾಠವನ್ನು ಚೀನಾವು ನಮಗೆ ಕಲಿಸಿದೆ. ಭಾರತದಲ್ಲಿ ತಾಯಂದಿರ ಮರಣದ ಮೂರನೇ ಅತ್ಯಂತ ದೊಡ್ಡ ಕಾರಣ ಅಸುರಕ್ಷಿತ ಗರ್ಭಪಾತ. ಕೆಲವು ಅಂದಾಜುಗಳ ಪ್ರಕಾರ, ಅಸುರಕ್ಷಿತ ಗರ್ಭಪಾತದಿಂದಾಗಿ ಪ್ರತಿ ದಿನ ಎಂಟು ಮಹಿಳೆಯರು ಬಲಿಯಾಗುತ್ತಿದ್ದಾರೆ.

ಮೂರನೆಯದಾಗಿ, ಕುಟುಂಬ ಯೋಜನೆಯ ವಿಧಾನಗಳನ್ನು ಅಳವಡಿಸಿಕೊಳ್ಳುವುದಕ್ಕಾಗಿ, (ವಿಶೇಷವಾಗಿ ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆ) ನಡೆಸಲಾದ ಬಲವಂತ ಮತ್ತು ಮಾನವ ಹಕ್ಕುಗಳ ಉಲ್ಲಂಘನೆ ನಮ್ಮ ಮನಸ್ಸಿನಲ್ಲಿ ಇನ್ನೂ ಹಸಿಯಾಗಿಯೇ ಇದೆ. ಗರ್ಭಧಾರಣೆ ತಡೆಯ ಹೆಚ್ಚು ಹೆಚ್ಚು ವಿಧಾನಗಳು ಲಭ್ಯ ಇದ್ದರೆ ಜನರು ಅವುಗಳನ್ನು ಬಳಸುವ ಪ್ರಮಾಣದಲ್ಲಿ ಏರಿಕೆಯಾಗುತ್ತದೆ ಎಂಬುದಕ್ಕೆ ಸ್ಪಷ್ಟ ಪುರಾವೆಗಳು ಇವೆ. ಇಂತಹ ವಿಧಾನಗಳು ವ್ಯಾಪಕವಾಗಿ, ಸುಲಭವಾಗಿ, ಕೈಗೆಟುಕುವ ವೆಚ್ಚದಲ್ಲಿ ಗುಣಮಟ್ಟದೊಂದಿಗೆ ಲಭ್ಯವಾಗುವಂತೆ ಮಾಡುವುದೇ ನಮ್ಮ ಮುಂದಿರುವ ಸವಾಲು.

ಜನಸಂಖ್ಯಾ ನಿಯಂತ್ರಣ ನೀತಿಗೆ ಸಂಬಂಧಿಸಿ ಭಾರತಕ್ಕೆ ಸುದೀರ್ಘವಾದ ಅನುಭವ ಇದೆ. ಸ್ವತಂತ್ರ ಭಾರತದ ಮರುನಿರ್ಮಾಣದ ಮೊದಲ ಹೆಜ್ಜೆಯಾಗಿ, ರಾಷ್ಟ್ರೀಯ ಯೋಜನಾ ಸಮಿತಿಯು 1940ರ ದಶಕದಲ್ಲಿಯೇ ಭಾರತದ ಜನಸಂಖ್ಯೆಯ ನಿಯಂತ್ರಣದಲ್ಲಿ ತೀವ್ರ ಆಸಕ್ತಿಯನ್ನು ತೋರಿಸಿತ್ತು. ಜನಸಂಖ್ಯೆ ಸ್ಫೋಟದ ಭೀತಿಯೇ ಭಾರತದಲ್ಲಿ ಕುಟುಂಬ ಯೋಜನೆ ಪ್ರಯತ್ನಗಳಿಗೆ ಒತ್ತಾಸೆ ನೀಡಿತು. ದೇಶದ ಜನಸಂಖ್ಯೆಯು ತಡೆಯಿಲ್ಲದೆ ಏರಿಕೆಯಾದರೆ ಅರ್ಥಶಾಸ್ತ್ರಜ್ಞ ಮಾಲ್ತೂಸ್ ಹೇಳಿದ ಬೇಡಿಕೆ-ಪೂರೈಕೆ ಅಸಮತೋಲನ ಸೃಷ್ಟಿಯಾಗಬಹುದು ಎಂಬ ಎಚ್ಚರಿಕೆಯು ಎಹ್‌ರ್ಲಿಚ್ ಅವರ 'ದಿ ಪಾಪ್ಯುಲೇಷನ್ ಬಾಂಬ್'ನಂತಹ (1968) ಪುಸ್ತಕಗಳಲ್ಲಿ ಅನುರಣಿಸುತ್ತಲೇ ಇದ್ದವು.

ಹಾಗಿದ್ದರೂ, ಭಾರತದ 'ಜನಸಂಖ್ಯಾ ಸ್ಫೋಟ'ದ ಭೀತಿಗೆ ಯಾವ ಆಧಾರವೂ ಇರಲಿಲ್ಲ ಎಂಬುದನ್ನು ಇತ್ತೀಚಿನ ದತ್ತಾಂಶಗಳು ಹೇಳುತ್ತಿವೆ. ವಿಶ್ವ ಬ್ಯಾಂಕ್ ಅಂದಾಜಿನ ಪ್ರಕಾರ, 2019ರಲ್ಲಿ ಭಾರತದಲ್ಲಿ ಫಲವತ್ತತೆ ದರವು 2.2ರಷ್ಟು ಇತ್ತು. ಅದು ಹೊಸ ತಲೆಮಾರು ಸೃಷ್ಟಿ ದರಕ್ಕೆ (ಜನಸಂಖ್ಯೆ ಪ್ರಮಾಣ ಕಾಯ್ದುಕೊಳ್ಳುವಿಕೆ) (2.1) ಹತ್ತಿರದಲ್ಲಿಯೇ ಇದೆ. 22 ಪ್ರಮುಖ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಪೈಕಿ 13ರಲ್ಲಿ ಈ ದರ ಕಡಿಮೆಯೇ ಇದೆ. 1960ರ ನಂತರದಲ್ಲಿ ವಾರ್ಷಿಕ ಜನಸಂಖ್ಯಾ ಏರಿಕೆಯು 1982ರಲ್ಲಿ ಗರಿಷ್ಠ ಮಟ್ಟದಲ್ಲಿ ಅಂದರೆ ಶೇ 2.33ರಷ್ಟಿತ್ತು. ಅದು ನಂತರ ಇಳಿಕೆಯಾಗುತ್ತಲೇ ಬಂದು 2020ರಲ್ಲಿ ಶೇ 0.99ಕ್ಕೆ ಕುಸಿದಿದೆ. ಜನಸಂಖ್ಯಾ ನಿಯಂತ್ರಣದ ಸೂಚ್ಯಂಕಗಳು ಸಕಾರಾತ್ಮಕ ಪ್ರವೃತ್ತಿಯನ್ನು ಈಗಾಗಲೇ ತೋರಿವೆ. 2015-16ರಲ್ಲಿ 20-24ರೊಳಗಿನ ಮಹಿಳೆಯರಲ್ಲಿ 18 ವರ್ಷದೊಳಗೆ ಮದುವೆಯಾದವರ ಪ್ರಮಾಣವು ಶೇ 26.8ಕ್ಕೆ ಇಳಿದಿದೆ. 2005-06ರಲ್ಲಿ ಇದು ಶೇ 47.4ರಷ್ಟಿತ್ತು. 15-49ರ ವಯಸ್ಸಿನ ಶೇ 55ರಷ್ಟು ಮಹಿಳೆಯರು ಒಂದಲ್ಲ ಒಂದು ರೀತಿಯ ಸಂತಾನವೃದ್ಧಿ ನಿಯಂತ್ರಣ ಸಾಧನಗಳನ್ನು ಬಳಸುತ್ತಿದ್ದಾರೆ (ಎನ್‌ಎಫ್‌ಎಚ್‌ಎಸ್-4). ಈ ಎಲ್ಲವೂ ನೀತಿಗೆ ಸಂಬಂಧಿಸಿದ ಯಾವುದೇ ಬಲವಂತ ಇಲ್ಲದೇ ಆಗಿದೆ.

ಮುಸ್ಲಿಂ ಸಮುದಾಯದ ಬಡತನ ಮತ್ತು ಅನಕ್ಷರತೆಯನ್ನು ಕಡಿಮೆ ಮಾಡುವುದಕ್ಕಾಗಿ ಎರಡು ಮಕ್ಕಳ ನೀತಿಯನ್ನು ಜಾರಿಗೆ ತರಬೇಕು ಎಂದು ಅಸ್ಸಾಂ ಮುಖ್ಯಮಂತ್ರಿಯವರ ನಿರ್ಧಾರವನ್ನು ಈ ಹಿನ್ನೆಲೆಯಲ್ಲಿ ಮೌಲ್ಯಮಾಪನಕ್ಕೆ ಒಳಪಡಿಸಬೇಕು.

ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ (2019-20) ಪ್ರಕಾರ, ಅಸ್ಸಾಂನಲ್ಲಿ ಜನಸಂಖ್ಯೆ ಪ್ರಮಾಣ ಕಾಯ್ದುಕೊಳ್ಳುವಿಕೆ ದರವು ಈಗಲೇ 1.9ರಷ್ಟಿದೆ. ಇಲ್ಲಿನ ಹಿಂದೂಗಳು (1.65) ಮತ್ತು ಮುಸ್ಲಿಮರ (2.4) ಫಲವತ್ತತೆ ದರದ ನಡುವಣ ಅಂತರವು ಕಳೆದ ಕೆಲವು ದಶಕಗಳಲ್ಲಿ ಗಣನೀಯವಾಗಿ ಕಡಿಮೆ ಆಗಿದೆ. ರಾಜ್ಯದಲ್ಲಿರುವ ಶೇ 61ರಷ್ಟು ಮಹಿಳೆಯರು ಒಂದಲ್ಲ ಒಂದು ರೀತಿಯ ಸಂತಾನೋತ್ಪತ್ತಿ ತಡೆ ವಿಧಾನಗಳನ್ನು ಅನುಸರಿಸುತ್ತಿದ್ದಾರೆ (ಎನ್‌ಎಫ್‌ಎಚ್‌ಎಸ್-5). 2015-16ರಿಂದ 2019-20ರ ಅವಧಿಯಲ್ಲಿ, ಐದು ವರ್ಷದೊಳಗಿನ ಮಕ್ಕಳಲ್ಲಿ ಪ್ರತಿ ಸಾವಿರ ಗಂಡು ಮಕ್ಕಳಿಗೆ ಹೆಣ್ಣು ಮಕ್ಕಳ ಸಂಖ್ಯೆಯು 964ಕ್ಕೆ ಏರಿದೆ. ಹಿಂದೆ ಇದು 929 ಇತ್ತು.

2015ರಲ್ಲಿ ಅಸ್ಸಾಂನಲ್ಲಿ ಶೇ 55ರಷ್ಟು ಗರ್ಭಧಾರಣೆಯು ಅನಪೇಕ್ಷಿತವಾಗಿತ್ತು; ಇವುಗಳ ಪೈಕಿ ಶೇ 74ರಷ್ಟು ಗರ್ಭಪಾತವಾಗಿದೆ. ಅದರಲ್ಲಿ ಶೇ 21ರಷ್ಟು ಗರ್ಭಪಾತ ಮಾತ್ರ ಆರೋಗ್ಯ ವ್ಯವಸ್ಥೆಯಲ್ಲಿ ಆಗಿದೆ. ಸಂತಾನೋತ್ಪತ್ತಿ ಆರೋಗ್ಯದ ಪ್ರಮುಖ ಸೂಚಕಗಳಲ್ಲಿ ರಾಜ್ಯವು ಮಾಡಿರುವ ಕೆಲವು ಸಾಧನೆಗಳಿಗೆ ಎರಡು ಮಕ್ಕಳ ನೀತಿಯಿಂದಾಗಿ ಹಿನ್ನಡೆ ಆಗಬಹುದು. ಜನಸಂಖ್ಯಾ ಸ್ಫೋಟವು ಅಭಿವೃದ್ಧಿಗೆ ತೊಡಕಾಗಿ ಪರಿಣಮಿಸಿದೆ ಎಂಬ ವಾದಕ್ಕೆ ಯಾವುದೇ ಪುರಾವೆಯ ಬೆಂಬಲ ಇಲ್ಲ. ವಾಸ್ತವವು ಅದಕ್ಕೆ ವ್ಯತಿರಿಕ್ತವಾಗಿಯೇ ಇದೆ.

ಸಾಕ್ಷರತೆ ಹೆಚ್ಚಳ, ಆರ್ಥಿಕ ಸ್ಥಿತಿಯ ಸುಧಾರಣೆ, ಮಹಿಳೆಯರ ಸಶಕ್ತೀಕರಣ ಮತ್ತು ಜನರಿಗೆ ಇರುವ ಆಯ್ಕೆಯ ನೆಲೆಯ ವಿಸ್ತರಣೆಗಳನ್ನು ಒಳಗೊಂಡಿರುವ ಅಭಿವೃದ್ಧಿಯು ಜನನ ಪ್ರಮಾಣವನ್ನು ತಗ್ಗಿಸಲು ನೆರವಾಗುತ್ತದೆ. ಇದರಿಂದಾಗಿ, ಕುಟುಂಬದ ಗಾತ್ರವು ಸಹಜವಾಗಿಯೇ ಕುಗ್ಗುತ್ತದೆ. ಅಲ್ಪಸಂಖ್ಯಾತರ ಸಾಮಾಜಿಕ ಆರ್ಥಿಕ ಅಭಿವೃದ್ಧಿ ಸಾಧಿಸಿ, ಅವರಲ್ಲಿನ ಬಡತನವನ್ನು ಕಡಿಮೆ ಮಾಡಬೇಕು ಎಂಬ ಪ್ರಾಮಾಣಿಕ ಇಚ್ಛೆಯು ಸರ್ಕಾರಕ್ಕೆ ಇದ್ದರೆ, ಹೆಣ್ಣು ಮಕ್ಕಳು ಶಾಲಾ ಕಲಿಕೆ ಮುಂದುವರಿಸಲು ಸರ್ಕಾರವು ಪ್ರೋತ್ಸಾಹ ನೀಡಬೇಕು. ಮದುವೆಯ ವಯಸ್ಸು ಹೆಚ್ಚಬೇಕು ಮತ್ತು ಕುಟುಂಬ ಯೋಜನೆ ವಿಧಾನಗಳ ಗುಣಮಟ್ಟ ಹೆಚ್ಚಳವಾಗಬೇಕು. ಜನಸಂಖ್ಯಾ ನಿಯಂತ್ರಣಕ್ಕೆ ಹಲವು ರೀತಿಯ ವಿಧಾನಗಳು ಜನರಿಗೆ ಲಭ್ಯ ಇರುವಂತೆ ನೋಡಿಕೊಳ್ಳಬೇಕು.

ಲೇಖಕಿ: ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿ ಸಹಪ್ರಾಧ್ಯಾಪಕಿ

ಪ್ರಜಾವಾಣಿ ಚರ್ಚೆ

ಜನಸಂಖ್ಯೆಯೇ ಆಯುಧವಾಗುವ ಆತಂಕ

• ವಾದಿರಾಜ್



ಮುಸ್ಲಿಂ ಜನಸಂಖ್ಯೆಯ ಏರುಗತಿಯ ಹಿಂದೆ ರಾಜ್ಯ ವಿಸ್ತರಣೆಯ ಹುನ್ನಾರವೂ ಇದೆ. ಪಕ್ಕದಲ್ಲೇ ಬಾಂಗ್ಲಾ ಎಂಬ ಮುಸ್ಲಿಂ ದೇಶ ಹೇಗೆ ಮತೀಯ ಆಧಾರದಲ್ಲಿ ರೂಪುಗೊಂಡಿತೆಂಬುದನ್ನು ಅಸ್ಸಾಮಿಗರು ನೋಡಿದ್ದಾರೆ. ಮುಸ್ಲಿಮರ ಜನಸಂಖ್ಯೆಯನ್ನು ನಿಯಂತ್ರಣಕ್ಕೆ ತರಬೇಕು ಎಂಬ ಜನರ ಕೂಗಿಗೆ ಮುಖ್ಯಮಂತ್ರಿ ದನಿಯಾಗಿದ್ದಾರೆ

ಅಸ್ಸಾಂನ ಬಿಜೆಪಿ ಮುಖ್ಯಮಂತ್ರಿ ಹಿಮಂತ ಬಿಶ್ವ ಶರ್ಮಾ ತಮ್ಮ ರಾಜ್ಯದ ಮುಸ್ಲಿಂ ಜನತೆ ಜನಸಂಖ್ಯೆಯ ನಿಯಂತ್ರಣಕ್ಕೆ ಮುಂದಾಗಬೇಕೆಂದು ಹೇಳಿರುವುದು ಚರ್ಚೆಗೆ ಕಾರಣವಾಗಿದೆ. ಇದೇ ಸಂದರ್ಭದಲ್ಲಿ ಮುಸ್ಲಿಂ ಹೆಣ್ಣುಮಕ್ಕಳ ವಿದ್ಯಾಭ್ಯಾಸದ ಸ್ಥಿತಿಗತಿಯನ್ನು ಅವರು ಪ್ರಸ್ತಾಪಿಸಿದ್ದಾರೆ. ಮುಸ್ಲಿಂ ಬಾಹುಳ್ಯದ ಪ್ರದೇಶದಲ್ಲಿ ಹೆಚ್ಚು ಮಹಿಳಾ ಕಾಲೇಜುಗಳನ್ನು ತೆರೆಯುವ, ಉನ್ನತ ವ್ಯಾಸಂಗದಲ್ಲಿ ಉಚಿತ ಶಿಕ್ಷಣ ಕೊಡುವ ಬಗ್ಗೆಯೂ ಹೇಳಿದ್ದಾರೆ. 'ಇಂದಿರಾಗಾಂಧಿಗೆ ಇಬ್ಬರು ಮಕ್ಕಳಿದ್ದರು, ಅವರ ಮಗ ರಾಜೀವ ಗಾಂಧಿಗೂ ಇಬ್ಬರು ಮಕ್ಕಳು, ಅವರ ಮಗಳು ಪ್ರಿಯಾಂಕಾ ವಾದ್ರಾಗೆ ಈಗಿರುವುದು ಎರಡು ಮಕ್ಕಳೇ' ಎಂದು ಕೆಲದಿನಗಳ ಹಿಂದೆ ಟ್ವೀಟ್ ಮಾಡಿದ್ದರು. ಕಳೆದ ಚುನಾವಣೆಯಲ್ಲಿ, ಅಸ್ಸಾಂನ ಮುಸ್ಲಿಂ ಸಮುದಾಯ ದೊಡ್ಡ ಪ್ರಮಾಣದಲ್ಲೇ ಕಾಂಗ್ರೆಸ್ ಮೈತ್ರಿಕೂಟವನ್ನು ಬೆಂಬಲಿಸಿತ್ತು. ಬೆಂಬಲಿಸಿದರಷ್ಟೆ ಸಾಲದು ಕಾಂಗ್ರೆಸ್ ಕುಟುಂಬದ ಅತ್ಯುಚ್ಚ ನಾಯಕರ ಮನೆತನವನ್ನು ಅನುಸರಿಸಬೇಕು ಎಂಬುದನ್ನು ಮುಖ್ಯಮಂತ್ರಿ ಸೂಚ್ಯವಾಗಿ ಹೇಳಿದ್ದರು.

ಅಸ್ಸಾಂನ ವಿಷಯದಲ್ಲಿ ಜನಸಂಖ್ಯೆ ನಿಯಂತ್ರಣದ ಈ ಚರ್ಚೆಗೆ ಬಹು ಆಯಾಮಗಳಿವೆ. ಅಸ್ಸಾಂನ ರಾಜಕೀಯ ಹಾಗೂ ಸಾಮಾಜಿಕ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳದೆ 'ಮುಸ್ಲಿಂ ಸಮುದಾಯದ ಜನಸಂಖ್ಯೆ ನಿಯಂತ್ರಣ'ದ ವಿಷಯವನ್ನು ಚರ್ಚಿಸಲಾಗದು.

ಅಸ್ಸಾಂನ ಜನಸಂಖ್ಯೆಯಲ್ಲಿ ಹಿಂದೂಗಳು ಶೇ 61.47ರಷ್ಟು ಇದ್ದರೆ ಮುಸ್ಲಿಮರ ಪ್ರಮಾಣ ಶೇ 34.22ರಷ್ಟು. ಅದೇ ಪಕ್ಕದ ಪಶ್ಚಿಮ ಬಂಗಾಳದಲ್ಲಿ ಹಿಂದೂಗಳು ಶೇ70.54ರಷ್ಟು, ಮುಸ್ಲಿಮರು ಶೇ 27.1ರಷ್ಟು. ಹಿಂದೂಗಳ ಮತವನ್ನಷ್ಟೆ ಕೇಂದ್ರೀಕರಿಸುತ್ತದೆ ಎನ್ನಲಾಗುವ ಬಿಜೆಪಿಗೆ ಪಶ್ಚಿಮ ಬಂಗಾಳಕ್ಕಿಂತ ಅಸ್ಸಾಂ ಚುನಾವಣೆ ಕಷ್ಟವಾಗಬೇಕಿತ್ತು. ಆದರೆ ಹಾಗೆ ಆಗಲಿಲ್ಲ.

2016ರ ಚುನಾವಣೆಯಲ್ಲಿ ಮೊದಲ ಬಾರಿಗೆ ಬಿಜೆಪಿ ಗೆದ್ದಾಗ ಜಾತ್ಯತೀತ ಮತಗಳು ಹಂಚಿಹೋಗಿದ್ದವು. ಕಾಂಗ್ರೆಸ್, ಕಮ್ಯುನಿಸ್ಟ್ ಪಕ್ಷಗಳು ಪ್ರತ್ಯೇಕವಾಗಿ ಸ್ಪರ್ಧಿಸಿದ್ದವು. ಜೊತೆಗೆ, ಸುಗಂಧ ದ್ರವ್ಯಗಳ ಅಂತರರಾಷ್ಟ್ರೀಯ ವಹಿವಾಟು ನೆಡೆಸುವ ಬದ್ರುದ್ದೀನ್ ಅಜ್ಮಲ್ ಅವರ ಎಐಯುಡಿಎಫ್ ಪ್ರತ್ಯೇಕವಾಗಿ ಸ್ಪರ್ಧಿಸಿ ಮುಸ್ಲಿಂ ಮತಗಳನ್ನು ಕ್ರೋಡೀಕರಿಸಿತ್ತು. ಹೀಗಾಗಿ ಬಿಜೆಪಿ ಅಧಿಕಾರ ಹಿಡಿದಿತ್ತು. ಈ ಸಲದ ಚುನಾವಣೆಯಲ್ಲಿ ಕಾಂಗ್ರೆಸ್, ಕಮ್ಯುನಿಸ್ಟ್ ಪಕ್ಷಗಳು ಮತ್ತು ಬದ್ರುದ್ದೀನ್ ಒಟ್ಟಾಗಿ ಚುನಾವಣೆಗೆ ಇಳಿದರು. ಬಿಜೆಪಿಯ ಜೊತೆಗಿದ್ದ ಸ್ಥಳೀಯ ಬೋಡೋಲ್ಯಾಂಡ್ ಪೀಪಲ್ಸ್ ಫ್ರಂಟ್ ಕೂಡ ಜಾತ್ಯತೀತ ಬಣ ಸೇರಿಕೊಂಡಿತು. ಹೀಗಾಗಿ ಮೇಲ್ನೋಟದ ಮತ ಗಣಿತ ಬಿಜೆಪಿಯ ಪರವಾಗಿರಲಿಲ್ಲ. ಆದರೂ ಬಿಜೆಪಿಗೆ ಗೆಲ್ಲುವುದು ಸಾಧ್ಯವಾಯಿತು. ಶೇ 61ರಷ್ಟಿರುವ ಹಿಂದೂಗಳು ಜಾತ್ಯತೀತ ಬಣವನ್ನು ತಿರಸ್ಕರಿಸಿ ಬಿಜೆಪಿಯ ಜೊತೆಗೆ ದೊಡ್ಡ ಪ್ರಮಾಣದಲ್ಲಿ ನಿಂತಿದ್ದು ಗೆಲುವಿಗೆ ಕಾರಣವಾಯ್ತು. 2016ರಲ್ಲಿ ಹಿಂದೂಗಳಲ್ಲಿ ಶೇ 32ರಷ್ಟು ಜನ ಕಾಂಗ್ರೆಸ್ ಬೆಂಬಲಿಸಿದ್ದರು. ಈ ಸಲ ಮುಸ್ಲಿಮರು ಸಗಟಾಗಿ ಬೆಂಬಲಿಸಿದರು. ಆದರೆ ಹಿಂದೂಗಳು ಕಾಂಗ್ರೆಸ್ ಮೈತ್ರಿಕೂಟವನ್ನು ಕೈಬಿಟ್ಟಿದ್ದರು.

ಮುಸ್ಲಿಮರ ಸಗಟು ಮತದ ಆಸೆಗೆ ಬಿದ್ದ ಕಾಂಗ್ರೆಸ್ ಕಮ್ಯುನಿಸ್ಟ್ ಪಕ್ಷಗಳು, ಮತೀಯವಾದಿ ಬದ್ರುದ್ದೀನ್ ಅಜ್ಮಲ್ಲರ ತೆಕ್ಕೆಗೆ ಸೇರಿದ್ದು ಸಣ್ಣ ವಿಷಯವಾಗಿರಲಿಲ್ಲ. ಬದ್ರುದ್ದೀನ್ ಪಕ್ಕದ ಬಾಂಗ್ಲಾದಿಂದ ಅಕ್ರಮವಾಗಿ ನುಸುಳಿಬರುವ ಮುಸ್ಲಿಮರಿಗೆ ಆಶ್ರಯದಾತ. 2005ರಲ್ಲಿ ಅಕ್ರಮ ನುಸುಳುಕೋರರ ವಿರುದ್ಧ ಬಂದ ಸುಪ್ರೀಂ ಕೋರ್ಟ್ ತೀರ್ಪಿನ ಬಗ್ಗೆ ಬಂಡೆದ್ದು ಬದ್ರುದ್ದೀನ್ ತನ್ನದೇ ರಾಜಕೀಯ ಪಕ್ಷ ಕಟ್ಟಿದ್ದ. ಅಂತಹ ಬದ್ರುದ್ದೀನ್ ಜೊತೆಗೆ ಗುರುತಿಸಿಕೊಳ್ಳುವ ಕಾಂಗ್ರೆಸ್, ಕಮ್ಯುನಿಸ್ಟ್ ಪಕ್ಷಗಳ ಪ್ರಯತ್ನವನ್ನು ಅಸ್ಸಾಂನ ಮೂಲನಿವಾಸಿಗಳು ತಿರಸ್ಕರಿಸಿದ್ದರು.

ಸಾಮಾಜಿಕವಾಗಿಯೂ ಅಸ್ಸಾಂ ತುಂಬಾ ಸಂಕೀರ್ಣ ರಾಜ್ಯ. ಶೇ 61ರಷ್ಟು ಜನಸಂಖ್ಯೆ ಇರುವ ಹಿಂದೂಗಳಲ್ಲಿ ಅಗಾಧವಾದ ವೈವಿಧ್ಯ. ಒಂದೇ ರಾಜ್ಯದಲ್ಲಿ ನೂರಾರು ಬುಡಕಟ್ಟು ಜನಜಾತಿಗಳು. 45ಕ್ಕೂ ಹೆಚ್ಚು ಸ್ಥಳೀಯ ಭಾಷೆಗಳು. ಹಾಗೆ ನೋಡಿದರೆ ಅಸ್ಸಾಂ ಅಪ್ಪಟ ಬಹುತ್ವದ ರಾಜ್ಯ. ದಲಿತರು, ಆದಿವಾಸಿಗಳ ಮೇಲೆ ಬಿಜೆಪಿಯ ಹಿಡಿತವು ಬಲವಾಗಿಯೇ ಇದೆ. ಎಸ್‌ಸಿಗೆ ಮೀಸಲಾಗಿರುವ 8 ಕ್ಷೇತ್ರಗಳಲ್ಲಿ ನಾಲ್ಕು, ಎಸ್‌ಟಿಗೆ ಮೀಸಲಾಗಿರುವ 16 ಕ್ಷೇತ್ರಗಳಲ್ಲಿ ಹದಿನಾಲ್ಕು ಬಿಜೆಪಿಯ ಪಾಲಾಗಿವೆ ಬೋಡೊ ಪೀಪಲ್ಸ್ ಫ್ರಂಟ್ ಮೈತ್ರಿ ಕಡಿದುಕೊಂಡು ಹೋದರೂ ಬುಡಕಟ್ಟು ಜನಜಾತಿಗಳ ನಡುವೆ ಬಿಜೆಪಿಯ ಹಿಡಿತ ಅಬಾಧಿತವಾಗಿದೆ.

ಅಸ್ಸಾಂ ರಾಜ್ಯ ಪಕ್ಕದ ಬಾಂಗ್ಲಾ ದೇಶದಿಂದ ಅಕ್ರಮವಾಗಿ ನುಸುಳಿ ಬರುವವರ ಸಮಸ್ಯೆಯನ್ನು ತೀವ್ರವಾಗಿ ಎದುರಿಸುತ್ತಿದೆ. ಅಸ್ಸಾಂನಲ್ಲಿರುವ 130 ಲಕ್ಷ ಮುಸ್ಲಿಮರಲ್ಲಿ 90 ಲಕ್ಷ ಮಂದಿ ಅಕ್ರಮ ನುಸುಳುಕೋರರೆಂದು ರಾಜ್ಯ ಸರ್ಕಾರದ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ದಾಖಲೆ ಬಿಡುಗಡೆ ಮಾಡಿದೆ. ರಾಜ್ಯದ ಒಟ್ಟು 27 ಜಿಲ್ಲೆಗಳಲ್ಲಿ ಬಾಂಗ್ಲಾದೊಂದಿಗೆ ಗಡಿ ಹಂಚಿಕೊಳ್ಳುವ ಒಂಬತ್ತು ಜಿಲ್ಲೆಗಳಲ್ಲಿ ಮುಸ್ಲಿಮರೇ ಬಹುಸಂಖ್ಯಾತರು. ಈ 9 ಜಿಲ್ಲೆಗಳಲ್ಲಿ ಜನಸಂಖ್ಯೆಯ ಏರಿಕೆಯ ಪ್ರಮಾಣ ಶೇ 24ರಿಂದ ಶೇ 29 ರಷ್ಟು. ಅದೇ ಹಿಂದೂ ಬಾಹುಳ್ಯದ ಜಿಲ್ಲೆಗಳಲ್ಲಿ ಜನಸಂಖ್ಯೆಯ ಏರಿಕೆಯ ಪ್ರಮಾಣ ಶೇ9ರಷ್ಟು ಮಾತ್ರ. ಈ ವೈರುಧ್ಯವನ್ನೂ ಹಿಮಂತ್ ಶರ್ಮ ಪ್ರಸ್ತಾಪಿಸಿದ್ದಾರೆ.

ಮುಸ್ಲಿಂ ಜನಸಂಖ್ಯೆಯ ಏರುಗತಿಯ ಹಿಂದೆ ರಾಜ್ಯ ವಿಸ್ತರಣೆಯ ಹುನ್ನಾರವೂ ಇದೆ. ಪಕ್ಕದಲ್ಲೇ ಬಾಂಗ್ಲಾ ಎಂಬ ಮುಸ್ಲಿಂ ದೇಶ ಹೇಗೆ ಮತೀಯ ಆಧಾರದಲ್ಲಿ ರೂಪುಗೊಂಡಿತೆಂಬುದನ್ನು ಅಸ್ಸಾಮಿಗರು ಹತ್ತಿರದಿಂದಲೇ ನೋಡಿದ್ದಾರೆ. ಮುಸ್ಲಿಮರ ಜನಸಂಖ್ಯೆಯನ್ನು ನಿಯಂತ್ರಣಕ್ಕೆ ತರಬೇಕು ಎಂಬ ಜನರ ಕೂಗಿಗೆ ಮುಖ್ಯಮಂತ್ರಿ ದನಿಯಾಗಿದ್ದಾರೆ. 2 ವರ್ಷದ ಹಿಂದೆಯೇ ಅಸ್ಸಾಂ ಸರ್ಕಾರ ಎರಡು ಮಕ್ಕಳ ನೀತಿಯನ್ನು ಪಾಲಿಸದವರು ಗ್ರಾಮ ಪಂಚಾಯ್ತಿ ಚುನಾವಣೆಗೆ ಸ್ಪರ್ಧಿಸುವಂತಿಲ್ಲ ಎಂಬ ನಿಯಮ ಜಾರಿ ಮಾಡಿತ್ತು. ಹಿಂದೂಗಳೂ ಸೇರಿದಂತೆ ಜೈನ, ಸಿಖ್, ಕ್ರೈಸ್ತ, ಬೌದ್ಧ ಯಾರದ್ದೂ ಇದಕ್ಕೆ ತಕರಾರಿಲ್ಲ, ಮುಸ್ಲಿಂ ಧಾರ್ಮಿಕ ಪ್ರಭುತ್ವ ಮಾತ್ರ ಇದನ್ನು ಒಪ್ಪುವುದಿಲ್ಲ. ಜಾತ್ಯತೀತ ರಾಜಕಾರಣ ಮತ್ತು ಜಾತ್ಯತೀತ ವೈಚಾರಿಕತೆ ಎರಡೂ ಮುಸ್ಲಿಂ ಧಾರ್ಮಿಕ ಪ್ರಭುತ್ವದ ವಿರುದ್ಧ ಗಟ್ಟಿ ನಿಲುವು ತಾಳಲು ಹಿಂಜರಿಯುವುದು ಗುಟ್ಟಿನ ವಿಷಯವೇನಲ್ಲ.

ಮುಸ್ಲಿಂ ಸಮಾಜದಲ್ಲಿ ಜನಾಭಿಪ್ರಾಯ ರೂಪಿಸಬಹುದಾದ 'ಮಧ್ಯಮ ವರ್ಗ'ವೇ ರೂಪುಗೊಂಡಿಲ್ಲ. ಅಲ್ಲಿರುವುದು ಬಡವರು - ಬಲ್ಲಿದರು ಇಬ್ಬರೆ. ಸಾಕುವ ಶಕ್ತಿಯಿಲ್ಲದ ಬಡವರಲ್ಲೇ ಮಕ್ಕಳು ಹೆಚ್ಚು. ಅವರೆಲ್ಲ ಕಾಲಾಂತರದಲ್ಲಿ ಅಗ್ಗದ ಸಂಬಳಕ್ಕೆ ದಕ್ಕುವ ಕಾರ್ಮಿಕರಾಗಿ ಬಿಡುತ್ತಾರೆ. ಇದರಿಂದಾಗಿ ಅಸ್ಸಾಂನ ಚಹಾ ತೋಟಗಳಲ್ಲಿ ದುಡಿಯುತ್ತಿದ್ದ ಬುಡುಕಟ್ಟು ಜನರ ಉದ್ಯೋಗಗಳು ಕರಗುತ್ತಿವೆ. ಉಳಿದ ಸಮುದಾಯಗಳಿಗೆ ಹೋಲಿಸಿದರೆ ಮುಸ್ಲಿಂ ಸಮಾಜ ಹೆಚ್ಚು ಆಕ್ರಮಣಶೀಲ, ಅವರದೇ ಪ್ರತ್ಯೇಕ ಜನವಸತಿ ಪ್ರದೇಶಗಳು. ಹೀಗಾಗಿ ಜನಸಂಖ್ಯೆ ಆಯುಧವೇ ಆಗಿಬಿಡುತ್ತದೆ. ಇಡೀ ವಿದ್ಯಮಾನದಲ್ಲಿ ಧ್ವನಿ ಇಲ್ಲದೆ ನರಳುತ್ತಿರುವವರು ಮುಸ್ಲಿಂ ಹೆಣ್ಣುಮಕ್ಕಳು. ಭಾರತದಲ್ಲಿ ಈಗಲೂ ಶೇ 55ರಷ್ಟು ಮುಸ್ಲಿಂ ದಂಪತಿಗಳು ಕುಟುಂಬ ಯೋಜನೆಯ ನಿಯಮಗಳನ್ನು ಪಾಲಿಸುತ್ತಿಲ್ಲ. ಜೊತೆಗೆ ಬಹುಪತ್ನಿತ್ವದ ಹೊಡೆತ ಬೇರೆ. ಹಾಗಾಗಿಯೇ ಅಸ್ಸಾಂನ ಮುಖ್ಯಮಂತ್ರಿಯು ಮುಸ್ಲಿಂ ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ಪ್ರತ್ಯೇಕ ಮಹಿಳಾ ಕಾಲೇಜುಗಳನ್ನು ಹೆಚ್ಚಿಸುವ ಕ್ರಮವನ್ನು ಪ್ರಕಟಿಸಿದ್ದಾರೆ.

1951ರ ಭಾರತದ ಜನಗಣತಿಯಲ್ಲಿ ಹಿಂದೂಗಳು ಶೇ 84.1ರಷ್ಟು, ಮುಸ್ಲಿಮರು ಶೇ 9.4ರಷ್ಟು ಇದ್ದರು. 2011ರ ಜನಗಣತಿಯ ವೇಳೆಗೆ ಹಿಂದೂಗಳು ಶೇ 79.8ರಷ್ಟಕ್ಕೆ ಇಳಿದರೆ ಮುಸ್ಲಿಮರ ಜನಸಂಖ್ಯೆ ಶೇ 14.2ರಷ್ಟಕ್ಕೆ ಏರಿದೆ. ಕ್ರೈಸ್ತರು, ಜೈನರು, ಬೌದ್ಧರು, ಸಿಖ್ಖರು ಹೆಚ್ಚಿನಮಟ್ಟಿಗೆ ಯಥಾಸ್ಥಿತಿಯಲ್ಲಿದ್ದಾರೆ. ಸತತವಾಗಿ ಏರಿಕೆ ಕಾಣುತ್ತಿರುವ ಏಕೈಕ ಸಮುದಾಯವೆಂದರೆ ಮುಸ್ಲಿಮರು ಮಾತ್ರ. ಓಲೈಕೆ ರಾಜಕಾರಣದಿಂದ ಹೊರಬರದೆ ಇದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗದು.

ಲೇಖಕ: ಆರ್‌ಎಸ್‌ಎಸ್ ಕಾರ್ಯಕರ್ತ

ಸಚ್ಚಿದಾನಂದ ಸತ್ಯಸಂದೇಶ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ

ಕಾಂಚಾಣಮೃಗದ ಸಾಕಾಣಿಕೆ ಬೇಡ

ಆಧುನಿಕ ಜಗತ್ತಿನ ಅಮಾನವೀಯ ಲೆಕ್ಕಾಚಾರದಲ್ಲಿ ಮನುಷ್ಯರು ಮುಳುಗಿಹೋಗಿದ್ದಾರೆ. ಹಣದ ಹುಚ್ಚುಹೊಳೆಯಲ್ಲಿ ಈಜಲುಹೋದ ಮನುಷ್ಯರೆಲ್ಲ ಕಳೆದುಹೋಗುತ್ತಿದ್ದಾರೆ. ದುರಾಸೆಯ ರಕ್ಕಸ ಅಲೆಯಲ್ಲಿ ಕೊಚ್ಚಿ ಹೋಗಿರುವ ಮನುಷ್ಯರನ್ನು ಹುಡುಕುವುದೇ ದುಸ್ತರ. ಇನ್ನು, ಅಂತಸ್ತು-ಅಹಂನ ಗತ್ತಿನಲ್ಲಿ ನಾಪತ್ತೆಯಾಗಿರುವ ಮನುಷ್ಯರನ್ನ ಗುರುತಿಸುವುದು ಬಹಳ ಕಷ್ಟ. ಕಾಂಚಾಣ ಎಂಬ ಮಾಯಾಮೃಗ ಬೆನ್ನತ್ತಿ 'ತಾನು-ತನ್ನವರು' ಎಂಬ ಸ್ಮೃತಿಯನ್ನೇ ಕಳೆದುಕೊಂಡಿರುವ ಮಾನವರಿಗೆ ನೆನಪಿನ ಶಕ್ತಿ ತುಂಬುವುದು ಸುಲಭವಲ್ಲ. ಹಣದ ಹುಚ್ಚು ಕೊರೊನಾರೋಗಕ್ಕಿಂತ ಭಯಂಕರ ಸಾಂಕ್ರಾಮಿಕ ರೋಗ. ಒಬ್ಬರ ಮನಸ್ಸಿನಿಂದ ಮತ್ತೊಬ್ಬರ ಮನಸ್ಸಿಗೆ ಬಹುಬೇಗ ಹರಡುವ ಈ ಹುಚ್ಚುರೋಗಕ್ಕೆ ಬಹಳಷ್ಟು ಜನ ಬಲಿಯಾಗುತ್ತಿದ್ದಾರೆ.

ಜಗತ್ತು ಎದುರಿಸುತ್ತಿರುವ ಇಂದಿನ ಬಹುತೇಕ ಸಮಸ್ಯೆಗಳಿಗೆ ಹಣದ ಪಿಡುಗೇ ಕಾರಣ. ಹಣದ ಬಲೆಯಲ್ಲಿ ಸಿಲುಕಿ ಉನ್ಮಾದ ಸ್ಥಿತಿಯಲ್ಲಿರುವವರಿಗೆ ಗುಣ ಮೌಲ್ಯದ ಔಷಧ ನೀಡಬೇಕಾಗಿದೆ. ಇಲ್ಲದಿದ್ದರೆ, ಹಣದ ಹುಚ್ಚರು ಇಡೀ ಜಗತ್ತನ್ನೇ ನಿರ್ನಾಮ ಮಾಡುತ್ತಾರೆ. ಈಗಾಗಲೇ ಅಂತಹ ಅಪಾಯಕಾರಿ ಹಂತವನ್ನ ಜಗತ್ತು ಮುಟ್ಟಿದೆ ಎಂಬುದನ್ನ ಇತ್ತೀಚಿನ ವಿದ್ಯಮಾನಗಳು ತಿಳಿಸುತ್ತಿವೆ. ಮನುಷ್ಯ ಬದುಕಲು ಬೇಕಿರುವುದು ಮೂರೇ ವಸ್ತು; ಗಾಳಿ-ನೀರು-ಆಹಾರ. ಇವನ್ನು ಪ್ರಕೃತಿದತ್ತವಾಗಿ ಭಗವಂತ ನೀಡಿದ್ದಾನೆ. ಇನ್ನು ಉಳಿದ ಸೌಕರ್ಯಗಳಾದ ಐಷಾರಾಮಿ ಬದುಕಿನ ಸವಲತ್ತುಗಳು ಮನುಷ್ಯನ ಸೃಷ್ಟಿ. ಭಗವಂತ ಕೊಡುವ ಅಮೂಲ್ಯ ವಸ್ತುವಿಗೆ ಬೆಲೆ ಇಲ್ಲದಂತೆ ಮಾಡಿರುವ ಮನುಷ್ಯ, ತನ್ನ ಉತ್ಪನ್ನಕ್ಕೆ ಮಾತ್ರ ದುಬಾರಿ ಬೆಲೆ ಕಟ್ಟಿದ್ದಾನೆ. ತಾನು ಇನ್ನೊಬ್ಬನಿಗಿಂತ ಹೆಚ್ಚು ಅಂತ ತೋರಿಸಲು ಮಾನವರು ಸೃಷ್ಟಿಸಿದ ಕೃತಕ ಸಾಧನವೇ ಹಣ. ಇದಕ್ಕೆ ಮಾನವರು ದಾಸಾನುದಾಸರಾಗಿ ಜೀತದಾಳುಗಳಂತೆ ಜೀವ ತೇಯುತ್ತಾ ತಮ್ಮ ಅಮೂಲ್ಯವಾದ ಬದುಕನ್ನು ಕಳೆದುಕೊಳ್ಳುತ್ತಿದ್ದಾರೆ.

ಇಲಿಯ ಬೆನ್ನತ್ತಿದ ಬೆಕ್ಕಿಗೆ, ತನ್ನ ಬೆನ್ನಟ್ಟಿದ ಸೀಳುನಾಯಿಯ ಅರಿವಿಲ್ಲದಂತೆಯೇ, ಮಾನವರು ಒಬ್ಬರ ಜೇಬಿನಿಂದ ಹಣ ಕಸಿಯುವಾಗ, ತನ್ನ ಜೇಬಿಗೆ ಕೈ ಹಾಕಿದ ಅರಿವು ಇರುವುದಿಲ್ಲ. ಒಬ್ಬರ ತಿಂದು ಒಬ್ಬರು ಬಾಳುವ ಕಾಡುನ್ಯಾಯದಂತೆ, ಒಬ್ಬರಿಂದ ಒಬ್ಬರು ಕಸಿದು ಬಾಳುವುದು ನಾಡಿನ ನ್ಯಾಯವಾಗಿದೆ. ಕಾಡಿನ ಬುದ್ಧಿಗೆ ಹಸಿವಿಲ್ಲ. ಹೊಟ್ಟೆಗೆ ಮಾತ್ರ ಹಸಿವು. ಹೀಗಾಗಿ ಬಲಾಢ್ಯ ಪ್ರಾಣಿ ಬಡಕಲು ಪ್ರಾಣಿಯನ್ನು ತಿಂದು ಬದುಕುತ್ತದೆ. ಆದರೆ, ನಾಡಿನಲ್ಲಿ ಬುದ್ಧಿಗೆ ಹಸಿವಿದೆ, ರಟ್ಟೆಗೆ ಕಸುವಿದೆ. ಹಾಗಾಗಿ ಇಲ್ಲಿ ದುಡಿದು ತಿಂದು, ಮಿಕ್ಕದ್ದನ್ನು ಹಂಚಿ ತಿನ್ನುವ ಮನುಷ್ಯತನ ಇದೆ. ಇಂಥ ಮನುಷ್ಯತನ ಸಾಕಾರವಾಗಿದ್ದರಿಂದಲೇ ಮನುಕುಲ ಸಾವಿರಾರು ವರ್ಷಗಳಿಂದ ಬೆಳೆಯುತ್ತಾ ಬಂದಿತ್ತು. ಆದರೆ ಕಳೆದೆರಡು ಶತಮಾನಗಳಿಂದ ಹುಟ್ಟಿಕೊಂಡ ಕಾಂಚಾಣಮೃಗ ಸಾಕುವ ವಾಣಿಜ್ಯತಂತ್ರಗಾರಿಕೆ ಮನುಷ್ಯರ ಸೌಹಾರ್ದ ವ್ಯವಸ್ಥೆಯನ್ನೇ ಹಾಳುಮಾಡಿತು.

ಕಾಂಚಾಣಮೃಗ ಸಾಕುವುದು ಮತ್ತು ರೋಗಾಣು ಸಾಕುವುದು ಎರಡೂ ಒಂದೇ. ಕಾಂಚಾಣಮೃಗ ಮಾನಸಿಕ ರೋಗಿಗಳನ್ನು ಸೃಷ್ಟಿಸಿದರೆ, ರೋಗಾಣುಗಳು ದೈಹಿಕ ರೋಗ ತರುತ್ತವೆ. ಮಾನವರ ಬದುಕನ್ನೇ ಹಾಳು ಮಾಡುವ ಇಂಥ ದುರಾಚಾರದ ಸಾಕಾಣಿಕಾ ಕೇಂದ್ರಗಳು ಹೆಚ್ಚಾದಷ್ಟು ಮನುಷ್ಯತನ ಕಳೆದು, ಅಲ್ಲಿ ರಾಕ್ಷಸೀತನ ಕಾಣಿಸುತ್ತದೆ. ಮನುಷ್ಯರನ್ನು ಮನುಷ್ಯರ ರೀತಿ ನೋಡದೆ, ಹಣದ ದುರ್ಬೀನು ಹಿಡಿದು ನೋಡುವ ದುರ್ಭಾವನೆ ಬೆಳೆಯುತ್ತದೆ. ಕಾಂಚಾಣ ಮಾಯಾಮೃಗದ ಮಹಿಮೆ ತಿಳಿದೇ, ಯೋಗಿಗಳು ಹಣವನ್ನ ಕಾಲ ಕಸದಂತೆ ಕಂಡರು. ಶ್ರೀಮಂತಿಕೆ ಅಹಂನ್ನು ಅದುಮಿ, ಜೀವನದ ಜ್ಞಾನಾಮೃತ ನೀಡಿದರು. ಇಂಥ ಜ್ಞಾನಾಮೃತವನ್ನ ಈಗಲಾದರೂ ನಾವೆಲ್ಲಾ ಸವಿದು,'ಸಚ್ಚಿದಾನಂದ' ಲೋಕ ಸೃಷ್ಟಿಸಿ ನೆಮ್ಮದಿಯಾಗಿ ಬಾಳೋಣ.

ಗುಂಡಣ್ಣ



ದಿನ ಭವಿಷ್ಯ

ಶನಿವಾರ ಜುಲೈ 3, 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ಜ್ಯೇಷ್ಠ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಆರ್ದ್ರೆ ನವಮೀ ಗಂ. 31-57 (ಸಾ. 6-52) ಶನಿವಾರ ನಿತ್ಯ ನಕ್ಷತ್ರ ರೇವತಿ ಗಂ. 6-0 (ಬೆ. 8-30) ಅತಿಗಂಡ ನಾಮ ಯೋಗ ಗಂ. 20-12 ತೈತಲ ಕರಣ ಗಂ. 0-24 ವಿಷಾಭಾವಃ ಅಮೃತ ಶೇಷ ಗಂ. 3-59 ಅಮೃತ ಗಂ. 51-46 ರಾಹುಕಾಲ ಬೆ. ಗಂ. 9-00 ರಿಂದ 10-30 ಗುಳಿಕ ಕಾಲ ಬೆ. ಗಂ 6-00 ರಿಂದ 7-30 ಯಮಗಂಡ ಮ. ಕಾಲ ಗಂ 1-30 ರಿಂದ 3-00 ಸೂರ್ಯೋದಯ: 6-00 **ಸೂರ್ಯಾಸ್ತ:** 6-46 ಅದೃಷ್ಟ ಸಂಖ್ಯೆ 3 6

ಮೇಷ: ದೇಹಾಲಾಸ್ಯದಿಂದಾಗಿ ಕೆಲಸ ಕಾರ್ಯಗಳಲ್ಲಿ ಹಿನ್ನಡೆ ಉಂಟಾಗುವ ಸಾಧ್ಯತೆ. ಆರೋಗ್ಯದಲ್ಲಿ ಸ್ವಲ್ಪಮಟ್ಟಿನ ವ್ಯತ್ಯಯ ಕಂಡುಬರಲಿದೆ. ವೃಥಾ ಸುತ್ತಾಟ. ಆಪ್ತರೊಂದಿಗಿನ ಸಮಾಲೋಚನೆಯಿಂದ ಮಾನಸಿಕ ದುಗುಡ ನಿರಾಳ.

ವೃಷಭ: ವ್ಯವಹಾರದಲ್ಲಿ ಸ್ವಲ್ಪಮಟ್ಟಿನ ಹಿನ್ನಡೆ. ತಪ್ಪು ಉಂಟಾಗಿ ಹಾನಿ ಸಂಭವಿಸುವ ಸಾಧ್ಯತೆ. ವಿದೇಶ ಪ್ರಯಾಣ ಸನ್ನಿಹಿತವಾಗುವುದು. ವಿದ್ಯಾರ್ಥಿಗಳಿಗೆ ಓದಿನಲ್ಲಿ ಪ್ರಗತಿ. ಹಿರಿಯರ ಮಾತುಗಳನ್ನು ಗೌರವಿಸುವುದು ಸೂಕ್ತ.

ಮಿಥುನ: ಕಲೆ, ಕ್ರೀಡೆಗಳಲ್ಲಿ ತೊಡಗಿದವರಿಗೆ ಅತ್ಯಂತ ಉತ್ಸಾಹದ ದಿನ. ಆಹಾರ ವ್ಯತ್ಯಯದಿಂದ ಆರೋಗ್ಯ ಹದಗೆಡಬಹುದು. ಕುಟುಂಬದಲ್ಲಿ ಒಮ್ಮತದ ಅಭಿಪ್ರಾಯ ಮೂಡಿ ಸಂತದ ವಾತಾವರಣ ಮೂಡುವುದು.

ಕರ್ಕಾಟಕ: ಖರ್ಚುವೆಚ್ಚಗಳಲ್ಲಿ ನಿಯಂತ್ರಣ ಸಾಧಿಸಿ ನೆಮ್ಮದಿ ಕಾಣುವಿರಿ. ರಾಜಕಾರಣಿಗಳಿಗೆ ಆಶಾದಾಯಕ ಸನ್ನಿವೇಶಗಳು ಕಂಡುಬರುವುದು. ಹಿತೈಷಿಗಳ ಸಕಾಲಿಕ ಸಹಕಾರದಿಂದ ವಂಚನೆಗಳಿಂದ ಪಾರಾಗುವಿರಿ.

ಸಿಂಹ: ಹಣಕಾಸಿನ ವಿಚಾರದಲ್ಲಿ ಸಂಭವಿಸಿರುವ ಭಿನ್ನಾಭಿಪ್ರಾಯಗಳು ನಿವಾರಣೆಯಾಗಿ ವ್ಯವಹಾರಗಳು ಸುಗಮಗೊಳ್ಳುವವು. ಮಹಿಳೆಯರು ಕೆಲಸ ಕಾರ್ಯಗಳಲ್ಲಿ ಅತ್ಯಂತ ಜಾಗೃತರಾಗಿರುವುದು ಅವಶ್ಯ.

ಕನ್ಯಾ: ಸಾಮಾಜಿಕ ಕಾರ್ಯಗಳಲ್ಲಿ ಯಶಸ್ಸು ಕಂಡು ಜನಮನ್ನಣೆ ಗಳಿಸುವ ಅವಕಾಶ ನಿಮ್ಮದಾಗಲಿದೆ. ಆಪಾದನೆಯಿಂದ ಪಾರಾಗುವ ಲಕ್ಷಣಗಳು ಕಂಡುಬರುತ್ತಿದೆ. ವಿಪರೀತ ಶ್ರಮದಿಂದಾಗಿ ಆರೋಗ್ಯದಲ್ಲಿ ವ್ಯತ್ಯಯ.

ತುಲಾ: ಕೆಲಸ ಕಾರ್ಯಗಳು ಸರಾಗವಾಗಿ ನಡೆದು ವ್ಯಾಪಾರ ವ್ಯವಹಾರಗಳಲ್ಲಿ ಲಾಭದ ನಿರೀಕ್ಷೆ ಇದೆ. ವಾಹನಗಳಿಂದ ಹೆಚ್ಚಿನ ಖರ್ಚು ಸಂಭವಿಸಬಹುದು. ಹೊಸ ಯೋಜನೆಯೊಂದರ ಬಗ್ಗೆ ಚರ್ಚೆ ನಡೆಸಲಿದ್ದೀರಿ.

ವೃಶ್ಚಿಕ: ವ್ಯವಹಾರದಲ್ಲಿ ಯಶಸ್ಸು, ಅಲಂಕಾರಿಕ ವಸ್ತುಗಳ ಮಾರಾಟಗಾರರಿಗೆ, ಹೋಟೆಲ್, ಬೇಕರಿ ವ್ಯವಹಾರಸ್ಥರಿಗೆ ಉತ್ತಮ ಲಾಭದ ನಿರೀಕ್ಷೆ. ವಾಹನ ವ್ಯವಹಾರದಲ್ಲಿ ಅನುಕೂಲಕರ ಪರಿಸ್ಥಿತಿ. ಉದ್ಯೋಗದಲ್ಲಿರುವವರಿಗೆ ಬಿಡುವು.

ಧನು: ನಿರೀಕ್ಷೆಯಂತೆ ಕೆಲಸ-ಕಾರ್ಯಗಳು ನಡೆದು ಮಾನಸಿಕ ನೆಮ್ಮದಿ. ಪ್ರೀತಿಪಾತ್ರರೊಂದಿಗೆ ಸಮಾಲೋಚನೆ. ಒಪ್ಪಂದದ ಹಣಕಾಸು ವ್ಯವಹಾರದಲ್ಲಿ ಹೆಚ್ಚಿನ ಲಾಭದ ನಿರೀಕ್ಷೆ. ವ್ಯವಹಾರದಲ್ಲಿ ಸಂಯಮವನ್ನು ರೂಢಿಸಿಕೊಳ್ಳಿ.

ಮಕರ: ಲೇವಾದೇವಿ ವ್ಯವಹಾರಗಳಲ್ಲಿ ಹೆಚ್ಚಿನ ವ್ಯವಹಾರದಿಂದಾಗಿ ಲಾಭದ ನಿರೀಕ್ಷೆ. ಖರ್ಚು ವೆಚ್ಚಗಳ ಮೇಲೆ ಹಿಡಿತವಿರಲಿ. ಆರಕ್ಷಕರು, ಸೈನ್ಯದಲ್ಲಿ ಸೇವೆ ಸಲ್ಲಿಸುತ್ತಿರುವವರಿಗೆ ಹೆಚ್ಚಿನ ಜವಾಬ್ದಾರಿ ಹೊರಬೇಕಾದೀತು.

ಕುಂಭ: ಅಡೆತಡೆ ರಹಿತವಾದ ಕೆಲಸ ಕಾರ್ಯಗಳಿಂದಾಗಿ ನೆಮ್ಮದಿಯನ್ನು ಹೊಂದುವಿರಿ. ವಿಶೇಷ ಸಮಾರಂಭಗಳಲ್ಲಿ ಭಾಗವಹಿಸುವ ಸಾಧ್ಯತೆ. ವ್ಯಾಪಾರಸ್ಥರಿಗೆ ಗ್ರಾಹಕರೊಂದಿಗೆ ಮನಸ್ತಾಪ. ಅನಾವಶ್ಯಕ ಖರ್ಚು ಸಾಧ್ಯತೆ.

ಮೀನ: ಸ್ವಂತ ಉದ್ಯೋಗಿಗಳು, ನೌಕರ ವರ್ಗದವರಿಗೆ ಅತ್ಯಂತ ಪ್ರಶಸ್ತವಾಗಿ ನೆಮ್ಮದಿಯನ್ನು ತರುವುದು. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಆಸಕ್ತಿ. ಭೂ ವ್ಯವಹಾರದಲ್ಲಿ ಮನಸ್ತಾಪ ನಿವಾರಣೆಯಾಗಿ ಶಾಂತಿ ನೆಲೆಸುವುದು.

ನಿಮ್ಮ ಜನ್ಮದಿನ 3-ಜುಲೈ ಇಂದು ಅತ್ಯಂತ ಶುಭದಾಯಕವಾಗಿದ್ದು ಬಹುಮುಖ ಪ್ರತಿಭೆ ನಿಮ್ಮದಾಗಲಿದೆ. ಯಾವುದೇ ರಂಗದಲ್ಲಾದರೂ ಜನಮನ್ನಣೆಗೆ ಪಾತ್ರರಾಗುವಿರಿ. ಗಾಯಕರು, ಸಂಗೀತಗಾರರು ಮುಂತಾದವರಿಗೆ ಅತ್ಯಂತ ಶುಭತರುವ ವರ್ಷವಾಗುವುದು. ಸಂಸಾರಿಕ ಜೀವನದಲ್ಲಿ ಏರುಪೇರುಗಳ ನಡುವೆಯೂ ಹೊಂದಾಣಿಕೆ ಮೂಡಿಬರಲಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ 'ರಾಮ ಜನ್ಮಭೂಮಿ ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣಕ್ಕೆ ಉತ್ಖನನ ನಡೆಸುತ್ತಿದ್ದ ವೇಳೆ ಪುರಾತನ ಚಿತ್ರ ಮತ್ತು ಪತ್ರ ದೊರೆತಿವೆ' ಎಂಬ ವಿವರ ಇರುವ ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ. ಪೋಸ್ಟ್‌ನಲ್ಲಿ ಒಂದು ವಿಡಿಯೊವನ್ನು ಹಂಚಿಕೊಳ್ಳಲಾಗಿದೆ. ಸಿಲಿಂಡರ್ ಆಕಾರದ ಕ್ಯಾನ್ ಒಂದರಿಂದ ಸುರುಳಿ ಸುತ್ತಿರುವ ಬಟ್ಟೆಯನ್ನು ತೆಗೆದು, ಅದನ್ನು ಬಿಡಿಸಿಡುವ ದೃಶ್ಯ ವಿಡಿಯೊದಲ್ಲಿ ಇದೆ. ಪುರಾತನವಾದ ಆ ಬಟ್ಟೆಯ ಮೇಲೆ ಹಲವು ಚಿತ್ರಗಳು ಮತ್ತು ಬರಹ ಇದೆ.

✓ 'ರಾಮ ಜನ್ಮಭೂಮಿ ಉತ್ಖನನದ ವೇಳೆ ಅಂತಹ ಯಾವುದೇ ಪತ್ರ, ಚಿತ್ರ ದೊರೆತಿಲ್ಲ ಎಂದು ಸರ್ಕಾರವು ನೇಮಕ ಮಾಡಿರುವ ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಹೇಳಿದೆ. ಹೀಗಾಗಿ ವೈರಲ್ ಆಗಿರುವ ವಿಡಿಯೊದಲ್ಲಿ ಇರುವ ಪತ್ರಕ್ಕೂ ರಾಮ ಮಂದಿರಕ್ಕೂ ಸಂಬಂಧವಿಲ್ಲ ಎಂಬುದು ಸಾಬೀತಾಗಿದೆ. ಈ ವಿಡಿಯೊವನ್ನು ಟರ್ಕಿಯ ಇನ್‌ಸ್ಟಾಗ್ರಾಂ ಬಳಕೆದಾರರೊಬ್ಬರು ಪೋಸ್ಟ್ ಮಾಡಿದ್ದಾರೆ. ಇದು ಯಹೂದಿಗಳಿಗೆ ಸಂಬಂಧಿಸಿದ ಪತ್ರ. ಆ ಪತ್ರದಲ್ಲಿರುವುದು ಹೀಬ್ರೂ ಭಾಷೆ' ಎಂದು ದಿ ಲಾಜಿಕಲ್ ಇಂಡಿಯನ್ ಹೇಳಿದೆ.

ಪದಬಂಧ 4646 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ವಲಸೆ ಹೋದವರು ನೆಲೆನಿಂತ ನಾಡು (4)
3.ಎಲ್ಲ ಕಡೆಗೆ ವ್ಯಾಪಿಸಿದ್ದು (4)
5.ವೀರಶೈವ ಸ್ವಾಮಿಗಳ ಸಮಾಧಿ (3)
6.ರಕ್ತ ಹರಿವ ನಾಳ (3)
8.ಮಗ ಇಲ್ಲಿದ್ದಾನೆ (3)
9. ಹಾಸ್ಯ ಈ ವಿಧವಾಗಿ ಬಂದಿದೆ (3)
11.ಸವಿಯಾದುದು ಮರದೊಳಗಿದೆ (3)
13.ಪ್ರತಿಯಲ್ಲೇ ಏಳಿಗೆಯನ್ನು ನೋಡಿ (3)
15.ಸಂಪೂರ್ಣ ನಿರ್ನಾಮವಿದು (4)
16.ಸಖನ ವಿಶ್ರಾಂತಿಗಾಗಿಯೇ ಈ ಪೀಠ! (4)

ಮೇಲಿಂದ ಕೆಳಕ್ಕೆ

1.ದೇವಲೋಕದೊಡೆಯನ ಆಯುಧ (4)
2.ತಗಡುಗಳನ್ನೂ ಬಿಡದೆ ಕದ್ದೊಯ್ದವ! (3)
3.ಸಮವಯಸ್ಕ ರನ್ನು ಹೀಗೆ ಹೇಳಿ (3)
4.ಊರಿನ ಕಾವಲುಗಾರ (4)
7.ನಾದಿನಿಗೆ ಕೇಳಿಸಿದ ಧ್ವನಿ! (3)
8.ಸಂಗ್ರಾಮ ನಡೆದಿರುವ ಚಿಕ್ಕಹಳ್ಳಿ (3)
9.ಯೋಚನೆಯೇ ಬೇಡ! ಮೋಕ್ಷ ಇಲ್ಲಿದೆ! (4)
12.ಬಾಳೆ ಹಣ್ಣಿನಿಂದ ಮಾಡಿದ ಖಾದ್ಯ (4)
13.ವಿಭಕ್ತಿಗಳಲ್ಲಿ ಮೊದಲನೆಯದು (3)
14.ಮುನಿಸೇಕೆ? ತಿನ್ನುವ ಪದಾರ್ಥ ಇಲ್ಲಿಯೇ ಇದೆಯಲ್ಲಾ? (3)

1			2	■	3			4
	■	■		■		■	■	
	■	■	5			■	■	
6		7	■	■	■	8		
■	■		■	■	■		■	■
9		10	■	■	■	11		12
	■	■	13		14	■	■	
	■	■		■		■	■	
15				■	16			

4645ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 3.ರಾಗ 5.ನಿಷ್ಪಕ್ಷಪಾತ 6.ಸಮೀಪ 7.ಗುಳಂಬ 8.ರಾಷ್ಟ್ರೀಕರಣ 9.ಸಮಾಧಿ 10.ಕಟಾಕ್ಷ 13.ಅನುರಣನ 14.ಜರ

ಮೇಲಿಂದ ಕೆಳಕ್ಕೆ: 1.ಉಪವಾಸ 2.ಅಕ್ಷತೆ 4.ಗಲ್ಲುಗಂಬ 5.ನಿರಪರಾಧಿ 7.ಗುಣಕಥನ 9.ಸತ್ಕುಲಜ 11.ಕ್ಷಪಣಿಕ 12.ಉರಗಿ

ಸುಡೊಕು 5032

6		4	9		7	3		8
				4				
	7	8	2			4		6
7					8		6	
	8		4			7	3	
		5		7				
4	9		3	8		6		1
	6						8	
8		7			4	2		3

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5031 ಸುಡೊಕು

9	1	7	3	5	8	6	2	4
8	4	6	9	2	7	5	1	3
2	5	3	4	1	6	9	7	8
5	3	8	1	6	2	7	4	9
4	2	9	7	3	5	1	8	6
6	7	1	8	4	9	2	3	5
3	8	5	6	7	1	4	9	2
7	9	2	5	8	4	3	6	1
1	6	4	2	9	3	8	5	7

₹ 26 ಸಾವಿರ ಕೋಟಿ ಅನುದಾನ ಬಳಕೆಗೆ ಒಪ್ಪಿಗೆ

ಒಂದನೇ ಪುಟದಿಂದ

ಎರಡೂ ಉಪ ಯೋಜನೆಗಳ ಅಡಿ ಮುಂದುವರಿದ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಮೊದಲ ಕಂತಿನ ಅನುದಾನವನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ. ಹೊಸ ಕಾರ್ಯಕ್ರಮಗಳ ಅನುಷ್ಠಾನವನ್ನು ತ್ವರಿತವಾಗಿ ಆರಂಭಿಸಲಾಗುವುದು ಎಂದು ಹೇಳಿದರು.

ಪೂರ್ಣ ಅನುದಾನ ಬಳಕೆ: 'ಕಳೆದ ಆರ್ಥಿಕ ವರ್ಷದಲ್ಲಿ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಯೋಜನೆಯ ಯಾವುದೇ ಅನುದಾನವನ್ನು ಬಾಕಿ ಉಳಿಸಿಕೊಂಡಿಲ್ಲ ಅಥವಾ ಅನ್ಯ ಉದ್ದೇಶಕ್ಕೆ ವರ್ಗಾವಣೆ ಮಾಡಿಲ್ಲ' ಎಂದು ಯಡಿಯೂರಪ್ಪ ತಿಳಿಸಿದರು.

ಶೇ 95ರಷ್ಟು ಸಾಧನೆ: ಗೋವಿಂದ ಕಾರಜೋಳ ಮಾತನಾಡಿ, 'ಕಳೆದ ವರ್ಷ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಅಡಿಯಲ್ಲಿ ₹25,945.90 ಕೋಟಿ ಅನುದಾನ ಮೀಸಲಿಡಲಾಗಿತ್ತು. ₹ 24,646.99 ಕೋಟಿ ವೆಚ್ಚ ಮಾಡಲಾಗಿದೆ. ಯಾವುದೇ ಅನುದಾನದ ವರ್ಗಾವಣೆ ಅಥವಾ ಉಳಿಕೆ ಆಗಿಲ್ಲ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.



ಬಾಕಿ ಉಳಿದ ₹11 ಸಾವಿರ ಕೋಟಿ • ಕೇಂದ್ರ ಸಚಿವೆ ನಿರ್ಮಲಾ ಭರವಸೆ

ಜಿಎಸ್‌ಟಿ ಪರಿಹಾರ ಪಾವತಿಗೆ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳೆದ ವರ್ಷದ ಸರಕು ಸೇವಾ ತೆರಿಗೆ (ಜಿಎಸ್‌ಟಿ) ಪರಿಹಾರ ಬಾಕಿ ₹11,800 ಕೋಟಿ ಪಾವತಿಗೆ ಕ್ರಮ ಕೈಗೊಳ್ಳುವುದಾಗಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಭರವಸೆ ನೀಡಿದ್ದಾರೆ ಎಂದು ಗೃಹ ಮತ್ತು ಕಾನೂನು ಸಚಿವ ಬಸವರಾಜ ಬೊಮ್ಮಾಯಿ ತಿಳಿಸಿದರು.

ಜಿಎಸ್‌ಟಿ ಮಂಡಳಿಯಲ್ಲಿ ಕರ್ನಾಟಕವನ್ನು ಪ್ರತಿನಿಧಿಸುವ ಬೊಮ್ಮಾಯಿ ಅವರು, ಬೆಂಗಳೂರಿಗೆ ಬಂದಿರುವ ನಿರ್ಮಲಾ ಸೀತಾರಾಮನ್ ಅವರನ್ನು ಶುಕ್ರವಾರ ಭೇಟಿಯಾಗಿ ಚರ್ಚೆ ನಡೆಸಿದರು.

ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ಕೇಂದ್ರ ಸಚಿವರಿಂದ ಸಕಾರಾತ್ಮಕ ಭರವಸೆ ಸಿಕ್ಕಿದೆ. ಕಳೆದ ವರ್ಷದಂತೆ ಈ ವರ್ಷವೂ ಜಿಎಸ್‌ಟಿ ಪರಿಹಾರ ₹18,000 ಕೋಟಿ ಹಣವನ್ನು ಕೇಂದ್ರವು ಸಾಲ ಪಡೆದು ರಾಜ್ಯಕ್ಕೆ ಒದಗಿಸಲಿದೆ ಎಂದರು.



ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿಯಾದ ಗೃಹ ಮತ್ತು ಕಾನೂನು ಸಚಿವ ಬಸವರಾಜ ಬೊಮ್ಮಾಯಿ ಅವರು ರಾಜ್ಯದ ಬೇಡಿಕೆಗಳನ್ನು ಮಂಡಿಸಿದರು.

2021–22 ನೇ ಸಾಲಿನ ಮೊದಲ ತ್ರೈಮಾಸಿಕ ಅವಧಿಯಲ್ಲಿ ಸಂಗ್ರಹವಾಗಿರುವ ಜಿಎಸ್‌ಟಿ ಪಾಲಿನ ಮೊದಲ ಕಂತನ್ನು ರಾಜ್ಯಕ್ಕೆ ಬಿಡುಗಡೆ ಮಾಡುವಂತೆಯೂ ಮನವಿ ಮಾಡಿದ್ದು, ಅದಕ್ಕೆ ನಿರ್ಮಲಾ ಒಪ್ಪಿಗೆ ನೀಡಿದರು. ಕೋವಿಡ್ ನಿರ್ವಹಣೆ ಮತ್ತು ಮೂರನೇ ಅಲೆ ತಯಾರಿಗೆ ಬೇಕಾದ ಹಣಕಾಸಿನ ವ್ಯವಸ್ಥೆಗಳ ಕುರಿತು ಚರ್ಚಿಸಲಾಯಿತು. ಕೋವಿಡ್ ನಿರ್ವಹಣೆಗೆ ಹಣಕಾಸಿನ ಅಭಾವ ಆಗದಂತೆ ನೋಡಿಕೊಳ್ಳುವುದಾಗಿ ಅವರು ಭರವಸೆ ನೀಡಿದ್ದಾರೆಂದು ಬೊಮ್ಮಾಯಿ ಹೇಳಿದರು.

ಕೇಂದ್ರ ಪುರಸ್ಕೃತ ಯೋಜನೆಗಳಿಗೆ ತನ್ನ ಪಾಲಿನ ಹಣ ಬಿಡುಗಡೆ ಮಾಡಲು ಅವರು ಒಪ್ಪಿಕೊಂಡಿದ್ದಾರೆ. ಕೇಂದ್ರ ಸರ್ಕಾರದಿಂದ ವಿವಿಧ ಯೋಜನೆಗಳಡಿ ರಾಜ್ಯ ಸರ್ಕಾರಕ್ಕೆ ಬಿಡುಗಡೆ ಆಗಬೇಕಿರುವ ಹಣಕಾಸಿನ ನೆರವಿನ ಮಾಹಿತಿ ನೀಡಲಾಯಿತು. ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ ನಿರ್ಮಲಾ, ತ್ವರಿತಗತಿಯಲ್ಲಿ ಕೇಂದ್ರ ಪ್ರಾಯೋಜಿತ ಯೋಜನೆಗಳಿಗೆ ತನ್ನ ಪಾಲಿನ ಆರ್ಥಿಕ ನೆರವು ನೀಡುವುದಾಗಿ ಭರವಸೆ ನೀಡಿದ್ದಾರೆ ಎಂದು ಬೊಮ್ಮಾಯಿ ಹೇಳಿದರು.

ರಾಜ್ಯ ಸರ್ಕಾರ ಕೋವಿಡ್ ಎರಡನೇ ಅಲೆ ನಿರ್ವಹಣೆ ಮಾಡಿದ ರೀತಿ, ಬಡವರಿಗೆ ನೀಡಲಾದ ಪ್ಯಾಕೇಜ್, ಕೋವಿಡ್‌ನಿಂದ ಸಾವನ್ನಪ್ಪಿದ ಬಿಪಿಎಲ್ ಕುಟುಂಬಗಳಿಗೆ ತಲಾ ₹1 ಲಕ್ಷ ಪರಿಹಾರ, ಖಾಸಗಿ ಆಸ್ಪತ್ರೆಗಳ ಸಹಕಾರದೊಂದಿಗೆ ಕೋವಿಡ್ ಎರಡನೇ ಅಲೆಯನ್ನು ನಿಭಾಯಿಸಿದ ಬಗ್ಗೆ ನಿರ್ಮಲಾ ಮೆಚ್ಚುಗೆ ವ್ಯಕ್ತಪಡಿಸಿದರು ಎಂದೂ ಅವರು ತಿಳಿಸಿದರು.

'ಸರಳ' ವಿಜ್ಞಾನದ ಸುಧೀಂದ್ರ ಇನ್ನಿಲ್ಲ



ಸುಧೀಂದ್ರ ಹಾಲ್ದೊಡ್ಡೇರಿ

ಬೆಂಗಳೂರು: ದೇಶದ ರಕ್ಷಣಾ ವಲಯದ ವೈವಿಧ್ಯಮಯ ಯುದ್ಧ ವಿಮಾನಗಳು ಮತ್ತು ಹೆಲಿಕಾಪ್ಟರ್‌ಗಳ ವಿನ್ಯಾಸ, ಅಭಿವೃದ್ಧಿ, ಹಾರಾಟ ಸಾಮರ್ಥ್ಯದ ಪರೀಕ್ಷೆಯಲ್ಲಿ ನಿಷ್ಣಾತರಾಗಿದ್ದ ವಿಜ್ಞಾನಿ ಹಾಗೂ ವಿಜ್ಞಾನದ ಕ್ಲಿಷ್ಟ ಸಂಗತಿಗಳನ್ನು ಸರಳವಾಗಿ ಕನ್ನಡದ ಓದುಗರಿಗೆ ಮುಟ್ಟಿಸುವ ಮೂಲಕ ಚಿರಪರಿಚಿತರಾಗಿದ್ದ ಸುಧೀಂದ್ರ ಹಾಲ್ದೊಡ್ಡೇರಿ (61) ಶುಕ್ರವಾರ ನಿಧನರಾದರು.

ವೈಮಾನಿಕ ಎಂಜಿನಿಯರ್ ಆಗಿ ಅಂತರರಾಷ್ಟ್ರೀಯ ಮಟ್ಟದ ಬಹುರಾಷ್ಟ್ರೀಯ ವಿಮಾನ ಕಂಪನಿಗಳಿಗೆ ಸಲಹೆಗಾರರಾಗಿದ್ದ ಅವರು, ವಿಜ್ಞಾನದ ಸತ್ಯದರ್ಶನವನ್ನು ಮಾತ್ರ ಕನ್ನಡಿಗರಿಗೆ ಸರಳ ಕನ್ನಡದಲ್ಲೇ ಮಾಡುತ್ತಲೇ ಬಂದಿದ್ದರು. ವಿಜ್ಞಾನಕ್ಕೆ ಸಂಬಂಧಿಸಿದ ಹಲವು ಪ್ರಶ್ನೆಗಳಿಗೆ ತಕ್ಷಣದ 'ಉತ್ತರವಾಗಿ' ಸಿಗುತ್ತಿದ್ದ ಅಪರೂಪದ ವಿಜ್ಞಾನಿಯೂ ಆಗಿದ್ದರು.

ಜೂನ್ 21ರಂದು ಅವರಿಗೆ ತೀವ್ರ ಹೃದಯಾಘಾತವಾಗಿತ್ತು. ಜೆ.ಪಿ. ನಗರದಲ್ಲಿರುವ ಆಸ್ಟರ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಮಿದುಳಿಗೆ ಆಮ್ಲಜನಕ ಸರಬರಾಜಾಗದ ಕಾರಣ ಅದು ನಿಷ್ಕ್ರಿಯವಾಗಿತ್ತು. ಚಿಕಿತ್ಸೆ ಫಲಕಾರಿಯಾಗದೇ ಮಧ್ಯಾಹ್ನ 1 ಗಂಟೆಗೆ ಅವರು ಕೊನೆಯುಸಿರೆಳೆದರು. ಅವರಿಗೆ ಪತ್ನಿ, ಇಬ್ಬರು ಪುತ್ರಿಯರು ಇದ್ದಾರೆ.

ಕೇಂದ್ರ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯಲ್ಲಿ (ಡಿಆರ್‌ಡಿಒ) ವಿವಿಧ ಹೊಣೆಗಾರಿಕೆ ನಿಭಾಯಿಸಿದ್ದ ಅವರು ಎಚ್‌ಎಎಲ್‌ನಲ್ಲಿ 22 ವರ್ಷ ಕಾರ್ಯನಿರ್ವಹಿಸಿದ್ದರು. ಎಚ್‌ಎಎಲ್ ಎಂಜಿನ್ ವಿಭಾಗದಲ್ಲಿ ವಿವಿಧ ವಿಮಾನಗಳು ಮತ್ತು ಹೆಲಿಕಾಪ್ಟರ್‌ಗಳ ಎಂಜಿನ್‌ಗಳ ಮೇಲೆ ಹಾಗೂ ಲಘು ಯುದ್ಧ ವಿಮಾನ 'ತೇಜಸ್' ಯೋಜನೆಯಲ್ಲಿ ನಾಲ್ಕು ವರ್ಷ ಕಾರ್ಯನಿರ್ವಹಿಸಿದ್ದರು. ಜಾಗ್ವಾರ್ ಯುದ್ಧವಿಮಾನ, ಕಿರಣ್ ವಿಮಾನ, ಚೀತಾ/ಚೇತಕ್, ಸೀ ಕಿಂಗ್ ಹೆಲಿಕಾಪ್ಟರ್‌ಗಳ ಇಂಧನ ಕ್ಷಮತೆ ಮತ್ತು ಎಂಜಿನ್ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸಿದ್ದರು. ಹಿಮಾಲಯದಂತಹ ಅತಿ ಎತ್ತರ ಪ್ರದೇಶಗಳಲ್ಲಿ ಹೆಲಿಕಾಪ್ಟರ್ ಹಾರಾಟದ ಸಮಸ್ಯೆಗಳನ್ನು ನಿಭಾಯಿಸುವ ವಾಯುಪಡೆಯ ಸಮಿತಿಯ ಸದಸ್ಯರಾಗಿದ್ದರು.

ಖ್ಯಾತ ವಿಜ್ಞಾನಿ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಅವರೊಂದಿಗೆ ಕಾರ್ಯನಿರ್ವಹಿಸಿದ ಹೆಗ್ಗಳಿಕೆಯೂ ಅವರದ್ದಾಗಿತ್ತು. ನಂತರ ಸ್ವಯಂ ನಿವೃತ್ತಿ ಪಡೆದು ಜೈನ್ ಮತ್ತು ಅಲಯನ್ಸ್ ವಿಶ್ವವಿದ್ಯಾಲಯಗಳಲ್ಲಿ ವೈಮಾನಿಕ ವಿಷಯಗಳ ಬೋಧಕರಾಗಿದ್ದರು.

ವೈಜ್ಞಾನಿಕ ವಿಷಯಗಳ ಬಗ್ಗೆ ಅಧ್ಯಯನಶೀಲ ಬರಹಗಾರರಾಗಿದ್ದ ಅವರು, ಅಂಕಣಕಾರರೂ ಆಗಿದ್ದರು.

ಡಿಆರ್‌ಡಿಒದಲ್ಲಿ ಹಲವು ಪ್ರಶಸ್ತಿಗಳು, ರಕ್ಷಣಾ ಸಚಿವರ ವೈಜ್ಞಾನಿಕ ಸಲಹೆಗಾರರ ನ್ಯಾಷನಲ್ ಸೈನ್ಸ್ ಡೇ ಮೆಡಲ್ ಅಂಡ್ ಸೈಟೇಷನ್, ಡಿಆರ್‌ಡಿಒ ಟೆಕ್ನಾಲಜಿ ಗ್ರೂಪ್ ಅವಾರ್ಡ್, ಕರ್ನಾಟಕ ವಿಜ್ಞಾನ ಪರಿಷತ್ತಿನ ಬೆಳ್ಳಿ ಹಬ್ಬದ ಪ್ರಶಸ್ತಿ, ಉತ್ತಮ ವೈಜ್ಞಾನಿಕ ಸಂವಹನಕಾರ ಪ್ರಶಸ್ತಿ ಸೇರಿ ಹಲವು ಪ್ರಶಸ್ತಿಗಳಿಗೆ ಭಾಜನರಾಗಿದ್ದರು. ಕನ್ನಡ ಪುಸ್ತಕ ಪ್ರಾಧಿಕಾರದ ಡಾ. ಅನುಪಮಾ ನಿರಂಜನ ವೈದ್ಯಕೀಯ ಮತ್ತು ವಿಜ್ಞಾನ ಸಾಹಿತ್ಯ ಪ್ರಶಸ್ತಿಯನ್ನು ಶುಕ್ರವಾರವಷ್ಟೇ (ಜುಲೈ 2) ಘೋಷಿಸಲಾಗಿತ್ತು.

'ತಂದೆಯ ದೇಹವನ್ನು ಬೆಂಗಳೂರಿನ ಮೆಡಿಕಲ್ ಕಾಲೇಜಿಗೆ ದಾನ ಮಾಡಲು ನಿರ್ಧರಿಸಿದ್ದೇವೆ. ಇದರಿಂದ ವೈದ್ಯಕೀಯ ವಿದ್ಯಾರ್ಥಿಗಳ ಸಂಶೋಧನೆಗೆ ಅನುಕೂಲವಾಗಲಿದೆ' ಎಂದು ಅವರ ಪುತ್ರಿ ಮೇಘನಾ ಹೇಳಿದ್ದಾರೆ.



ಫ್ಲಾರಿಡಾದ ಸರ್ಫ್‌ಸೈಡ್‌ನಲ್ಲಿ ಬಹುಮಹಡಿ ವಸತಿ ಸಮುಚ್ಚಯ ಕುಸಿದ ಪರಿಣಾಮ ಸಾವಿಗೀಡಾದವರ ಸಂಖ್ಯೆ 20ಕ್ಕೆ ಏರಿಕೆಯಾಗಿದೆ. ಗುರುವಾರ ಅಮೆರಿಕ ಅಧ್ಯಕ್ಷ ಜೋ ಬೈಡನ್ ಮತ್ತು ಅವರ ಪತ್ನಿ ಜಿಲ್ ಬೈಡನ್ ಅವರು ಪುಷ್ಪಗುಚ್ಛ ಅರ್ಪಿಸುವ ಮೂಲಕ ಸಾವಿಗೀಡಾದವರಿಗೆ ಶ್ರದ್ಧಾಂಜಲಿ ಸಲ್ಲಿಸಿದರು. ಎಪಿ/ಪಿಟಿಐ ಚಿತ್ರ

ಲಾಕ್‌ಡೌನ್ ನಿರ್ಬಂಧ ಇನ್ನಷ್ಟು ಸಡಿಲ

ಒಂದನೇ ಪುಟದಿಂದ

ಅಲ್ಲದೆ, ಸಂಜೆ 5 ರಿಂದ ಈಗಿರುವ ರಾತ್ರಿ ಕರ್ಫ್ಯೂವನ್ನು ರಾತ್ರಿ 8 ರಿಂದ ಬೆಳಿಗ್ಗೆ 5 ರವರೆಗೆ ಮಾರ್ಪಾಡು ಮಾಡುವ ಸಾಧ್ಯತೆ ಇದೆ. ರಾತ್ರಿ 8 ರವರೆಗೆ ವಾಣಿಜ್ಯ ಚಟುವಟಿಕೆಗಳಿಗೆ ಅವಕಾಶ ನೀಡಬಹುದು. ವಾರಾಂತ್ಯ ಕರ್ಫ್ಯೂ ರದ್ದು ಪಡಿಸುವ ಬಗ್ಗೆಯೂ ಚರ್ಚೆ ನಡೆಯಬಹುದು ಎಂದೂ ಮೂಲಗಳು ತಿಳಿಸಿವೆ.

ದೇವಸ್ಥಾನ ತೆರೆಯಲು ಕ್ರಮ: ಕೆಲವು ಸುರಕ್ಷತಾ ಕ್ರಮಗಳನ್ನು ವಿಧಿಸಿ ದೇವರ ದರ್ಶನಕ್ಕೆ ಭಕ್ತರಿಗೆ ಅವಕಾಶ ನೀಡಬೇಕಾಗಿದೆ. ಈ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗುವುದು. ಸೋಂಕು ಕಡಿಮೆ ಇರುವ ಕಡೆಗಳಲ್ಲಿ ದೇವಸ್ಥಾನಗಳನ್ನು ತೆರೆಯಲು ಅವಕಾಶ ನೀಡಬಹುದು. ಆದರೆ, ಉತ್ಸವ, ಜಾತ್ರೆ, ಅನ್ನದಾನ, ಪ್ರಸಾದ ವಿತರಣೆಗಳ ಮೇಲಿನ ನಿಷೇಧ ಮುಂದುವರಿಯಲಿದೆ ಎಂದು ಮುಜರಾಯಿ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದ್ದಾರೆ.

ಸಚಿವ ಶ್ರೀರಾಮುಲು ಆಪ್ತನ ವಿಚಾರಣೆ

ಒಂದನೇ ಪುಟದಿಂದ

₹ 2 ಕೋಟಿ ವಸೂಲಿ ಆರೋಪ: 'ವಿಜಯೇಂದ್ರ ತನಗೆ ಆಪ್ತರೆಂದು ರಾಜಣ್ಣ ಹೇಳಿಕೊಳ್ಳುತ್ತಿದ್ದ. ವಿಜಯೇಂದ್ರ ಮೂಲಕವೇ ಸರ್ಕಾರಿ ಕೆಲಸ ಕೊಡಿಸುವ ಆಮಿಷವೊಡ್ಡಿ ಉದ್ಯಮಿಯೊಬ್ಬರಿಂದ ಇತ್ತೀಚೆಗಷ್ಟೇ ₹ 2 ಕೋಟಿ ಹಣ ಪಡೆದಿದ್ದ ಎನ್ನಲಾಗಿದೆ. ಸರ್ಕಾರಿ ಕೆಲಸ ಕೊಡಿಸುವ ಹಾಗೂ ವರ್ಗಾವಣೆ ಮಾಡಿಸುವುದಾಗಿಯೂ ಆರೋಪಿ ಹಲವರಿಗೆ ಆಮಿಷವೊಡ್ಡಿ ಹಣಕ್ಕೆ ಬೇಡಿಕೆ ಇಟ್ಟಿದ್ದ' ಎಂದೂ ಸಿಸಿಬಿ ಮೂಲಗಳು ಹೇಳಿವೆ.

'ಉದ್ಯಮಿಯೊಬ್ಬರ ಜೊತೆ ಆರೋಪಿ ರಾಜಣ್ಣ ನಡೆಸಿದ್ದ ಮೊಬೈಲ್ ಸಂಭಾಷಣೆ ಇತ್ತೀಚೆಗೆ ಎಲ್ಲೆಡೆ ಹರಿದಾಡಿತ್ತು. ಅದರ ಸಮೇತವೇ ಉದ್ಯಮಿ, ವಿಜಯೇಂದ್ರ ಅವರಿಗೆ ವಿಷಯ ತಿಳಿಸಿದ್ದರು. ಹೀಗಾಗಿ, ವಿಜಯೇಂದ್ರ ಅವರೇ ಸೈಬರ್ ಕ್ರೈಂ ಠಾಣೆಗೆ ದೂರು ನೀಡಿದ್ದರು' ಎಂದೂ ತಿಳಿಸಿವೆ.

'ಹೆಸರು ಹೇಳಿ ವಂಚನೆ: ಎಚ್ಚರಿಕೆ ಇರಲಿ'

'ಸಾರ್ವಜನಿಕ ಕ್ಷೇತ್ರದಲ್ಲಿ ಮುಖಂಡರ ಹೆಸರನ್ನು ದುರ್ಬಳಕೆ ಮಾಡಿಕೊಂಡು ವಂಚಿಸುವವರ ಬಗ್ಗೆ ಎಚ್ಚರಿಕೆ ಇರಬೇಕು' ಎಂದು ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದ್ದಾರೆ.

'ಸಾರ್ವಜನಿಕ ಕ್ಷೇತ್ರದಲ್ಲಿ ನೆರವು ಕೇಳುವವರನ್ನು ಅನುಮಾನಿಸಿ ನೋಡಲಾಗದು. ಹಾಗೆಂದು ಎಚ್ಚರ ತಪ್ಪಲಾಗದು. ಹೆಸರು ದುರುಪಯೋಗಪಡಿಸಿಕೊಂಡು ಕಳಂಕ ಹಚ್ಚುವ ವಂಚಕರಿಂದ ತೊಂದರೆ ತುಸು ಹೆಚ್ಚು ಬಾಧಿಸುತ್ತಿದೆ' ಎಂದು ಅವರು ಟ್ವೀಟ್ ಮಾಡಿದ್ದಾರೆ.

'ಸಾರ್ವಜನಿಕರು ಮೋಸ ಹೋಗಬಾರದು ಎಂಬ ಕಾರಣಕ್ಕೆ ಮತ್ತು ವ್ಯಕ್ತಿತ್ವ ರಕ್ಷಣೆಗಾಗಿ ಅನಿವಾರ್ಯವಾಗಿ ನೀಡಿದ ದೂರಿನ ಮೇಲೆ ಪೊಲೀಸರು ಕ್ರಮ ತೆಗೆದುಕೊಂಡಿದ್ದಾರೆ' ಎಂದು ವಿಜಯೇಂದ್ರ ಹೇಳಿದ್ದಾರೆ.

'ಸಮಗ್ರ ತನಿಖೆಯಾಗಲಿ'

'ಕೆಲಸ ಮಾಡಿಸಿಕೊಳ್ಳಲು, ಪ್ರಾಜೆಕ್ಟ್ ಕ್ಲಿಯರ್ ಮಾಡಿಕೊಡಲು ಆತ ಲಂಚ ತೆಗೆದುಕೊಳ್ಳುತ್ತಿದ್ದಾನೆ ಎಂದು ವಿಜಯೇಂದ್ರ ದೂರು ನೀಡಿದ್ದಾರೆ. ಯಾರೇ ತಪ್ಪು ಮಾಡಿದ್ದರೂ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲೇಬೇಕು. ಈ ಬಗ್ಗೆ ಸಮಗ್ರ ತನಿಖೆಯಾಗಲಿ' ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಒತ್ತಾಯಿಸಿದರು. 'ಇದು 20–25 ಪರ್ಸೆಂಟ್ ಸರ್ಕಾರ. ಜಯೇಂದ್ರನೇ ನಿಜವಾದ ಮುಖ್ಯಮಂತ್ರಿ. ಯಡಿಯೂರಪ್ಪ ಲೆಕ್ಕಕ್ಕಿಲ್ಲದ ಮುಖ್ಯಮಂತ್ರಿ. ಮೊಮ್ಮಗ, ಅಳಿಯ ಸೇರಿ ಇಡೀ ಕುಟುಂಬವೇ ಲಂಚದಲ್ಲಿ ಮುಳುಗಿದೆ' ಎಂದರು.

'ತಪ್ಪು ಗ್ರಹಿಕೆಯಿಂದ ದೂರು'

'ತಪ್ಪು ಗ್ರಹಿಕೆಯಿಂದ ವಿಜಯೇಂದ್ರ ಅವರು ದೂರು ಸಲ್ಲಿಸಿದ್ದಾರೆ. ಅದಕ್ಕೂ ಮುನ್ನ, ನನ್ನನು ಕರೆಸಿ ಮಾತನಾಡಿದ್ದರೆ ವಾಸ್ತವಾಂಶ ಹಾಗೂ ಸತ್ಯಾಸತ್ಯತೆ ಗೊತ್ತಾಗಿರುತ್ತಿತ್ತು' ಎಂದು ರಾಜಣ್ಣ ಹೇಳಿದ್ದಾರೆ.

ಸಾಮಾಜಿಕ ಜಾಲತಾಣದ ಖಾತೆಯಲ್ಲಿ ಬರೆದುಕೊಂಡಿರುವ ಅವರು, 'ಪ್ರಕರಣದಲ್ಲಿ ನಾನು ಭಾಗಿಯಾಗಿಲ್ಲ. ಯಾವುದೇ ತಪ್ಪು ಮಾಡಿಲ್ಲ. ಜೀವನಕ್ಕಾಗಿ ಕಷ್ಟಪಟ್ಟು ದುಡಿದು ಬದುಕುವ ವ್ಯಕ್ತಿ ನಾನು. ಅಡ್ಡದಾರಿ ಹಿಡಿಯುವವನಲ್ಲ' ಎಂದೂ ತಿಳಿಸಿದ್ದಾರೆ.

'ಸಹಾಯಕ ಪ್ರಾಧ್ಯಾಪಕ ನೇಮಕ: ವಯೋಮಿತಿ ಸಡಿಲಿಸಿ'

ಪ್ರಜಾವಾಣಿ ವಾರ್ತೆ

ಮಂಡ್ಯ: ಕೋವಿಡ್ ಕಾರಣಕ್ಕೆ ಎರಡು ವರ್ಷಗಳಿಂದ ಮುಂದೂಡಲ್ಪಟ್ಟಿದ್ದ ಸರ್ಕಾರಿ ಪದವಿ ಕಾಲೇಜು ಸಹಾಯಕ ಪ್ರಾಧ್ಯಾಪಕರ ನೇಮಕಾತಿಯಲ್ಲಿ ಗರಿಷ್ಠ ವಯೋಮಿತಿಯನ್ನು ಸಡಿಲಗೊಳಿಸಬೇಕು ಎಂದು 'ರಾಜ್ಯ ನೆಟ್, ಸ್ಲೆಟ್, ಪಿಎಚ್.ಡಿ ಅರ್ಹತೆಯುಳ್ಳವರ ವೇದಿಕೆ' ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್ ಅಶ್ವತ್ಥನಾರಾಯಣ ಅವರನ್ನು ಒತ್ತಾಯಿಸಿದೆ.

ಈ ಕುರಿತು ವೇದಿಕೆ ಸದಸ್ಯರು ಸಚಿವರಿಗೆ ಪತ್ರ ಬರೆದಿದ್ದು, 'ರಾಜ್ಯದ ಪದವಿ ಕಾಲೇಜುಗಳಲ್ಲಿ ಖಾಲಿ ಉಳಿದಿರುವ 1,242 ಸಹಾಯಕ ಪ್ರಾಧ್ಯಾಪಕರು ಹಾಗೂ 310 ಪ್ರಾಂಶುಪಾಲರ ನೇರ ನೇಮಕಾತಿಗಾಗಿ 2019ರಲ್ಲೇ ಚಾಲನೆ ನೀಡಲಾಗಿತ್ತು. ನೆಟ್ (ರಾಷ್ಟ್ರೀಯ ಅರ್ಹತಾ ಪರೀಕ್ಷೆ), ಸ್ಲೆಟ್ (ರಾಜ್ಯ ಅರ್ಹತಾ ಪರೀಕ್ಷೆ) ಹಾಗೂ ಪಿಎಚ್.ಡಿ ಅರ್ಹತೆಯುಳ್ಳವರು ಆಗಿನಿಂದಲೂ ಅಧ್ಯಯನದಲ್ಲಿ ತೊಡಗಿದ್ದರು. ಕೋವಿಡ್‌-19ನಿಂದಾಗಿ ನೇಮಕಾತಿ ಪ್ರಕ್ರಿಯೆ ಮುಂದೂಡಲ್ಪಟ್ಟ ಕಾರಣ ನೂರಾರು ಪದವೀಧರರು ವಯೋಮಾನ ಅರ್ಹತೆ ಮೀರುವ ಅಪಾಯ ಎದುರಿಸುತ್ತಿದ್ದಾರೆ' ಎಂದು ತಿಳಿಸಿದ್ದಾರೆ.

'ಸ್ಥಗಿತಗೊಂಡಿದ್ದ ನೇಮಕಾತಿ ಪ್ರಕ್ರಿಯೆಗೆ ಚಾಲನೆ ನೀಡುವಂತೆ ಸರ್ಕಾರದ ಮುಖ್ಯಕಾರ್ಯದರ್ಶಿ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಆಯುಕ್ತರಿಗೆ ಸೂಚನೆ ಕೊಟ್ಟಿದ್ದಾರೆ. ವಯೋಮಾನ ಮೀರಿದ ಅಭ್ಯರ್ಥಿಗಳು ಹುದ್ದೆ ಕಳೆದುಕೊಳ್ಳುವ ಭೀತಿಯಲ್ಲಿದ್ದಾರೆ. ಹೀಗಾಗಿ ಒಂದು ಬಾರಿಗೆ ಗರಿಷ್ಠ ವಯೋಮಾನ ಅರ್ಹತಾ ದಿನಾಂಕವನ್ನು 2020ರ ಜೂನ್ 26ಕ್ಕೆ ನಿಗದಿಗೊಳಿಸಬೇಕು' ಎಂದು ಪತ್ರದಲ್ಲಿ ಮನವಿ ಮಾಡಿದ್ದಾರೆ.

'ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ನೇಮಕಾತಿಗೂ ಇದೇ ರೀತಿ ಕೋವಿಡ್ ಅಡ್ಡಿಯಾಗಿತ್ತು. ಅಲ್ಲಿಯೂ ಹಲವು ಅಭ್ಯರ್ಥಿಗಳಿಗೆ ಅರ್ಹತೆ ಮೀರುವ ಅಪಾಯ ಎದುರಾಗಿತ್ತು. ಅಲ್ಲಿ ಗರಿಷ್ಠ ವಯೋಮಿತಿಯನ್ನು ಸಡಿಲಗೊಳಿಸಿ ಆದೇಶ ಹೊರಡಿಸಲಾಗಿದೆ. ಅದೇ ರೀತಿ ಪದವಿ ಕಾಲೇಜುಗಳ ಸಹಾಯಕ ಉಪನ್ಯಾಸಕರ ನೇಮಕಾತಿಯಲ್ಲೂ ವಯೋಮಾನ ಸಡಿಲಗೊಳಿಸಬೇಕು' ಎಂದು ಸಮಿತಿಯ ಸದಸ್ಯರು ಒತ್ತಾಯಿಸಿದ್ದಾರೆ.

'ಸಂವಿಧಾನದ 14ನೇ ವಿಧಿ ಅನ್ವಯ ಸರ್ಕಾರಿ ಸೇವೆ ಪಡೆಯಲು ತಾರತಮ್ಯ ಮಾಡುವಂತಿಲ್ಲ, ಕಾನೂನಿನ ಮುಂದೆ ಎಲ್ಲರೂ ಸಮಾನರು. ಪೊಲೀಸ್ ಇಲಾಖೆ ಕೈಗೊಂಡಿರುವ ಕ್ರಮವನ್ನು ಉನ್ನತ ಶಿಕ್ಷಣ ಇಲಾಖೆಯೂ ಕೈಗೊಳ್ಳಬೇಕು. ಆ ಮೂಲಕ ಸರ್ಕಾರಿ ಪದವಿ ಕಾಲೇಜು ಸೇರಲು ಪ್ರಯತ್ನಿಸುತ್ತಿರುವ ಅಭ್ಯರ್ಥಿಗಳ ನೆರವಿಗೆ ಬರಬೇಕು' ಎಂದು ಸಮಿತಿಯ ಅಧ್ಯಕ್ಷ ಎಂ.ಎಲ್. ಕೃಷ್ಣೇಗೌಡ ಆಗ್ರಹಿಸಿದ್ದಾರೆ

ಅರ್ಜಿ ಸಲ್ಲಿಸಿ ಪರೀಕ್ಷೆಗಾಗಿ ಕಾಯುತ್ತಿರುವ 85 ಸಾವಿರ ಅಭ್ಯರ್ಥಿಗಳು

ಕೆ–ಸೆಟ್ ಪರೀಕ್ಷೆ: ದಿನ ನಿಗದಿಗೆ ಪರದಾಟ

• ಕೆ.ಓಂಕಾರ ಮೂರ್ತಿ

ಮುಖ್ಯಾಂಶಗಳು
- ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಸದ್ಯದಲ್ಲಿ ಅರ್ಜಿ ಆಹ್ವಾನ
- ಅಷ್ಟರೊಳಗೆ ಕೆ–ಸೆಟ್ ನಡೆದು ಫಲಿತಾಂಶ ಬರಬಹುದೆಂಬ ನಿರೀಕ್ಷೆ
- ಕೋವಿಡ್ ಕಾರಣ ಪರೀಕ್ಷೆ ನಡೆಸಲು ತೊಂದರೆ

ಮೈಸೂರು: ಕೋವಿಡ್ ಕಾರಣ ಕರ್ನಾಟಕ ರಾಜ್ಯ ಉಪನ್ಯಾಸಕರ ಅರ್ಹತಾ ಪರೀಕ್ಷೆಯನ್ನು (ಕೆ–ಸೆಟ್) ಈಗಾಗಲೇ ಎರಡು ಬಾರಿ ಮುಂದೂಡಿರುವ ಮೈಸೂರು ವಿಶ್ವವಿದ್ಯಾಲಯವು ಹೊಸದಾಗಿ ದಿನಾಂಕ ನಿಗದಿ ಮಾಡಲು ಪರದಾಡುತ್ತಿದೆ.

ಸುಮಾರು 85 ಸಾವಿರ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿ ಮೂರು ತಿಂಗಳಾಗಿದ್ದು, ಪರೀಕ್ಷೆಯ ದಿನಾಂಕ ಪ್ರಕಟಣೆ ಆಗುವುದನ್ನೇ ಕಾಯುತ್ತಿದ್ದಾರೆ. ಈ ನಡುವೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 1,242 ಸಹಾಯಕ ಪ್ರಾಧ್ಯಾಪಕರ ಹುದ್ದೆ ಭರ್ತಿಗಾಗಿ ಸದ್ಯದಲ್ಲೇ ಅರ್ಜಿ ಆಹ್ವಾನಿಸುವ ಸೂಚನೆಯನ್ನು ರಾಜ್ಯ ಸರ್ಕಾರ ನೀಡಿದೆ. ಅಷ್ಟರೊಳಗೆ ಕೆ–ಸೆಟ್ ಪರೀಕ್ಷೆ ನಡೆದು ಫಲಿತಾಂಶ ಪ್ರಕಟವಾದರೆ ಅರ್ಜಿ ಸಲ್ಲಿಸಲು ಅರ್ಹತೆ ಗಿಟ್ಟಿಸಿಕೊಳ್ಳಬಹುದೆಂಬುದು ಅಭ್ಯರ್ಥಿಗಳ ನಿರೀಕ್ಷೆ.

'ಪರೀಕ್ಷೆ ನಡೆಸುವ ವಿಚಾರವಾಗಿ ಕುಲಪತಿ ಪ್ರೊ.ಜಿ.ಹೇಮಂತಕುಮಾರ್ ಜೊತೆ ಚರ್ಚೆ ನಡೆಸಲಾಗಿದೆ. ದಿನಾಂಕ ನಿಗದಿ ಮಾಡಿ ಮತ್ತೆ ಮುಂದೂಡಬೇಕಾದ ಪರಿಸ್ಥಿತಿ ಬಂದರೆ ಕಷ್ಟ. ಈಗಾಗಲೇ ಎರಡು ಬಾರಿ ಮುಂದೂಡಲಾಗಿದೆ. ಕೋವಿಡ್‌ನಿಂದಾಗಿ ತೊಂದರೆ ಉಂಟಾಗಿದೆ' ಎಂದು ಕೆ–ಸೆಟ್ ಸಂಯೋಜಕ ಪ್ರೊ. ಎಚ್.ರಾಜಶೇಖರ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

'ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ರಾಜ್ಯ ಸರ್ಕಾರ ಅರ್ಜಿ ಕರೆದು ಪರೀಕ್ಷೆ ನಡೆಸಲು ಹೆಚ್ಚು ಸಮಯ ಬೇಕಾಗುತ್ತದೆ. ಅಷ್ಟರಲ್ಲಿ ನಮ್ಮ ಪರೀಕ್ಷೆ ನಡೆಸಿ ಫಲಿತಾಂಶ ಪ್ರಕಟಿಸುತ್ತೇವೆ. ಕೆ–ಸೆಟ್ ಪರೀಕ್ಷೆ ಪ್ರಕ್ರಿಯೆಗೆ ಮೂರು ತಿಂಗಳು ಸಾಕು. ಯಾರಿಗೂ ತೊಂದರೆ ಆಗದಂತೆ ನೋಡಿಕೊಳ್ಳಲು ಪ್ರಯತ್ನಿಸುತ್ತೇವೆ' ಎಂದು ಭರವಸೆ ನೀಡಿದರು.

ಈಗಾಗಲೇ 2 ಬಾರಿ ಮುಂದೂಡಿಕೆ

ಏ.11ರಂದು ನಿಗದಿಯಾಗಿದ್ದ ಕೆ–ಸೆಟ್ ಪರೀಕ್ಷೆಯನ್ನು ಈಗಾಗಲೇ ಎರಡು ಬಾರಿ ಮುಂದೂಡಲಾಗಿದೆ.

ಸಾರಿಗೆ ನೌಕರರ ಮುಷ್ಕರ ಕಾರಣ 11ರಿಂದ ಏ.25ಕ್ಕೆ ಮುಂದೂಡಲಾಗಿತ್ತು. ಕೊರೊನಾ ಸೋಂಕು ನಿಯಂತ್ರಿಸಲು ಕರ್ಫ್ಯೂ ವಿಧಿಸಿದ ಕಾರಣ ಎರಡನೇ ಬಾರಿ ಮುಂದಕ್ಕೆ ಹಾಕಲಾಯಿತು. 2020ರಲ್ಲೂ ಕೋವಿಡ್ ಕಾರಣ ಕೆ–ಸೆಟ್ ಪರೀಕ್ಷೆಯನ್ನು 3 ಬಾರಿ ಮುಂದೂಡಲಾಗಿತ್ತು.

> ಪರೀಕ್ಷೆ ನಡೆಸಲು ಹೆಚ್ಚು ವಿಳಂಬ ಮಾಡುವುದಿಲ್ಲ. ಶೀಘ್ರವೇ ರಾಜ್ಯ ಸರ್ಕಾರದ ಜೊತೆ ಚರ್ಚಿಸಿ ದಿನಾಂಕ ಅಂತಿಮಗೊಳಿಸುತ್ತೇವೆ
> **ಪ್ರೊ.ಎಚ್.ರಾಜಶೇಖರ್,** ಕೆ–ಸೆಟ್ ಸಂಯೋಜಕ, ಮೈಸೂರು ವಿ.ವಿ

ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಸುಪರ್ದಿಯಲ್ಲಿ ನಡೆಯುವ ಈ ಪರೀಕ್ಷೆಗೆ ಮೈಸೂರು ವಿಶ್ವವಿದ್ಯಾಲಯವು ನೋಡಲ್ ಏಜೆನ್ಸಿಯಾಗಿ ಕಾರ್ಯನಿರ್ವಹಿಸುತ್ತಿದೆ. ಇದುವರೆಗೆ 9 ಬಾರಿ ಪರೀಕ್ಷೆ ನಡೆಸಿದ್ದು, ಈಗ ನಡೆಯಬೇಕಿರುವುದು 10ನೆಯದ್ದು.

ಬೆಂಗಳೂರು, ಮೈಸೂರು, ಬೆಳಗಾವಿ, ಬಳ್ಳಾರಿ, ವಿಜಯಪುರ, ದಾವಣಗೆರೆ, ಧಾರವಾಡ, ಕಲಬುರ್ಗಿ, ಮಂಗಳೂರು, ಶಿವಮೊಗ್ಗ ಮತ್ತು ತುಮಕೂರಿನಲ್ಲಿರುವ ನೋಡೆಲ್ ಕೇಂದ್ರಗಳಲ್ಲಿ 41 ವಿಷಯಗಳಲ್ಲಿ ಪರೀಕ್ಷೆ ನಡೆಯಲಿದೆ. 'ಈಗಾಗಲೇ ಪ್ರಶ್ನೆ ಪತ್ರಿಕೆ ರೂಪಿಸಿ ಸೀಲ್ ಮಾಡಿದ್ದೇವೆ. ಹೀಗಾಗಿ, ಯಾವ ಕೇಂದ್ರದಲ್ಲಿ ಪರೀಕ್ಷೆ ಬರೆಯಲು ಅರ್ಜಿ ಸಲ್ಲಿಸಿದ್ದರೋ ಅಲ್ಲೇ ಬರೆಯಬೇಕು' ಎಂದು ಪ್ರೊ.ರಾಜಶೇಖರ್ ಹೇಳಿದರು.

ನಾಯಕತ್ವ ಬದಲಾವಣೆಗೆ ಶಾಸಕರ ಒತ್ತಡ?

ಚಂಡೀಗಡ (ಪಿಟಿಐ): ಹರಿಯಾಣದಲ್ಲಿ ಕಾಂಗ್ರೆಸ್‌ನ 19 ಶಾಸಕರು ಪಕ್ಷದ ನಾಯಕತ್ವ ಬದಲಾವಣೆ ಬಯಸಿದ್ದು, ಮಾಜಿ ಮುಖ್ಯಮಂತ್ರಿ ಭೂಪಿಂದರ್ ಸಿಂಗ್ ಹೂಡಾ ಅವರಿಗೆ ಪ್ರಮುಖ ಸ್ಥಾನ ನೀಡುವಂತೆ ಸಲಹೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಹರಿಯಾಣದಲ್ಲಿನ ಕಾಂಗ್ರೆಸ್ ಪಕ್ಷದ ಉಸ್ತುವಾರಿಯೊಂದಿಗೆ ನವದೆಹಲಿಯ ಎಐಸಿಸಿ ಕಚೇರಿಯಲ್ಲಿ ಗುರುವಾರ ನಡೆದ ಸಭೆಯಲ್ಲಿ ಶಾಸಕರು ಭಾಗವಹಿಸಿದ್ದರು.

ಕಳೆದ ಎಂಟು ವರ್ಷಗಳಿಂದ ರಾಜ್ಯದ ಜಿಲ್ಲಾ ಘಟಕಗಳಲ್ಲಿ ಪಕ್ಷದ ವತಿಯಿಂದ ಅಧ್ಯಕ್ಷರೇ ಇಲ್ಲ ಎಂಬ ವಿಚಾರವನ್ನು ಇದೇ ವೇಳೆ ಶಾಸಕರು ಸಭೆಯ ಗಮನಕ್ಕೆ ತಂದಿದ್ದಾರೆ.

'ಪಕ್ಷದ ಬಲವರ್ಧನೆಗೆ ಪ್ರಬಲ ನಾಯಕತ್ವದ ಅಗತ್ಯವಿದೆ. ರಾಜ್ಯದಲ್ಲಿನ ಪ್ರಸ್ತುತ ರಾಜಕೀಯ ಸನ್ನಿವೇಶಗಳನ್ನು ಪಕ್ಷದ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳಲು ನಾಯಕತ್ವ ಬದಲಾವಣೆ ಅಗತ್ಯ' ಎಂದು ಶಾಸಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ರಾಜ್ಯದಲ್ಲಿ ಒಟ್ಟು 31 ಮಂದಿ ಕಾಂಗ್ರೆಸ್ ಶಾಸಕರಿದ್ದಾರೆ.

ಮಹಾರಾಷ್ಟ್ರ ರಾಜ್ಯ ಸಹಕಾರಿ ಬ್ಯಾಂಕ್ ಹಗರಣ; ಜಾರಿ ನಿರ್ದೇಶನಾಲಯದ ತನಿಖೆ

ಪವಾರ್‌ಗೆ ಸೇರಿದ ಕಾರ್ಖಾನೆ ಮುಟ್ಟುಗೋಲು

ಪ್ರಜಾವಾಣಿ ವಾರ್ತೆ



ಮುಂಬೈ: ಮಹಾರಾಷ್ಟ್ರದ ಉಪಮುಖ್ಯಮಂತ್ರಿ ಮತ್ತು ಎನ್‌ಸಿಪಿ ನಾಯಕ ಅಜಿತ್ ಪವಾರ್ ಅವರಿಗೆ ಸಂಬಂಧಿಸಿದ ಸತಾರದ ಸಕ್ಕರೆ ಕಾರ್ಖಾನೆಯ ಸುಮಾರು ₹65 ಕೋಟಿ ಮೌಲ್ಯದ ಆಸ್ತಿಯನ್ನು ಜಾರಿ ನಿರ್ದೇಶನಾಲಯ (ಇ.ಡಿ) ಮುಟ್ಟುಗೋಲು ಹಾಕಿಕೊಂಡಿದೆ.

ಇದರಿಂದಾಗಿ ಮಹಾ ವಿಕಾಸ್ ಅಘಾಡಿ ಸರ್ಕಾರದ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ. ಈ ಬೆಳವಣಿಗೆ ಬಗ್ಗೆ ಪ್ರತಿಕ್ರಿಯಿಸಿದ ಎನ್‌ಸಿಪಿ, ಇದು ತನ್ನ ಪಕ್ಷ ಮತ್ತು ಅದರ ನಾಯಕರನ್ನು ಕೆಣಕುವ ಪ್ರಯತ್ನವಲ್ಲದೆ ಮತ್ತೇನೂ ಅಲ್ಲ ಎಂದು ಹೇಳಿದೆ.

ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರ ಸೋದರನ ಮಗನಾದ ಅಜಿತ್ ಪವಾರ್, ಈ ಬಗ್ಗೆ ಕಾನೂನು ಸಲಹೆ ಪಡೆಯುವುದಾಗಿ ಹೇಳಿದರು.

ಪುಣೆಯಲ್ಲಿ ಪ್ರತಿಕ್ರಿಯಿಸಿರುವ ಅವರು 'ಇ.ಡಿ ಗೆ ವಿಚಾರಣೆ ನಡೆಸುವ ಹಕ್ಕಿದೆ. ಈ ಮೊದಲು ರಾಜ್ಯದ ಸಿಐಡಿ ಮತ್ತು ಭ್ರಷ್ಟಾಚಾರ ನಿಗ್ರಹ ದಳ ತನಿಖೆ ನಡೆಸಿದರೂ ಏನೂ ಸಿಗಲಿಲ್ಲ. ಆರ್ಥಿಕ ಅಪರಾಧಗಳ ವಿಭಾಗದ ತನಿಖೆ ಕೂಡ ನಡೆಯುತ್ತಿದೆ. ನ್ಯಾಯಾಂಗ ತನಿಖೆಯನ್ನೂ ನಡೆಸಲಾಗಿದೆ. ಎಲ್ಲ ಕಡೆಯಿಂದಲೂ ತನಿಖೆ ನಡೆಯುತ್ತಿದೆ. ಆದರೆ, ಏನೂ ಹೊರಬಂದಿಲ್ಲ' ಎಂದು ಹೇಳಿದ್ದಾರೆ.

'ನೀವು ಇದನ್ನು ಹಗರಣ ಎಂದು ಹೇಳುತ್ತಿದ್ದೀರಿ. ದಯವಿಟ್ಟು ಏನು ಹಗರಣವೆಂದು ನನಗೆ ತೋರಿಸಿ' ಎಂದು ಅವರು ಪ್ರಶ್ನಿಸಿದ್ದಾರೆ.

'ಅಜಿತ್ ಪವಾರ್ ಮತ್ತು ಅವರ ಕುಟುಂಬ ಸದಸ್ಯರು ಯಾವುದೇ ಅಕ್ರಮ ಚಟುವಟಿಕೆಗಳಲ್ಲಿ ಭಾಗಿಯಾಗಿಲ್ಲ. ಆದರೆ, 'ಇ.ಡಿ ಸಕ್ಕರೆ ಕಾರ್ಖಾನೆಗೆ ಬೀಗಮುದ್ರೆ ಹಾಕಿ, ಕಾನೂನು ಕ್ರಮ ತೆಗೆದುಕೊಳ್ಳುತ್ತಿದೆ' ಎಂದು ಎನ್‌ಸಿಪಿ ಮುಖ್ಯ ವಕ್ತಾರ ಮತ್ತು ಅಲ್ಪಸಂಖ್ಯಾತ ವ್ಯವಹಾರಗಳ ಸಚಿವ ನವಾಬ್ ಮಲಿಕ್ ದೂರಿದರು.

ವರದಿಗಳ ಪ್ರಕಾರ, ಜರಾಂಡೇಶ್ವರ ಸಹಕಾರಿ ಸಕ್ಕರೆ ಕಾರ್ಖಾನೆಯ ಭೂಮಿ, ಕಟ್ಟಡ, ಸ್ಥಾವರ ಮತ್ತು ಯಂತ್ರೋಪಕರಣಗಳು ಸೇರಿ ₹65.75 ಕೋಟಿ ಮೌಲ್ಯದ ಆಸ್ತಿಗಳನ್ನು ಇ.ಡಿ ಮುಟ್ಟುಗೋಲು ಹಾಕಿಕೊಂಡಿದೆ. ಈ ಆಸ್ತಿ ಗುರು ಕಮಾಡಿಟಿ ಸರ್ವೀಸಸ್ ಪ್ರೈವೆಟ್ ಲಿಮಿಟೆಡ್ ಮತ್ತು ಜರಾಂಡೇಶ್ವರ ಶುಗರ್ ಮಿಲ್ ಪ್ರೈವೆಟ್ ಲಿಮಿಟೆಡ್ ಹೆಸರಿನಲ್ಲಿದ್ದು, ಅದರಲ್ಲಿ ಹೆಚ್ಚಿನ ಷೇರುಗಳನ್ನು ಸ್ಪಾರ್ಕ್ಲಿಂಗ್ ಸಾಯಿಲ್ ಪ್ರೈವೇಟ್ ಲಿಮಿಟೆಡ್ ಹೊಂದಿದೆ. ಇದರೊಂದಿಗೆ ಅಜಿತ್ ಪವಾರ್ ಮತ್ತು ಅವರ ಪತ್ನಿ ಸುನೇತ್ರ ಪವಾರ್ ಅವರ ನಂಟಿದೆ. ಮಹಾರಾಷ್ಟ್ರ ರಾಜ್ಯ ಸಹಕಾರಿ ಬ್ಯಾಂಕ್ (ಎಂಎಸ್‌ಸಿಬಿ) ಹಗರಣಕ್ಕೆ ಸಂಬಂಧಿಸಿ ತನಿಖೆ ನಡೆಸುತ್ತಿರುವ ಇ.ಡಿ ಸಕ್ಕರೆ ಕಾರ್ಖಾನೆಯ ಆಸ್ತಿ ಮುಟ್ಟುಗೋಲು ಹಾಕಿಕೊಂಡಿದೆ.

ಸರ್ಕಾರ ಉರುಳಿಸಲು ಇಡಿ, ಸಿಬಿಐ ಕೈಹಾಕಬಾರದು: ರಾವುತ್



ಮುಂಬೈ (ಪಿಟಿಐ): ಇಡಿ, ಸಿಬಿಐ ಸಂಸ್ಥೆಗಳು ಸರ್ಕಾರಗಳನ್ನು ಉರುಳಿಸುವಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬಾರದು ಎಂದು ಶಿವಸೇನಾ ನಾಯಕ ಮತ್ತು ರಾಜ್ಯಸಭಾ ಸದಸ್ಯ ಸಂಜಯ್ ರಾವುತ್ ಹೇಳಿದ್ದಾರೆ.

ನವದೆಹಲಿಯಲ್ಲಿ ಶುಕ್ರವಾರ ವರದಿಗಾರರೊಂದಿಗೆ ಮಾತನಾಡಿದ ಅವರು, ಮಹಾರಾಷ್ಟ್ರದಲ್ಲಿ ಮಹಾ ವಿಕಾಸ ಅಘಾಡಿ (ಎಂವಿಎ) ಸರ್ಕಾರ ರಚನೆಯಲ್ಲಿ ಪ್ರಮುಖ ಪಾತ್ರ ವಹಿಸಿದವರನ್ನು ಇಡಿ, ಸಿಬಿಐ ಗುರಿಯಾಗಿಸಿಕೊಂಡಿವೆ ಎಂದು ಆಪಾದಿಸಿದರು.

'ಇ.ಡಿ ಮತ್ತು ಸಿಬಿಐ ನಡೆಸುತ್ತಿರುವ ವಿಚಾರಣೆ ತನಿಖೆಗಳ ಬಗ್ಗೆ ಎಲ್ಲರಿಗೂ ತಿಳಿದಿದೆ. ಇದರಿಂದ ಮಹಾರಾಷ್ಟ್ರ ಸರ್ಕಾರವನ್ನು ಬೀಳಿಸಬಹುದು ಎಂದು ಯಾರಾದರೂ ಭಾವಿಸಿದರೆ, ಅವರದು ತಪ್ಪು ಭಾವನೆ. ಸರ್ಕಾರ ಅಸ್ಥಿರಗೊಳಿಸಲು ಬಿಜೆಪಿ ಎಲ್ಲ ಪ್ರಯತ್ನಗಳನ್ನು ಮಾಡುತ್ತಿದೆ. ಸೇನೆ ನಿಯೋಜಿಸಿದರೂ ಏನೂ ಬದಲಾಗದು' ಎಂದರು.

ಮಹಾರಾಷ್ಟ್ರದ ಸಕ್ಕರೆ ಕಾರ್ಖಾನೆಯೊಂದಿಗೆ ಉಪಮುಖ್ಯಮಂತ್ರಿ ಅಜಿತ್ ಪವಾರ್ ಅವರಿಗೆ ಸಂಪರ್ಕವಿರುವ ಬಗ್ಗೆ ಜಾರಿ ನಿರ್ದೇಶನಾಲಯ (ಇ.ಡಿ) ಕ್ರಮ ಕೈಗೊಂಡಿರುವ ಬಗ್ಗೆ ಕೇಳಲಾದ ಪ್ರಶ್ನೆಗೆ 'ಎಂವಿಎ ಸರ್ಕಾರ ರಚನೆಯಲ್ಲಿ ಪ್ರಮುಖ ಪಾತ್ರ ವಹಿಸಿದವರನ್ನು ಕೇಂದ್ರ ತನಿಖಾ ಸಂಸ್ಥೆಗಳು ಗುರಿಯಾಗಿಸಿಕೊಂಡಿವೆ' ಎಂದು ದೂರಿದರು.

ರಾಜ್ಯ ವಿಧಾನಸಭಾ ಸ್ಪೀಕರ್ ಹುದ್ದೆಯನ್ನು ಎಂವಿಎ ಗೆಲ್ಲಲಿದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಸಚಿನ್ ವಾಜೆ ಹೇಳಿಕೆ ದಾಖಲಿಸಲು ಸಿಬಿಐಗೆ ನ್ಯಾಯಾಲಯ ಅನುಮತಿ



ಸಚಿನ್ ವಾಜೆ

ಮುಂಬೈ (ಪಿಟಿಐ): ಮಹಾರಾಷ್ಟ್ರದ ಮಾಜಿ ಗೃಹ ಸಚಿವ ಮತ್ತು ಎನ್‌ಸಿಪಿ ನಾಯಕ ಅನಿಲ್ ದೇಶ್‌ಮುಖ್ ವಿರುದ್ಧದ ಭ್ರಷ್ಟಾಚಾರದ ಆರೋಪದ ತನಿಖೆಯ ಭಾಗವಾಗಿ ವಜಾಗೊಂಡಿರುವ ಪೊಲೀಸ್ ಅಧಿಕಾರಿ ಸಚಿನ್ ವಾಜೆ ಅವರ ಹೇಳಿಕೆಯನ್ನು ದಾಖಲಿಸಲು ವಿಶೇಷ ಎನ್‌ಐಎ ನ್ಯಾಯಾಲಯವು ಶುಕ್ರವಾರ ಸಿಬಿಐಗೆ ಅನುಮತಿ ನೀಡಿದೆ.

ಕೈಗಾರಿಕೋದ್ಯಮಿ ಮುಕೇಶ್ ಅಂಬಾನಿ ಅವರ ಮನೆಯ ಬಳಿ ಸ್ಫೋಟಕ ತುಂಬಿದ ವಾಹನ ಪತ್ತೆಯಾಗಿದ್ದು ಮತ್ತು ವಾಹನ ಕಳವು ಆಗುವ ಮೊದಲು ತನ್ನ ಬಳಿಯಿದೆ ಎಂದು ಹೇಳಿಕೊಂಡಿದ್ದ ಥಾಣೆ ಮೂಲದ ಉದ್ಯಮಿ ಮನ್ಸುಖ್ ಹಿರೇನ್ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ವಾಜೆ ಅವರನ್ನು ರಾಷ್ಟ್ರೀಯ ತನಿಖಾ ಸಂಸ್ಥೆ ಬಂಧಿಸಿದೆ.

ನವಿ ಮುಂಬೈಯ ತಲೋಜ ಜೈಲಿನಲ್ಲಿ ನ್ಯಾಯಾಂಗ ಬಂಧನದಲ್ಲಿರುವ ವಾಜೆ ಅವರನ್ನು ಭೇಟಿಯಾಗಲು ಕೋರಿ ಸಿಬಿಐ ಗುರುವಾರ ವಿಶೇಷ ಎನ್‌ಐಎ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿತ್ತು. ದೇಶ್‌ಮುಖ್ ವಿರುದ್ಧದ ತನಿಖೆಗೆ ಸಂಬಂಧಿಸಿದಂತೆ ಅವರ ಹೇಳಿಕೆಯನ್ನು ದಾಖಲಿಸಿದೆ.

ಮುಂಬೈನ ಮಾಜಿ ಪೊಲೀಸ್ ಆಯುಕ್ತ ಪರಮ್ ಬೀರ್ ಸಿಂಗ್ ಅವರು ಅಂದಿನ ರಾಜ್ಯ ಗೃಹ ಸಚಿವರ ವಿರುದ್ಧ ಭ್ರಷ್ಟಾಚಾರದ ಆರೋಪಗಳನ್ನು ಮಾಡಿದ ನಂತರ ಸಿಬಿಐ ಭ್ರಷ್ಟಾಚಾರ ತಡೆ ಕಾಯ್ದೆ ಮತ್ತು ಐಪಿಸಿ ನಿಬಂಧನೆಗಳ ಅಡಿಯಲ್ಲಿ ದೇಶಮುಖ್ ಅವರನ್ನು ತನಿಖೆ ನಡೆಸುತ್ತಿದೆ.

ಲೋಕೋಪಯೋಗಿ ಇಲಾಖೆ ಟೆಂಡರ್

'ಬಿಜು ಅವರ ಡಕೋಟಾ ವಿಮಾನ ಶೀಘ್ರ ಒಡಿಶಾಗೆ'



ಭುವನೇಶ್ವರ (ಪಿಟಿಐ): ಕೋಲ್ಕತ್ತದ ನೇತಾಜಿ ಸುಭಾಸ್ ಚಂದ್ರ ಬೋಸ್ (ಎನ್‌ಎಸ್‌ಸಿಬಿ) ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನಿಂತಿರುವ ಮಾಜಿ ಮುಖ್ಯಮಂತ್ರಿ ಬಿಜು ಪಟ್ನಾಯಕ್ ಅವರ 'ಅಪ್ರತಿಮ ಡಕೋಟಾ ವಿಮಾನ'ವನ್ನು ಭುವನೇಶ್ವರಕ್ಕೆ ಮರಳಿ ತರುವ ಪ್ರಕ್ರಿಯೆ ಪ್ರಾರಂಭಿಸಲಾಗಿದೆ ಎಂದು ಒಡಿಶಾ ಸರ್ಕಾರ ಶುಕ್ರವಾರ ತಿಳಿಸಿದೆ.

ವಿಮಾನವನ್ನು ಮರಳಿ ತರಲು ರಾಜ್ಯದಾದ್ಯಂತ ಜನರ ಬೇಡಿಕೆ ಹೆಚ್ಚುತ್ತಿರುವುದನ್ನು ಗಮನದಲ್ಲಿಟ್ಟುಕೊಂಡು, ಡಕೋಟಾ ಸಾಗಣೆಗೆ ಲೋಕೋಪಯೋಗಿ ಇಲಾಖೆ (ಪಿಡಬ್ಲ್ಯುಡಿ) ಟೆಂಡರ್ ಕರೆದಿದೆ ಎಂದು ಒಡಿಶಾ ವಾಣಿಜ್ಯ ಮತ್ತು ಸಾರಿಗೆ ಸಚಿವ ಪದ್ಮನಾಭ ಬೆಹೆರಾ ತಿಳಿಸಿದರು.

ಡಕೋಟಾ ಶೀಘ್ರದಲ್ಲೇ ಭುವನೇಶ್ವರಕ್ಕೆ ಮರಳಲಿದೆ ಎಂದು ಸಚಿವರು, ಇಲ್ಲಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿರುವ ಬಿಜು ಪಟ್ನಾಯಕ್ ಅವರ ಪ್ರತಿಮೆಯ ಬಳಿ ವಿಮಾನ ಪ್ರದರ್ಶಿಸಲು ಅನುಮತಿ ಕೋರಿ ಈಗಾಗಲೇ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ ಎಂದರು.

ವಿಮಾನವನ್ನು ಭುವನೇಶ್ವರಕ್ಕೆ ಸ್ಥಳಾಂತರಿಸುವ ಗುತ್ತಿಗೆಯನ್ನು ಕೋಲ್ಕತ್ತ ಮೂಲದ ಕಂಪನಿಯೊಂದಕ್ಕೆ ನೀಡಲಾಗಿದೆ. ಕಳಚಿದ ವಿಮಾನವನ್ನು ರಸ್ತೆ ಮೂಲಕ ಭುವನೇಶ್ವರಕ್ಕೆ ತರಲು ಮತ್ತು ಅದನ್ನು ಇಲ್ಲಿನ ವಿಮಾನ ನಿಲ್ದಾಣದ ಆವರಣದಲ್ಲಿ ಮತ್ತೆ ಜೋಡಿಸಲು ಕಂಪನಿಗೆ ಅನುಮತಿ ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಪೈಲಟ್ ಆಗಿದ್ದ ಬಿಜು ಪಟ್ನಾಯಕ್, 1947ರಲ್ಲಿ ಇಂಡೋನೇಷ್ಯಾದ ಅಂದಿನ ಪ್ರಧಾನಮಂತ್ರಿ ಸುಲ್ತಾನ್ ಷಹರಿಯಾರ್ ಅವರನ್ನು ಕಾಡಿನ ಅಡಗುತಾಣದಿಂದ ರಕ್ಷಿಸಲು ಸಹ ಪೈಲಟ್ ಆಗಿದ್ದ ಪತ್ನಿ ಗ್ಯಾನ್ ಪಟ್ನಾಯಕ್ ಅವರೊಂದಿಗೆ ಡಕೋಟಾ ವಿಮಾನವನ್ನು ಚಾಲನೆ ಮಾಡಿದ್ದರು.

ಬಿಜು ಪಟ್ನಾಯಕ್ ಅವರ ಶೌರ್ಯಕ್ಕೆ ಕೃತಜ್ಞತೆಯಿಂದ ಇಂಡೋನೇಷ್ಯಾ ತನ್ನ ದೇಶದ ಅತ್ಯುನ್ನತ ನಾಗರಿಕ ಗೌರವ 'ಭೂಮಿಪುತ್ರ' ಪುರಸ್ಕಾರ ನೀಡಿ ಗೌರವಿಸಿದೆ.



ಧರಣಿ... ಅಡುಗೆ ಅನಿಲ ಬೆಲೆ ಏರಿಕೆ ವಿರೋಧಿಸಿ ಪಟಿಯಾಲಾದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಶುಕ್ರವಾರ ಧರಣಿ ನಡೆಸಿದರು — ಪಿಟಿಐ ಚಿತ್ರ

ಪುಲ್ವಾಮಾದಲ್ಲಿ ಎನ್‌ಕೌಂಟರ್: ಐವರು ಎಲ್‌ಇಟಿ ಉಗ್ರರ ಹತ್ಯೆ

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಪುಲ್ವಾಮಾ ಜಿಲ್ಲೆಯಲ್ಲಿ ಭದ್ರತಾ ಪಡೆಗಳು ನಡೆಸಿದ ಎನ್‌ಕೌಂಟರ್‌ನಲ್ಲಿ ಲಷ್ಕರ್-ಎ-ತಯಬಾ (ಎಲ್‌ಇಟಿ) ಸಂಘಟನೆಯ ಐವರು ಉಗ್ರರು ಹತರಾಗಿದ್ದು, ಯೋಧರೊಬ್ಬರು ಹುತಾತ್ಮರಾಗಿದ್ದಾರೆ.

ಜಿಲ್ಲೆಯ ರಾಜ್‌ಪೋರಾ ಪ್ರದೇಶದ ಹಂಜಿನ್ ಗ್ರಾಮದಲ್ಲಿ ಉಗ್ರರು ಅಡಗಿರುವ ಬಗ್ಗೆ ಮಾಹಿತಿ ಆಧರಿಸಿ ಭದ್ರತಾ ಪಡೆಗಳು ಶೋಧ ಕಾರ್ಯಾಚರಣೆ ನಡೆಸುತ್ತಿದ್ದಾಗ ಉಗ್ರರು ಭದ್ರತಾ ಪಡೆಯ ಮೇಲೆ ಗುಂಡಿನ ದಾಳಿ ನಡೆಸಿದ್ದಾರೆ.

ಪ್ರತಿ ದಾಳಿ ನಡೆಸಿದಾಗ ಮೂವರು ಉಗ್ರರು ಹತರಾಗಿದ್ದಾರೆ.

ಗುಂಡಿನ ಚಕಮಕಿಯಲ್ಲಿ ಸೈನಿಕರೊಬ್ಬರು ಗಾಯಗೊಂಡಿದ್ದಾರೆ. ಗಾಯಗೊಂಡಿದ್ದ ಯೋಧ ಚಿಕಿತ್ಸೆಗೆ ಸ್ಪಂದಿಸದೆ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಹತರಾದ ಉಗ್ರರಲ್ಲಿ ಎಲ್‌ಇಟಿಯ ಜಿಲ್ಲಾ ಕಮಾಂಡರ್ ನಿಶಾಜ್ ಲೋನ್ ಅಲಿಯಾಸ್ ಖಿತಾಬ್ ಕೂಡ ಇದ್ದಾನೆ ಎಂದು ಕಾಶ್ಮೀರದ ಐಜಿಪಿ ವಿಜಯ್ ಕುಮಾರ್ ತಿಳಿಸಿದ್ದಾರೆ.

ಹತರಾದ ಉಗ್ರರಲ್ಲಿ ಒಬ್ಬ ಪಾಕಿಸ್ತಾನದ ಮೂಲದವನಾಗಿದ್ದು, ಗುರುತು ಇನ್ನೂ ಪತ್ತೆಯಾಗಿಲ್ಲ.

ಉಗ್ರರ ವಿರುದ್ಧದ ಕಾರ್ಯಾಚರಣೆಯಲ್ಲಿ ಭದ್ರತಾ ಪಡೆಗೆ ದೊಡ್ಡ ಯಶಸ್ಸು ಸಿಕ್ಕಿದೆ ಎಂದು ಅವರು ಹೇಳಿದ್ದಾರೆ.

'ಸಣ್ಣ ಪಕ್ಷಗಳೊಂದಿಗೆ ಎಸ್‌ಪಿ ಮೈತ್ರಿ ಅಸಹಾಯಕತೆ ಸಂಕೇತ'



ಮಾಯಾವತಿ

ಲಖನೌ (ಪಿಟಿಐ): ಉತ್ತರ ಪ್ರದೇಶ ವಿಧಾನಸಭೆಗೆ ಮುಂದಿನ ವರ್ಷ ನಡೆಯಲಿರುವ ಚುನಾವಣೆಗಾಗಿ ಸಣ್ಣ-ಪಕ್ಷಗಳೊಂದಿಗೆ ಮೈತ್ರಿ ಮಾಡಿಕೊಳ್ಳುವ ಸಮಾಜವಾದಿ ಪಕ್ಷದ ನಿರ್ಧಾರ ಆ ಪಕ್ಷದ ಅಸಹಾಯಕತೆಯನ್ನು ತೋರಿಸುತ್ತದೆ ಎಂದು ಬಿಎಸ್‌ಪಿ ನಾಯಕಿ ಮಾಯಾವತಿ ಶುಕ್ರವಾರ ಹೇಳಿದ್ದಾರೆ.

ಮುಂದಿನ ವರ್ಷ ನಡೆಯಲಿರುವ ವಿಧಾನಸಭೆ ಚುನಾವಣೆಯಲ್ಲಿ ಯಾವ ಪ್ರಮುಖ ರಾಜಕೀಯ ಪಕ್ಷಗಳೊಂದಿಗೂ ಮೈತ್ರಿ ಮಾಡಿಕೊಳ್ಳುವುದಿಲ್ಲ ಎಂದು ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಇತ್ತೀಚೆಗೆ ಹೇಳಿದ್ದರು.

ಈ ಹಿಂದೆ ನಡೆದ ಚುನಾವಣೆಗಳಲ್ಲಿ ಪ್ರಮುಖ ರಾಜಕೀಯ ಪಕ್ಷಗಳು ಮೈತ್ರಿ ಸಾಧಿಸಿ, ಚುನಾವಣೆ ಎದುರಿಸಿದ್ದರೂ, ಯಾವ ಪಕ್ಷಕ್ಕೂ ನಿರೀಕ್ಷಿತ ಫಲಿತಾಂಶ ಸಿಕ್ಕಿರಲಿಲ್ಲ. ಈ ಕಹಿ ಅನುಭವದ ಕಾರಣದಿಂದಾಗಿ, ಪ್ರಮುಖ ಪಕ್ಷಗಳು ಮೈತ್ರಿ ಮಾಡಿಕೊಳ್ಳಲು ಹಿಂಜರಿಯುತ್ತಿವೆ ಎಂದು ವಿಶ್ಲೇಷಿಸಲಾಗುತ್ತಿದೆ.

ಕೋವಿಡ್ ಲಸಿಕೆ ಕೊರತೆ:ರಾಹುಲ್ ಗಾಂಧಿ ಪ್ರಶ್ನೆಗೆ ಬಿಜೆಪಿ ಕಟುಟೀಕೆ

ನವದೆಹಲಿ: 'ಜುಲೈ ತಿಂಗಳು ಆರಂಭವಾಗಿದೆ. ಆದರೆ, ಲಸಿಕೆಗಳು ಬಂದಿಲ್ಲ. ಲಸಿಕೆಗಳು ಎಲ್ಲಿವೆ' ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಪ್ರಶ್ನಿಸಿದ್ದಾರೆ.

ರಾಹುಲ್ ಪ್ರಶ್ನೆಗೆ ತಿರುಗೇಟು ನೀಡಿರುವ ಬಿಜೆಪಿ ಮುಖಂಡರು ಹಾಗೂ ಆರೋಗ್ಯ ಸಚಿವರು, ಅಂಕಿ-ಸಂಖ್ಯೆಗಳ ಸಮೇತ ವಿವರ ನೀಡಿದ್ದಾರೆ

'ಜುಲೈ ತಿಂಗಳು ಲಭ್ಯವಾಗುವ ಲಸಿಕೆ ಕುರಿತು ಖಚಿತ ಮಾಹಿತಿಯನ್ನು ಗುರುವಾರವೇ ನೀಡಿದ್ದೆ. ರಾಹುಲ್ ಗಾಂಧಿ ಅವರ ಸಮಸ್ಯೆ ಏನು? ಅವರು ಈ ಮಾಹಿತಿಯನ್ನು ಓದಿಲ್ಲವೇ? ಅಥವಾ ಅವರಿಗೆ ಇದು ಅರ್ಥವಾಗುವುದಿಲ್ಲವೇ? ಅಜ್ಞಾನಕ್ಕೆ ಯಾವುದೇ ಲಸಿಕೆ ಇಲ್ಲ' ಎಂದು ಕೇಂದ್ರ ಆರೋಗ್ಯ ಸಚಿವ ಹರ್ಷವರ್ಧನ್ ವ್ಯಂಗ್ಯವಾಡಿದ್ದಾರೆ.

'ಕಾಂಗ್ರೆಸ್ ನಾಯಕತ್ವದ ಬಗ್ಗೆ ಸಮಗ್ರವಾದ ಬದಲಾವಣೆ ಮಾಡಿಕೊಳ್ಳುವ ಬಗ್ಗೆ ಚಿಂತನೆ ಮಾಡಬೇಕು' ಎಂದು ಟ್ವೀಟ್ ಮಾಡಿದ್ದಾರೆ.

ರಾಹುಲ್ ಹೇಳಿಕೆ ಕುರಿತು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಬಿಜೆಪಿ ವಕ್ತಾರ ಗೌರವ್ ಭಾಟಿಯಾ 'ಜುಲೈ 1ರಂದು 41.60 ಲಕ್ಷ ಡೋಸ್‌ಗಳನ್ನು ನೀಡಲಾಗಿದೆ. ಜೂನ್ 21ರಿಂದ ಜುಲೈ 1ರವರೆಗೆ 6.85 ಕೋಟಿ ಲಸಿಕೆಗಳನ್ನು ನೀಡಲಾಗಿದೆ. ಅಂದರೆ ಸರಾಸರಿ ಪ್ರತಿ ದಿನ 62 ಲಕ್ಷ ಡೋಸ್‌ಗಳನ್ನು ನೀಡಲಾಗಿದೆ' ಎಂದು ವಿವರಿಸಿದ್ದಾರೆ.

'ಕಾಂಗ್ರೆಸ್ ನಾಯಕನಿಗೆ 51 ವರ್ಷಗಳಾಗಿವೆ. ಆದರೂ, ಪ್ರೌಢಿಮೆ, ಬುದ್ಧಿವಂತಿಕೆ ಮತ್ತು ಜವಾಬ್ದಾರಿಗಳು ಬಂದಿಲ್ಲವೇ ಎಂದು ಜನರು ಪ್ರಶ್ನಿಸುವಂತಾಗಿದೆ' ಎಂದು ರಾಹುಲ್ ಅವರನ್ನು ಟೀಕಿಸಿದ್ದಾರೆ

'ಲಸಿಕೆ: ಕಡಿಮೆಯಾದ ಮರಣದ ಆತಂಕ'

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್ ತಡೆ ಲಸಿಕೆಯ ಎರಡು ಡೋಸ್ ಪಡೆಯುವುದರಿಂದ ಮರಣ ಸಾಧ್ಯತೆಯ ಆತಂಕ ಬಹುತೇಕ ದೂರವಾಗಿದೆ ಎಂದು ನೀತಿ ಆಯೋಗದ ಸದಸ್ಯ ವಿನೋದ್ ಪಾಲ್ ತಿಳಿಸಿದ್ದಾರೆ.

ಎರಡೂ ಡೋಸ್ ಲಸಿಕೆ ಪಡೆದವರಲ್ಲಿ ಸಾವಿನ ಸಾಧ್ಯತೆ ಶೇ 98ರಷ್ಟು ಕಡಿಮೆಯಾಗಿರುವುದು ಪಂಜಾಬ್ ಪೊಲೀಸ್ ಸಿಬ್ಬಂದಿಯಲ್ಲಿ ಕಂಡುಬಂದಿದೆ ಎಂದು ಚಂಡೀಗಡ ಹಾಗೂ ಪಂಜಾಬ್ ಸರ್ಕಾರ ನಡೆಸಿದ ಅಧ್ಯಯನದಿಂದ ತಿಳಿದುಬಂದಿದ್ದಾಗಿ ಅವರು ಹೇಳಿದ್ದಾರೆ.

ಲಸಿಕೆಯ ಒಂದು ಡೋಸ್ ಮಾತ್ರ ಪಡೆದ 35,856 ಪೊಲೀಸರ ಪೈಕಿ 9 ಮಂದಿ ಮೃತಪಟ್ಟಿದ್ದರೆ, ಒಂದು ಡೋಸ್ ಕೂಡ ಪಡೆಯದ 4,868 ಸಿಬ್ಬಂದಿಯಪೈಕಿ, 15 ಮಂದಿ ಕೋವಿಡ್–19ನಿಂದ ಮೃತಪಟ್ಟಿದ್ದಾರೆ. ಎರಡೂ ಡೋಸ್ ಪಡೆದ 42,720 ಪೊಲೀಸ್ ಸಿಬ್ಬಂದಿಯ ಪೈಕಿ ಇಬ್ಬರು ಮಾತ್ರ ಮೃತಪಟ್ಟಿದ್ದಾಗಿ ಅಧ್ಯಯನದಿಂದ ತಿಳಿದುಬಂದಿದೆ ಎಂದು ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಅತ್ಯಾಚಾರ ಸಂತ್ರಸ್ತೆಯ ಹೆಸರು ಉಲ್ಲೇಖಿಸದಿರಿ: ಸುಪ್ರೀಂಕೋರ್ಟ್

ನವದೆಹಲಿ (ಪಿಟಿಐ): ಅತ್ಯಾಚಾರ ಪ್ರಕರಣವೊಂದರಲ್ಲಿ ಸಂತ್ರಸ್ತೆಯ ಹೆಸರನ್ನು ಉಲ್ಲೇಖಿಸಿ ಛತ್ತೀಸಗಡದ ಸೆಷನ್ಸ್ ನ್ಯಾಯಾಲಯವು ನೀಡಿರುವ ತೀರ್ಪನ್ನು ಗಮನಿಸಿರುವ ಸುಪ್ರೀಂ ಕೋರ್ಟ್, ಇಂಥ ವಿಷಯಗಳಲ್ಲಿ ತೀರ್ಪು ನೀಡುವಾಗ ಎಲ್ಲಾ ಅಧೀನ ನ್ಯಾಯಾಲಯಗಳು ಜಾಗರೂಕವಾಗಿರಬೇಕು ಎಂದು ಹೇಳಿದೆ.

ನ್ಯಾಯಮೂರ್ತಿಗಳಾದ ಅಶೋಕ್ ಭೂಷಣ್ ಅವರ ನೇತೃತ್ವದ ನ್ಯಾಯಪೀಠವು, 'ಅತ್ಯಾಚಾರದಂಥ ಪ್ರಕರಣಗಳಲ್ಲಿ ಸಂತ್ರಸ್ತೆಯ ಹೆಸರನ್ನು ವಿಚಾರಣೆಯ ಯಾವುದೇ ಹಂತದಲ್ಲೂ ಉಲ್ಲೇಖಿಸಬಾರದು' ಎಂದು ತಿಳಿಸಿದೆ.

'ಆದರೆ, ಛತ್ತೀಸಗಡದ ಸೆಷನ್ಸ್ ನ್ಯಾಯಾಲಯದ ತೀರ್ಪಿನಲ್ಲಿ ಸಂತ್ರಸ್ತೆಯ ಹೆಸರು ಉಲ್ಲೇಖಿಸಿರುವುದನ್ನು ಅಪವಾದವೆಂದು ನಾವು ಪರಿಗಣಿಸಲಾಗದು. ಭವಿಷ್ಯದಲ್ಲಿ ಇಂಥ ಪ್ರಕರಣಗಳಲ್ಲಿ ಅಧೀನ ನ್ಯಾಯಾಲಯಗಳು ಜಾಗರೂಕತೆಯಿಂದ ನಡೆದುಕೊಳ್ಳಬೇಕು' ಎಂದೂ ನ್ಯಾಯಮೂರ್ತಿಗಳಾದ ವಿನೀತ್ ಶರಣ್ ಮತ್ತು ಎಂ.ಆರ್. ಷಾ ಅವರನ್ನೊಳಗೊಂಡ ಪೀಠವು ಅಭಿಪ್ರಾಯಪಟ್ಟಿದೆ.

'ಅತ್ಯಾಚಾರ ಮತ್ತು ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಮತ್ತು ಇಂಥ ಪ್ರಕರಣಗಳಲ್ಲಿ ಮರಣ ಹೊಂದಿದ ಸಂತ್ರಸ್ತೆಯ ಹೆಸರು ಮತ್ತು ಗುರುತನ್ನು ಯಾವ ಹಂತದಲ್ಲೂ ಬಹಿರಂಗಪಡಿಸಲಾಗುವುದಿಲ್ಲ' ಎಂದು ಸುಪ್ರೀಂ ಕೋರ್ಟ್ 2018ರ ಡಿಸೆಂಬರ್‌ನಲ್ಲಿ ನೀಡಿದ ತೀರ್ಪಿನಲ್ಲಿ ತಿಳಿಸಿತ್ತು.

ನಟಿ ಯಾಮಿಗೆ ಇ.ಡಿ ನೋಟಿಸ್



ನವದೆಹಲಿ (ಪಿಟಿಐ): ವಿದೇಶಿ ವಿನಿಮಯ ಕಾನೂನಿಗೆ ಸಂಬಂಧಿಸಿದ ಫೆಮಾ (ಎಫ್‌ಇಎಂಎ) ಪ್ರಕರಣದಲ್ಲಿ ವಿಚಾರಣೆಗೆ ಹಾಜರಾಗುವಂತೆ ಬಹುಭಾಷಾ ನಟಿ ಯಾಮಿ ಗೌತಮ್ ಅವರಿಗೆ ಜಾರಿ ನಿರ್ದೇಶನಾಲಯ (ಇ.ಡಿ) ನೋಟಿಸ್ ಜಾರಿಗೊಳಿಸಿದೆ.

ಯಾಮಿ ಅವರ ಬ್ಯಾಂಕ್ ಖಾತೆಗೆ ₹ 1.5 ಕೋಟಿ ಜಮಾ ಆಗಿರುವುದಕ್ಕೆ ಸಂಬಂಧಿಸಿದ ಪ್ರಕರಣ ಇದಾಗಿದೆ.

'ಬಾಲ ನ್ಯಾಯ ಕಾಯ್ದೆ ಪರಿಪೂರ್ಣವಾಗಿಲ್ಲ'

ಇಂದೋರ್: ಬಾಲ ನ್ಯಾಯ ಕಾಯ್ದೆಯು (ಜೆಜೆ ಆ್ಯಕ್ಟ್) ಪರಿಪೂರ್ಣವಾಗಿಲ್ಲ. ಹೇಯ ಕೃತ್ಯಗಳನ್ನು ಕೈಗೊಳ್ಳಲು ಮುಕ್ತ ಅವಕಾಶ ನೀಡುತ್ತದೆ ಎಂದು ಮಧ್ಯಪ್ರದೇಶ ಹೈಕೋರ್ಟ್‌ನ ಇಂದೋರ್ ಪೀಠ ಹೇಳಿದೆ.

ಬಾಲಕಿ ಮೇಲೆ ಅತ್ಯಾಚಾರ ನಡೆದ ಪ್ರಕರಣದಲ್ಲಿ ಆರೋಪ ಎದುರಿಸುತ್ತಿದ್ದ ಬಾಲಕನೊಬ್ಬನಿಗೆ ಜಾಮೀನು ನೀಡಲು ನಿರಾಕರಿಸಿರುವ ಪೀಠವು, ಕಾಯ್ದೆಯಲ್ಲಿನ ಲೋಪ ದೋಷಗಳ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದೆ.

'ಈ ದೇಶದ ಶಾಸನ ರೂಪಿಸುವವರ ಆತ್ಮಸಾಕ್ಷಿಯನ್ನು ಜಾಗೃತಗೊಳಿಸಲು ಇನ್ನೂ ಎಷ್ಟು ನಿರ್ಭಯಾಗಳು ಬಲಿದಾನ ಮಾಡಬೇಕು' ಎಂದು ಪೀಠ ಪ್ರಶ್ನಿಸಿದೆ.

'ಈಗಿರುವ ಕಾಯ್ದೆಯು 16 ವರ್ಷದ ಒಳಗಿನವರಿಗೆ ಹೇಯ ದುಷ್ಕೃತ್ಯಗಳನ್ನು ಎಸಗಲು ಮುಕ್ತ ಅವಕಾಶ ನೀಡುತ್ತದೆ. ದೆಹಲಿಯಲ್ಲಿ ನಿರ್ಭಯಾ ಪ್ರಕರಣದಿಂದ ಶಾಸಕಾಂಗ ಯಾವುದೇ ಪಾಠಗಳನ್ನು ಕಲಿತಿಲ್ಲ ಎನ್ನುವುದನ್ನು ತಿಳಿದು ಈ ನ್ಯಾಯಾಲಯಕ್ಕೆ ನೋವಾಗಿದೆ' ಎಂದು ನ್ಯಾಯಮೂರ್ತಿ ಸುಬೋಧ ಅಭ್ಯಾಂಕರ್ ಅವರು ಹೇಳಿದರು.

ಲಂಚ: ಇ.ಡಿ ಅಧಿಕಾರಿಗಳ ಸೆರೆ

ನವದೆಹಲಿ (ಪಿಟಿಐ): ಗುಜರಾತ್‌ನಲ್ಲಿ ಭಾರತೀಯ ಕಂದಾಯ ಸೇವೆ (ಐಆರ್‌ಎಸ್) ಉಪ ನಿರ್ದೇಶಕ ಸೇರಿ ಜಾರಿ ನಿರ್ದೇಶನಾಲಯದ (ಇ.ಡಿ) ಇಬ್ಬರು ಅಧಿಕಾರಿಗಳನ್ನು ಲಂಚ ಪಡೆಯುತ್ತಿದ್ದಾಗ ಸಿಬಿಐ ಶುಕ್ರವಾರ ಬಂಧಿಸಿದೆ. 2013ರ ಬ್ಯಾಚ್‌ನ ಐಆರ್‌ಎಸ್ ಅಧಿಕಾರಿ ಮತ್ತು ಇ.ಡಿ ಸಹಾಯಕ ನಿರ್ದೇಶಕ ಕಂಪನಿಯೊಂದರಿಂದ ₹75 ಲಕ್ಷ ಲಂಚ ಕೇಳಿದ್ದರು. ₹5 ಲಕ್ಷ ಪಡೆಯುವಾಗ ಸಿಬಿಐ ಬೀಸಿದ ಬಲೆಗೆ ಬಿದ್ದಿದ್ದಾರೆ.

ಸುವೇಂದು ಅಧಿಕಾರಿಯೊಂದಿಗೆ ಭೇಟಿ ಆರೋಪ

ಎಸ್‌ಜಿ ಹುದ್ದೆಯಿಂದ ತುಷಾರ್ ಕೈಬಿಡಲು ಪ್ರಧಾನಿಗೆ ಪತ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರನ್ನು ಹುದ್ದೆಯಿಂದ ಕೈಬಿಡಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ತೃಣಮೂಲ ಕಾಂಗ್ರೆಸ್‌ನ (ಟಿಎಂಸಿ) ಮೂವರು ಸಂಸದರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಆಗ್ರಹಿಸಿದ್ದಾರೆ.

ನಾರದಾ ಹಾಗೂ ಶ್ರದ್ಧಾ ಚಿಟ್ ಫಂಡ್ ಹಗರಣದಲ್ಲಿ ವಿಚಾರಣೆ ಎದುರಿಸುತ್ತಿರುವ ಪಶ್ಚಿಮ ಬಂಗಾಳ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸುವೇಂದು ಅಧಿಕಾರಿ ಅವರನ್ನು ತುಷಾರ್ ಮೆಹ್ತಾ ಅವರು ಭೇಟಿ ಮಾಡಿದ್ದಾರೆ ಎನ್ನಲಾಗಿದ್ದು, ಈ ನಡೆಯನ್ನು ಟಿಎಂಸಿ ಸಂಸದರಾದ ಡೆರೆಕ್ ಒಬ್ರಿಯನ್, ಸುಖೇಂದು ಶೇಖರ್ ರಾಯ್ ಹಾಗೂ ಮಹುವಾ ಮೊಯಿತ್ರಾ ಪ್ರಶ್ನಿಸಿದ್ದಾರೆ.

ಸುವೇಂದು ಅವರು ವಿವಿಧ ಅಪರಾಧ ಪ್ರಕರಣಗಳಲ್ಲಿ ಆರೋಪಿಯಾಗಿದ್ದು, ಭ್ರಷ್ಟಾಚಾರ ಹಾಗೂ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾದ ಆರೋಪ ಎದುರಿಸುತ್ತಿದ್ದಾರೆ. ಅಂಥವರೊಂದಿಗಿನ ಸಾಲಿಸಿಟರ್ ಜನರಲ್ ಭೇಟಿಯು ಆ ಹುದ್ದೆಯ ಶಾಸನಬದ್ಧ ಕರ್ತವ್ಯ ಹಾಗೂ ಹಿತಾಸಕ್ತಿಗಳ ನಡುವಿನ ಸಂಘರ್ಷಕ್ಕೆ ಕಾರಣವಾಗುತ್ತದೆ ಎಂದು ಪ್ರಧಾನಿಗೆ ಬರೆದ ಜಂಟಿ ಪತ್ರದಲ್ಲಿ ಕಳವಳ ವ್ಯಕ್ತಪಡಿಸಿದ್ದಾರೆ.

ಮೆಹ್ತಾ ಅವರ ನಡೆ ಅಸಮರ್ಪಕವಷ್ಟೇ ಅಲ್ಲ; ಅದು ಸಾಲಿಸಿಟರ್ ಜನರಲ್ ಹುದ್ದೆಗೂ ಕಳಂಕ ತರುವಂಥದು ಎಂದು ಆರೋಪಿಸಿದ್ದಾರೆ.

ಆದರೆ, ಗುರುವಾರ ಮಧ್ಯಾಹ್ನ 3 ಗಂಟೆಗೆ ತಮ್ಮ ಗೃಹಕಚೇರಿಗೆ ಸುವೇಂದು ಅಧಿಕಾರಿ ಬಂದಿದ್ದನ್ನು ಒಪ್ಪಿಕೊಂಡಿರುವ ಮೆಹ್ತಾ, ಅವರೊಂದಿಗಿನ ಭೇಟಿಯನ್ನು ಅಲ್ಲಗಳೆದಿದ್ದಾರೆ.

'ಆ ವೇಳೆ, ನನ್ನ ಕಚೇರಿಯಲ್ಲಿ ಪೂರ್ವನಿಗದಿಯಾದ ಸಭೆಯಲ್ಲಿ ನಾನು ಭಾಗವಹಿಸಿದ್ದರಿಂದ, ಸುವೇಂದು ಅವರಿಗೆ ನನ್ನ ಕಚೇರಿಯಲ್ಲಿಯೇ ಕಾಯುವಂತೆ ಸಿಬ್ಬಂದಿಯು ತಿಳಿಸಿದ್ದಾರೆ.

ಸಭೆ ಮುಗಿದ ಮೇಲೆ ನನ್ನ ಸಹಾಯಕ, ಸುವೇಂದು ಬಂದಿರುವ ಮಾಹಿತಿ ನೀಡಿದರು. ಅವರನ್ನು ಭೇಟಿ ಮಾಡಲು ಸಾಧ್ಯವಾಗದು ಹಾಗೂ ಕಾಯಬೇಕಾಗಿ ಬಂದಿದ್ದಕ್ಕೆ ವಿಷಾದ ವ್ಯಕ್ತಪಡಿಸಿದ್ದಾಗಿಯೂ ತಿಳಿಸುವಂತೆ ಅವರಿಗೆ ತಿಳಿಸಿದೆ. ಸುವೇಂದು ನನ್ನನ್ನು ಭೇಟಿಯಾಗದೇ ಅಲ್ಲಿಂದ ತೆರಳಿದ್ದಾರೆ' ಎಂದು ಮೆಹ್ತಾ ಹೇಳಿದ್ದಾರೆ.

ವಿಂಬಲ್ಡನ್: 75ನೇ ಜಯದೊಂದಿಗೆ 4ನೇ ಸುತ್ತು ಪ್ರವೇಶಿಸಿದ ನೊವಾಕ್


ಪ್ಲಿಸ್ಕೋವ, ಸ್ವೆಟೆಕ್ 16ರ ಘಟ್ಟಕ್ಕೆ

ಲಂಡನ್ (ರಾಯಿಟರ್ಸ್): ಎಂಟನೇ ಶ್ರೇಯಾಂಕಿತೆ, ಜೆಕ್ ಗಣರಾಜ್ಯದ ಕರೋಲಿನಾ ಪ್ಲಿಸ್ಕೋವ ಅವರು ವಿಂಬಲ್ಡನ್ ಟೆನಿಸ್ ಟೂರ್ನಿಯ ಪ್ರೀ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಶುಕ್ರವಾರ ನಡೆದ ಮೂರನೇ ಸುತ್ತಿನ ಪಂದ್ಯದಲ್ಲಿ ಅವರು ತಮ್ಮದೇ ದೇಶದ ತೆರೆಸಾ ಮಾರ್ಟಿಂಕೋವಾ ವಿರುದ್ಧ 6-3, 6-3ರಲ್ಲಿ ಜಯ ಗಳಿಸಿದರು.

ಸರ್ಬಿಯಾದ ನೊವಾಕ್ ಜೊಕೊವಿಚ್ 6-4 6-3 7-6(7)ರಲ್ಲಿ ಅಮೆರಿಕದ ಡೆನಿಸ್ ಕುಡ್ಲ ಎದುರು ಜಯ ಗಳಿಸಿ ನಾಲ್ಕನೇ ಸುತ್ತು ಪ್ರವೇಶಿಸಿದರು. ಇದು ವಿಂಬಲ್ಡನ್‌ನಲ್ಲಿ ಅವರ 75ನೇ ಜಯವಾಗಿತ್ತು.

2019ರ ಅಮೆರಿಕ ಓಪನ್ ಟೂರ್ನಿಯ ಮೊದಲ ಸುತ್ತಿನಲ್ಲಿ ಸೆಣಸಿದ ನಂತರ ಇದೇ ಮೊದಲ ಬಾರಿ ಪ್ಲಿಸ್ಕೋವ ಮತ್ತು ತೆರೆಸಾ ಮುಖಾಮುಖಿಯಾಗಿದ್ದರು.

ಮತ್ತೊಂದು ಪಂದ್ಯದಲ್ಲಿ ಪೋಲೆಂಡ್‌ನ ಇಗಾ ಸ್ವೆಟೆಕ್ ರೊಮೇನಿಯಾದ ಐರಿನಾ ಕ್ಯಾಮಲಿನಾ ಬೇಗು ವಿರುದ್ಧ ಭರ್ಜರಿ ಜಯ ಗಳಿಸಿ 16ರ ಸುತ್ತು ಪ್ರವೇಶಿಸಿದರು. ಫ್ರೆಂಚ್ ಓಪನ್ ಟೂರ್ನಿಯ ಮಾಜಿ ಚಾಂಪಿಯನ್ ಸ್ವೆಟೆಕ್ 6-1, 6-0ರಲ್ಲಿ ಬೇಗು ಅವರನ್ನು ಮಣಿಸಿದರು. ಎರಡನೇ ಶ್ರೇಯಾಂಕಿತೆ ಬೆಲಾರಸ್‌ನ ಅರಿನಾ ಸಬಲೆಂಕಾ 6-0, 6-3ರಲ್ಲಿ ಕೊಲಂಬಿಯಾದ ಮರಿಯಾ ಕಮಿಲಾ ಒಜೋರಿಯೊ ಸೆರಾನೊ ವಿರುದ್ಧ ಗೆದ್ದು ವಿಂಬಲ್ಡನ್ ಟೂರ್ನಿಯಲ್ಲಿ ಮೊದಲ ಬಾರಿ ನಾಲ್ಕನೇ ಸುತ್ತು ಪ್ರವೇಶಿಸಿದರು.


ಕರೋಲಿನಾ ಪ್ಲಿಸ್ಕೋವ –ಪಿಟಿಐ ಚಿತ್ರ

ಮೂರನೇ ಸುತ್ತಿನ ಫಲಿತಾಂಶಗಳು: ಪುರುಷರು: ಚೀನಾದ ಕ್ರಿಸ್ಟಿಯನ್ ಗರಿನ್‌ಗೆ ಸ್ಪೇನ್‌ನ ಪೆಡ್ರೊ ಮಾರ್ಟಿನೆಜ್ ವಿರುದ್ಧ 6-4, 6-3, 4-6, 6-4ರಲ್ಲಿ ಜಯ; ರಷ್ಯಾದ ಆ್ಯಂಡ್ರೆ ರುಬ್ಲೆವ್‌ಗೆ ಇಟಲಿಯ ಫ್ಯಾಬಿಯೊ ಫಾಗ್ನಿನಿ ವಿರುದ್ಧ 6-3, 5-7, 6-4, 6-2ರಲ್ಲಿ ಜಯ; ರಷ್ಯಾದ ಕರೇನ್ ಖಚನೊವ್‌ಗೆ ಅಮೆರಿಕದ ಫ್ರಾನ್ಸಸ್ ಟಿಯಾಫೊ ವಿರುದ್ಧ 6-3, 6-4, 6-4ರಲ್ಲಿ ಗೆಲುವು. **ಮಹಿಳೆಯರ ವಿಭಾಗ:** ಜೆಕ್ ಗಣರಾಜ್ಯದ ಕರೋಲಿನಾ ಪ್ಲಿಸ್ಕೋವಾಗೆ ಜೆಕ್ ಗಣರಾಜ್ಯದ ತೆರೆಜಾ ಮಾರ್ಟಿಂಕೋವಾ ವಿರುದ್ಧ 6-3, 6-3ರಲ್ಲಿ ಜಯ; ರಷ್ಯಾದ ಲೂಡ್ಮಿಲಾ ಸಂಸೊನೊವಾಗೆ ಅಮೆರಿಕದ ಸ್ಲಾನೆ ಸ್ಟೀಫನ್ಸ್ ವಿರುದ್ಧ 6-2, 2-6, 6-4ರಲ್ಲಿ ಗೆಲುವು; ಪೋಲೆಂಡ್‌ನ ಇಗಾ ಸ್ವೆಟೆಕ್‌ಗೆ ರೊಮೇನಿಯಾದ ಐರಿನಾ ಕ್ಯಾಮೆಲಿನಾ ಬೇಗು ವಿರುದ್ಧ 6-1, 6-0ರಲ್ಲಿ ಜಯ; ಕಜಕಸ್ತಾನದ ಎಲೆನಾ ರೈಬಕಿನಾಗೆ ಅಮೆರಿಕಾದ ಶೆಲ್ಬಿ ರೋಜರ್ಸ್ ವಿರುದ್ಧ 6-1, 6-4ರಲ್ಲಿ ಜಯ; ಬೆಲಾರಸ್‌ನ ಅರಿನಾ ಸಬಲೆಂಕಾಗೆ ಕೊಲಂಬಿಯಾದ ಮರಿಯಾ ಕಮಿಲಾ ಒಸೊರೊ ವಿರುದ್ಧ 6-0, 6-3ರಲ್ಲಿ ಗೆಲುವು.

ಬೋಪಣ್ಣ–ಸಾನಿಯಾಗೆ ಗೆಲುವು

ಮಿಶ್ರ ಡಬಲ್ಸ್ ವಿಭಾಗದಲ್ಲಿ ಭಾರತದ ರೋಹನ್ ಬೋಪಣ್ಣ ಮತ್ತು ಸಾನಿಯಾ ಮಿರ್ಜಾ ಜೋಡಿ ಭಾರತದ ಮತ್ತೊಂದು ಜೋಡಿ ರಾಮ್‌ಕುಮಾರ್ ರಾಮನಾಥನ್ ಮತ್ತು ಅಂಕಿತಾ ರೈನಾ ವಿರುದ್ಧ ಜಯ ಗಳಿಸಿದರು. ಭಾರತದ ಜೋಡಿಗಳ ಈ ಐತಿಹಾಸಿಕ ಹೋರಾಟದಲ್ಲಿ ಬೋಪಣ್ಣ–ಮಿರ್ಜಾ 6-2 7-6 (5)ರಲ್ಲಿ ಗೆಲುವು ಸಾಧಿಸಿದರು. ಗ್ರ್ಯಾನ್‌ಸ್ಲಾಂ ಟೂರ್ನಿಯೊಂದಲ್ಲಿ ಭಾರತದ ಎರಡು ತಂಡಗಳು ಪರಸ್ಪರ ಸೆಣಸಿದ್ದು ಇದೇ ಮೊದಲು. ರಾಮ್‌ಕುಮಾರ್ ಅವರಿಗೆ ಗ್ರ್ಯಾನ್‌ಸ್ಲಾಂನಲ್ಲಿ ಇದು ಪದಾರ್ಪಣೆ ಪಂದ್ಯವೂ ಆಗಿತ್ತು. ಮೊದಲ ಸೆಟ್‌ನಲ್ಲಿ ರೋಹಮ್ ಮತ್ತು ಸಾನಿಯಾ ಸುಲಭ ಜಯ ಸಾಧಿಸಿದರು. ಆದರೆ ಎರಡನೇ ಸೆಟ್‌ನಲ್ಲಿ ರಾಮ್‌ಕುಮಾರ್–ಅಂಕಿತಾ ಜೋಡಿ ಪ್ರಬಲ ಪೈಪೋಟಿ ನೀಡಿದರು. ಆದರೂ ಕೊನೆಗೆ ಜಯ ಅನುಭವಿ ಜೋಡಿಗೆ ಒಲಿಯಿತು.


ರೋಹನ್ ಬೋಪಣ್ಣ

'ಅಭಿಮನ್ಯು ದಾಖಲೆಗೆ ಅರ್ಹ'

ಚೆನ್ನೈ (ಪಿಟಿಐ): ವಿಶ್ವದ ಅತಿ ಕಿರಿಯ ವಯಸ್ಸಿನ ಗ್ರ್ಯಾಂಡ್ ಮಾಸ್ಟರ್ ಎಂಬ ಹೆಗ್ಗಳಿಕೆಗೆ ಪಾತ್ರರಾಗಿರುವ ಭಾರತ ಮೂಲದ ಅಮೆರಿಕ ಆಟಗಾರ ಅಭಿಮನ್ಯು ಮಿಶ್ರಾ ದಾಖಲೆಗೆ ಅರ್ಹ ಎಂದು ಅವರ ಕೋಚ್‌ಗಳು ಅಭಿಪ್ರಾಯಪಟ್ಟಿದ್ದಾರೆ. ಚೆಸ್ ಕ್ರೀಡೆಯಲ್ಲಿ ಅವರು ಇನ್ನಷ್ಟು ಎತ್ತರದ ಸಾಧನೆ ಮಾಡಲಿದ್ದಾರೆ ಎಂಬ ಭರವಸೆಯನ್ನೂ ವ್ಯಕ್ತಪಡಿದ್ದಾರೆ.


ಅಭಿಮನ್ಯು – ಟ್ವಿಟರ್ ಚಿತ್ರ

ಅಮೆರಿಕದ ನ್ಯೂಜರ್ಸಿಯ ಪ್ರತಿಭೆ ಅಭಿಮನ್ಯು ಹಂಗರಿಯ ಬುಡಾಪೆಸ್ಟ್‌ನಲ್ಲಿ ಬುಧವಾರ ನಡೆದ ವರ್ಝುರ್‌ಕೆಪ್ಜೊ ಗ್ರ್ಯಾಂಡ್‌ಮಾಸ್ಟರ್ಸ್ ಮಿಶ್ರ ಚೆಸ್ ಟೂರ್ನಿಯ ಒಂಬತ್ತನೇ ಸುತ್ತಿನಲ್ಲಿ ಗೆಲ್ಲುವ ಮೂಲಕ ವಿಶ್ವದಾಖಲೆ ಬರೆದಿದ್ದರು. 12 ವರ್ಷ, 4 ತಿಂಗಳು, 25 ದಿನದ ವಯಸ್ಸಿನಲ್ಲಿ ಅವರು ಜಿಎಂ ಪಟ್ಟಕ್ಕೇರಿದ್ದರು. ವಿಶ್ವದ ಅತಿ ಕಿರಿಯ ಗ್ರ್ಯಾಂಡ್‌ಮಾಸ್ಟರ್ ಎಂಬ ಗೌರವ ರಷ್ಯಾದ ಸೆರ್ಗಿ ಅಲೆಕ್ಸಾಂಡರ್ ಕರ್ಯಾಕಿನ್ ಹೆಸರಿನಲ್ಲಿತ್ತು. ಅವರು 12 ವರ್ಷ 7 ತಿಂಗಳಲ್ಲಿ ಜಿಎಂ ಆಗಿದ್ದರು.

ಕೋಚ್‌ಗಳಾದ ಗ್ರ್ಯಾಂಡ್ ಮಾಸ್ಟರ್ ಅರುಣ್ ಪ್ರಸಾದ್, ಗ್ರ್ಯಾಂಡ್ ಮಾಸ್ಟರ್ ಮಹೇಶ್ ಪಂಚನಾಥನ್ ಮತ್ತು ಆರ್. ಬಿ.ರಮೇಶ್ ಶಹಬ್ಬಾಸ್‌ಗಿರಿ ಹೇಳಿದ್ದಾರೆ.

ಕ್ರಿಕೆಟ್: ಮಿಥಾಲಿ ರಾಜ್ ಬಳಗಕ್ಕೆ ಗೆಲುವಿನ ಗುರಿ

ವೂಸ್ಟರ್ (ಪಿಟಿಐ): ಕತ್ತುನೋವಿನಿಂದ ಚೇತರಿಸಿಕೊಂಡಿರುವ ಭಾರತ ಮಹಿಳಾ ಕ್ರಿಕೆಟ್ ತಂಡದ ನಾಯಕಿ ಮಿಥಾಲಿ ರಾಜ್ ಶನಿವಾರ ನಡೆಯಲಿರುವ ಇಂಗ್ಲೆಂಡ್ ಎದುರಿನ ಕೊನೆಯ ಏಕದಿನ ಪಂದ್ಯದಲ್ಲಿ ಸಮಾಧಾನಕರ ಗೆಲುವಿನ ಕನಸಿನೊಂದಿಗೆ ಕಣಕ್ಕಿಳಿಯಲಿದ್ದಾರೆ.

ಮೂರು ಪಂದ್ಯಗಳ ಸರಣಿಯಲ್ಲಿ ಭಾರತ ತಂಡವು ಎರಡೂ ಪಂದ್ಯಗಳಲ್ಲಿ ಸೋತಿದೆ. ಎರಡೂ ಪಂದ್ಯಗಳಲ್ಲಿ ಮೊದಲು ಬ್ಯಾಟಿಂಗ್ ಮಾಡಿದ್ದ ತಂಡವು ದ್ವಿಶತಕದ ಗಡಿ ದಾಟಲು ನಾಯಕಿ ಮಿಥಾಲಿಯ ಅರ್ಧಶತಕಗಳು ನೆರವಾಗಿದ್ದವು.

ಹರ್ಮನ್ ಪ್ರೀತ್ ಕೌರ್, ಜೆಮಿಮಾ ರಾಡ್ರಿಗಸ್ ಮತ್ತು ಸ್ಮೃತಿ ಮಂದಾನ ಅವರು ಸಾಮರ್ಥ್ಯಕ್ಕೆ ತಕ್ಕಂತೆ ಬ್ಯಾಟಿಂಗ್ ಮಾಡದಿರುವ ಕಾರಣ ದೊಡ್ಡ ಮೊತ್ತ ಪೇರಿಸುವುದು ಸಾಧ್ಯವಾಗಿರಲಿಲ್ಲ.

ನವಪ್ರತಿಭೆ ಶಫಾಲಿ ವರ್ಮಾ ಎರಡನೇ ಪಂದ್ಯದಲ್ಲಿ ಅರ್ಧಶತಕದ ಸಮೀಪ ಎಡವಿದ್ದರು. ಆ ಪಂದ್ಯದಲ್ಲಿ ಇಂಗ್ಲೆಂಡ್‌ನ ಮಧ್ಯಮ ಕ್ರಮಾಂಕದ ಬ್ಯಾಟರ್ ಸೋಫಿಯಾ ಡಂಕ್ಲಿ ಅವರನ್ನು ಕಟ್ಟಿಹಾಕುವಲ್ಲಿ ಭಾರತದ ಬೌಲರ್‌ಗಳು ವಿಫಲರಾಗಿದ್ದರು.


ಶಫಾಲಿ ವರ್ಮಾ –ಪಿಟಿಐ ಚಿತ್ರ

ಜೂಲನ್ ಗೋಸ್ವಾಮಿ ಆ ಪಂದ್ಯದಲ್ಲಿ ಬ್ಯಾಟಿಂಗ್‌ನಲ್ಲಿ ಮಹತ್ವದ ಕಾಣಿಕೆ ನೀಡಿದ್ದರು. ಇದೀಗ ಕೊನೆಯ ಪಂದ್ಯದಲ್ಲಿ ಸಮಾಧಾನಕರ ಜಯದ ಗುರಿಯೊಂದಿಗೆ ಮಿಥಾಲಿ ಬಳಗ ಕಣಕ್ಕಿಳಿಯಲಿದೆ.

ಪಂದ್ಯ ಆರಂಭ: ಮಧ್ಯಾಹ್ನ 3.30

ಸುಮಿತ್‌ಗೆ ನಿಷೇಧ ಶಿಕ್ಷೆ

ನವದೆಹಲಿ (ಪಿಟಿಐ): ನಿಷೇಧಿತ ಉದ್ದೀಪನ ಮದ್ದು ಸೇವಿಸಿದ್ದು ಸಾಬೀತಾದ ಕಾರಣ ಭಾರತದ ಕುಸ್ತಿಪಟು ಸುಮಿತ್ ಮಲಿಕ್ ಅವರ ಮೇಲೆ ಯುನೈಟೆಡ್ ವರ್ಲ್ಡ್ ರೆಸ್ಲಿಂಗ್ (ಯುಡಬ್ಲ್ಯುಡಬ್ಲ್ಯು) ಎರಡು ವರ್ಷಗಳ ನಿಷೇಧ ಹೇರಿದೆ. ಹೀಗಾಗಿ ಸುಮಿತ್ ಅವರ ಒಲಿಂಪಿಕ್ಸ್ ಕನಸು ಭಗ್ನಗೊಂಡಿದೆ.

28 ವರ್ಷ ವಯಸ್ಸಿನ ಸುಮಿತ್ ಅವರಿಗೆ ನಿಷೇಧ ತೀರ್ಪನ್ನು ಒಪ್ಪಿಕೊಳ್ಳಲು ಅಥವಾ ಮೇಲ್ಮನವಿ ಸಲ್ಲಿಸಲು ಒಂದು ವಾರದ ಅವಕಾಶ ನೀಡಲಾಗಿದೆ.

ಕಳೆದ ತಿಂಗಳು ಸೋಫಿಯಾದಲ್ಲಿ ನಡೆದ ಒಲಿಂಪಿಕ್ಸ್ ಅರ್ಹತಾ ಟೂರ್ನಿಯ ಸಂದರ್ಭದಲ್ಲಿ ಉದ್ದೀಪನ ಮದ್ದು ಸೇವನೆ ಮಾಡಿದ್ದ ಕಾರಣ ಸಮಿತ್ ಮೇಲೆ ತಾತ್ಕಾಲಿಕ ನಿಷೇಧ ಹೇರಲಾಗಿತ್ತು. ಅವರ 'ಬಿ' ಮಾದರಿಯ ಪರೀಕ್ಷಾ ವರದಿ ಜೂನ್ 30ರಂದು ಬಂದಿದ್ದು ಫಲಿತಾಂಶದಲ್ಲಿ ಯಾವುದೇ ವ್ಯತ್ಯಾಸ ಇರಲಿಲ್ಲ ಎನ್ನಲಾಗಿದೆ.

ಒಲಿಂಪಿಕ್ಸ್‌ಗೆ ಮಾನಾ ಪಟೇಲ್

ನವದೆಹಲಿ (ಪಿಟಿಐ): ಭಾರತದ ಈಜುಗಾರ್ತಿ ಮಾನಾ ಪಟೇಲ್ ಅವರು ಟೋಕಿಯೊ ಒಲಿಂಪಿಕ್ಸ್‌ಗೆ ಆಯ್ಕೆಯಾಗಿದ್ದಾರೆ. ಅವರು 'ಸಾರ್ವತ್ರಿಕ ಕೋಟಾ'ದಲ್ಲಿ ಆಯ್ಕೆಯಾಗಿದ್ದಾರೆ ಎಂದು ಭಾರತ ಈಜು ಸಂಸ್ಥೆ (ಎಸ್‌ಎಫ್‌ಐ) ತಿಳಿಸಿದೆ.

ಅವರು ಟೋಕಿಯೊ ಒಲಿಂಪಿಕ್ಸ್‌ಗೆ ಆಯ್ಕೆಯಾದ ಭಾರತದ ಮೂರನೇ ಹಾಗೂ ಮಹಿಳಾ ವಿಭಾಗದ ಮೊದಲ ಈಜುಪಟುವಾಗಿದ್ದಾರೆ. ಈಗಾಗಲೇ ಪುರುಷರ ವಿಭಾಗದಲ್ಲಿ ಸಾಜನ್ ಪ್ರಕಾಶ್ ಮತ್ತು ಕನ್ನಡಿಗ ಶ್ರೀಹರಿ ನಟರಾಜ್ ಅವರು 'ಎ' ಅರ್ಹತೆ ಗಳಿಸಿ ಆಯ್ಕೆಯಾಗಿದ್ದರು.

ಮಾನಾ ಅವರು 100 ಮೀಟರ್ಸ್ ಬ್ಯಾಕ್‌ಸ್ಟ್ರೋಕ್ ಸ್ಪರ್ಧೆಯಲ್ಲಿ ಭಾಗವಹಿಸುವರು. ಸಾರ್ವತ್ರಿಕ ಕೋಟಾದಲ್ಲಿ ಒಬ್ಬ ಪುರುಷ ಮತ್ತು ಒಬ್ಬರು ಮಹಿಳಾ ಈಜುಪಟುವನ್ನು ಆಯ್ಕೆ ಮಾಡುವ ಅವಕಾಶ ಇರುತ್ತದೆ.



ಮಾನಾ 2019ರಲ್ಲಿ ಹಿಮ್ಮಡಿಯ ಗಾಯದಿಂದ ಬಳಲಿದ್ದರು. ಅದಾದ ನಂತರ ಈ ವರ್ಷವಷ್ಟೇ ಅವರು ಈಜು ಸ್ಪರ್ಧೆಗಳಿಗೆ ಮರಳಿದ್ದರು.

ಮಾರಿಯಪ್ಪನ್ ಭಾರತದ ಧ್ವಜಧಾರಿ

ಪ್ಯಾರಾಲಿಂಪಿಕ್ಸ್: ಚಿನ್ನ ಗೆದ್ದ ಕ್ರೀಡಾಪಟುವಿಗೆ ಸಂದ ಗೌರವ

ನವದೆಹಲಿ(ಪಿಟಿಐ): ರಿಯೊ ಪ್ಯಾರಾಲಿಂಪಿಕ್ಸ್ ಪದಕ ವಿಜೇತ ಮಾರಿಯಪ್ಪನ್ ತಂಗವೇಲು ಅವರು ಟೋಕಿಯೊ ಪ್ಯಾರಾಲಿಂಪಿಕ್ಸ್‌ನ ಉದ್ಘಾಟನಾ ಸಮಾರಂಭದ ಪಥ ಸಂಚಲನದಲ್ಲಿ ತ್ರಿವರ್ಣ ಧ್ವಜ ಹಿಡಿದು ಭಾರತ ತಂಡವನ್ನು ಮುನ್ನಡೆಸಲಿದ್ದಾರೆ.

ಆಗಸ್ಟ್ 24ರಿಂದ ಸೆಪ್ಟೆಂಬರ್ ಐದರವರೆಗೆ ಪ್ಯಾರಾಲಿಂಪಿಕ್ಸ್ ಆಯೋಜನೆಗೊಂಡಿದೆ. 2016ರ ಪ್ಯಾರಾಲಿಂಪಿಕ್ಸ್ ಕೂಟದಲ್ಲಿ ತಂಗವೇಲು ಚಿನ್ನದ ಪದಕ (ಹೈಜಂಪ್ ಟಿ-42 ವಿಭಾಗ) ಗೆದ್ದಿದ್ದರು.

'ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ ಮಾರಿಯಪ್ಪನ್ ತಂಗವೇಲು, ಭಾರತದ ಧ್ವಜಧಾರಿಯಾಗಲಿದ್ದಾರೆ. ಭಾರತೀಯ ಪ್ಯಾರಾಲಿಂಪಿಕ್ಸ್ ಸಮಿತಿ (ಪಿಸಿಐ) ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ' ಎಂದು ಪ್ಯಾರಾ ಅಥ್ಲೆಟಿಕ್ಸ್ ಸಂಸ್ಥೆಯ ಮುಖ್ಯಸ್ಥ ಆರ್. ಸತ್ಯನಾರಾಯಣ ತಿಳಿಸಿದ್ದಾರೆ.


ಮಾರಿಯಪ್ಪನ್

ತಮಿಳುನಾಡಿನ 25 ವರ್ಷದ ತಂಗವೇಲು ಅವರಿಗೆ ಹೋದ ಬಾರಿ ರಾಜೀವಗಾಂಧಿ ಖೇಲ್ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಗಿತ್ತು. ಈಗ ಟೋಕಿಯೊ ಪ್ಯಾರಾಲಿಪಿಕ್ಸ್‌ನಲ್ಲಿ ಭಾರತದ 24 ಪ್ಯಾರಾ ಅಥ್ಲೀಟ್‌ಗಳು ಸ್ಪರ್ಧಿಸಲಿದ್ದಾರೆ. ಅದರಲ್ಲಿ ನಾಲ್ವರು ಮಹಿಳಾ ಅಥ್ಲೀಟ್‌ಗಳಿದ್ದಾರೆ.

ಜೂನ್ 29 ಹಾಗೂ 30ರಂದು ನಡೆದ ಆಯ್ಕೆ ಟ್ರಯಲ್ಸ್‌ನಲ್ಲಿ 18 ಮಹಿಳಾ ಕ್ರೀಡಾಪಟುಗಳು ಸೇರಿದಂತೆ ಒಟ್ಟು 72 ಮಂದಿ ಭಾಗವಹಿಸಿದ್ದರು. 2019ರಲ್ಲಿ ದುಬೈನಲ್ಲಿ ನಡೆದ ಐಪಿಸಿ ವಿಶ್ವ ಪ್ಯಾರಾ ಅಥ್ಲೆಟಿಕ್ಸ್‌ನಲ್ಲಿ ಹೈಜಂಪ್ ಟಿ-42 ವಿಭಾಗದಲ್ಲಿ ತಂಗವೇಲು ಮೂರನೇ ಸ್ಥಾನ ಪಡೆದು, ಟೋಕಿಯೊ ಪ್ಯಾರಾಲಿಪಿಕ್ಸ್‌ಗೆ ಅರ್ಹತೆ ಗಳಿಸಿದ್ದರು.

ಶ್ರೀಲಂಕಾ –ಭಾರತ ಸರಣಿ: ಅರ್ಜುನ್ ರಣತುಂಗಾ ಟೀಕೆ

ಕೊಲಂಬೊ (ಪಿಟಿಐ): ಭಾರತ ಮತ್ತು ಶ್ರೀಲಂಕಾ ನಡುವಣ ನಡೆಯಲಿರುವ ಸೀಮಿತ ಓವರ್‌ಗಳ ಸರಣಿಯ ಬಗ್ಗೆ ಮಾಜಿ ಕ್ರಿಕೆಟಿಗ ಅರ್ಜುನ್ ರಣತುಂಗಾ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಭಾರತದ ಸೆಕೆಂಡ್ ಟೀಮ್ ಎದುರು ಸರಣಿ ಆಯೋಜಿಸಿರುವುದು ಸರಿಯಲ್ಲ. ಇದು ನಮ್ಮ ದೇಶಕ್ಕೆ ಅವಮಾನವೇ ಸರಿ' ಎಂದು ಶ್ರೀಲಂಕಾ ತಂಡದ ಮಾಜಿ ನಾಯಕ ರಣತುಂಗಾ ಕಿಡಿಕಾರಿದ್ದಾರೆ.

ಇದೇ 13ರಿಂದ ಶ್ರೀಲಂಕಾ ತಂಡವು ಶಿಖರ್ ಧವನ್ ನಾಯಕತ್ವದ ಭಾರತ ತಂಡದ ಎದುರು ಏಕದಿನ ಮತ್ತು ಟಿ20 ಸರಣಿಗಳಲ್ಲಿ ಆಡಲಿದೆ.

'ಟಿ.ವಿ. ಪ್ರಸಾರ ಮತ್ತು ಪ್ರಾಯೋಜಕತ್ವದ ಮಾರುಕಟ್ಟೆಗಾಗಿ ಶ್ರೀಲಂಕಾ ಮಂಡಳಿಯು ಈ ಸರಣಿ ಆಯೋಜನೆ ಮಾಡುತ್ತಿದೆ. ನಮ್ಮ ದೇಶದ ಸೀನಿಯರ್ ತಂಡದ ವಿರುದ್ಧ ಭಾರತದ ಎರಡನೇ ಹಂತದ ತಂಡವು ಆಡುವುದು ನಮಗೆ ಅವಮಾನದ ವಿಷಯ. ಸದ್ಯದ ಮಂಡಳಿಯ ಆಡಳಿತದ ಅದಕ್ಷತೆ ಪ್ರತೀಕ ಇದು' ಎಂದಿದ್ದಾರೆ.


ಅರ್ಜುನ್ ರಣತುಂಗಾ

'ಶ್ರೇಷ್ಠ ಆಟಗಾರರ ತಂಡವನ್ನು ಭಾರತ ಇಂಗ್ಲೆಂಡ್‌ಗೆ ಕಳಿಸಿದೆ. ದುರ್ಬಲ ಆಟಗಾರರು ಇರುವ ತಂಡವನ್ನು ಇಲ್ಲಿಗೆ ಕಳಿಸುತ್ತಿದೆ. ಆ ತಂಡ ನಮ್ಮ ಎದುರು ಆಡುತ್ತಿದೆ' ಎಂದು ಹೇಳಿದ್ದಾರೆ.

ಇದಕ್ಕೆ ಪ್ರತಿಕ್ರಿಯಿಸಿರುವ ಶ್ರೀಲಂಕಾ ಕ್ರಿಕೆಟ್ ಮಂಡಳಿಯು, 'ಭಾರತ ತಂಡದಲ್ಲಿರುವ 14 ಮಂದಿ ಅಂತರರಾಷ್ಟ್ರೀಯ ಮಟ್ಟದ ಎಲ್ಲ ಮೂರು ಮಾದರಿಗಳಲ್ಲಿ ಆಡಿದ್ದಾರೆ. ಇದು ದ್ವಿತೀಯ ದರ್ಜೆ ತಂಡವಲ್ಲ' ಎಂದಿದೆ.

ಚೆನ್ನೈನಲ್ಲಿ ₹ 100ರ ಗಡಿ ದಾಟಿದ ಪೆಟ್ರೋಲ್

ನವದೆಹಲಿ (ಪಿಟಿಐ): ಪೆಟ್ರೋಲ್ ಬೆಲೆಯು ಚೆನ್ನೈನಲ್ಲಿ, ಪಂಜಾಬ್ ಮತ್ತು ಕೇರಳ ರಾಜ್ಯದ ಕೆಲವೆಡೆಗಳಲ್ಲಿ ಶುಕ್ರವಾರ ₹ 100ರ ಗಡಿಯನ್ನು ದಾಟಿದೆ. ಪೆಟ್ರೋಲ್ ಬೆಲೆಯಲ್ಲಿ ಲೀಟರ್‌ಗೆ 35 ಪೈಸೆ ಹೆಚ್ಚಳವಾಗಿದೆ. ಶುಕ್ರವಾರ ಡೀಸೆಲ್ ಬೆಲೆಯಲ್ಲಿ ಬದಲಾವಣೆ ಆಗಿಲ್ಲ.

ಈ ಹೆಚ್ಚಳದಿಂದಾಗಿ ದೆಹಲಿ ಮತ್ತು ಕೋಲ್ಕತ್ತದಲ್ಲಿ ಪೆಟ್ರೋಲ್ ಬೆಲೆ ₹ 99ಕ್ಕಿಂತ ಜಾಸ್ತಿ ಆಗಿದೆ. ಬೆಂಗಳೂರಿನಲ್ಲಿ ಲೀಟರ್ ಪೆಟ್ರೋಲ್ ಬೆಲೆ ₹ 102.48 ಆಗಿದೆ.

ಸ್ವಿಟ್ಜರ್ಲೆಂಡ್ ಮಣಿಸಿ ಸ್ಪೇನ್ ಸೆಮಿಫೈನಲ್‌ಗೆ

ಯೂರೊ ಕಪ್ ಫುಟ್‌ಬಾಲ್: ಇಂಗ್ಲೆಂಡ್‌ಗೆ ಉಕ್ರೇನ್ ತಂಡದ ಸವಾಲು

ಸೇಂಟ್ ಪೀಟರ್ಸ್‌ಬರ್ಗ್ (ಎಪಿ): ರೋಚಕ ಅಂತ್ಯ ಕಂಡ ಪಂದ್ಯದಲ್ಲಿ ಸ್ವಿಟ್ಜರ್ಲೆಂಡ್ ತಂಡವನ್ನು 3-1ರಲ್ಲಿ ಮಣಿಸಿದ ಸ್ಪೇನ್, ಯೂರೊ ಕಪ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಸೆಮಿಫೈನಲ್ ಪ್ರವೇಶಿಸಿತು.

ಶುಕ್ರವಾರ ರಾತ್ರಿ ನಡೆದ ಪಂದ್ಯದ ನಿಗದಿತ ಅವಧಿಯಲ್ಲಿ ಉಭಯ ತಂಡಗಳು 1-1 ಗೋಲು ಗಳಿಸಿದ್ದವು. ಹೀಗಾಗಿ ಪೆನಾಲ್ಟಿ ಮೂಲಕ ಫಲಿತಾಂಶ ನಿರ್ಣಯಿಸಲಾಯಿತು.

ಎಂಟನೇ ನಿಮಿಷದಲ್ಲಿ ಸ್ಪೇನ್‌ಗೆ ಜಕಾರಿಯಾ ಉಡುಗೊರೆ ಗೋಲು ನೀಡಿದ್ದರು. 68ನೇ ನಿಮಿಷದಲ್ಲಿ ಜಾಕಿರಿ ಗಳಿಸಿದ ಗೋಲಿನ ಮೂಲಕ ಸ್ವಿಜ್ ಸಮಬಲ ಸಾಧಿಸಿತು. 77ನೇ ನಿಮಿಷದಲ್ಲಿ ಫ್ರುಯಲರ್ ಕೆಂಪು ಕಾರ್ಡ್ ಪಡೆದು ವಾಪಸಾದ ಕಾರಣ ಸ್ವಿಟ್ಜರ್ಲೆಂಡ್‌ಗೆ ಪೆಟ್ಟು ಬಿತ್ತು.

ಇಂಗ್ಲೆಂಡ್‌ಗೆ ಉಕ್ರೇನ್ ಸವಾಲು: ಶನಿವಾರ ನಡೆಯಲಿರುವ ಪಂದ್ಯದಲ್ಲಿ ಇಂಗ್ಲೆಂಡ್ ಮತ್ತು ಉಕ್ರೇನ್, ಜೆಕ್ ಗಣರಾಜ್ಯ ಮತ್ತು ಡೆನ್ಮಾರ್ಕ್ ತಂಡಗಳು ಸೆಣಸಲಿವೆ.


ಪಂದ್ಯ ಗೆದ್ದ ಸ್ಪೇನ್ ತಂಡದ ಆಟಗಾರರ ಸಂಭ್ರಮ –ಎಎಫ್‌ಪಿ ಚಿತ್ರ

ಕಂಪನಿಗಳ ಪಾಲು: ಆರ್‌ಬಿಐ ಕಳವಳ

ಪ್ರಜಾವಾಣಿ ವಾರ್ತೆ


ಬೆಂಗಳೂರು: ದೇಶದಲ್ಲಿ ತಂತ್ರಜ್ಞಾನ ವಲಯದ ದೊಡ್ಡ ಕಂಪನಿಗಳು ಹಣಕಾಸು ಸೇವೆ ಒದಗಿಸಲು ಮುಂದಾಗುತ್ತಿರುವುದು ಸಾಂಪ್ರದಾಯಿಕ ಬ್ಯಾಂಕ್‌ಗಳಿಗೆ ಸವಾಲಾಗಿ ಪರಿಣಮಿಸಬಹುದು ಎಂಬ ಕಳವಳ ವ್ಯಕ್ತವಾಗಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಹೇಳಿದೆ. ತಂತ್ರಜ್ಞಾನ ವಲಯದ ಕಂಪನಿಗಳು ಹಣಕಾಸು ಸೇವೆಗಳನ್ನು ಒದಗಿಸುವಲ್ಲಿ ತಾವೇ ದೊಡ್ಡ ಪಾಲು ಹೊಂದುವ ಸಾಮರ್ಥ್ಯ ಪಡೆದಿವೆ ಎಂದೂ ಆರ್‌ಬಿಐ ಅಭಿಪ್ರಾಯ ವ್ಯಕ್ತಪಡಿಸಿದೆ.

ಆರ್‌ಬಿಐ ಗುರುವಾರ ಬಿಡುಗಡೆ ಮಾಡಿರುವ ಹಣಕಾಸು ಸ್ಥಿರತೆ ವರದಿಯಲ್ಲಿ ಈ ಬಗ್ಗೆ ಕೆಲವು ಮಾತುಗಳು ಇವೆ. 'ತಂತ್ರಜ್ಞಾನ ವಲಯದ ದೊಡ್ಡ ಕಂಪನಿಗಳು ಬಗೆಬಗೆಯ ಹಣಕಾಸು ಸೇವೆಗಳನ್ನು ಒದಗಿಸುತ್ತವೆ. ಪಾವತಿ ವ್ಯವಸ್ಥೆ, ಹಣಕಾಸು ಆಸ್ತಿ ನಿರ್ವಹಣೆ, ವಿಮಾ ಸೇವೆಗಳನ್ನು ಪಡೆದುಕೊಳ್ಳಲೂ ನೆರವಾಗುತ್ತಿವೆ. ಇವುಗಳಿಂದ ಹಣಕಾಸು ಸೇವೆಗಳು ಹೆಚ್ಚಿನವರಿಗೆ ಲಭ್ಯವಾಗುವ, ಬ್ಯಾಂಕ್‌ಗಳ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುವ ಭರವಸೆ ಇದೆ. ಆದರೆ, ನೀತಿ ನಿರೂಪಣೆಗೆ ಸಂಬಂಧಿಸಿದ ಕೆಲವು ಪ್ರಶ್ನೆಗಳು ಮೂಡುತ್ತವೆ' ಎಂದು ಆರ್‌ಬಿಐ ಹೇಳಿದೆ.

ತಂತ್ರಜ್ಞಾನ ಕಂಪನಿಗಳು ಸೈಬರ್ ಭದ್ರತೆ, ದತ್ತಾಂಶಗಳ ಖಾಸಗಿತನದ ಭದ್ರತೆ ಹಾಗೂ ಮಾರುಕಟ್ಟೆ ಪಾರಮ್ಯಕ್ಕೆ ಸಂಬಂಧಿಸಿದ ಸವಾಲು ಹುಟ್ಟುಹಾಕುತ್ತವೆ ಎಂಬುದು ಆರ್‌ಬಿಐ ಅಭಿಪ್ರಾಯ. ಇಂತಹ ಕಂಪನಿಗಳು ಬೇರೆ ಬೇರೆ ವಹಿವಾಟುಗಳಲ್ಲಿ ಕೂಡ ಆಸಕ್ತಿ ಹೊಂದಿರುತ್ತವೆ ಎಂದು ಅದು ಹೇಳಿದೆ.

ಭಾರತದ ಹಣಕಾಸು ಪಾವತಿ ಮಾರುಕಟ್ಟೆಯಲ್ಲಿ ತಂತ್ರಜ್ಞಾನ ವಲಯದ ದೊಡ್ಡ ಕಂಪನಿಗಳಾದ ಅಮೆಜಾನ್, ಗೂಗಲ್ ಹಾಗೂ ವಾಟ್ಸ್‌ಆ್ಯಪ್ ಸೇವೆ ಒದಗಿಸುತ್ತಿವೆ. ಅಮೆಜಾನ್ ಹಾಗೂ ಗೂಗಲ್ ಕಂಪನಿಗಳು ತಮ್ಮ ಆ್ಯಪ್‌ಗಳ ಮೂಲಕ ಪಾವತಿ ಸೇವೆಗಳನ್ನು ನೀಡುತ್ತಿವೆ. ಪಾವತಿ ಸೇವಾ ಕ್ಷೇತ್ರಕ್ಕೆ ಈಚೆಗೆ ಪ್ರವೇಶ ಪಡೆದಿರುವ ವಾಟ್ಸ್‌ಆ್ಯಪ್, ಫೇಸ್‌ಬುಕ್‌ನ ಒಡೆತನದಲ್ಲಿ ಇದೆ.

ಷೇರುಪೇಟೆ ವಹಿವಾಟು 552



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,680
ಇಂದಿನ ಅಂತ್ಯ	15,722
▲	42
ದಿನದ ಗರಿಷ್ಠ	15,738

ವಿನಿಮಯ ದರ

$ ಡಾಲರ್	74.74
£ ಪೌಂಡ್	102.8
€ ಯೂರೊ	88.39
¥ ಯೆನ್ (100ಕ್ಕೆ)	66.97

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹500
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹500

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1380 (1360)
ಸೋಯಾ (ರಿಫೈನ್ಡ್)	₹1300 (1285)
ಸೂರ್ಯಕಾಂತಿ (ರಿಫೈನ್ಡ್)	₹1330 (1330)
ಪಾಮೋಲಿನ್	₹1155 (1167)

ಬ್ರೆಜಿಲ್‌ನಲ್ಲಿ ಪ್ರತಿಕೂಲ ಹವಾಮಾನದಿಂದ ಇಳುವರಿ ಕುಸಿಯುವ ಭೀತಿ

ಕಾಫಿ ಬೆಲೆ ಏರಿಕೆ: ಬೆಳೆಗಾರರಲ್ಲಿ ಸಂಚಲನ

● ರವಿ ಕೆಳಂಗಡಿ

ಕಳಸ: ಬ್ರೆಜಿಲ್‌ನಲ್ಲಿ ಈ ವಾರದ ಆರಂಭದಲ್ಲಿ ಕಂಡುಬಂದ ಪ್ರತಿಕೂಲ ಹವಾಮಾನ ಮತ್ತು ಇದರಿಂದ ಇಳುವರಿ ಕುಸಿಯಬಹುದು ಎಂಬ ವಿಶ್ಲೇಷಣೆಗಳಿಂದ ಜಾಗತಿಕ ಮಾರುಕಟ್ಟೆಯಲ್ಲಿ ಕಾಫಿ ಬೆಲೆ ಏರಿಕೆಯಾಗಿದೆ.

ಶುಕ್ರವಾರ ಲಂಡನ್ ಮಾರುಕಟೆಯಲ್ಲಿ ರೊಬಸ್ಟಾ ಕಾಫಿ ಬೆಲೆ ಟನ್‌ಗೆ 1,692 ಡಾಲರ್ (₹1,26,387) ಇದ್ದರೆ, ನ್ಯೂಯಾರ್ಕ್ ಮಾರುಕಟ್ಟೆಯಲ್ಲಿ ಅರೇಬಿಕಾ ಕಾಫಿ ಬೆಲೆ ಪೌಂಡ್‌ಗೆ 155 ಸೆಂಟ್ಸ್ ಆಗಿತ್ತು (ಒಂದು ಕೆ.ಜಿ.ಗೆ ₹158). ಪರಿಣಾಮವಾಗಿ ಸ್ಥಳೀಯ ಮಾರುಕಟ್ಟೆಯಲ್ಲಿ ರೊಬಸ್ಟಾ ಚೆರ್ರಿ ಮೂಟೆಯೊಂದಕ್ಕೆ (50 ಕೆ.ಜಿ) ₹ 3,600ರವರೆಗೆ ಖರೀದಿ ಆಗುತ್ತಿದ್ದು ಅರೇಬಿಕಾ ಪಾರ್ಚ್‌ಮೆಂಟ್ ಗರಿಷ್ಠ ದರ ಮೂಟೆಗೆ ₹ 11,400 ಆಗಿದೆ.


ಕಳಸದಲ್ಲಿ ರೊಬಸ್ಟಾ ಕಾಫಿಗೆ ಬೋರ್ಡೊ ದ್ರಾವಣ ಸಿಂಪಡಿಸುತ್ತಿರುವುದು

ಕಳೆದ ಎರಡು ವರ್ಷಗಳಲ್ಲಿ ಇದು ಗರಿಷ್ಠ ಬೆಲೆ ಆಗಿದ್ದು, ಬೆಳೆಗಾರರಲ್ಲಿ ಸಂಚಲನ ಮೂಡಿದೆ. ಆದರೆ, ಸಣ್ಣ ಬೆಳೆಗಾರರ ಬಳಿ ಕಾಫಿ ದಾಸ್ತಾನು ಇಲ್ಲದೆ, ಬೆಲೆ ಏರಿಕೆಯ ಲಾಭ ಬೆಳೆಗಾರರಿಗೆ ಸಿಗದಂತಾಗಿದೆ. ಫೆಬ್ರುವರಿಯಲ್ಲಿ 'ನಾವು ಕಾಫಿ ಕೊಯ್ದಾಗ ಮೂಟೆಗೆ ₹ 3 ಸಾವಿರ ಇತ್ತು. ಆಗಲೇ ಮಾರಿಬಿಟ್ಟೆವು' ಎಂದು ಸಣ್ಣ ಬೆಳೆಗಾರರೊಬ್ಬರು ಬೇಸರದಿಂದ ಹೇಳಿದರು.

'ಬ್ರೆಜಿಲ್‌ನಲ್ಲಿ ಕುಸಿತ'

ಬ್ರೆಜಿಲ್‌ನ ಕಾಫಿ ಬೆಳೆಯುವ ಪ್ರದೇಶಗಳಲ್ಲಿ ಈ ವರ್ಷ ನೀರಿನ ಕೊರತೆ ಉಂಟಾಗಿದೆ. ಇದರಿಂದ ಅಲ್ಲಿನ ಫಸಲು ಶೇ 20ರಷ್ಟು ಕಡಿಮೆ ಆಗಬಹುದು ಎಂಬ ಅಂದಾಜು ಇದೆ. ಕೊಲಂಬಿಯಾದಿಂದ ಈ ಬಾರಿ ಜಾಗತಿಕ ಮಾರುಕಟ್ಟೆಗೆ ಕಾಫಿ ಪೂರೈಕೆ ಕಡಿಮೆಯಾಗಿದೆ. ಇದು ಕೂಡ ಬೆಲೆ ಏರಿಕೆಗೆ ಕಾರಣ. ಯೂರೋಪ್ ರಾಷ್ಟ್ರಗಳಿಗೆ ಬೇಕಾದಷ್ಟು ಕಾಫಿ ಪೂರೈಸಲಾಗುತ್ತಿಲ್ಲ. ಇದರಿಂದ ಮಾರುಕಟ್ಟೆಯಲ್ಲಿ ರೊಬಸ್ಟಾ ಕಾಫಿ ಕೊರತೆ ಉಂಟಾಗಿದೆ ಎನ್ನಲಾಗುತ್ತಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ
ಬಂಟ್ವಾಳ
ಕೋಕ 10000–22500
ಹೊಸತು 23500-42500
ಹಳತು 42500-52000
ಕುಮಟಾ
ಚಿಪ್ಪು 29999-33019
ಕೋಕ 19699-30009
ಫ್ಯಾಕ್ಟರಿ 14609-17429
ಹೊಸಚಾಲಿ 36599-40019
ಹಳೆಚಾಲಿ 41189-42609
ಕುಂದಾಪುರ
ಹಳೆಚಾಳಿ 47000–52000
ಹೊಸಚಾಳಿ36000–43000
ಶಿವಮೊಗ್ಗ
ಬೆಟ್ಟೆ 43100-44769
ಗೊರಬಲು 16999-33599
ರಾಶಿ 37899-41910
ಸರಕು 51069-76010
ಸಿದ್ದಾಪುರ
ಬಿಳಿಗೋಟು 26799-32539
ಚಾಲಿ 34399-38889
ಕೋಕ 24809-30709
ಕೆಂಪುಗೋಟು 27699-32089
ರಾಶಿ 39599-41599
ತಟ್ಟಿಬೆಟ್ಟೆ 36909-40099
ಯಲ್ಲಾಪುರ
ಬಿಳಿಗೋಟು 27212-33809
ಚಾಲಿ 34632-39589
ಕೋಕ 21612-31699
ಕೆಂಪುಗೋಟು 28899-33469
ರಾಶಿ 39110-45695
ತಟ್ಟಿಬೆಟ್ಟೆ 34599–38990
ಏಲಕ್ಕಿ ಧಾರಣೆ
ಸಕಲೇಶಪುರ
ಕೂಳೆ 700- 800
ನಡುಗೋಲು 850-900
ರಾಶಿ 950-1000
ರಾಶಿ ಉತ್ತಮ 1000-1050
ಜರಡಿ 1150 -1200
ಹೆರಕಿದ್ದು 1500-1600
ಹಸಿರು ಸಾಧಾರಣ 900-1000
ಹಸಿರು ಉತ್ತಮ 1100-1200
ಹಸಿರು ಅತಿ ಉತ್ತಮ 1400-1500
ಕಾಳು ಮೆಣಸು 385
ರೇಷ್ಮೆಗೂಡು
ರಾಮನಗರ
ಮಿಶ್ರ ತಳಿ (ಸಿ.ಬಿ) 331-423
ದ್ವಿತಳಿ (ಬಿ.ವಿ) 343-492
ಕೊಬ್ಬರಿ
ಅರಸೀಕೆರೆ 15000-15800
ತುರುವೇಕೆರೆ15800-16000

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	11,400	11,000	10,825	155.90
ಎಸಿ	4,730	4,500	4,300	
ಆರ್‌ಪಿ	5,600	5,600	5,650	ಲಂಡನ್
ಆರ್‌ಸಿ	3,300	3,150	3,350	1717

ದೇಶಿ ಅಡಿಕೆಗೆ ಕುತ್ತು ತಂದ ನಕಲಿ ಅಡಿಕೆ: ಆರಗ

ರಿಪ್ಪನ್‌ಪೇಟೆ: 'ಗೋಡಂಬಿ ಹೆಸರಲ್ಲಿ ಇಂಡೋನೇಷ್ಯಾದಿಂದ ಕಳಪೆ ಗುಣಮಟ್ಟದ ಅಡಿಕೆಯನ್ನು ಆಮದು ಮಾಡಿಕೊಂಡು ದೇಶಿ ಅಡಿಕೆ ಹೆಸರಲ್ಲಿ ಮಾರಾಟ ಮಾಡುತ್ತಿರುವ ವಂಚಕರ ಬೃಹತ್ ಜಾಲವು ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿದೆ' ಎಂದು ತೀರ್ಥಹಳ್ಳಿ ಶಾಸಕ, ಅಡಿಕೆ ಕಾರ್ಯಪಡೆಯ ಅಧ್ಯಕ್ಷ ಆರಗ ಜ್ಞಾನೇಂದ್ರ ಆರೋಪಿಸಿದರು.


ಆರಗ ಜ್ಞಾನೇಂದ್ರ

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಇಂಡೋನೇಷ್ಯಾ ಮತ್ತು ವಿವಿಧ ದೇಶಗಳಿಂದ ಕಳಪೆ ಗುಣಮಟ್ಟದ ಅಡಿಕೆಗಳನ್ನು ಆಮದು ಮಾಡಿಕೊಂಡು ಇಲ್ಲಿನ ಗುಣಮಟ್ಟದ ಅಡಿಕೆಯೊಂದಿಗೆ ಮಿಶ್ರಣ ಮಾಡಿ ಮಾರಾಟ ಮಾಡುವ ದೊಡ್ಡ ಜಾಲ ದೇಶದ ಎಲ್ಲೆಡೆ ವ್ಯಾಪಿಸಿದೆ. ಇದರಿಂದ ಪ್ರಾಮಾಣಿಕ ಅಡಿಕೆ ಬೆಳೆಗಾರರ ವಹಿವಾಟಿಗೂ ಕುತ್ತು ಬಂದಿದೆ' ಎಂದು ದೂರಿದರು.

'ಹಲವು ವರ್ಷಗಳಿಂದ ಕಸ್ಟಮ್ಸ್ ಆಮದು ಸುಂಕ ಪಾವತಿಸದೆ ಬಂದರಿನ ಮೂಲಕ ಅಡಿಕೆಯು ವಾಮಮಾರ್ಗದಲ್ಲಿ ಮುಂಬೈ ಸೇರಿ ದೇಶದ ಪ್ರಮುಖ ವಾಣಿಜ್ಯ ಪಟ್ಟಣಗಳಿಗೆ ಬರುತ್ತಿದೆ. ಇದು ದೇಶದ ಅರ್ಥ ವ್ಯವಸ್ಥೆಯನ್ನೇ ಬುಡಮೇಲು ಮಾಡುತ್ತಿದೆ' ಎಂದರು.

'ಈಗಾಗಲೇ ₹ 16 ಸಾವಿರ ಕೋಟಿ ಸುಂಕದ ಅವ್ಯವಹಾರ ಸಂಬಂಧ ಮುಂಬೈ ಹೈಕೋರ್ಟ್‌ನ ನಾಗಪುರ ಪೀಠ ಸಿಬಿಐ ತನಿಖೆಗೆ ಒಪ್ಪಿಸಿತ್ತು. ಅಲ್ಲಿಯೂ ಆರೋಪ ಸಾಬೀತಾಗಿದೆ. ಇಂತಹ ಖದೀಮರೊಂದಿಗೆ ಕೈಜೋಡಿಸಿರುವ ಭ್ರಷ್ಟ ಅಧಿಕಾರಿಗಳನ್ನು ಜೈಲಿಗಟ್ಟಬೇಕು' ಎಂದು ಒತ್ತಾಯಿಸಿದರು.

ಮುಂಬೈ ಧಾರಣೆ

ಶೇಂಗಾ

2-07-2021

ಜಾವಾ 70/80(ಹೊಸ)	9700-9750
ಜಾವಾ 80/90(ಹೊಸ)	8950-9000
ದಪ್ಪ ಮಧ್ಯಪ್ರದೇಶ(ಹೊಸ)	10000-10100
ದಪ್ಪ ಗುಜರಾತ್(ಹೊಸ)	9400-9500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1390 (1370)
ಒಂದು ವಾರದ ಡೆಲಿವರಿ	1385 (1365)
ಸೋಯಾ ಕಚ್ಚಾ	1250 (1240)
ಪಾಮ್ ವಾರದ ಡೆಲಿವರಿ	1153 (1145)
ಸೂರ್ಯಕಾಂತಿ ಎಣ್ಣೆ ಕಚ್ಚಾ	1250 (1250)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
47,500 (47,200)
ಬೆಳ್ಳಿ ಕೆ.ಜಿ
69,200 (69,100)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಎಂಎಸ್‌ಎಂಇ ವ್ಯಾಪ್ತಿಗೆ ಸಗಟು, ಚಿಲ್ಲರೆ ವ್ಯಾಪಾರ

ನವದೆಹಲಿ (ಪಿಟಿಐ): ಚಿಲ್ಲರೆ ಹಾಗೂ ಸಗಟು ವ್ಯಾಪಾರ ವಲಯವನ್ನು ಕೂಡ ಅತಿಸಣ್ಣ, ಸಣ್ಣ ಹಾಗೂ ಮಧ್ಯಮ ಪ್ರಮಾಣದ (ಎಂಎಸ್‌ಎಂಇ) ಉದ್ಯಮದ ವ್ಯಾಪ್ತಿಗೆ ತರಲಾಗಿದೆ ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ. ಇದರಿಂದಾಗಿ ಚಿಲ್ಲರೆ ಹಾಗೂ ಸಗಟು ವ್ಯಾಪಾರ ವಲಯದವರಿಗೆ ಕೂಡ ಆರ್‌ಬಿಐ ಮಾರ್ಗಸೂಚಿ ಅನ್ವಯ ಆದ್ಯತೆ ಮೇರೆಗೆ ಸಾಲ ಲಭ್ಯವಾಗುತ್ತದೆ.

'ಈ ಎರಡು ವ್ಯಾಪಾರ ವಲಯಗಳನ್ನು ಎಂಎಸ್‌ಎಂಇ ಎಂಬ ವ್ಯಾಖ್ಯಾನದಿಂದ ಹೊರಗೆ ಇರಿಸಲಾಗಿತ್ತು. ಆದರೆ ಈಗ ಪರಿಷ್ಕೃತ ಮಾರ್ಗಸೂಚಿ ಪ್ರಕಾರ ಈ ಎರಡು ವಲಯದವರು ಕೂಡ ಆದ್ಯತೆಯ ಆಧಾರದಲ್ಲಿ ಸಾಲ ಪಡೆಯಬಹುದು' ಎಂದು ಗಡ್ಕರಿ ಹೇಳಿದ್ದಾರೆ. ಹೊಸ ಮಾರ್ಗಸೂಚಿಯಿಂದಾಗಿ ಸಗಟು ಮತ್ತು ಚಿಲ್ಲರೆ ವ್ಯಾಪಾರ ವಲಯದ 2.5 ಕೋಟಿ ವರ್ತಕರಿಗೆ ಪ್ರಯೋಜನ ಆಗಲಿದೆ. ಅವರಿಗೆ ತಮ್ಮನ್ನು ಉದ್ಯಮ್ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಲು ಸಾಧ್ಯವಾಗುತ್ತದೆ.